
ಮನೆ ಮಂದಿಗೆಲ್ಲ ಮುದ ನೀಡುವ ಮಾಸಿಕ

ನವೆಂಬರ್ ೧೯೯೬

ರೂ. ೬-೦೦

ಕಸ್ತೂರಿ



ಬದುಕೆಂದರೆ ಬರಿ ನಿರೀಕ್ಷೆಯೆ?



ಛಾಯಾಚಿತ್ರ: ಡಾ. ಡಿ.ವಿ. ರಾವ್

ಕಸ್ತೂರಿ

ಕನ್ನಡ ಡೈಜೆಸ್ಟ್

ಲೋಕ ಶಿಕ್ಷಣ ಟ್ರಸ್ಟಿನ
ಹೆಮ್ಮೆಯ ಕಾಣಿಕೆ

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಎಸ್.ಎ. ಜೋಶಿ

ಸಹಸಂಪಾದಕ:
ವೆಂಕಟನಾರಾಯಣ

ನಿರ್ವಹಣೆ:
ಗೋಪಾಲ ವಾಜಪೇಯಿ
ಶ್ರೀಕಾಂತ ಮಳಗಿ

ಕಲೆ:
ಪಿ.ಆರ್. ಪಾಟೀಲ
ಎಂ.ಎಸ್. ಶಶಿಧರ

ಮುಖಪುಟ:
"ಕಸ್ತೂರಿ"ಯ
ಸಂಗ್ರಹದಿಂದ

ಕಸ್ತೂರಿ ಕಾರ್ಯಾಲಯ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ-೫೮೦ ೦೨೦.

ಚಿಂತನ

ಶಿಕ್ಷಣಕ್ಕೆ ಸಂಬಂಧಿಸಿದಹಾಗೆ ಯಾವುದೇ ವಿಚಾರ ಬಂದಾಗ ಮನಸ್ಸು ದಶಕಗಳಾಚೆ ಹಿಂದಕ್ಕೆ ಓಡುತ್ತದೆ. ಆಗ 'ಛಡಿ ಛಮ್ ಛಮ್, ವಿದ್ಯಾ ಘಮ್ ಘಮ್' ಎಂಬ ಮಾತು ಶೈಕ್ಷಣಿಕ ವಲಯದಲ್ಲಿ ಸಾರ್ವತ್ರಿಕವಾಗಿತ್ತು. ಯುಕ್ತಾಯುಕ್ತ ಜ್ಞಾನ ಬರುವವರೆಗೂ ಬಾಲಕರಲ್ಲಿ ಸ್ವಲ್ಪ ಭಯವನ್ನು ಉಂಟುಮಾಡಿಯಾದರೂ ಸರಿ, ಶಿಸ್ತನ್ನು ಅಳವಡಿಸಬೇಕು, ವಿಧೇಯತೆ ಬರುವಹಾಗೆ ನೋಡಿಕೊಳ್ಳಬೇಕೆಂಬುದೇ ಆ ಮಾತಿನ ಮಥಿತಾರ್ಥವಾಗಿತ್ತು.

ಆದರೆ ಅಮೇರಿಕದ ಸ್ಪಾಕ್ ಮಹಾಶಯ ಮಕ್ಕಳನ್ನು ಹೇಗೆ ಸಾಕಬೇಕೆಂಬ ಬಗ್ಗೆ ಪುಸ್ತಕ ಬರೆದ ಮೇಲೆ ಪಾಶ್ಚಾತ್ಯ ಹಾಗೂ ಪೌರಸ್ತ್ಯ ಶೈಕ್ಷಣಿಕ ತಜ್ಞರ ಧೋರಣೆಯೇ ಬದಲಾಯಿತು. ಮುಂದೆ ದಶಕಗಳ ನಂತರ ತಾನು ಬರೆದದ್ದು ತೀರ ಸರಿಯಲ್ಲವೆನ್ನುವುದು ಸ್ಪಾಕ್ ಮಹಾಶಯನಿಗೆ ಗೊತ್ತಾಯಿತು ನಿಜ, ಆದರೆ ಅಷ್ಟು ಹೊತ್ತಿಗೆ ತೀರ ತಡವಾಗಿ ಹೋಗಿತ್ತು.

ಅದೇ ವೇಳೆ, ದಡ್ಡ ಮಕ್ಕಳು ಮುಂದಿನ ಜೀವನದಲ್ಲಿ ಪ್ರತಿಭಾನ್ವಿತರಾಗಿಯೂ ಬಾಲ್ಯದಲ್ಲಿ ಪ್ರಗಲ್ಭಮತಿಗಳೆಂದು ಕಾಣಿಸಿಕೊಂಡವರು ದಡ್ಡರಾಗಿಯೂ ಏಕೆ ಪರಿವರ್ತನೆಗೊಳ್ಳುತ್ತಿದ್ದಾರೆನ್ನುವುದು ಶಿಕ್ಷಣತಜ್ಞರ ಮನಸ್ಸನ್ನು ಕೊರೆಯುತ್ತಲೇ ಇತ್ತು. ಅದಕ್ಕಾಗಿ ಅವರು ಸಂಶೋಧನೆಗಳನ್ನು ಕೈಗೊಂಡರು. ಸಂದರ್ಶನಗಳನ್ನು ನಡೆಸಿದರು. ತಮ್ಮ ತಮ್ಮಲ್ಲೇ ಆ ಕುರಿತು ವಿಚಾರ ವಿಮರ್ಶೆ ನಡೆಸಿದರು. ಅದರ ಸಾರಸರ್ವಸ್ವವೇ ಈ ಸಂಚಿಕೆಯಲ್ಲಿ ಕೊಡಲಾದ 'ನಿಮ್ಮ ಮಕ್ಕಳಲ್ಲಿ ಪ್ರತಿಭೆ ಅರಳಬೇಕೆ?' ಲೇಖನದಲ್ಲಿದೆ. ಮೇಲ್ನೋಟಕ್ಕೆ ವಿಷಯ ನೀರಸ ನಿಜ. ಆದರೆ 'ಮನೆಯೆ ಮೊದಲ ಪಾಠಶಾಲೆ' ಎನ್ನುವುದರಲ್ಲಿ ವಿಶ್ವಾಸವಿರುವವರೆಲ್ಲರೂ ಓದಲೇಬೇಕಾದ ಲೇಖನ. ಅದರಲ್ಲಿನ ಕೆಲವು ತತ್ವಗಳನ್ನಾದರೂ ನಿಜಜೀವನದಲ್ಲಿ ಅಳವಡಿಸಿದರೆ ಮಕ್ಕಳ ಬಾಳು ಬಂಗಾರವಾದೀತು.

ದೀಪಾವಳಿ ಹತ್ತಿರವಾಗಿರುವಾಗ ಈ ಸಂಚಿಕೆ ನಿಮ್ಮೆಲ್ಲರ ಕೈ ಸೇರುತ್ತಲಿದೆ. ಪರಮಾತ್ಮನು ಜೀವನದ ನಿರಾಶೆಯ ಕ್ಷಣಗಳನ್ನೂ ಆಂತರ್ಯದಲ್ಲಿ ಕವಿದಿರುವ ಕತ್ತಲೆಯನ್ನೂ ದೂರಮಾಡಲೆಂದು 'ಕಸ್ತೂರಿ'ಯು ಹಾರೈಸುತ್ತದೆ.

* *ವ್ಯವಸ್ಥಾಪಕ ಸಂಪಾದಕ*



ಸಹಚಿಂತನ

ಸೇಡಿಯಾಪು ಕೃಷ್ಣಭಟ್ಟರು

ಸೇಡಿಯಾಪು ಕೃಷ್ಣಭಟ್ಟರಿಗೆ ಸಲ್ಲಿಸಿದ ನುಡಿ ಗೌರವ (ಸೆಪ್ಟೆಂಬರ್, ೮೬) ಸಕಾಲಿಕ. ಜೆ.ಟಿ. ನಾರಾಯಣರಾಯರು ಓದುಗರಿಗೆ ಅವರನ್ನು ಚೆನ್ನಾಗಿಯೇ ಪರಿಚಯಿಸಿದ್ದಾರೆ.

ಗೌರಿಬಿದನೂರು ❀ ಎಚ್.ಎನ್. ಕಿರಣಕುಮಾರ

ಸೇಡಿಯಾಪು ಕೃಷ್ಣಭಟ್ಟರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಬಹುಮುಖ ವ್ಯಕ್ತಿತ್ವದ ಅವರು ಅದ್ಭುತ ಮಾತುಗಾರರೂ ಹೌದು.

ಗೋಕಾಕಫಾಲ್ಸ್ ❀ ಪುರುಷಾಂತ

ಕೆ.ಟಿ.ಯ ಮೂಲ

ಸೆಪ್ಟಂಬರ್ 'ಸಹಚಿಂತನ'ದಲ್ಲಿ ಕೆ.ಟಿ.ಯ ಮೂಲದ ಬಗ್ಗೆ ಮೈಸೂರು ಭಾಸ್ಕರಭಟ್ಟರು ನೀಡಿದ ಪ್ರತಿಕ್ರಿಯೆಯನ್ನು ಒಪ್ಪಿಕೊಳ್ಳುವುದು ಕಷ್ಟ. ಕೆ.ಟಿ. ಎಂದರೆ ಕೇರಳ ಟೀ ಎಂದು ಇರಬಹುದು ಅಥವಾ ಮತ್ತೇನಾದರೂ ಇರಬಹುದು. ಆದರೆ ಭಾಸ್ಕರಭಟ್ಟರು ಹೇಳಿದಂತೆ ಕ್ವಾಲಿಟಿ ಟೀ ಆಗಲು ಸಾಧ್ಯವಿಲ್ಲ. ಏಕೆಂದರೆ ನಾವೆಲ್ಲ ಕೆ.ಟಿ. ಅನ್ನುತ್ತೇವೆಯೇ ಹೊರತು ಕ್ಯೂ.ಟಿ. ಅನ್ನುವುದಿಲ್ಲವಲ್ಲ!

ಹುತ್ತುಗಾರು ❀ ವಿ.ಜಿ. ನಾಯ್ಕ ಎಸ್.

(ಋಷಿಮೂಲ, ನದೀಮೂಲದಂತೆ ಕೆ.ಟಿ.ಯ ಮೂಲವನ್ನು ಕಂಡುಹಿಡಿಯುವುದು ಕಷ್ಟವೇನೋ. ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸಲಾಗಿದೆ. (ಸಂ.)

ಮಾತೆ ಮರಿಯ

ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಜಾನ್ ಮಥಾಯಿಸರ ಲೇಖನದ ಬಗ್ಗೆ ಒಂದೆರಡು ಮಾತು. 'ಅಂತಹ ಸಂದರ್ಭದಲ್ಲಿ ಬರೆಯಲ್ಪಟ್ಟ ಕುರಾನ್ ಎಂದು ಅದರಲ್ಲಿ ಬರುತ್ತದೆ. ಕುರಾನ್ ಬರೆಯಲ್ಪಟ್ಟ ಗ್ರಂಥವಲ್ಲ; ಬದಲು ಅದು ಇಡೀ ಲೋಕವನ್ನೇ ಪಾಲಿಸುವ ಪ್ರಭುವಾದ ಅಲ್ಲಾಹನ ಕಡೆಯಿಂದ ಅವತೀರ್ಣಗೊಂಡ ಗ್ರಂಥವಾಗಿದೆ.

"ಸುಖಪ್ರಸವಕ್ಕಾಗಿ ಮುಸ್ಲಿಂ ಸ್ತ್ರೀಯು ಮರ್ಯಮಳ ಸಹಾಯ ಕೋರುತ್ತಾಳೆ" ಎಂದು ಲೇಖಕರು ಬರೆದಿದ್ದಾರೆ. ಆದರೆ ಯಾವ ಮುಸ್ಲಿಂ ಸ್ತ್ರೀಯೂ ಮರಿಯಮನ ಸಹಾಯ ಕೋರುವುದಿಲ್ಲ. ಬದಲು, ಜಗನ್ನಿಯಾಮಕನಾದ ಸೃಷ್ಟಿಕರ್ತನನ್ನು ಮಾತ್ರ ನೆನೆಯುವುದು ಇಸ್ಲಾಂಧರ್ಮದ ಮೂಲ ವಿಶ್ವಾಸಗಳಲ್ಲೊಂದಾಗಿದೆ.

ಮಾನ್ವಿ ❀ ಸಬೀರ್ಖಾ ಅಲಿ ಗೋರಕಲ್

ಭೇಷ್!

ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ಜಗತ್ತಿನ ಮೊಟ್ಟಮೊದಲ ಮಾವುಟಿಗಳು ನಿಭಾ'ಕುತೂಹಲಕರವಾದ ಮತ್ತು ಹೆಮ್ಮೆತರುವ ವಿಷಯ. ಮಹಿಳೆಯರು ಎಲ್ಲ ರಂಗಗಳಲ್ಲೂ ಕಾರ್ಯನಿರ್ವಹಿಸಬಲ್ಲರು ಎನ್ನುವುದಕ್ಕೊಂದು ಪುರಾವೆ.

ಇನ್ನು ಸೇಡಿಯಾಪು ಬಗ್ಗೆ ಬಂದಿರುವ ಲೇಖನ ಅದ್ವಿತೀಯ. ಕಾಲೇಜು ಮೆಟ್ಟಲನ್ನೇ ತುಳಿಯದ ಕೃಷ್ಣಭಟ್ಟರ ಪಾಂಡಿತ್ಯ ಅಗಾಧವಾದದ್ದು. ಅವರ ಮಗ ಜಯರಾಮಭಟ್ಟರು ತಮ್ಮ ತಂದೆಯವರಿಗೆ ಬಂದ ಪಂಪ ಪ್ರಶಸ್ತಿಯ ಒಂದು ಲಕ್ಷ ರೂಪಾಯಿಗಳನ್ನೂ ಪುಸ್ತಕ ಸ್ವಾಮ್ಯವನ್ನೂ ಗೋವಿಂದ ಪೈ ಸಂಶೋಧನಾಲಯಕ್ಕೆ ಒಪ್ಪಿಸಿರುವುದು ಒಂದು ಮಹತ್ವದ ವಿಷಯ.

ಮಂಡ್ಯ ❀ ಪಿ. ಜವರಾಯಿಗೌಡ

ಡಯಾನಾ

ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದ ಪ್ರಕಾಶಚಂದ್ರರ 'ಡಯಾನಾ ಎಂಬ ನಾಯಿ' ಲೇಖನ ಓದಿ ಆಶ್ಚರ್ಯದೊಂದಿಗೆ ಸಂತಸವೂ ಆಗಿ ಹೃದಯ ತುಂಬಿಬಂದಿತು. ಮಾನವನ ಸ್ವಾಮಿನಿಷ್ಠೆಯೂ ಇದರ ಮುಂದೆ ಗೌಣ ಎಂದರೆ ಅತಿಶಯೋಕ್ತಿಯಾಗಲಾರದು.

ಇಟ್ಗಿ ❀ **ಜಿ.ಬಿ. ಹರ್ಷವರ್ಧನ**

ಮಧುಚಿಕಿತ್ಸೆ

ಅಕ್ಟೋಬರ್ ಸಂಚಿಕೆಯ ಆರೋಗ್ಯದಂಗಳದಲ್ಲಿ ಪ್ರಕಟವಾದ ಡಾ. ಶೋಭಾ ಜಿ. ಹಿರೇಮಠರ ಮಧು ಚಿಕಿತ್ಸೆ ಒಂದು ಉಪಯುಕ್ತ ಲೇಖನ. ಪರಿಶುದ್ಧವಾದ ಜೇನು ಅಮೃತಸಮಾನವೆಂದು ಅವರು ಹೇಳಿದ್ದು ಸರಿಯಾಗಿಯೇ ಇದೆ.

ಬೆಳಗಾವಿ ❀ **ರೂಪಾ ಮರಿಗೇರಿ**

ಚಾಟಿಯ ಏಟು

ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಪಂಪಣ್ಣ ಶಿಳ್ಳಿನ ಅವರ 'ಗಂಡ-ಹೆಂಡಿರ ಜಗಳ' ವ್ಯಂಗ್ಯದ ಲಘು ಬರಹವಾದರೂ ದಿನನಿತ್ಯ ಜಗಳಾಡುವ ವಿದ್ಯಾವಂತ ದಂಪತಿಗಳಿಗೆ ಚಾಟಿ ಏಟಿನಂತಿದೆ.

ಬೆಂಗಳೂರು ❀ **ಮುರಾರಿ**

ಮಧುರ ಮಂಡ್ಯದ ಸುತ್ತ

'ಮಧುರ ಮಂಡ್ಯದ ಸುತ್ತಮುತ್ತ' ಲೇಖನವನ್ನೋದಿ ಮಂಡ್ಯ ಸುತ್ತಿದಷ್ಟೇ ಸಂತಸವಾಯಿತು. ಲೇಖನದ ಜೊತೆ ಜಲಪಾತದ ಒಂದು ಫೋಟೋ ಇದ್ದರೆ ಚೆನ್ನಾಗಿತ್ತು. ಇದೇ ಲೇಖನದಲ್ಲಿ ಶಿವನಸಮುದ್ರದ ಜಲವಿದ್ಯುತ್ ಶಕ್ತಿ ಯೋಜನೆ ಏಶಿಯಾದಲ್ಲೇ ಮೊದಲಿನದು ಎಂದಿದೆ. ಆದರೆ ೧೮೮೭ರಲ್ಲಿ ಪ್ರಾರಂಭವಾದ ಗೋಕಾಕ್ ಜಲವಿದ್ಯುತ್ ಶಕ್ತಿ ಯೋಜನೆಯೇ ಮೊದಲನೆಯದಲ್ಲವೆ?

❀ **ಊರಕೋಟ** **ಹರಿಹರಗೌಡ ಕಂಬ್ಳಿಸರ**

ನೆತ್ತರು ದೆವ್ವಗಳ ವೃತ್ತಾಂತ

ಅರುಣನಾರಾಯಣರ 'ನೆತ್ತರು ದೆವ್ವಗಳ ವೃತ್ತಾಂತ' ಒಂದು ಮಹತ್ವದ ಲೇಖನ. ಪಾಶ್ಚಾತ್ಯ ದೇಶಗಳ ನೈಜ ಘಟನೆಗಳನ್ನು ಒಂದೆಡೆ ಕಲೆಹಾಕಿ ಒದಗಿಸಿದ್ದು ಸ್ತುತ್ಯಾರ್ಹ.

ಸಾಲೇಕೊಪ್ಪ ❀ **ರಾಜೇಂದ್ರ ಬುರಡೀಕಟ್ಟಿ**

ಇನ್ನಷ್ಟು ಮಾಹಿತಿ

ನೆತ್ತರುದೆವ್ವಗಳ ಬಗ್ಗೆ ಓದುತ್ತಿದ್ದಂತೆ ಅಮೆರಿಕದಲ್ಲಿ ಅವುಗಳ ಬಗ್ಗೆ ವಿಶೇಷ ಅಧ್ಯಯನ ನಡೆಯುತ್ತಿರುವುದು ತಿಳಿಯಿತು. ಆಗಸ್ಟ್ ಕೊನೆಯವಾರದಲ್ಲಿ ಅಮೆರಿಕದ ರಾಯ್ಟರ್ ಸುದ್ದಿ ಸಂಸ್ಥೆ ಇಂತಹ ಜೀವಂತ ರಕ್ತ ಪಿಪಾಸುವಿನ ಬಗೆಗೆ ಬರೆದಿದೆ.

ಅಮೆರಿಕದ ಟೆಕ್ಸಾಸ್‌ನ ಎಲ್‌ಪಾಸೋದಲ್ಲಿ ಭದ್ರತಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ೩೮ ವಯಸ್ಸಿನ ಕೇನ್ ಪ್ರೆಸ್ಲಿ ೯ ವರ್ಷದ ಬಾಲಕಿಯಾಗಿದ್ದಾಗಿನಿಂದಲೂ ಆಗಾಗ ರಕ್ತ ಕುಡಿಯುತ್ತಿದ್ದಾಳಂತೆ. ಅದು ಬಹಿರಂಗಗೊಂಡ ನಂತರವಷ್ಟೆ ಶುರುವಾಯಿತು ಆಕೆಯ ಹೊಸ ಇಮೇಜ್. ವಂಪೈರ್ ಫ್ಯಾನ್‌ಗಳಿಂದ ಪ್ರತಿನಿತ್ಯ ಆಕೆಗೆ ನೂರಾರು ಟೆಲಿಫೋನ್ ಕರೆಗಳು ಬರುತ್ತವೆಯಂತೆ. ಸಾಕಷ್ಟು ಪತ್ರಗಳೂ ಆಕೆಗೆ ಬರುತ್ತಿವೆಯಂತೆ. ವಂಪೈರ್‌ಗಳ ಬಗ್ಗೆ ಹೊರತರಲು ಉದ್ದೇಶಿಸಲಾಗಿರುವ **'Something In The Blood'** ಕೃತಿಯಲ್ಲಿ ಈಕೆಯೊಂದಿಗೆ ನಡೆಸಿದ ಸುದೀರ್ಘ ಸಂದರ್ಶನವೂ ಇದೆಯಂತೆ.

ಆಕೆ ಮಾಡುವ ಕೆಲಸವನ್ನು ನಮ್ಮ ತಾಂತ್ರಿಕ ಶಕ್ತಿ ಉಪಾಸಕರು, ರಕ್ತಕಾಟೇರಿಯ ಆರಾಧಕರು ಯಾರಾದರೂ ಮಾಡಿದ್ದರೆ ಅವರಿಗೆ ಇಷ್ಟೊಂದು ಮನ್ನಣೆ ಸಿಗುತ್ತಿತ್ತೆ?

ಚಿತ್ರದುರ್ಗ ❀ **ಬೇದ್ರೆ ಎನ್. ಮಂಜುನಾಥ**

(ಸಿಕ್ಕಿಲ್ಲ ಎನ್ನುವುದೇ ಒಳ್ಳೆಯದಲ್ಲವೆ?
-ಸಂ)

(ಆರನೇ ಪುಟಕ್ಕೆ)

ಅಂತರಂಗ

ಪತ್ತೇದಾರ ರಾಮರಾಯರು

ಸಂಗ್ರಹ: ಬಸವರಾಜ ಕುಡಚಿ



ಸ್ಥಿರ ಶೀರ್ಷಿಕೆಗಳು

✱ ಬೆಳಕಿಂಡಿ ✱

★ ಸರಿಪಡಿಸುವ ವರೆಗಷ್ಟೆ ತಪ್ಪು ತಪ್ಪಾಗಿ ಉಳಿಯುತ್ತದೆ.

✤ ಮಹಾತ್ಮಾ ಗಾಂಧಿ

★ ಸೋಲಬಹುದು ಎಂಬ ಅಳುಕು ಇರುವವ ಸೋತೇ ಸೋಲುತ್ತಾನೆ.

✤ ನೆಪ್ಪೋಲಿಯನ್ ಚಕ್ರವರ್ತಿ

★ ಐಶ್ವರ್ಯಕ್ಕೂ ಸತತೋದ್ಯಮಕ್ಕೂ ಬಿಡಲಾರದ ನಂಟು.

✤ ಆಲಿವರ್ ಗೋಲ್ಡ್‌ಸ್ಮಿತ್

★ ಒಂದು ದೇಶದ ಸಾಹಿತ್ಯ ಕೆಳಮಟ್ಟದಲ್ಲಿದೆ ಎಂದರೆ ಆ ದೇಶವೂ ಕೆಳಮಟ್ಟದಲ್ಲಿದೆ ಎಂದೇ ಅರ್ಥ.

✤ ಗಯಟೆ

★ ಸಂದರ್ಭ ತಾನಾಗಿಯೆ ಒದಗಿಬರಲೆಂದು ಕಾಯಬೇಡಿ. ಅವೆಂದೂ ಬರುವುದೇ ಇಲ್ಲ. ಇರುವ ಸಂದರ್ಭವನ್ನೇ ಸದುಪಯೋಗಪಡಿಸಿಕೊಳ್ಳಿ.

✤ ಜೀನ್ ರಿಕ್ಟರ್

★ ಜಗತ್ತಿನಲ್ಲಿ ಈ ಎರಡು ಬಗೆಯ ಜನರಿಂದ ಬಹಳ ಪ್ರಯೋಜನವೇನೂ ಇಲ್ಲ: ಹೇಳಿದ ಕೆಲಸವನ್ನು ಮಾಡದೆ ಇರುವವರು ಹಾಗೂ ಹೇಳಿದ್ದನ್ನು ಹೊರತುಪಡಿಸಿ ಬೇರೇನನ್ನೂ ಮಾಡದವರು.

✤ ಸೈರಸ್ ಕರ್ಟಿಸ್

ಆರೋಗ್ಯದಂಗಳ

೧೪೫

ಯುವಕರ ಮಾನಸಿಕ ಸಮಸ್ಯೆಗಳು

ಡಾ. ಪ್ರಕಾಶ ಕೊಣ್ಣೂರ

(ಮೂರನೇ ಪುಟದಿಂದ)

ಹಿಡಿತಕ್ಕೆ ಬಾರದ ಪಿಡುಗು

ಸೆಪ್ಟೆಂಬರ್ ಸಂಚಿಕೆಯನ್ನೋದಿದೆ. ಮಲೇರಿಯಾ ಪಿಡುಗಿಗೆ ಲಸಿಕೆ ಕಂಡುಹಿಡಿಯಲ್ಪಟ್ಟರೂ ಅದು ಪ್ರಪಂಚಕ್ಕೆ ತಿಳಿಯಲು ಹಲವು ವರ್ಷ ತೆಗೆದುಕೊಂಡದ್ದು ಆಶ್ಚರ್ಯವೆನಿಸುತ್ತದೆ. ಈ ಲಸಿಕೆ ಮುಂದೊಮ್ಮೆ ಮಕ್ಕಳಿಗೆ ಕಡ್ಡಾಯವಾಗಿ ನೀಡುವಂತಾಗಬಹುದೇನೋ. ಆದರೂ ಸೊಳ್ಳೆಗಳ- ಅದರಲ್ಲೂ ಅನಾಫಿಲೀಸ್ ಸೊಳ್ಳೆಗಳ- ನಿಯಂತ್ರಣ ಬಹಳ ಅವಶ್ಯ. ಏಕೆಂದರೆ ಅನೇಕಾ ಲುರೋಗ ಹರಡುವುದೂ ಇವುಗಳಿಂದಲೇ. ಸೊಳ್ಳೆಯ ವಿರುದ್ಧ ಡಿಡಿಟಿ ಪರಿಣಾಮಕರವಾಗಿತ್ತು. ಆದರೆ ಅದು ಮನುಷ್ಯನ ವಂಶವಾಹಿಯನ್ನೇ ವಿಕೃತಗೊಳಿಸುತ್ತದೆಯಾದ್ದರಿಂದ ಡಿಡಿಟಿಯ ಬಳಕೆಯನ್ನು ನಿಲ್ಲಿಸಬೇಕಾಯಿತು. ಈಗಂತೂ ಸೊಳ್ಳೆಗಳೂ ಅದಕ್ಕೆ ಪ್ರತಿರೋಧ ಹೊಂದಿರುವುದರಿಂದ ಬಳಕೆ ನಿಲ್ಲಿಸದೇ ವಿಧಿಯಿಲ್ಲ.

ಕೆಲ ಸಮಯದ ಹಿಂದೆ ವಂಶವಾಹಿ ತಂತ್ರಜ್ಞಾನದ ಬಳಕೆಯಿಂದ ಬರಿ ಸೊಳ್ಳೆಗಳನ್ನಷ್ಟೆ ಕೊಲ್ಲಬಲ್ಲ ಪರಿಸರ ಸ್ನೇಹಿ ವಸ್ತುವನ್ನು ಕೊಯಮತ್ತೂರಿನವರೊಬ್ಬರು ನಿರ್ಮಿಸಿದ್ದಾರೆಂದು ದಿನಪತ್ರಿಕೆಯ ವೈಜ್ಞಾನಿಕ ಅಂಕಣದಲ್ಲಿ ಪ್ರಕಟವಾಗಿತ್ತು. ಈ ವಸ್ತುವಿಗೆ ಕೇರಳ ಸರಕಾರ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಸಲ್ಲಿಸಿದೆ ಎಂದೂ ವರದಿಯಾಗಿತ್ತು. ಆ ಮೇಲೆ ಈ ಬಗ್ಗೆ ಸುದ್ದಿಯೇ ಇಲ್ಲ.

ಬೆಳ್ಳೂರು ಕ್ರಾಸ್ ❀ ಕೆ. ಗಣೇಶ

ಲೇಖಕರಿಗೆ ಸೂಚನೆ

- 'ಕಸ್ತೂರಿ'ಗಾಗಿ ಕಳಿಸುವಂಥ ಲೇಖನಗಳು ಕಾಗದದ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಂಥವಾಗಿರಲಿ. ನಿಮ್ಮ ಹೆಸರು-ವಿಳಾಸಗಳು ಸ್ಪಷ್ಟವಾಗಿರಲಿ. ಅನುವಾದ, ರೂಪಾಂತರ, ಆಧಾರಿತ ಲೇಖನಗಳಾದರೆ ಮೂಲ ಲೇಖಕ-ಪ್ರಕಾಶಕರ ವಿಳಾಸ, ಅನುಮತಿ ಪತ್ರಗಳನ್ನು ಜತೆಗೆ ಲಗತ್ತಿಸಿ.
- ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಲೇಖನಗಳ ಸಂಗಡವೆ ಅಗತ್ಯ ಅಂಚೆಚೀಟಿ ಲಗತ್ತಿಸಿದ ಲಕೋಟೆಯನ್ನಿಡಿ.
- ಚುಟುಕು, ಪುಟಕೊನೆಯ ಕಿರುಲೇಖನ, 'ನೆನಪು ನೆರಳಿನಲ್ಲಿ'ಮುಂತಾದವುಗಳ ಕುರಿತು ಪತ್ರವ್ಯವಹಾರ ಮಾಡಲಾಗುವುದಿಲ್ಲ.
- ಲೇಖನದ ಕಾರ್ಬನ್ ಅಥವಾ ಝೆರಾಕ್ಸ್ ಪ್ರತಿಯನ್ನು ಕಳಿಸಲೇಬೇಡಿ.
- ಸ್ವೀಕೃತ ಲೇಖನಗಳನ್ನು ಯಥಾವಕಾಶ ಪ್ರಕಟಿಸಿ ಸೂಕ್ತ ಗೌರವಧನವನ್ನು ನೀಡಲಾಗುವುದು.

ಚಂದಾದಾರರಿಗೆ ಸೂಚನೆ

- 'ಕಸ್ತೂರಿ'ಯು ಪ್ರತಿ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳಿನ ೨ನೆಯ ದಿನಾಂಕದೊಳಗೆ ನಿಮಗೆ ತಲುಪದಿದ್ದಲ್ಲಿ ಚಂದಾದಾರರು ತಮ್ಮ ಟಪ್ಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಈ ಸಂಬಂಧದಲ್ಲಿ ಪತ್ರವ್ಯವಹಾರ ಮಾಡುವಾಗ, ವಿಳಾಸ ಬದಲಾವಣೆಯ ಸಂದರ್ಭದಲ್ಲಿ, ದಯವಿಟ್ಟು ಚಂದಾನಂಬರು ಸ್ಫುಟವಾಗಿ ನಮೂದಿಸಬೇಕಾದದ್ದು ಅತ್ಯವಶ್ಯಕ.

ಪತ್ರವ್ಯವಹಾರ ವಿಳಾಸ:
ಪ್ರಸಾರಾಂಗ ವ್ಯವಸ್ಥಾಪಕ,
ಕಸ್ತೂರಿ, ಪೊ.ಬಾ. ನಂ. ೩೦,
ಹುಬ್ಬಳ್ಳಿ-೫೮೦ ೦೨೦

ಚಂದಾ ದರಗಳು

ಬಿಡಿ ಸಂಚಿಕೆಗೆ	ರೂ. ೬-೦೦
೬ ತಿಂಗಳಿಗೆ ಅಂಚೆ ವೆಚ್ಚ ಸೇರಿ	ರೂ. ೩೫-೦೦
೧ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೭೦-೦೦
೨ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೧೩೦-೦೦

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: ೪೧ ನವೆಂಬರ್ ೧೯೯೬ ಸಂಚಿಕೆ: ೩

ಸುಲ್ತಾನ ಕಲಿತ ಪಾಠ

ಪರ್ಷಿಯಾ ದೇಶದ ಒಬ್ಬ ಸುಲ್ತಾನನಿಗೆ ತನ್ನ ರಾಜ್ಯದಲ್ಲಿದ್ದ ಅಬು ಹಸನ್ ಎಂಬ ವರ್ತಕನ ಐಶ್ವರ್ಯದ ಮೇಲೇ ಕಣ್ಣು.

ಒಂದು ದಿನ, 'ಅಬು ಹಸನ್ ಬಳಿ ಇರುವ ಐಶ್ವರ್ಯವೆಲ್ಲ ಸರ್ಕಾರದ ಹಣ!' ಎಂದು ಸುಲ್ತಾನನಿಗೆ ಒಬ್ಬಾತ ನುಡಿಯಲು, ಅದಕ್ಕಾಗಿಯೇ ಕಾದಿದ್ದ ಸುಲ್ತಾನ ರಾಜಭಟರನ್ನು ಅಬು ಹಸನ್ ಬಳಿಗೆ ಕಳುಹಿಸಿ ಅವನ ಹತ್ತಿರ ಇರುವ ಸಂಪತ್ತನ್ನು ಕಿತ್ತುಕೊಂಡು ಬರಲು ಹೇಳಿದ.

ಅಬು ಹಸನ್ ಮನೆಗೆ ಹೋದ ರಾಜಭಟರು, ಅವನ ಮನೆಯನ್ನು ಜಾಲಾಡಿ, ಕೊನೆಗೆ ಮನೆಯನ್ನು ಕೆಡವಿ ಬರಿಗೈಲಿ ಸುಲ್ತಾನನೆದುರು ಬಂದು ನಿಂತರು.

ಸುಲ್ತಾನನ ಕಡೆಯವರು ತನ್ನ ಮನೆಯನ್ನು ಕೆಡವಿದುದರಿಂದ ಅದಕ್ಕೆ ಕಾರಣರಾದವರನ್ನು ದಂಡಿಸಲು, ಅವರ ಮೇಲೆ ಸೇಡು ತೀರಿಸಿಕೊಳ್ಳಲು ಅಬು ಹಸನ್ ನಿರ್ಧರಿಸಿದ. ಹಾಗೆಂದು ಸುಲ್ತಾನನ್ನು ಎದುರಿಸಲು ಸಾಧ್ಯವೆ?

ಆದರೂ ಅಬು ಹಸನ್ ಸೇಡು ತೀರಿಸಿಕೊಳ್ಳಲೇಬೇಕೆಂದು ನಿರ್ಧರಿಸಿದ. ಅದರಂತೆ ಮನೆಯಲ್ಲಿದ್ದ ಬೆಣ್ಣೆಯನ್ನು ಹೊರಕ್ಕೆ ತೆಗೆದಿರಿಸಿದ. ಆಗ ರಾಶಿರಾಶಿ ನೊಣಗಳು ಬಂದು ಬೆಣ್ಣೆಯನ್ನು ಮುತ್ತಿಕೊಂಡವು. ಅಬು ಹಸನ್ ಅದರ ಮೇಲೆ ಒಂದು ಬಟ್ಟೆಯನ್ನು ಮುಚ್ಚಿಕೊಂಡು ಸುಲ್ತಾನನ ಬಳಿಗೆ ಒಯ್ದ.

ಎದುರು ಬಂದು ನಿಂತ ಅಬು ಹಸನ್ ತನ್ನ ಮನೆಯನ್ನು ಉರುಳಿಸಿದ ಬಗ್ಗೆ ಕೇಳುತ್ತಾನೆ ಎಂದು ಸುಲ್ತಾನ ಭಾವಿಸಿದ. ಆದರೆ ಅಬು ಹಸನ್ ಆ ವಿಚಾರವನ್ನೇ ಮಾತಾಡಲಿಲ್ಲ.

"ಜಹಾಪನಾ, ನನ್ನ ಆಸ್ತಿಯಾಗಿದ್ದ ಈ ಬೆಣ್ಣೆಯನ್ನು ನೊಣಗಳು ಮುತ್ತಿ ತಿಂದುಬಿಟ್ಟವು!" ಎಂದ.

"ಆ ನೊಣಗಳನ್ನು ನಾನು ಹೇಗೆ ಶಿಕ್ಷಿಸಲಿ?"

' ಆ ನೊಣಗಳನ್ನು ಕೊಂದು ಹಾಕು!' ಎಂದ ಸುಲ್ತಾನ ಉತ್ಸಾಹದಿಂದ.

'ತಾವು ತಮ್ಮ ಆಜ್ಞೆಯನ್ನು ಲಿಖಿತದಲ್ಲಿ ನೀಡಿ' ಎಂದ ಅಬು ಹಸನ್.

ಅಂತೆಯೇ ಸುಲ್ತಾನ ಲಿಖಿತ ರೂಪದಲ್ಲಿ ಬರೆದುಕೊಟ್ಟ.

ಆ ಕೂಡಲೇ ನೊಣಗಳನ್ನು ಹೊಡೆಯಲು ಅಬು ಹಸನ್ ತನ್ನ ಖಡ್ಗವನ್ನು ಹಿರಿದು ಮೇಲೆತ್ತಿದ. ಕೂಡಲೇ ಆ ನೊಣಗಳೆಲ್ಲ ರಾಜಭಟರ ಮೇಲೆ ಹೋಗಿ ಕುಳಿತುಬಿಟ್ಟವು. ನೊಣಗಳನ್ನು ಹೊಡೆದುರುಳಿಸುವ ನೆಪದಲ್ಲಿ ಅವರನ್ನೆಲ್ಲ ತರಿದು ಉರುಳಿಸಿದ.

ಆಗ ಸುಲ್ತಾನನಿಗೆ ತನ್ನ ತಪ್ಪಿನ ಅರಿವಾಯಿತು. ಅವನು ಅಬು ಹಸನನಲ್ಲಿ ಕ್ಷಮೆಯಾಚಿಸಿದ.

✤ ಬಾರಾಶಂ

ಮಾನವ ದೀವಟಿಗೆಗಳ ವಿಸ್ಮಯಕಾರಿ ಪ್ರಪಂಚ

✿ ಅರುಣನಾರಾಯಣ

ಮೆಕ್ಸಿಕೋ ಸಾಗರ ತೀರದ, ಫ್ಲೋರಿಡಾ ಸಂಸ್ಥಾನದ ಅಲ್ಲಾಯೇ ನಗರದಲ್ಲಿ ಮಧ್ಯಮ ವರ್ಗದ ಕುಟುಂಬಗಳೇ ಹೆಚ್ಚಾಗಿ ನೆಲಸಿರುವ ಆ ಬಡಾವಣೆಯ ಎರಡಂತಸ್ತಿನ ನಿವಾಸಕ್ಕೆ ಪೋಸ್ಟ್‌ಮನ್ ತಂತಿ ಒಯ್ದು ಕೊಟ್ಟಾಗ ಮುಂಜಾನೆ ೧೦ ಗಂಟೆ. ಎರಡು ತಂತಿಗಳಿದ್ದುವು. ಒಂದು ಮನೆ ಮಾಲಿಕಳಾದ ಫ್ಲೆನ್ನಿ ಕಾರ್ಪೆಂಟರಗಳ ಹೆಸರಿನಲ್ಲಿದ್ದರೆ ಇನ್ನೊಂದು ಬಾಡಿಗೆಗಾರ್ತಿ ಶ್ರೀಮತಿ ಮೇರಿ ರೀಸರ್‌ಳ ಹೆಸರಿನಲ್ಲಿತ್ತು. ರೀಸರ್ ಮೊದಲ ಅಂತಸ್ತಿನ ಫ್ಲ್ಯಾಟ್‌ನಲ್ಲಿ ನೆಲಸಿದ್ದಳು. ತಂತಿಯನ್ನು ಮೇರಿ ರೀಸರ್‌ಳಿಗೆ ಕೊಡಲೆಂದು ಫ್ಲೆನ್ನಿ ಮಹಡಿ ಮೆಟ್ಟಲೇರಿದಳು.

ಮೇರಿ ರೀಸರ್‌ಗೆ ಸಾಮಾನ್ಯವಾಗಿ ಬೆಳಿಗ್ಗೆ ಹಾಗೂ ಸಂಜೆ ಎರಡು ಬಾರಿ ನೆಲ ಅಂತಸ್ತಿನ ಕೊಠಡಿಯಲ್ಲಿ ನೆಲಸಿದ್ದ ಫ್ಲೆನ್ನೀಯನ್ನು ಭೇಟಿಯಾಗಿ ಮಾತನಾಡುವ ಪರಿಪಾಠವಿತ್ತು. ಆ ದಿನ ಇನ್ನೂ ಆಕೆ ಕೆಳಗಿಳಿದು ಬಂದಿರಲಿಲ್ಲ. ಆಕೆ ಹೇಗಿದ್ದಾಳೆ ಎಂಬುದನ್ನು ವಿಚಾರಿಸಿದಹಾಗೂ ಆಯಿತು, ತಂತಿ ಸಂದೇಶ ಅವಳಿಗೆ ತಲುಪಿಸಿದಹಾಗೂ ಆಯಿತು ಎಂದು ಯೋಚಿಸಿ ಫ್ಲೆನ್ನಿ ಕಾರ್ಪೆಂಟರ್ ಮೇರಿ ರೀಸರ್‌ಳ ಫ್ಲ್ಯಾಟ್ ತಲುಪಿದಳು. ಮನೆಯ ಬಾಗಿಲು ತುಸು ತೆರೆದಿತ್ತು. ಬಾಗಿಲ ಚಿಲಕದ ಹಿಡಿಯನ್ನು ಮುಟ್ಟಿದೊಡನೆ ಅದು ಕೆಂಡದಂತೆ ಬಿಸಿಯಾಗಿತ್ತು. ಬಾಗಿಲನ್ನು ಪೂರ್ತಿ ತೆರೆದಾಗ ಒಳಗಿನಿಂದ ಬಿಸಿ ಗಾಳಿ, ಹೊಗೆ, ಕಣ್ಣು ಮೂಗುಗಳಲ್ಲಿ ತುಂಬಿಕೊಂಡು ಉಸಿರುಕಟ್ಟಿದಂತಾಯಿತು. ಒಳಗೆ ಕೊಠಡಿಗೆ ಬೆಂಕಿ ಹತ್ತಿಕೊಂಡಿದೆಯೇನೊ? ಎಂಬ ಅನುಮಾನ ಅವಳಿಗಾಯಿತು.

ಫ್ಲೆನ್ನಿ ಕಾರ್ಪೆಂಟರಳ ಫ್ಲ್ಯಾಟ್‌ನ ಆಸುಪಾಸಿನಲ್ಲಿ ಆ ದಿನ ಬೆಳಿಗ್ಗೆ ಒಳಚರಂಡಿಯನ್ನು ಸ್ವಚ್ಛಗೊಳಿ

ಯಾವುದೇ ಪ್ರಚೋದನಕಾರಿ ವಸ್ತುಗಳ ನೆರವಿಲ್ಲದೆಯೇ ಮಾನವಶರೀರ ಜೀವಂತ ದಹಿಸಿ ಬೂದಿಯಾಗುವ ಭೀಭತ್ಸ ಪ್ರಕರಣಗಳು ಆಗಾಗ ಸಂಭವಿಸಿದ್ದಿದೆ. ಇಂತಹ ನಿಗೂಢ ಪ್ರಕರಣಗಳಿಗೆ ಮಿಂಚಿನ ಚೆಂಡುಗಳು ಕಾರಣವಾಗಿರಬಹುದೆ? ವಿಜ್ಞಾನಿಗಳು ಈ ದಿಶೆಯಲ್ಲಿ ಸಂಶೋಧನೆಗಳನ್ನು ಮುಂದುವರಿಸುತ್ತಿದ್ದಾರೆ.

ಸುತ್ತಾ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಫೆನ್ನಿಯ ಕೋರಿಕೆಯ ಮೇರೆಗೆ ಅವರು ಅಲ್ಲಿಗೆ ಧಾವಿಸಿ ಬಂದು, ರೀಸರ್‌ಳ ಫ್ಲ್ಯಾಟ್‌ನೊಳಗೆ ಪ್ರವೇಶಿಸಿದರು. ಒಳಗಿನ ಹವೆ ಬಹಳ ಬಿಸಿಯಾಗಿದ್ದರೂ ಬೆಂಕಿ ವ್ಯಾಪಿಸಿದ ಲಕ್ಷಣ ಕಾಣಿಸಲಿಲ್ಲ. ಮಾನವ ಶರೀರದ ಚರ್ಮ, ಮಾಂಸ ಸುಟ್ಟ ಅಸಹ್ಯ



ಮೇರಿ ರೀಸರ್‌ಳ ಶರೀರದಲ್ಲಿ ಕೊನೆಗೆ ಉಳಿದದ್ದು ಈ ಪಾದ

ದುರ್ವಾಸನೆ ಎಲ್ಲೆಡೆ ಹರಡಿತ್ತು. ಅಡುಗೆ ಮನೆ ಹಾಗೂ ದಿವಾನಖಾನೆಯ ಮಧ್ಯೆ ಗೋಡೆಯ ಮೇಲೆ ದಪ್ಪ ಮೊಂಬತ್ತಿ ಉರಿಯುತ್ತಿತ್ತು. ಫ್ರೆನ್ನಿ ಕಾರ್ಪೆಂಟರ್ ಆ ಮೊಂಬತ್ತಿಯನ್ನು ಆರಿಸಿದ ತನ್ನ ಬಾಡಿಗೆದಾರಳು ಅಡುಗೆ ಕೋಣೆಯಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತಿದ್ದಂತೆ ಅಲ್ಲೇ ನಿದ್ದೆ ಹೋಗಿದ್ದಾಳೋ ಏನೋ ಎಂದು ಭಾವಿಸಿದಳು. ಹಿಂದೆ ಆಕೆ ಹಲವು ಬಾರಿ ಮೇರಿ ರೀಸರ್‌ಳನ್ನು ಆ ಭಂಗಿಯಲ್ಲಿ ನೋಡಿದ್ದಳು. ಅಡುಗೆ ಕೋಣೆಯಲ್ಲಿ ಆರಾಮ ಕುರ್ಚಿ ಸುಟ್ಟು ಕರಕಾಗಿ ಅಸ್ಥಿಪಂಜರ ಮಾತ್ರ ಉಳಿದಿತ್ತು. ಆ ಭಯಾನಕ ದೃಶ್ಯ ನೋಡಿ ಫ್ರೆನ್ನಿ ಕಾರ್ಪೆಂಟರ್‌ಳಿಗೆ ಪ್ರಜ್ಞೆ ತಪ್ಪುವಂತಾಯಿತು. ಮೇರಿ ರೀಸರ್‌ಳ ದಢೂತಿ ಶರೀರದಲ್ಲಿ ಅವಳ ಎಡಗೈ ಮತ್ತು ಬಲಗಾಲು ಮಾತ್ರ ಉಳಿದಿತ್ತು. ಉಳಿದೆಲ್ಲವೂ ಉರಿದು ಬೂದಿಯಾಗಿದ್ದವು. ಎಡಗೈ ಬೆಂದು ಆರಾಮ ಕುರ್ಚಿಯ ಕೈಗೆ ಅಂಟಿಕೊಂಡಿತ್ತು. ರೀಸರ್ ಧರಿಸಿದ ಉದ್ದನೆಯ ಸ್ಕರ್ಟ್‌ನ ಹಿಂದಿನ ಭಾಗ ಮಾತ್ರ ಆರಾಮ ಕುರ್ಚಿಯ ತಳಕ್ಕೆ ಅಂಟಿಕೊಂಡಿತ್ತು. .ಮೇರಿ ರೀಸರ್‌ಳ ದೇಹ ಆರಾಮ ಕುರ್ಚಿಯಲ್ಲಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿ ಕೆಲವು ಮೂಳೆಗಳು, ಅವಳ ದಂತ ಅಲ್ಲಿದ್ದವು. ಬಲತೊಡೆ ಸುಟ್ಟು ಕೆಳಗೆ ಬಿದ್ದಿತ್ತು. ಆಶ್ಚರ್ಯವೆಂದರೆ ಬಲಗಾಲಿನಲ್ಲಿ ಮೊಣ ಕಾಲಿನಿಂದ ಕೆಳಭಾಗ ಮಾತ್ರ ಸ್ವಲ್ಪವೂ ಸುಡದೆ ಹಾಗೇ ಉಳಿದಿತ್ತು. ಬಲಪಾದದಲ್ಲಿದ್ದ ಪಾದರಕ್ಷೆಯೂ ಸುರಕ್ಷಿತವಾಗಿ ಉಳಿದಿತ್ತು. ಮೇರಿ ರೀಸರ್‌ಳ ಭೀಕರ ದುರ್ಮರಣದ ದೃಶ್ಯದಿಂದ ತತ್ತರಿಸಿದ ಫ್ರೆನ್ನಿ ಕಾರ್ಪೆಂಟರ್‌ಳಿಗೆ ಆಕೆಯ ಸಾವು ಕೊಲೆಯೋ ಆತ್ಮಹತ್ಯೆಯೋ ಎಂಬುದು ಸ್ಪಷ್ಟವಾಗಲಿಲ್ಲ. ಆದರೂ ಪೊಲೀಸರಿಗೆ ತಿಳಿಸುವುದು ತನ್ನ ಕರ್ತವ್ಯವೆಂದು ನಿರ್ಧರಿಸಿದ ಆಕೆ ನಗರದ ಪೋಲೀಸ್ ವಿಭಾಗಕ್ಕೆ ಫೋನ್ ಮಾಡಿದಳು. ಮುಂದೆ ಒಂದು ಗಂಟೆಯ ಬಳಿಕ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಸಹಿತ ಮೇರಿ ರೀಸರ್‌ಳ ಫ್ಲ್ಯಾಟಿಗೆ ಧಾವಿಸಿದರು.

ಅವರು ಮೇರಿ ರೀಸರ್‌ಳ ಫ್ಲ್ಯಾಟ್‌ನಲ್ಲಿ ಕೂಲಂಕಷವಾಗಿ ತಪಾಸಣೆ ಮಾಡಿ ನೋಡಿದರು. ಆದರೆ ಬೆಂಕಿ ಹುಟ್ಟಿಕೊಂಡ ಕಾರಣ ತಿಳಿದು ಬರಲಿಲ್ಲ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹತ್ತಿಕೊಂಡಿರಬಹುದೆ? ಎಂಬುದಕ್ಕೂ ಪುರಾವೆಗಳು ಲಭಿಸಲಿಲ್ಲ. ಬೆಂಕಿ ಹರಡಲು ಕಾರಣವಾಗಬಹುದಾದ ಸ್ಫೋಟಕ ಸಾಮಗ್ರಿಗಳು, ಪೆಟ್ರೋಲ್, ಸೀಮೆ ಎಣ್ಣೆ ಯಾವುದನ್ನೂ ಅಲ್ಲಿ ಸಂಗ್ರಹಿಸಿಟ್ಟಿದ್ದಂತೆ ಕಾಣಿಸಲಿಲ್ಲ. ಅಡುಗೆ ಕೋಣೆಯಲ್ಲಿ ಆರಾಮ ಕುರ್ಚಿಯ ಪಕ್ಕದ ಬೀರುವಿನಲ್ಲಿದ್ದ ಪ್ಲಾಸ್ಟಿಕ್ ಸಾಮಗ್ರಿಗಳು ಸುಟ್ಟು ಮುರುಟಿ ಹೋಗಿದ್ದವು. ಕನ್ನಡಿ ಬೆಂಕಿಯ ಝಳದಲ್ಲಿ ಒಡೆದು ಚೂರಾಗಿತ್ತು. ಆರಾಮ ಕುರ್ಚಿಗೆ ಬೆಂದು ಹೋದ ಮಾನವ ದೇಹದ ಮಾಂಸ, ಮಜ್ಜೆಯ ತುಣುಕುಗಳು ಅಂಟಿಕೊಂಡಿದ್ದವು. ವಿಚಿತ್ರವೆಂದರೆ ಮೇರಿ ರೀಸರ್ ಕುಳಿತಿದ್ದ ಆರಾಮ ಕುರ್ಚಿಯ ಪಕ್ಕದಲ್ಲಿ ಆ ದಿನದ ವರ್ತಮಾನ ಪತ್ರಿಕೆ ಇತ್ತು. ಸುಲಭದಲ್ಲಿ ಸುಟ್ಟು ಕರಕಾಗುವ ವರ್ತಮಾನ ಪತ್ರಿಕೆಯೂ ಸುಡದೇ ಉಳಿದಿದ್ದು ಒಂದು ಪವಾಡವೇ ಸರಿ ಎಂದು ಪೋಲೀಸರು ತರ್ಕಿಸಿದರು.

ಮೇರಿ ರೀಸರ್‌ಳ ನಿಗೂಢ ಸಾವು ಫಾರೆನ್ಸಿಕ್ ತಜ್ಞರ ಗಮನವನ್ನೂ ಸೆಳೆಯಿತು. ಅಮೇರಿಕದ ಸುಪ್ರಸಿದ್ಧ ಫಾರೆನ್ಸಿಕ್ ತಜ್ಞ ಡಾ. ಮಿಲ್ಟನ್ ಕ್ರೋಗ್‌ಮನ್ ಮೊತ್ತ ಮೊದಲು ಈ ನಿಗೂಢ ಸಾವಿನ ಬಗ್ಗೆ ತೀವ್ರ ಅನುಮಾನ ವ್ಯಕ್ತಪಡಿಸಿದರು. ಡಾ. ಕ್ರೋಗ್‌ರುನ್ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಮಾನವ ಶರೀರ ರಚನಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದರು. ಭೀಕರ ಬೆಂಕಿ ಅನಾಹುತದಲ್ಲಿ ಗುರುತುಸಿಗಲಾರದಷ್ಟು ಸುಟ್ಟುಕರಕಾಗಿ ಹೋದ ಶವಗಳ ನಿಗೂಢ ಸಾವಿನ ಹಿನ್ನೆಲೆಯನ್ನು ಅವರು ಪತ್ತೆ ಹಚ್ಚಿದ್ದರು. ಆದರೆ ಶ್ರೀಮತಿ ರೀಸರ್‌ಳ ದಹನ ಕಾಂಡ ಈವರೆಗೆ ಅವರ ಗಮನ ಸೆಳೆದ ಹಿಂದಿನ ಎಲ್ಲ ದಹನ ಪ್ರಕರಣಗಳ ಭೀಷಣತೆಯನ್ನೂ ಮೀರಿಸುವಂತಿತ್ತು. ಮೇರಿ ರೀಸರ್‌ಳ ದೇಹವನ್ನು ಸುಟ್ಟುಬೂದಿ ಮಾಡಿದ ಬೆಂಕಿಯ ಪ್ರಕೋಪ ೧೬೫೦ ಡಿಗ್ರಿ ಸೆಂಟಿಗ್ರೇಡ್‌ಗಳಷ್ಟು ಎಂದು ಕ್ರೋಗ್‌ಮನ್ ಲೆಕ್ಕ ಹಾಕಿದರು. ಇಷ್ಟು ಉಗ್ರ ಸ್ವರೂಪದ ಬೆಂಕಿ ಇಡೀ ಮನೆಯನ್ನು ಸುಟ್ಟು

ಬೂದಿ ಮಾಡುವಷ್ಟು ಸಾಮರ್ಥ್ಯ ಹೊಂದಿತ್ತು. ಆದರೆ ಹಾಗಾಗಲಿಲ್ಲ.

ವಿದ್ಯುತ್ ಚಿತೆಯಲ್ಲಿ ೬೫೭ ಡಿಗ್ರಿ ಸೆಂಟಿಗ್ರೇಡ್ ತಾಪಮಾನದಲ್ಲಿ ಉರಿದು ಬೆಂದ ಶವಗಳನ್ನು ಕ್ರೋಗ್‌ಮನ್ ಕಂಡಿದ್ದರು. ಅಷ್ಟು ತೀವ್ರ ತಾಪದಲ್ಲಿ ಶವ ಉರಿದು ಬೂದಿಯಾಗಲು ಎಂಟು ತಾಸಿಗಿಂತಲೂ ಹೆಚ್ಚು ಕಾಲಾವಧಿ ತಗಲುತ್ತಿತ್ತು. ಅಷ್ಟು ಅವಧಿಯ ವರೆಗೆ ಶವ ಬೆಂದರೂ ಮೂಳೆಗಳು ಕರಕಾಗುವುದಿಲ್ಲ. ಶರೀರದ ಯಾವ ಭಾಗದ ಮೂಳೆಗಳು ಅವು ಎಂಬುದನ್ನು ಗುರುತಿಸುವ ಸ್ಥಿತಿಯಲ್ಲಿರುತ್ತವೆ. ಆದರೆ ೧೬೦೦ ಡಿಗ್ರಿ ಸೆಂಟಿಗ್ರೇಡ್‌ಗಿಂತ ಅಧಿಕ ತಾಪಮಾನದಲ್ಲಿ ಮೂಳೆಗಳೂ ಉಳಿಯುವುದಿಲ್ಲ. ಇವಿಷ್ಟು ಮೇರಿ ರೀಸರ್‌ಳ ದಾರುಣ ಸಾವನ್ನು ಅವಲೋಕಿಸಿದ ಬಳಿಕ ಡಾ. ಕೋಗ್‌ಮನ್‌ರ ಅಭಿಪ್ರಾಯವಾಗಿತ್ತು.

ರೀಸರ್‌ಳ ಖಾಸಗಿ ಜೀವನ

ಮೇರಿ ರೀಸರ್‌ಳ ನಿಗೂಢ ಸಾವಿನ ಹಿನ್ನೆಲೆ ತಿಳಿಯಲು ಅವಳ ಬದುಕಿನ ವಿವರಗಳನ್ನು ಸಂಗ್ರಹಿಸುವುದು ತೀರಾ ಅವಶ್ಯಕವೆಂದು ಪೊಲೀಸರಿಗೆ ಅನಿಸಿತು. ಅವಳ ಸಾವಿಗೆ ಕೆಲವೇ ತಾಸುಗಳ ಮೊದಲು ಏನೆಲ್ಲ ನಡೆಯಿತೆಂಬುದನ್ನು ಅರಿತುಕೊಳ್ಳಲು ಅವರು ಪ್ರಯತ್ನಿಸಿದರು. ಮೇರಿ ರೀಸರ್‌ಳ ಕುಟುಂಬದ ಸಂಬಂಧಿಕರು, ಆಪ್ತರು, ಸ್ನೇಹಿತರು ಮುಂತಾದವರನ್ನೆಲ್ಲ ಪ್ರಶ್ನಿಸಿದಾಗ ಪೊಲೀಸರಿಗೆ ಈ ಕೆಳಗಿನ ಮಾಹಿತಿಗಳು ಲಭಿಸಿದವು.

ಶ್ರೀಮತಿ ರೀಸರ್ ಸುಖೀ ಜೀವನ ಸಾಗಿಸುತ್ತಿದ್ದ ಮಹಿಳೆಯಾಗಿರಲಿಲ್ಲ. ಆಕೆ ಕೊಲಂಬಿಯಾದ ಪೆನ್ಸಿಲ್ವೇನಿಯಾ ನಗರದಲ್ಲಿ ಹುಟ್ಟಿ ಬೆಳೆದಳು. ಅವಳ ಪತಿ ನಗರದಲ್ಲಿ ಹೆಸರುವಾಸಿಯಾಗಿದ್ದ ವೈದ್ಯನಾಗಿದ್ದ. ಅವರ ಏಕಮಾತ್ರ ಪುತ್ರ ರಿಚರ್ಡ್ ತಂದೆಯಂತೆಯೇ ವೈದ್ಯಕೀಯ ವೃತ್ತಿ ಅನುಸರಿಸಿದ. ಪತಿ ತೀರಿಕೊಂಡ ಬಳಿಕ ಮೇರಿ ರೀಸರ್ ಮಗನೊಂದಿಗೆ ಫ್ಲಾರಿಡಾದಲ್ಲಿ ನೆಲಸಿದ್ದಳು. ಫ್ಲಾರಿಡಾದಲ್ಲಿ ಆಕೆಯ ಜೀವನ ಸುಖಕರವಾಗಿರಲಿಲ್ಲ. ಸಾಮಾನ್ಯ ದರ್ಜೆಯ ನಿವಾಸದಲ್ಲಿ ಆಕೆ ನೆಲಸಿದ್ದಳು. ಪತಿ ತೀರಿಕೊಂಡ ಬಳಿಕ ತನ್ನ ಜೀವನದ ಸುಖಸಂತೋಷಗಳೆಲ್ಲ ಕಣ್ಮರೆಯಾದವು ಎಂದು ಆಕೆಗೆ ಅನಿಸಿತು. ಆದರೆ ಮಗ ಡಾ. ರಿಚರ್ಡ್ ತಾಯಿಯನ್ನು ತುಂಬ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ಪ್ರತಿದಿನ ಬೆಳಗ್ಗೆ ೧೧ ಗಂಟೆಗೆ ಆತ ತಾಯಿಯ ಮನೆಗೆ ಬಂದು ಅವಳ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದ.

ತನ್ನ ಬದುಕಿನ ಅಂತಿಮ ದಿನದ ಹಿಂದಿನ ದಿನ ಮುದುಕಿ ಮೇರಿ ರೀಸರ್ ಮಗನ ಮನೆಗೆ ಹೋಗುವ ಕಾರ್ಯಕ್ರಮವಿತ್ತು. ಆದರೆ ಏಕೋ ಏನೋ ಮುದುಕಿ ಆ ದಿನ ರೀಸರ್ ಬಹಳ ಬೇಸರದ ಮನಃಸ್ಥಿತಿಯಲ್ಲಿದ್ದಳು. ಮಗನಿಗೇ ಫೋನ್ ಮಾಡಿ ಮೊಮಕ್ಕಳನ್ನು ತನ್ನ ಬಳಿ ಕಳುಹಿಸಿಕೊಡಲು ಹೇಳಿದಳು. ಫ್ಲಾರಿಡಾದ ಉಷ್ಣ ಹವೆ ಆಕೆಗೆ ಹಿಡಿಸುತ್ತಿರಲಿಲ್ಲ. ಆಕೆಗೆ ಸದಾ ತನ್ನ ಹುಟ್ಟೂರಿನ ನೆನಪಾಗುತ್ತಿತ್ತು. ಅಲ್ಲಿಯೇ ತನ್ನ ಜೀವನದ ಶೇಷಾಯುಷ್ಯವನ್ನು ಕಳೆಯಬೇಕೆಂದು ಅನಿಸುತ್ತಿತ್ತು. ಆ ದಿನ ಡಾ. ರಿಚರ್ಡ್ ತನ್ನ ಇಬ್ಬರು ಪುಟ್ಟ ಮಕ್ಕಳನ್ನು ತಾಯಿಯ ಬಳಿ ಬಿಟ್ಟು ಕರ್ತವ್ಯ ನಿರ್ವಹಿಸಲು ದವಾಖಾನೆಗೆ ತೆರಳಿದರು. ಸಂಜೆಯ ವರೆಗೆ ಮಕ್ಕಳು ಅಜ್ಜಿಯೊಂದಿಗೆ ಖುಷಿಯಿಂದ ಆಟವಾಡುತ್ತಾ ಕಳೆದವು. ಸಂಜೆ ಡ್ಯೂಟಿ ಮುಗಿಸಿ ಮಗ ತಾಯಿಯ ಮನೆಗೆ ಬಂದ ಮಕ್ಕಳನ್ನು ತನ್ನೊಂದಿಗೆ ಕರೆದೊಯ್ಯಲು. ರಾತ್ರಿ ೮ ಗಂಟೆಗೆ ಮಗ ರಿಚರ್ಡ್ ತಾಯಿಯ ಬಳಿ ಬಂದಾಗ ಮೇರಿ ರೀಸರ್ ರಾತ್ರಿ ಮಲಗುವಾಗ ಧರಿಸುವ ಉಡುಪು ತೊಟ್ಟುಕೊಂಡು, ಆರಾಮ ಕುರ್ಚಿಯಲ್ಲಿ ಕುಳಿತು ರೇಡಿಯೋ ಸಂಗೀತ ಆಲಿಸುತ್ತಿದ್ದಳು. ತಾಯಿ ಆರಾಮವಾಗಿರುವುದನ್ನು ನೋಡಿ ಮಗನಿಗೆ ನೆಮ್ಮದಿಯೆನಿಸಿತು. ಆತ ತಾಯಿಗೆ ಗುಡ್‌ನೈಟ್ ಹೇಳಿ ಮಕ್ಕಳನ್ನು ಕರೆದುಕೊಂಡು ತನ್ನ ಮನೆಗೆ ಹಿಂದಿರುಗಿದ. ಕೊನೆಯ ಬಾರಿ ಆತ ತಾಯಿಯನ್ನು ನೋಡಿದ್ದು ಆದೇ.

ಮೆಕ್ಸಿಕೋ ನಗರದ ನ್ಯಾಯಾಲಯವು ಈ ಭಯಂಕರ ಸಾವಿನ ವೃತ್ತಾಂತವನ್ನು ಅತ್ಯಂತ ಅವಿಶ್ವಸನೀಯ ವಿಸ್ಮಯಗಳಲ್ಲೊಂದೆಂದು ಪರಿಗಣಿಸಿತು. "ಮೃತ ರೀಸರ್‌ಳ ಫ್ಲಾಟ್‌ನಲ್ಲಿ ಬೆಂಕಿ

ಉತ್ಪನ್ನವಾಗಲು ಕಾರಣವಾಗಬಹುದಾದ ಯಾವುದೇ ಸ್ಫೋಟಕಗಳು, ಜ್ವಲಿಸುವ ವಸ್ತುಗಳು, ರಾಸಾಯನಿಕಗಳು ಕಂಡುಬರಲಿಲ್ಲ. ಮಾನವದೇಹ ವನ್ನು ಕ್ಷಣ ಮಾತ್ರದಲ್ಲಿ ಸುಟ್ಟು ಬೂದಿ ಮಾಡ ಬಲ್ಲ ಯಾವುದೇ ದಹನಕಾರಕ ವಸ್ತುಗಳೂ ಅವಳ ಫ್ಲಾಟ್‌ನಲ್ಲಿ ದೊರಕಲಿಲ್ಲ. ಸಿಗರೇಟು ಸೇದುವ ಚಟ ಆಕೆಗಿತ್ತು. ಆರಾಮ ಕುರ್ಚಿಯಲ್ಲಿ ಕುಳಿತು ಸಿಗರೇಟು ಎಳೆಯುತ್ತಾ ರೇಡಿಯೋ ಸಂಗೀತವನ್ನು ಆಲಿಸುತ್ತಾ ಇದ್ದಂತೆಯೇ ಆಕೆ ನಿದ್ದೆ ಹೋಗಿರ ಬೇಕು. ಸಿಗರೇಟಿನ ಕಿಡಿ ಬಟ್ಟೆಗೆ ಹತ್ತಿಕೊಂಡು ಆದರಿಂದ ಬೆಂಕಿ ಉದ್ಭವಿಸಿ ಮೇರಿ ರೀಸರ್ ಮೈಸುಟ್ಟುಕೊಂಡು ಸತ್ತಳು" ಎಂದು ಮೃತ್ಯುವಿನ ಪ್ರಮಾಣ ಪತ್ರ ನೀಡಿದ ನ್ಯಾಯಾಧೀಶರು ಅಭಿ ಪ್ರಾಯಪಟ್ಟರು.

ಫಾರೆನ್ಸಿಕ್ ತಜ್ಞ ಡಾ. ಕ್ರೋಗ್‌ಮನ್ ತಮ್ಮ ಸಂಸ್ಮರಣೆಯಲ್ಲಿ ಹೀಗೆ ಬರೆದಿದ್ದಾರೆ: "ಇಂತಹ ಭಯಂಕರ ಬೆಂಕಿಯ ಉತ್ಪಾತದಿಂದ ಯಾವ ವಸ್ತುವೂ ಸಂಪೂರ್ಣ ಜ್ವಲಿಸಿ ಸುಟ್ಟು ಬೂದಿಯಾ ಗಬಲ್ಲದು. ಆದರೆ ಮೇರಿ ರೀಸರ್‌ಳ ಫ್ಲಾಟ್‌ಗೆ ಅಗ್ನಿ ಪ್ರಕೋಪದಿಂದ ಕಿಂಚಿತ್ತೂ ಹಾನಿಯಾಗದೇ ಸುರಕ್ಷಿತವಾಗಿ ಹೇಗೆ ಸುರಕ್ಷಿತವಾಗಿ ಉಳಿಯಿತು ಎಂಬುದು ಸೋಜಿಗವೇ ಸರಿ.

ಅಗ್ನಿಯ ಪ್ರಚಂಡ ದಹನ ಶಕ್ತಿಯಲ್ಲಿ ಮಾನ ವನ ತಲೆಬುರುಡೆ ಉರಿದು ಮುರುಟಿಕೊಳ್ಳುತ್ತದೆ. ಆದರೆ ಬೂದಿಯಾಗುವು ದಿಲ್ಲ, ಆದರೆ ಮೇರಿ ರೀಸರ್‌ಳ ತಲೆಬುರುಡೆಯೂ ಬೂದಿಯಾಗಿ ಹೋಗಿದೆ. ಇದಕ್ಕಿಂತ ಮಿಗಿಲಾದ ವಿಸ್ಮಯವನ್ನು ನಾನೆಂದೂ ನೋಡಿದ್ದಿಲ್ಲ ಎಂದು ಡಾ. ಕ್ರೋಗ್‌ಮನ್ ಬರೆದಿದ್ದಾರೆ.

ಹಿಚಿನ್‌ಳ ನಿಗೂಢ ಸಾವು

ಇಂತಹ ನಿಗೂಢ ದಹನಕಾಂಡದ ಇನ್ನೂ ಕೆಲವು ರೋಚಕ ಘಟನೆಗಳ ಉಲ್ಲೇಖ ನಮಗೆ ಬ್ರಿಟಿಷ್ ಇತಿಹಾಸದಲ್ಲಿ ದೊರಕುತ್ತವೆ. ಕ್ರಿ.ಶ. ೧೬೧೩ ರಲ್ಲಿ ಇಂಗ್ಲೆಂಡಿನ ಪಟ್ಟಣವೊಂದರಲ್ಲಿ ಚರ್ಚ್‌ನ ಸಮೀಪದಲ್ಲಿದ್ದ ನಿವಾಸವೊಂದರಲ್ಲಿ ನಿಗೂಢ ಸಾವುಗಳು ಸಂಭವಿಸಿದವು. ನಿವಾಸದಲ್ಲಿ ತನ್ನ ಪತಿ ಹಾಗೂ ನಾಲ್ಕು ವರ್ಷದ ಮಗಳೊಂ ದಿಗೆ ಮಲಗಿದ್ದ ಜೇನ್ ಹಿಚಿನ್ ಎಂಬ ಮಹಿಳೆಯ ಚೀತ್ಕಾರ ಕೇಳಿ ಪಕ್ಕದ ಕೊಠಡಿಯಲ್ಲಿ ಮಲಗಿದ್ದ ಅವಳ ಅತ್ತೆ ಆಗ್ನೇಸ್ ರಸೆಲ್ ಎಚ್ಚೆತ್ತಳು. ಆಕೆ ಬರುವಷ್ಟರಲ್ಲೆ ಹಿಚಿನ್‌ಳ ಪತಿ ಹಾಗೂ ಮಗಳು ಸಂಪೂರ್ಣ ಸುಟ್ಟು ಬೂದಿಯಾಗಿದ್ದರು. ಹಿಚಿನ್‌ಳ ಶರೀರದ ಒಂದು ಭಾಗ ಪೂರ್ತಿ ಸುಟ್ಟು ಹೋಗಿತ್ತು. ಅವರು ಹಿಚಿನ್‌ಳ ಭಾಗಶಃ ಸುಟ್ಟ ದೇಹವನ್ನು ಕೊಠಡಿಯಿಂದ ಹೊರತಂದರು. ಮೂವರು ದುರ್ದೈವಿಗಳ ದೇಹಕ್ಕೆ ಬೆಂಕಿ ಹತ್ತಿ ಕೊಂಡುದಕ್ಕೆ ಪುರಾವೆಯಾಗಿ ಯಾವುದೇ ಬಾಹ್ಯ ಲಕ್ಷಣಗಳೂ ಅಲ್ಲಿ ಗೋಚರಿಸುತ್ತಿರಲಿಲ್ಲ. ಹಿಚಿನ್‌ಳು ಮೂರು ದಿನ ಕುಟುಕು ಜೀವ ಹಿಡಿದುಕೊಂಡಿದ್ದಳು. ನಾಲ್ಕನೇ ದಿನ ಅವಳ ದೇಹ ಪೂರ್ತಿ ಉರಿದು ಬೂದಿಯಾಯಿತು. ಇಂಗ್ಲೆಂಡಿನ ರಾಜಕುಟುಂಬದ ೫೨ ರ ಹರೆಯದ ಕೌಂಟೆಸ್ ಕಾರ್ನೆಲಿಯಾಳ ವೃತ್ತಾಂತ ನಿಗೂಢ ದಹನಕಾಂಡ ಪ್ರಕರಣಗಳಲ್ಲಿಯೇ ಅತ್ಯಂತ ಹಳೆಯದು.

ಆ ದಿನ ರಾತ್ರಿ ಕೌಂಟೆಸ್‌ಳ ಸೇವಕಿ ಮನೆಕೆಲ ಸಗಳನ್ನೆಲ್ಲ ಮುಗಿಸಿ, ಕೌಂಟೆಸ್‌ಳ ಮಲಗುವ ಕೊಠ ಡಿಯನ್ನು ಪ್ರವೇಶಿಸಿ, ಒಡತಿಗೆ ಗುಡ್‌ನೈಟ್ ಹೇಳಿ ತನ್ನ ಮನೆಗೆ ಹಿಂದಿರುಗಿದಳು. ಮರುದಿನ ಮುಂಜಾನೆ ಒಡತಿಯ ಮನೆಗೆ ಎಂದಿನಂತೆ ಕೆಲಸಕ್ಕೆ ಹಾಜರಾದಾಗ ಮನೆಯ ಬಾಗಿಲು ದೊಡ್ಡದಾಗಿ ತೆರೆದಿತ್ತು. ಈ ದಿನ ಕೌಂಟೆಸ್ ದಿನಕ್ಕಿಂತ ಬೇಗ ಎದ್ದಿರಬೇಕು ಎಂದು ಭಾವಿಸಿದ ಸೇವಕಿ ಲಗುಬ ಗೆಯಿಂದ ಬೆಳಗ್ಗಿನ ನಾಷ್ಟಾ, ಚಹಾ ತಯಾರಿಸಿ ಒಡತಿಯನ್ನು ಎಬ್ಬಿಸಲು ಅವಳ ಮಲಗುವ ಕೊಠಡಿಗೆ ತೆರಳುತ್ತಿದ್ದಂತೆ ಕೊಠಡಿಯ ಹೊಸ್ತಿ ಲಲ್ಲಿ ನಿಂತ ಅವಳಿಗೆ ಸುಟ್ಟ ಮಾಂಸದ ದುರ್ವಾಸನೆ ಮೂಗಿಗೆ ಬಡಿಯಿತು. ಕೌಂಟೆಸ್‌ಳ ಮಲಗುವ ಕೋಣೆಯಲ್ಲಿ ಇಣುಕಿ ನೋಡಿದಾಗ ಎದೆ ನಡು ಗಿಸುವ ಭೀಕರ ದೃಶ್ಯ ಕಂಡುಬಂದಿತು. ಕೊಠಡಿ ಯಲ್ಲಿ ಪಲ್ಲಂಗದ ಪಕ್ಕದಲ್ಲಿ ಬೂದಿಯ ರಾಶಿ ಕಾಣಿಸುತ್ತಿತ್ತು. ಅದರಲ್ಲಿ ಅರೆಬೆಂದ ಮಾನವ

ದೇಹದ ಭಾಗಗಳಿಂದ ಇನ್ನೂ ಹೊಗೆಯಾಡುತ್ತಿತ್ತು. ಕೊಠಡಿಯ ಕಿಟಕಿಯ ಪಕ್ಕದ ಗೋಡೆಗೆ ಮಾನವ ದೇಹದ ಬೆಂದ ಮಾಂಸದ ತುಣುಕುಗಳು ಅಂಟಿ ಕೊಂಡಿದ್ದವು. ಅದರಿಂದ ಹಳದಿ ಬಣ್ಣದ ದ್ರವ ಸೋರುತ್ತಿತ್ತು. ಅದರಿಂದ ವಿಚಿತ್ರ ದುರ್ವಾಸನೆ ಹೊರಹೊಮ್ಮುತ್ತಿತ್ತು. ಕೊಠಡಿಯ ಒಂದು ಮೂಲೆಯಲ್ಲಿ ಅರ್ಧ ಸುಟ್ಟ ಕೈ ಕಾಲುಗಳು ಬಿದ್ದಿದ್ದವು. ತಲೆ ಬುರುಡೆಯ ಹಿಂಭಾಗ ಮತ್ತು ಕೆಳದವಡೆ ಸುಟ್ಟು ಬೂದಿಯಾಗಿತ್ತು.

ನೈಟ್‌ಳ ನರಕಯಾತನೆ

ಮಾನವ ದೇಹಕ್ಕೆ ಬೆಂಕಿ ಹತ್ತಿಕೊಳ್ಳುವ ಯಾವುದೇ ಪ್ರಚೋದನಕಾರಿ ವಸ್ತುಗಳ ನೆರವಿಲ್ಲದೇ ಇದ್ದಕ್ಕಿದ್ದಂತೆಯೇ ದಹಿಸಿ ಬೂದಿಯಾಗುವ ಒಂದಕ್ಕೊಂದು ಭೀಭತ್ಸ ಪ್ರಕರಣಗಳು ಇತಿಹಾಸದ ಕಾಲಘಟ್ಟದಲ್ಲಿ ಆಗಾಗ ಸಂಭವಿಸಿದ ನಿದರ್ಶನಗಳಿವೆ. ಇಟಲಿಯಲ್ಲಿ ನಡೆದ ಇಂತಹ ಒಂದೆರಡು ಪ್ರಕರಣಗಳನ್ನು ಈಗ ಗಮನಿಸೋಣ. ೧೯೪೩ ರ ನವೆಂಬರ್ ೧೯ ರ ಮುಂಜಾನೆ ಇಟಲಿಯ ವೆರೋನಿಕ ನಗರದಲ್ಲಿ ನಿವೃತ್ತ ಸೇನಾಧಿಕಾರಿಯ ಪತ್ನಿ ಮಾರ್ಗರೆಟ್ ನೈಟ್ ಭಯಂಕರ ಯಾತನೆಯಿಂದ ಕಿರುಚತೊಡಗಿದಳು. ಅವಳ ಪತಿ ಹಾಗೂ ತಂಗಿ ಅವಳ ಚೀತ್ಕಾರ ಕೇಳಿ ಅವಳ ಕೊಠಡಿಗೆ ದೌಡಾಯಿಸಿದರು. ಮಲಗಿದ್ದಲ್ಲಿಯೇ ಶ್ರೀಮತಿ ನೈಟ್‌ಳ ಹೊದಿಕೆಗೆ ಬೆಂಕಿ ಹತ್ತಿಕೊಂಡಿತು. ಅವಳ ದೇಹದ ಒಂದು ಭಾಗ ಭಯಾನಕವಾಗಿ ಸುಟ್ಟುಹೋಗಿತ್ತು.

ಮಾರ್ಗರೆಟ್ ನೈಟ್ ಇನ್ನೂ ಪೂರ್ತಿ ಸತ್ತಿರಲಿಲ್ಲ. ಆಕೆಯ ಪತಿ ಹಾಗೂ ತಂಗಿ ಆಕೆಯನ್ನು ಪ್ರಶ್ನಿಸಿದರು. ಆದರೆ ಆಕೆ ಏನನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಮೂರು ವಾರಗಳ ತನಕ ಆಕೆ ಪ್ರಜ್ಞಾಹೀನ ಸ್ಥಿತಿಯಲ್ಲಿಯೇ ಇದ್ದು ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಳು. ಕೊನೆಗೆ ೧೯೪೩ ರ ಡಿಸೆಂಬರ್ ೬ ರಂದು ಮಾರ್ಗರೆಟ್ ನೈಟ್ ತೀರಿಕೊಂಡಳು.

ನೈಟ್ ಕ್ಲಬ್‌ನಲ್ಲಿ ಕಾದಿತ್ತು ಸಾವು

ಇನ್ನೊಂದು ಘಟನೆ ೧೯೫೦ ರಲ್ಲಿ ನಡೆಯಿತು. ಮೆಬೆಲ್ ಆಂಡ್ರೂಜ್ ೧೯ ರ ಹರೆಯದ ಯುವತಿ. ತನ್ನ ಪ್ರಿಯಕರನೊಂದಿಗೆ ಲಂಡನ್‌ನ ನೈಟ್‌ಕ್ಲಬ್‌ನಲ್ಲಿ ನರ್ತಿಸುತ್ತಿದ್ದಳು. ಇದ್ದಕ್ಕಿದ್ದಂತೆ ಮೆಬೆಲ್‌ಳ ಎದೆ ಹಾಗೂ ಕತ್ತಿನ ಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿತು. ಅವಳ ಜೊತೆಯಲ್ಲಿ ನರ್ತಿಸುತ್ತಿದ್ದ ಇತರರು ಆಕೆಯ ದೇಹಕ್ಕೆ ಹತ್ತಿಕೊಂಡ ಬೆಂಕಿ ನಂದಿಸಲು ಶಕ್ತಿ ಮೀರಿ ಯತ್ನಿಸಿದರು. ಆದರೆ ಎಲ್ಲರೂ ನೋಡನೋಡುತ್ತಿದ್ದಂತೆ ಕ್ಷಣಮಾತ್ರದಲ್ಲಿ ಬೆಂಕಿ ಅವಳ ಇಡೀ ಶರೀರವನ್ನು ವ್ಯಾಪಿಸಿತು. ಕೆಲವೇ ಕ್ಷಣ ತೀವ್ರ ಸುಟ್ಟಗಾಯಗಳಿಂದ ವಿಲಿ ವಿಲಿ ಒದ್ದಾಡಿದ ಯುವತಿ ಬೂದಿಯಾದಳು.

೧೯೯೧ ರಲ್ಲಿ ನಡೆದ ಇನ್ನೊಂದು ಘಟನೆ ಇಲ್ಲಿ ಉಲ್ಲೇಖನಾರ್ಹ. ಆಂಗ್ಲ ಲೇಖಕ ಜೆ. ಟೆಂಪಲ್ ಥರ್ಸ್‌ಟನ್ ತನ್ನ ಹಳ್ಳಿಯ ಮನೆಯಲ್ಲಿ ಸತ್ತು ಬಿದ್ದಿದ್ದ. ಆತ ಆರಾಮ ಕುರ್ಚಿಯಲ್ಲಿ ಕುಳಿತಿದ್ದಂತೆಯೇ ಅವನ ಶರೀರದ ಹಿಂಭಾಗಕ್ಕೆ ಬೆಂಕಿ ಹತ್ತಿಕೊಂಡಿತು. ಮರಣೋತ್ತರ ಶವ ಪರೀಕ್ಷೆ ಮಾಡಿದ ವೈದ್ಯರು ಹೃದಯ ಸ್ತಂಭನದಿಂದ ಅವನ ಸಾವು ಸಂಭವಿಸಿತೆಂದು ವರದಿ ಮಾಡಿದ್ದರು. ಆದರೆ ನಿಜವಾದ ಕಾರಣ ಇಂದಿಗೂ ಪತ್ತೆಯಾಗಿಲ್ಲ. ಥರ್ಸ್‌ಟನ್‌ನ ದೇಹದ ಅರ್ಧಭಾಗ ಸುಟ್ಟು ಕರಕಲಾಗಿತ್ತು. ಉಳಿದ ಅರ್ಧಭಾಗ ಮಾತ್ರ ಸುಡದೇ ಸುಸ್ಥಿತಿಯಲ್ಲಿ ಉಳಿದಿತ್ತು. ಏಕೆ ಹೀಗೆ ಎಂದು ಯಾವ ವೈದ್ಯಕೀಯ ತಜ್ಞನೂ ಹೇಳಲು ಶಕ್ತರಾಗಲಿಲ್ಲ. ಥಾರ್ಸ್‌ಟನ್‌ನ ಶರೀರಕ್ಕೆ ಬೆಂಕಿ ಹತ್ತಿಕೊಳ್ಳುವಾಗ ಆತನಿದ್ದ ಕೊಠಡಿಯಲ್ಲಿ ಇತರ ಯಾವ ವಸ್ತುಗಳಿಗೂ ಯಾವುದೇ ಹಾನಿ ಸಂಭವಿಸಿರಲಿಲ್ಲ. ಇವತ್ತಿನವರೆಗೂ ಈ ನಿಗೂಢ ಸಾವಿನ ರಹಸ್ಯ ಬಯಲಾಗಲೇ ಇಲ್ಲ.

೧೯೬೬ ರ ಡಿಸೆಂಬರ್ ತಿಂಗಳ ತೀಕ್ಷ್ಣ ಚಳಿಯ ಒಂದು ಮುಂಜಾನೆ ಅಮೆರಿಕದ ಲಾಸ್ ಏಂಜೆಲಿಸ್ ನಗರದಲ್ಲಿ ಗ್ಯಾಸ್ ಮೀಟರ್ ಓದುವ ಡಾನ್ ಗಾಸ್ನೆಲ್ ನಿತ್ಯದಂತೆ ತನ್ನ ಕೆಲಸ ಆರಂಭಿಸಿದ.

ಮೊದಲು ಆತ ೬೩ ರ ಇಳಿವಯಸ್ಸಿನ ವೃದ್ಧ ಜಾನ್ ಇರ್ವಿಂಗ್ ಬೇಂಟರ್‌ನ ಮನೆಗೆ ಗ್ಯಾಸ್ ಮೀಟರ್ ಓದಲು ಹೋದ. ವೃದ್ಧ ಬೇಂಟರ್ ತೀರಾ ನಿಶ್ಶಕ್ತಿಯಿಂದ ಬಳಲುತ್ತಿದ್ದ. ಮನೆಯ ಒಳಗಡೆಯೇ ಅಡ್ಡಾಡಲು ಆತನಿಗೆ ವಾಕಿಂಗ್ ಸ್ಟಿಕ್ ಸಹಾಯ ಬೇಕಿತ್ತು. ಗಾಸ್ನೆಲ್ ವೃದ್ಧನ ಮನೆಗೆ ಬಂದಾಗ ಮನೆ ಬಾಗಿಲು ದೊಡ್ಡದಾಗಿ ತೆರೆದಿತ್ತು. ಗ್ಯಾಸ್ ಮೀಟರನ್ನು ಅಡುಗೆ ಕೋಣೆಯ ಪಕ್ಕದ ಕೋಣೆಯಲ್ಲಿ ಅಳವಡಿಸಲಾಗಿತ್ತು. ಒಳಪ್ರವೇಶಿಸಿದಾಗ ಚರ್ಮ ಸುಟ್ಟ ವಾಸನೆ ಅವನ ಮೂಗಿಗೆ ಬಡಿಯಿತು. ಅದನ್ನು ಲೆಕ್ಕಿಸದೆ ಗಾಸ್ನೆಲ್ ಮುಂದುವರಿದ. ಅಡುಗೆ ಕೋಣೆಯ ಪಕ್ಕದಲ್ಲಿ ಒಂದಷ್ಟು ಬೂದಿ ರಾಶಿ ಗುಪ್ಪೆಯಾಗಿ ಬಿದ್ದಿತ್ತು. ಕೋಣೆಯೆಲ್ಲ ಬಿಸಿಯಾಗಿತ್ತು. ಕೋಣೆಯ ಸೂರಿನ ಕೆಳಗೆ ಬೂದಿಯ ಕಣಗಳು ಗಾಳಿಯಲ್ಲಿ ಹಾರಾಡುತ್ತಿದ್ದವು. ಗಾಸ್ನೆಲ್ ಗ್ಯಾಸ್ ಮೀಟರ್ ಓದಿ, ತಾನು ಬಂದ ಕೆಲಸ ಮುಗಿಸಿದ. ಆದರೆ ಮುದುಕ ಇರ್ವಿಂಗ್ ಬೇಂಟರ್ ಎಲ್ಲಿಯೂ ಕಾಣಿಸಲಿಲ್ಲ. ಗಾಸ್ನೆಲ್ ಸ್ನಾನದ ಕೊಠಡಿಯತ್ತ ಇಣುಕಿ ನೋಡಿದ. ಸ್ನಾನದ ಕೊಠಡಿಯ ಬಾಗಿಲು ತೆರೆದಿತ್ತು. ಕೊಠಡಿಯ ಒಂದು ಭಾಗದಲ್ಲಿ ಆಗತಾನೇ ಬೆಂಕಿ ವ್ಯಾಪಿಸಿ ಕರಡಿ ಹೋದಂತೆ ಭಾಸವಾಗುತ್ತಿತ್ತು. ಅಲ್ಲಿಯೇ ಒಂದು ಮೂಲೆಯಲ್ಲಿ ಇರ್ವಿಂಗ್ ಬೇಂಟರ್‌ರ ಲೋಹದ ಹಿಡಿಯುಳ್ಳ ವಾಕಿಂಗ್‌ಸ್ಟಿಕ್ ಇತ್ತು. ಅದರ ಸಹಾಯದಿಂದಲೇ ಅವರು ಮನೆಯ ಒಳಗೆ ಓಡಾಡುತ್ತಿದ್ದರು. ವಾಕಿಂಗ್ ಸ್ಟಿಕ್ ಅರ್ಧ ಸುಟ್ಟು ಹೋಗಿತ್ತು. ಅದರ ಸಮೀಪದಲ್ಲಿಯೇ ಬೆಂಟರ್‌ರ ಅರ್ಧಬೆಂದ ಎಡಪಾದ ಬಿದ್ದಿತ್ತು. ಪಾದದ ಮೇಲ್ಭಾಗ ಮಾತ್ರ ಹೊತ್ತಿ ಕರಕಾಗಿತ್ತು. ಅದನ್ನು ಆವರಿಸಿದ ಚಪ್ಪಲಿಗೆ ಯಾವ ಹಾನಿಯೂ ಆಗಿರಲಿಲ್ಲ. ಮುದುಕ ಬೇಂಟರನ ದೇಹದಲ್ಲಿ ಅಷ್ಟುಭಾಗ ಮಾತ್ರ ಉಳಿದಿತ್ತು. ಉಳಿದ ಭಾಗವೆಲ್ಲ ಸುಟ್ಟು ಬೂದಿಯಾಗಿತ್ತು. 'ಇರ್ವಿಂಗ್ ಬೆಂಟರ್ ಸುಟ್ಟು ಬೂದಿಯಾಗಿದ್ದಾರೆ' ಎಂದು ಕಿರುಚುತ್ತಾ ಗಾಸ್ನೆಲ್ ಹೊರಗೆ ಓಡಿ ಬಂದ.

ಬೇಂಟರ್‌ರ ಸಾವಿಗೆ ಸಂಬಂಧಿಸಿದಂತೆ ಮೃತ್ಯು ಪ್ರಮಾಣ ಪತ್ರ ನೀಡಿದ ನ್ಯಾಯಾಧೀಶರು ಪ್ರಮಾಣ ಪತ್ರದಲ್ಲಿ ಹೀಗೆ ಬರೆದರು: "ಇರ್ವಿಂಗ್ ಬೆಂಟರ್ ತಮ್ಮ ತಂಬಾಕು ಪೈಪು ಹೊತ್ತಿಸಿಕೊಳ್ಳುವಾಗ ಆಕಸ್ಮಿಕವಾಗಿ ಬೆಂಕಿ ತಗಲಿ ಸುಟ್ಟುಕೊಂಡು ಸತ್ತರು. ಅವರ ಸಾವು ನಿಗೂಢವಾದುದು. ಇದಕ್ಕಿಂತ ವಿಚಿತ್ರಮಯ, ರಹಸ್ಯಮಯ ಸಾವು ಬೇರೊಂದಿರಲಾರದು". ತಂಬಾಕು ಪೈಪಿನಿಂದ ಕಿಡಿ ಹಾಕಿ ಬೆಂಕಿ ಹತ್ತಿಕೊಂಡು ಇರ್ವಿಂಗ್ ಬೆಂಟರ್ ಸತ್ತರೆಂಬುದನ್ನು ಸಾಬೀತುಪಡಿಸುವ ಯಾವ ಪುರಾವೆಗಳೂ ಅವರು ಭೀಕರವಾಗಿ ಸುಟ್ಟು ಸತ್ತ ಸ್ಥಳದಲ್ಲಿ ದೊರಕಲಿಲ್ಲ!

ಮಾನವ ಶರೀರ ಅಕಾರಣವಾಗಿ ಇದ್ದಕ್ಕಿದ್ದಂತೆಯೇ ಸುಟ್ಟು ಬೂದಿಯಾಗುವ ವಿಲಕ್ಷಣ ವಿದ್ಯಮಾನಗಳು ಕ್ರಮೇಣ ವಿಜ್ಞಾನಿಗಳ ಗಮನ ಸೆಳೆದಿವೆ. ವಿಜ್ಞಾನಿಗಳು ಇಂತಹ ಘಟನೆಗಳನ್ನು ಅಭ್ಯಸಿಸಲು ಆರಂಭಿಸಿದ್ದಾರೆ. ಮಾನವ ಶರೀರ ಇದ್ದಕ್ಕಿದ್ದಂತೆಯೇ ಸುಟ್ಟು ಭಸ್ಮವಾಗುವ ಘಟನೆಗೆ ಸಂಬಂಧಿಸಿದಂತೆ ವಿಜ್ಞಾನಿಗಳು 'ಮಾನವ ದೀವಟಿಗೆ' ಎಂಬ ಹೊಸ ಪದವನ್ನು ಹೊಸೆದರು.

'ಮಾನವ ಪಂಜು'ಗಳ ಬಗ್ಗೆ ವಿಜ್ಞಾನಿಗಳು, ಫಾರೆನ್ಸಿಕ್ ತಜ್ಞರು ಸಂಶೋಧನೆಗಳನ್ನು ಮುಂದುವರಿಸಿದರು. ಈ ದಿಶೆಯಲ್ಲಿ ಗಮನಾರ್ಹವೆನಿಸುವ ಒಂದು ಸಂಶೋಧನೆಯೆಂದರೆ ಲೀಡ್ಸ್ ವಿಶ್ವವಿದ್ಯಾಲಯದ ಫಾರೆನ್ಸಿಕ್ ವೈದ್ಯಕೀಯ ವಿಭಾಗದ ಪ್ರೊಫೆಸರ್ ಡಾ. ಜಿ.ಜಿ.ಜಿ. ಅವರ ಸಂಶೋಧನೆ ಡಾ. ಜಿ. ಅವರು ಮಾನವ ಮಾಂಸದ ಸಣ್ಣ ಸಣ್ಣ ತುಂಡುಗಳಿಗೆ ಬೆಂಕಿ ಹಚ್ಚಿನೋಡಿದಾಗ ಅವು ಉರಿಯಲು ಆರಂಭಿಸಿದವು. ಅವುಗಳನ್ನು ಗಾಳಿ ಬೆಳಕು ಆಡದ ಕೊಠಡಿಯಲ್ಲಿ ಪೆಟ್ಟಿಗೆಯಲ್ಲಿರಿಸಿ ಭದ್ರಪಡಿಸಿದರೂ ಅವು ಉರಿಯುತ್ತಿದ್ದವು. ಆದರೆ ಮಾನವ ಶರೀರದಲ್ಲಿ ಇದ್ದಕ್ಕಿದ್ದಂತೆಯೇ ಬೆಂಕಿ ಹೇಗೆ ಉದ್ಭವಿಸುತ್ತದೆ, ತೀರಾ ಅಲ್ಪ ಅವಧಿಯಲ್ಲಿ ಅತ್ಯಂತ ವೇಗವಾಗಿ ಮಾನವ ಶರೀರ ಹೇಗೆ ಬೂದಿಯಾಗುತ್ತದೆ ಎಂಬುದಕ್ಕೆ ಸಮರ್ಪಕ ಉತ್ತರ ಸಿಗಲಿಲ್ಲ.

ಮಿಂಚಿನ ಚೆಂಡು ಕಾರಣವೆ?

'ಮಾನವ ದೀವಟಿಗೆಗೆ ಸಂಬಂಧಿಸಿದಂತೆ ಕೆಲವು ಸಂಭವನೀಯ ಸಾಧ್ಯತೆಗಳನ್ನು ವಿಜ್ಞಾನಿಗಳು ಊಹಿಸಿದ್ದಾರೆ. ಕೆಲವು ವ್ಯಕ್ತಿಗಳು ತಮ್ಮ ಆಂತರ್ಯದಲ್ಲಿ ಜ್ವಲಿಸುತ್ತಿರುವ ಅಂತಃಪ್ರೇರಣೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಮಾರ್ಗ ಇದಾಗಿರಬಹುದೇನೋ? ಬದುಕಿನಲ್ಲಿ ನಿರಂತರ ಘೋರ ದುಃಖ, ಸಂಕಟ ಅನುಭವಿಸುತ್ತಾ ಬಂದ ವ್ಯಕ್ತಿಯ ದೇಹದೊಳಗೆ ಕೆಲವು ಕಣಗಳು ಉತ್ಪಾದನೆಯಾಗಿ ಅವು ಜ್ವಲಿಸುತ್ತಾ ಪರಾಕಾಷ್ಠೆಗೆ ತಲುಪಿ ಬೆಂಕಿ ಉತ್ಪನ್ನವಾಗುತ್ತದೆ ಎಂದು ಕೆಲವು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ನಮ್ಮ ಶರೀರ ಒಂದು ಯಂತ್ರವಿದ್ದಂತೆ. ಈ ಶರೀರವೆಂಬ ಯಂತ್ರದೊಳಗೆ ಏನೋ ತೀವ್ರ ಸ್ವರೂಪದ ಎಡವಟ್ಟಾಗುತ್ತದೆ. ಶರೀರದೊಳಗೆ ಜ್ವಲಿಸುವ ಶಕ್ತಿಯುಳ್ಳ ಕಣಗಳು ಒಟ್ಟುಗೂಡಿ ಪ್ರಚಂಡ ಶಕ್ತಿಯಿಂದ ಪ್ರಜ್ವಲಿಸಿ ಇಡೀ ಶರೀರ ಸುಟ್ಟು ಬೂದಿಯಾಗುವಂತೆ ಮಾಡುತ್ತಿರಬೇಕು ಎಂದು ಇನ್ನೂ ಕೆಲವು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

ಕೆಲವು ವಿಜ್ಞಾನಿಗಳು ಮಿಂಚಿನ ಚೆಂಡುಗಳ **(Ball Lightning)** ನಿಗೂಢ ವಿದ್ಯಮಾನವನ್ನು 'ಮಾನವ ದೀವಟಿಗೆ' ಪ್ರಕರಣಗಳೊಂದಿಗೆ ತಳಕು ಹಾಕುವ ಪ್ರಯತ್ನ ಮಾಡಿದ್ದಾರೆ. ವಿಜ್ಞಾನಿ ಮ್ಯಾಕ್ಸ್‌ವೆಲ್ ಕ್ರೇಟ್ ಮತ್ತು ಡೆಲ್ಫಿನ್ ಡೇವಿಸ್ ಮಿಂಚಿನ ಚೆಂಡುಗಳ ವಿದ್ಯಮಾನದ ಬಗೆಗೆ ಅಧ್ಯಯನ ಮಾಡಿದ್ದಾರೆ.

ವಾತಾವರಣದಲ್ಲಿ ನೈಸರ್ಗಿಕ ಪ್ರಕ್ರಿಯೆಯಾಗಿ ಉದ್ಭವಿಸುವ ಮಿಂಚಿನ ಚೆಂಡುಗಳಲ್ಲಿ ಅಗಾಧ ಶಕ್ತಿ ಅಡಗಿದೆ. ಉರಿಯುತ್ತಿರುವ ಚಿತೆಯಿಂದ ಹೊರ ಹೊಮ್ಮುವ ಶಾಖದಂತೆ ಮಿಂಚಿನ ಚೆಂಡುಗಳಿಂದ ರೇಡಿಯೋ ವಿಕಿರಣ ಹೊರಹೊಮ್ಮುತ್ತದೆ. ವಿಜ್ಞಾನಿಗಳ ಈ ತರ್ಕ ನಿಜವೇ ಆಗಿದ್ದರೆ ಮಿಂಚಿನ ಚೆಂಡುಗಳ ಪ್ರಖರ ಶಕ್ತಿಯ ಸಮೀಪಕ್ಕೆ ಬರುವ ಮಾನವ ತಕ್ಷಣ ಸುಟ್ಟು ಬೂದಿಯಾಗಿ ಬಿಡುತ್ತಾನೆ. ಮಿಂಚಿನ ಚೆಂಡುಗಳ ತೀಕ್ಷ್ಣ ಪ್ರಭೆ ನಮ್ಮ ದೇಹದ ಒಳ ಪ್ರವೇಶಿಸಿ, ಆಂತರಿಕ ಅಂಗಗಳನ್ನು ಸುಟ್ಟು ಭಸ್ಮೀಭೂತಗೊಳಿಸುವಷ್ಟು ಪ್ರಖರವಾಗಿರುತ್ತದೆ. ನಾವು ಧರಿಸಿದ ಬಟ್ಟೆಗಳಿಗೆ ಸ್ವಲ್ಪವೂ ಹಾನಿಯಾಗದೆ ಹಾಗೇ ಉಳಿಯಬಲ್ಲದು. ಮಿಂಚಿನ ಚೆಂಡುಗಳು ವಾತಾವರಣದಲ್ಲಿ ಮಾತ್ರವಲ್ಲ, ನಮ್ಮ ಶರೀರದ ಒಳಗಡೆಯೂ ನಿರ್ಮಾಣವಾಗಬಹುದು ಎಂದು ಕೆಲವು ವಿಜ್ಞಾನಿಗಳು ಹೇಳುತ್ತಾರೆ.

ನಮ್ಮ ದೇಹದ ಯಾವುದೇ ಭಾಗದಲ್ಲಿ ಮಿಂಚಿನ ಚೆಂಡಿನ ತೀಕ್ಷ್ಣಪ್ರಭೆ ಒಳ ಪ್ರವೇಶಿಸಿದರೆ, ಅಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಉತ್ಪನ್ನವಾಗಬಹುದು. ಮೈಕ್ರೋವೇವ್ (ಅತಿ ಸೂಕ್ಷ್ಮ ವಿದ್ಯುತ್ ತರಂಗಗಳು) ವಿಭಿನ್ನ ಸ್ತರದಲ್ಲಿ, ವಿಭಿನ್ನ ತಾಪಮಾನದಲ್ಲಿ ವಸ್ತುಗಳನ್ನು ಸುಟ್ಟು ಬೂದಿ ಮಾಡುವ ರೀತಿಯಲ್ಲಿ ಈ ಶಕ್ತಿಯೂ ನಮ್ಮ ಶರೀರದ ಆಂತರಿಕ ಅಂಗಗಳನ್ನು ಸುಟ್ಟು ಬೂದಿ ಮಾಡಬಲ್ಲದು.


ಸದ್ಯದ ಮಟ್ಟಿಗೆ ಹೇಳುವುದಾದರೆ 'ಮಾನವ ದೀವಟಿಗೆ'ಯ ನಿಗೂಢ ಪ್ರಕರಣಗಳ ಮೂಲ ಕಾರಣಕ್ಕೆ ಸಂಬಂಧಿಸಿದಂತೆ ವಿಜ್ಞಾನಿಗಳು ಮುಂದಿಟ್ಟ ತರ್ಕಗಳಲ್ಲಿ ಮಿಂಚಿನ ಚೆಂಡುಗಳ ವಿದ್ಯಮಾನ ಹೆಚ್ಚು ಪರಿಗ್ರಾಹ್ಯವೆನಿಸುತ್ತದೆ.

ಶುಭ ಸಂಕೇತವೆಂದು ಪರಿಶೀಲಿಸಲ್ಪಟ್ಟ 'ಸ್ವಸ್ತಿಕ' ಎಷ್ಟು ಹಳೆಯದು ಗೊತ್ತೇ? ಕ್ರಿಸ್ತ ಜನಿಸುವುದಕ್ಕಿಂತ ೨೦೦೦ ವರ್ಷ ಮೊದಲು ಸುಮೇರಿಯನ್ನರು ಅದನ್ನು ಬಳಸುತ್ತಿದ್ದರು. ಇದಕ್ಕಿಂತಲೂ ಹಿಂದಿನದಾದ ವೇದಗಳಲ್ಲಿಯೂ 'ಸ್ವಸ್ತಿಕ'ದ ಉಲ್ಲೇಖವಿದೆ.

ಅದರ ಮೈ ರಬ್ಬರಿನಂತಿರುವುದರಿಂದ ಬರ್ಮುಡಾ ತೀರದಲ್ಲಿರುವ ಒಂದು ಬಗೆಯ ಕಪ್ಪುಮೀನು ತನ್ನ ಗಾತ್ರಕ್ಕಿಂತ ಮೂರುಪಟ್ಟು ದೊಡ್ಡದಾಗಿರುವ ಮೀನನ್ನೂ ನುಂಗಬಲ್ಲದು.

ಬಿಳಿಹೆಮ್ಮಗೆ

ಕಡತದಲ್ಲೇ ತಲ್ಲೀನನಾಗಿದ್ದ ರಂಗಣ್ಣ ತಲೆ ಎತ್ತಿ ನೋಡಿದಾಗ ಇವನ ಕೊಠಡಿಯೊಳಗೇ ಬಂದ ಪ್ರದೀಪ ನನ್ನು ಕಂಡು ದಿಗ್ಭ್ರಾಂತನಾಗಿ ಹೋದ. ತನ್ನ ಕಣ್ಣುಗಳನ್ನು ನಂಬದೆ ಕಣ್ಣುಜ್ಜಿ ಎರಡೆರಡು ಬಾರಿ ನೋಡಿದ. ಹೌದು ಅವನೇ... ಪ್ರದೀಪ! ಹೇಗೆ ಬಂದ ಇಲ್ಲಿಗೆ? ಎತಕ್ಕಾಗಿ



ಬಂದಿದ್ದಾನೆ? ಎಂದು ಯೋಚಿಸತೊಡಗಿದ. ಬಂದವ ಪ್ರದೀಪ ಯಾರಾರನ್ನೋ ವಿಚಾರಿಸಿಕೊಂಡು, ಕಡೆಗೆ ರಂಗಣ್ಣನ ಮೇಜಿನ ಮುಂದೆಯೇ ನಿಂತು, ಪತ್ರವನ್ನು ತೆರೆದು ತೋರಿಸಿ 'ಹಲೋ ಸರ್'ಎಂದಾಗ, ಕೊಂಚ ಬಿಗುವಿನಿಂದಲೇ 'ಕೂಡಿ'ಎಂದು ಕುರ್ಚಿಯನ್ನು ತೋರಿಸಿ ಪತ್ರವನ್ನು ತೆಗೆದುಕೊಂಡು ಕ್ಯಾಬಿನ್ನಿನೊಳಗೆ ಹೋದ. ಎರಡು ನಿಮಿಷ ಬಾಸ್ ಜೊತೆಯಲ್ಲಿ ಮಾತನಾಡಿ ಹೊರಬಂದವ, ಕರೆಯುತ್ತಿದ್ದಾರೆ ಎಂದು ಪ್ರದೀಪನಿಗೆ ಸೂಚಿಸಿದ.

ಪ್ರದೀಪ ಒಳ ಹೋದವ ಅರ್ಧ ಗಂಟೆಯಾದರೂ ಹೊರಬಾರದಿದ್ದಾಗ ರಂಗಣ್ಣನಿಗೆ ಒಂದೆಡೆ ಕುತೂಹಲ, ಮತ್ತೊಂದೆಡೆ ರೋಷ ಉಕ್ಕಿ ಬರುತ್ತಿತ್ತು. ಅಷ್ಟರಲ್ಲಿ ಬೆಲ್ ಬಾರಿಸಿದ್ದರಿಂದ ಅಟೆಂಡರ್ ಹನುಮ ದಡದಡನೆ ಎದ್ದು ಒಳನಡೆದ. ಒಳ ಹೋದ ಹನುಮ ಹೊರಬಂದು ಫ್ಲಾಸ್ಕಿನಲ್ಲಿದ್ದ ಕಾಫಿಯನ್ನು ಎಗಡು ಕಪ್ಪಿಗೆ ಬಗ್ಗಿಸಿಕೊಂಡು ಕ್ಯಾಬಿನ್ನಿನೊಳಗೆ ಹೋದಾಗ ರಂಗಣ್ಣನಿಗೆ ಮೈ ಎಲ್ಲಾ ಉರಿಯತೊಡಗಿತು.

ಅರೆ, ಇದೇನಾಶ್ಚರ್ಯ, ಪ್ರದೀಪ ಏತಕ್ಕಾಗಿ ಬಂದಿದ್ದಾನೆ? ಹಾಗೇನಾದರೂ ನಮ್ಮ ಕಂಪ್ಯೂಟರ್ ವಿಭಾಗಕ್ಕೆ ಬೇಕಾಗುವ ಪರಿಕರಗಳ ಮಾರಾಟದ ಬಗ್ಗೆ ಮಾತನಾಡಲು ಬಂದಿದ್ದಾನೆಯೆ? ಅಥವಾ ಮತ್ತೇನಾದರೂ ಕೆಲಸಕ್ಕೆ ಬಂದಿದ್ದಾನೆಯೆ? ಹೌದಲ್ಲ, ಬಿ.ಇ. ಎಲೆಕ್ಟ್ರಾನಿಕ್ಸ್ ಓದಿದವ, ಏನೋ ಕೆಲಸದ ಮೇಲೆ ಬಂದಿರಲಿಕ್ಕೂ ಸಾಕು ಎಂದು ವಿಧವಿಧವಾಗಿ ಯೋಚಿಸಿ, ತನಗೆ ತಾನೇ ಸಮಾಜಾಯಿಷಿ ಕೊಟ್ಟುಕೊಂಡರೂ ಮನಸ್ಸಿನ ಮೂಲೆಯಲ್ಲಿ ಅವ್ಯಕ್ತವಾದ ಒಂದು ರೀತಿಯ ಬೆಂಕಿ ಹತ್ತಿ ಉರಿಯತೊಡಗಿತು.

ಅಷ್ಟರಲ್ಲಿ ಕ್ಯಾಬಿನ್ನಿನ ಬಾಗಿಲು ತೆರೆದುಕೊಂಡಿತು. ಬಾಸ್ ಜೊತೆ ನಗುನಗುತ್ತ ಹೊರಬಂದ ಪ್ರದೀಪನನ್ನು ನೋಡಿದ ರಂಗಣ್ಣನ ಕಣ್ಣಲ್ಲಿ ಕಿಡಿ ಹಾರತೊಡಗಿತು. ಆ ದೊಡ್ಡ ಹಾಲ್‌ನಲ್ಲಿ ಕುಳಿತು ಕೆಲಸ ಮಾಡುತ್ತಿದ್ದ ಪ್ರತಿಯೊಬ್ಬರ ಬಳಿಯೂ ಪ್ರದೀಪನನ್ನು ಕರೆದೊಯ್ದು ಪರಿಚಯಿಸತೊಡಗಿದಾಗ ಏನು ನಡೆಯುತ್ತಿದೆ ಎಂಬುದನ್ನು ಊಹಿಸಲಾರದಾದ. ನಂತರ ರಂಗಣ್ಣನ ಬಳಿಯೂ ಕರೆತಂದು, 'ನೋಡಿ, ಇವರೇ ನಮ್ಮ ವಿಭಾಗದ ಅಕೌಂಟೆಂಟ್ ರಂಗಣ್ಣ, ಪ್ರತಿಯೊಂದು ಕೆಲಸದ ಜೀವನಾಡಿ. ಬೇರೆ ವಿಭಾಗದವರು ಅವರವರ ಅಗತ್ಯಗಳಿಗನುಗುಣವಾಗಿ ಯಾರೇನೆ ಸ್ಟೇಟ್‌ಮೆಂಟ್ಸ್ ಕೇಳಿದರೂ ಇವರ ಮುಖಾಂತರವೇ ಹೋಗುವುದು ಹಾಗೂ ಬೇರೆ ವಿಭಾಗದಿಂದ ಇವರ ಮೂಲಕವೇ ನಮಗೆ ತಲುಪುವುದು," ಎಂದು ರಂಗಣ್ಣನನ್ನು ಪ್ರದೀಪನಿಗೆ ಪರಿಚಯಿಸಿದಾಗ, ಪ್ರದೀಪನಿಗೆ ಒಂದು ರೀತಿ ಆಶ್ಚರ್ಯವೇ ಆಗಿತ್ತು. ಇವರು ಇಂಥ ಕಡೆ ಅತಿಪ್ರಮುಖ ವ್ಯಕ್ತಿಯಾಗಿ ದುಡಿಯುತ್ತಿರಬಹುದೆಂಬ ಕಲ್ಪನೆ ಕೂಡ ಅವನ ಮನಸ್ಸಿಗೆ ಬಂದಿರಲಿಲ್ಲ.

''ನೋಡಿ ಮಿ. ರಂಗಣ್ಣ, ನೀವು ಈ ವಿಭಾಗಕ್ಕೆ ಹೇಗೆ ಜೀವನಾಡಿಯೋ ಅದೇರೀತಿ ಇವರೂ ಸಹ ಈ ವಿಭಾಗಕ್ಕೆ ಜೀವನಾಡಿ. ಏಕೆಂದರೆ ಅತಿ ಪ್ರತಿಭಾನ್ವಿತ ವ್ಯಕ್ತಿ, ಚಿನ್ನದ ಪದಕ ಪಡೆದಿರುವಾತ, ನಮ್ಮ ವಿಭಾಗಕ್ಕೆ ಬಂದಿರುವ ಸಾಫ್ಟ್‌ವೇರ್ ಸ್ಪೆಷಲಿಸ್ಟ್, ಪ್ರೋಗ್ರಾಂ ಬರೆಯಲು ಬಂದಿರುವವರು. ನಿಮಗೆ ಏನೇನು ಬೇಕೋ ಹೇಳಿ; ಕ್ಷಣಾರ್ಧದಲ್ಲಿ ಸ್ಟೇಟ್‌ಮೆಂಟ್ಸ್ ತಯಾರಿಸಿಕೊಡಬಲ್ಲರು. ಪ್ರತಿಯೊಂದು ವಿಭಾಗದವರ ಬೇಡಿಕೆಗಳಿಗನುಗುಣವಾಗಿ ಅವರಿಗೆ ಸಕಾಲದಲ್ಲಿ ಸ್ಟೇಟ್‌ಮೆಂಟ್ಸ್ ತಲುಪುತ್ತಿಲ್ಲವೆಂಬ ತಕರಾರು ಇನ್ನು ಮುಂದೆ ಉದ್ಭವಿಸದು. ನೀವಿಬ್ಬರೂ ಸಾಮರಸ್ಯದಿಂದ ಕೂಡಿ ಕೆಲಸ ಮಾಡಿದರೆ ನಮ್ಮ ವಿಭಾಗಕ್ಕೆ ಒಳ್ಳೆಯ ಹೆಸರು ತರಬಹುದು," ಎಂದು ಪ್ರದೀಪನನ್ನು ಪರಿಚಯಿಸಿ, ''ಇವರಿಗೆ ಪಕ್ಕದ ಕ್ಯಾಬಿನ್ನಿನಲ್ಲಿ ಜಾಗ ಮಾಡಿಕೊಡಿ," ಎಂದು ಹೇಳಿ ಬಾಸ್ ಅತ್ತ ತೆರಳಿದರು.

ಬಾಸ್ ಹೇಳಿದಂತೆ ಪ್ರದೀಪನಿಗೆ ವ್ಯವಸ್ಥೆ ಮಾಡಿ ತನ್ನ ಜಾಗಕ್ಕೆ ಬಂದು ಕುಳಿತರೂ ಕೆಲಸದ ಕಡೆ ಗಮನಹರಿಸಲಾಗಲಿಲ್ಲ. ಮತ್ತೆ ಮತ್ತೆ ಅದೇ ವಿಷಯ ನುಗ್ಗಿ ಬಂದು ತಲೆಯನ್ನು ಕೊರೆಯತೊಡಗಿತು.

ಈಗ ಎರಡು ವರ್ಷಗಳ ಹಿಂದೆ, ಯುಗಾದಿ ಹಬ್ಬದ ಮುನ್ನಾ ದಿನ ನಡೆದ ಘಟನೆ. ಕುಡಿಯುವ ನೀರಿಗೆ ವಿಪರೀತ ತೊಂದರೆಯಾಗಿತ್ತು. ಬೀದಿಯಲ್ಲಿರುವ ನಲ್ಲಿಯ ಬಳಿ ನೀರು ಹಿಡಿಯಲು ಹೋದಾಗ ಆದ ಜಗಳ ಕಣ್ಣ ಮುಂದೆ ತೇಲಿಬಂತು. ಕ್ಷುಲ್ಲಕ ವಿಷಯಕ್ಕೆ ಜಗಳಮಾಡಿದೆನೆಂದು ಹಲವಾರು ಬಾರಿ ರಂಗಣ್ಣನ ಮನಸ್ಸಿಗೆ ಬಂದರೂ, ನೆರೆಮನೆಯಲ್ಲಿದ್ದ ಪ್ರದೀಪನ ತಂದೆ ಸದಾಶಿವ ಕೂಡ 'ನನ್ನಂತೆ ಅವರೂ ನೀರಿಗಾಗಿ ಪರದಾಡುತ್ತಿದ್ದಾರೆ, ಹದಿನೈದು ದಿನದಿಂದ ನೀರು ಬಂದಿಲ್ಲ. ಅವರೂ ಹಿಡಿದುಕೊಳ್ಳಲಿ'ಎಂದು ಸಹಕರಿಸಿದ್ದರೆ ನಾನೇಕ ಜಗಳ ಮಾಡಬೇಕಿತ್ತು. ಅಂದು ನೀರಿಗಾಗಿ ಪ್ರಾರಂಭವಾದ ಜಗಳದಿಂದ ಇಂದಿನವರೆಗೂ ಸದಾಶಿವನೊಡನೆ ಮಾತಾಡಲಿಲ್ಲ. ಇಂದು ಅವನ ಮಗ ನಮ್ಮ ವಿಭಾಗಕ್ಕೆ ಹೊಸದಾಗಿ ಬಂದಿದ್ದರೂ ಈಗವನು ನನಗೆ ಬಾಸ್. ಅವನೆದುರಿಗೆ ಕೈಕಟ್ಟಿ ನಿಲ್ಲಬೇಕಾದ ಪ್ರಸಂಗ, ಎಂಥ ವಿಪರ್ಯಾಸ. ಹೌದು, ನನಗೆ ಲೆಕ್ಕಪತ್ರ ವಿಭಾಗದ ಅನುಭವವಿರಬಹುದೇ ವಿನಾ ಅವನಂತೆ ವಿದ್ಯಾ

ರ್ಹತೆಯಿದೆಯೇ? ಅವನ ವಿದ್ಯೆಗನುಗುಣವಾಗಿ ನನಗಿಂತ ಮೇಲ್ದರ್ಜೆಯ ಹುದ್ದೆಯು ದೊರೆತಿರುವಾಗ ನನಗೆ ತಕ್ಷಣದ ಬಾಸ್ ಅವನೇ! ಇನ್ನು ಮುಂದೆ ಪ್ರತಿಯೊಂದು ಕೆಲಸದ ವಿವರಗಳನ್ನೂ ನೇರವಾಗಿ ದೊಡ್ಡ ಬಾಸ್‌ಗೆ ಸಲ್ಲಿಸುವುದರ ಬದಲು ಪ್ರದೀಪನಿಗೆ ಸಲ್ಲಿಸಬೇಕು. ಪ್ರತಿಯೊಂದಕ್ಕೂ ಅವನ ಮುಂದೆ ಕೈಕಟ್ಟಿ ನಿಲ್ಲಬೇಕು. "ನಮ್ಮ ವಿಭಾಗಕ್ಕೆ ಅತ್ಯಂತ ಸೂಕ್ತ ವ್ಯಕ್ತಿ ಬರುತ್ತಿದ್ದಾರೆ. ಅವರಿಂದ ನಿಮ್ಮ ಅನುಕೂಲಗಳಿಗನುಗುಣವಾಗಿ ಕೆಲಸ ಕಾರ್ಯಗಳನ್ನು ಹೇಗೆ ರೂಪಿಸುತ್ತೀರೋ ನಿಮಗೆ ಬಿಟ್ಟದ್ದು," ಎಂದು ಎಂಟು ದಿವಸದ ಹಿಂದೆಯೇ ಬಾಸ್ ಹೇಳಿದ್ದು ಈತನೇ! ಎಂಥ ಸಂದಿಗ್ಧಕ್ಕೆ ಸಿಕ್ಕದಂತಾಯಿತು ಎಂದು ಎಷ್ಟೇ ಯೋಚಿಸಿದರೂ ಬಗೆ ಹರಿಯದ ಸಮಸ್ಯೆಯಿಂದ, ಹೊರಬರಲಾರದ ಪರಿಸ್ಥಿತಿಯಿಂದ ಯೋಚಿಸುತ್ತಾ ಕುಳಿತ ರಂಗಣ್ಣನ ಮೇಜಿನ ಮೇಲೆ ಫೈಲುಗಳು ಬಂದು ಬೀಳುತ್ತಿದ್ದವೇ ಹೊರತು ಯಾವುದರ ಕಡೆಯೂ ಲಕ್ಷ್ಯವೇ ಹೋಗಲಿಲ್ಲ.

✷ ವೈ.ಎನ್. ಗುಂಡೂರಾವ್

ಮನೆಗೆ ಹೋದರೂ ಇದೇ ಚಿಂತೆ ರಂಗಣ್ಣನ ಮನಸ್ಸಿನಲ್ಲಿ ಮುತ್ತಿಕೊಂಡಿತು. ಬಹುಶಃ ತಂದೆ ತಾಯಿಗಳ ಬಳಿ, "ತಾನು ಪಕ್ಕದ ಮನೆಯ ರಂಗಣ್ಣನ ಬಾಸ್ ಎಂದು ಹೇಳುತ್ತಿರಬಹುದೇ? ಅಥವಾ ಪ್ರತಿಯೊಂದಕ್ಕೂ ಆ ಮನುಷ್ಯ ನನ್ನ ಮುಂದೆ ಕೈ ಕಟ್ಟಿ ಈಗ ನಿಲ್ಲಬೇಕು ಎಂದು ಕಿಚಾಯಿಸುತ್ತಿರಬಹುದೆ? ಅಥವಾ ಮಗನ ಅಭಿವೃದ್ಧಿಯ ಜೊತೆಗೆ, ಜಗಳವಾಡಿದ ಆ ರಂಗಣ್ಣನ ಗರ್ವ ಇಳಿಸು ಎಂದು ಅವನ ತಂದೆ ಸದಾಶಿವ ಉಪದೇಶಿಸುತ್ತಿರಬಹುದೇ? ಎಂದು ಕಿಟಕಿಯ ಬಳಿ ನಿಂತು ಪಕ್ಕದ ಮನೆಯಿಂದಲೇನಾದರೂ ಮಾತುಗಳು ಕೇಳಿ ಬಂದಾವೆ ಎಂದು ರಂಗಣ್ಣ ಕಿವಿಗೊಟ್ಟ. ಆದರೆ ಇದಾವುದೂ ಟಿವಿಯ ಸದ್ದಿನಿಂದ ಕೇಳಿ ಬರದಿದ್ದಾಗ ಬಹುಶಃ ಟಿವಿ ನೋಡುತ್ತಿರಬಹುದೆಂದು ಭಾವಿಸಿ ಇತ್ತ ಬಂದ.

ಇವನ ಈ ರೀತಿಯ ಚಡಪಡಿಕೆಯನ್ನು ನೋಡಿದ ರಂಗಣ್ಣನ ಹೆಂಡತಿ ರೇವತಿ, "ಯಾಕೆ ಏನಾಯ್ತು, ಕಚೇರಿಯಲ್ಲಿ ಏನಾದ್ರು ಹೆಚ್ಚು ಕಡಿಮೆಯಾಯ್ತೆ?" ಎಂದಳು.

"ಇಲ್ಲ, ಏನೂ ಇಲ್ಲ" ಎಂದನೇ ವಿನಾ ರಂಗಣ್ಣ ಏನೊಂದನ್ನೂ ಬಾಯಿಬಿಡಲಿಲ್ಲ. ಬಹುಶಃ ತಾನೇನಾದರೂ ಹೇಳಿದರೆ ಅಕ್ಕಪಕ್ಕದವರೊಡನೆ ಹೇಳಿಬಿಡಬಹುದೆಂಬ ಭಯದಿಂದ ರಂಗಣ್ಣ ತುಟಿ ಬಿಗಿಹಿಡಿದ.

ಹಲವಾರು ವರ್ಷಗಳಿಂದಲೂ ಒಂದೇ ವಿಭಾಗದಲ್ಲಿ ದುಡಿಯುತ್ತಿದ್ದ ರಂಗಣ್ಣನ ರಕ್ತದಲ್ಲಿ ಒಂದು ರೀತಿಯ ನಿಯತ್ತು, ಶಿಸ್ತು, ಅರ್ಪಣಾ ಮನೋಭಾವ ತುಂಬಿಕೊಂಡಿತ್ತು. ಇತ್ತೀಚೆಗೆ ಪ್ರದೀಪನ ಕೈಕೆಳಗೆ ದುಡಿಯಬೇಕಲ್ಲ ಎಂಬುದು ಮನಸ್ಸಿಗೆ ಬಂದರೆ ಸಾಕು, ವ್ಯಥಿತನಾಗಿಬಿಡುತ್ತಿದ್ದ. ಇದರಿಂದ ಕಚೇರಿಯ ಕೆಲಸದಲ್ಲಿ ಅನಿವಾರ್ಯವಾಗಿ ವ್ಯತ್ಯಯ ಉಂಟಾಗುತ್ತಿದ್ದು ಬಾಸ್ ಗಮನಕ್ಕೆ ಒಂದೆರಡು ಬಾರಿ ಬಂದರೂ ರಂಗಣ್ಣನ ಮೇಲಿಟ್ಟಿದ್ದ ವಿಶ್ವಾಸ, ನಂಬುಗೆಯಿಂದ ಅದನ್ನೇನೂ ಅವರು ಗಂಭೀರವಾಗಿ ಪರಿಗಣಿಸಹೋಗಲಿಲ್ಲ. ಆದರೂ ಪದೇ ಪದೇ ಅದೇ ರೀತಿಯ ತಪ್ಪುಗಳಾದಾಗ, ಹೀಗೊಂದು ಬಾರಿ ಬಾಸ್ ಕರೆದು, "ಏಕೆ ರಂಗಣ್ಣ, ಇತ್ತೀಚೆಗೆ ಒಂದು ರೀತಿ ಇದ್ದೀರಲ್ಲಾ, ಮನೆ ಕಡೆ ಏನಾದರೂ ತೊಂದರೆಗೆ ಸಿಕ್ಕಿ ಹಾಕಿಕೊಂಡಿದ್ದೀರಾ ಹೇಗೆ?" ಎಂದು ಆತ್ಮೀಯವಾಗಿ ವಿಚಾರಿಸಿದರು.

"ಇಲ್ಲಾ ಸಾರ್, ಅಂಥದ್ದೇನೂ ಇಲ್ಲ, ಹೀಗೆ ಕೊಂಚ ವ್ಯತ್ಯಾಸವಾಗಿರಬಹುದು. ಸರಿಪಡಿಸಿಕೊಳ್ಳುತ್ತೇನೆ" ಎಂದು ಹೇಳಿ ಬಂದಿದ್ದ. ಆದರೆ ಪ್ರದೀಪನ ಕೈಕೆಳಗೆ ದುಡಿಯಬೇಕಲ್ಲಾ ಎಂಬುದು ಮನಸ್ಸಿಗೆ ಬಂದಾಗಲೆಲ್ಲ ಒಂದು ರೀತಿಯ ಕೀಳರಿಮೆಗೊಳಗಾಗಿ ಬಿಡುತ್ತಿದ್ದ. ಹೊಸಬರು ಬಂದಾಗ ಹಳಬರು ಅವರ ಬಡಪೆಟ್ಟಿಗೆ ಒಪ್ಪದ ಸ್ಥಿತಿ. ಹೊಸಬರ ಬುದ್ಧಿಮತ್ತೆಯನ್ನು ಅಂಗೀಕರಿಸಲಾರದೆ, 'ಓ' ಅವನಿಗೇನು ಗೊತ್ತು. ನಮ್ಮ ಅನುಭವ ಅವನಿಗಿದೆಯೇ? ಎಂಬ ಉಡಾಫೆ. ಕಡೆಗೆ ಆತ ಈ ವಿಭಾಗದ ಆಸ್ತಿ, ಅವನ ಬುದ್ಧಿಶಕ್ತಿ ಅನಿವಾರ್ಯ ಎನಿಸಿದಾಗ, ಹೊಸಬರ ನೈಪುಣ್ಯ, ಚಾಣಾಕ್ಷತೆಗೆ ಮಾರು ಹೋಗುವುದು. ಇದು ಎಲ್ಲ ಕಚೇರಿಗಳಲ್ಲಿಯೂ ಆಗುವ ತೀರಾ ಸಾಮಾನ್ಯವಾದ ಸಂಗತಿಯಾದರೂ ಇಲ್ಲಿ ನಡೆದಿರುವುದೇ ಬೇರೆ. ತನಗಿಂತ ಎಷ್ಟೋ ವರ್ಷ ಕಿರಿಯನಾದ ಪ್ರದೀಪನ ಮುಂದೆ ಕೈಕಟ್ಟಿ ನಿಲ್ಲಬೇಕಾದ ಪರಿಸ್ಥಿತಿ. ಅದರಲ್ಲೂ ತನಗಾಗದವನ ಮುಂದೆ...!

ಕಚೇರಿಯಲ್ಲಿ ಕುಳಿತರೆ, ಮನೆಗೆ ಹೋದರೆ ಇದೇ ವಿಷಯ ರಂಗಣ್ಣನ ಮನಸ್ಸನ್ನು ಕಿತ್ತು ತಿನ್ನತೊಡಗಿತ್ತು. ಹೋಗಲಿ, ತನಗಿರುವ ಅನುಭವದಲ್ಲಿ ಬೇರೆಲ್ಲಾದರೂ ಕೆಲಸ ಸಂಪಾದಿಸಿಕೊಂಡು, ಏಕೆ ರಾಜೀನಾಮೆ ಕೊಟ್ಟುಬಿಡಬಾರದು ಎನ್ನುವಷ್ಟರ ಮಟ್ಟಕ್ಕೆ ಹಲವಾರು ಬಾರಿ ರಂಗಣ್ಣನ ಮನಸ್ಸು ತಲುಪಿಬಿಡುತ್ತಿತ್ತು. ಮೊದಲು ಒಂದು ದಿನವೂ ರಜೆಯನ್ನೇ ಹಾಕದೆ ಕಚೇರಿಗೆ ಬರುವುದೆಂದರೆ ಎಲ್ಲಿಲ್ಲದ ಹುರುಪು. ಪ್ರತಿದಿನವೂ ಹೊಸ ಹುಮ್ಮಸ್ಸಿನಿಂದ ಕಚೇರಿಯ ಕೆಲಸವನ್ನು ಪ್ರಾರಂಭಿಸುತ್ತಿದ್ದುದರ ಜೊತೆಗೆ

ಕಚೇರಿಯ ಹಲವಾರು ಸಮಸ್ಯೆಗಳನ್ನು ಬಾಸ್ ಜೊತೆ ಕುಳಿತು ಲೀಲಾಜಾಲವಾಗಿ ಬಗೆಹರಿಸಿಬಿಡುತ್ತಿದ್ದವನಿಗೆ ಇತ್ತೀಚೆಗೆ ಕಗ್ಗಂಟಾಗುವ ವಿಧವಿಧವಾದ ಸಮಸ್ಯೆಗಳು ಪ್ರತಿದಿನವೂ ಹುಟ್ಟಿಕೊಳ್ಳತೊಡಗಿದವು. ಜೊತೆಗೆ ಕಚೇರಿಗೆ ಏಕೆ ಬಂದೆನೋ ಎನ್ನುವಂತಾದಾಗ ಇದ್ದಕ್ಕಿದ್ದಂತೆ ರಜಾ ಚೀಟಯನ್ನು ಪ್ರದೀಪನ ಮೇಜಿನ ಮೇಲಿಟ್ಟು ಹೋಗಿಬಿಡುತ್ತಿದ್ದ.

ಪ್ರದೀಪನಿಗೂ ರಂಗಣ್ಣನ ದಿನಚರಿಯನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗತೊಡಗಿತು. ರಂಗಣ್ಣನ ಬಗ್ಗೆ ಹಲವಾರು ಬಾರಿ ಬಾಸ್ ಹೇಳಿದ್ದ ನಿಸ್ಪೃಹತೆ, ಕೆಲಸದಲ್ಲಿನ ತಲ್ಲೀನತೆ, ಅರ್ಪಣಾ ಮನೋಭಾವಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದರಿಂದ ರಂಗಣ್ಣ ದಿನೇ ದಿನೇ ಇನ್ನೂ ನಿಗೂಢವಾಗತೊಡಗಿದ.

ರಂಗಣ್ಣನ ಯೋಚನಾಲಹರಿಗೆ ವರದಾನವೆಂಬಂತೆ ಸ್ವಯಂ ನಿವೃತ್ತಿ ಯೋಜನೆಯ ಸುತ್ತೋಲೆಯೊಂದು ಕಚೇರಿಗೆ ತಲುಪಿದಾಗ ರಂಗಣ್ಣನಿಗಾದ ಸಂತಸ ಹೇಳತೀರದು. ಅಂದು ಎಲ್ಲಿಲ್ಲದ ಹುರುಪಿನಿಂದಲೇ ಕೆಲಸ ಮುಗಿಸಿದ ರಂಗಣ್ಣ ಸಂಜೆ ಮನೆಗೆ ಹೋದಾಗ ರೇವತಿಗೆ ಹೇಳಿದ ಮೊದಲ ವಿಷಯವೆಂದರೆ ಇದೇ.

''ನಿಮಗೇನಾದರೂ ಹುಚ್ಚು-ಗಿಚ್ಚು ಹಿಡಿದಿದೆಯಾ? ಇಬ್ಬರು ಹೆಣ್ಣುಮಕ್ಕಳ ಮದುವೆ ಮಾಡುವುದಾದರೂ ಹೇಗೆಂದು ಯೋಚಿಸಿದ್ದೀರಾ?" ಎಂದಳು ರೇವತಿ.

''ಅಲ್ಲಾ ರೇವತಿ, ಐದು ವರ್ಷ ಸರ್ವೀಸಿಗೆ ಸ್ವಯಂ ನಿವೃತ್ತಿಯಿಂದ ಬರುವ ಪರಿಹಾರದ ಮೊತ್ತವನ್ನು ಠೇವಣಿಯೋ ಮತ್ತೊಂದೋ ಹಾಕಿದರೆ ಹಣ ಇಮ್ಮಡಿಯಾಗಿ ಇಬ್ಬರ ಮದುವೆಯ ಸಮಸ್ಯೆ ಬಗೆಹರಿದಂತೆ" ಎಂದ ರಂಗಣ್ಣ.

''ಆದರೆ ಹೀಗೆ ಬರುವ ಹಣವನ್ನು ಮದುವೆಗೆ ಉಪಯೋಗಿಸಿಕೊಂಡರೆ ಇನ್ನೂ ಓದುವ ಮಗನೊಬ್ಬನಿದ್ದಾನೆ, ಸಂಸಾರದ ಖರ್ಚನ್ನು ಸರಿದೂಗಿಸುವುದಾದರೂ ಹೇಗೆಂಬುದನ್ನು ಯೋಚಿಸಿದ್ದೀರಾ?" ಎಂದಾಗ ''ಹೌದಲ್ಲ, ನಾನು ಅವರಿಬ್ಬರ ಮದುವೆಯ ಬಗ್ಗೆ ಯೋಚಿಸಿದನೇ ವಿನಾ ಹುಡುಗನ ಬಗ್ಗೆ, ನಮ್ಮ ಮುಂದಿನ ಭವಿಷ್ಯದ ಬಗ್ಗೆ ಯೋಚಿಸಿಯೇ ಇಲ್ಲವಲ್ಲ" ಎಂದ.

ಮಾರನೆಯ ದಿನ ಕಚೇರಿಗೆ ಹೋಗುತ್ತಿದ್ದಂತೆ ರಂಗಣ್ಣ ಮಾಡಿದ ಮೊದಲ ಕೆಲಸವೆಂದರೆ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿ ಹೊಂದಲು ಅರ್ಜಿ ಬರೆದು, ಬಾಸ್ ಬರುವುದಕ್ಕೆ ಮುಂಚೆ ಅವರ ಮೇಜಿನ ಮೇಲಿಟ್ಟು ಬಂದದ್ದು.



ಬಾಸ್ ಬಂದ ನಂತರ ಈಗ ಕರೆಯುತ್ತಾರೆ, ಆಗ ಕರೆಯುತ್ತಾರೆ ಎಂದು ನಿರೀಕ್ಷಿಸುತ್ತಿದ್ದ ರಂಗಣ್ಣನನ್ನು ಬಾಸ್ ಕರೆಯದೆ ಹೋದಾಗ, ಕುಳಿತೆಡೆ ಕೂರಲಾರದೆ ಚಡಪಡಿಸತೊಡಗಿದ. ಬಾಸ್ ಹಾಗೊಂದು ವೇಳೆ ಕರೆದು ಕೇಳಿದರೆ ಏನೆಂದು ಉತ್ತರಿಸಬೇಕೆಂದು ತಯಾರಿ ನಡೆಸಿ ಸಿದ್ಧನಾಗಿಯೆ ಇದ್ದ.

ಆದರೂ ಬಾಸ್ ಕರೆಯಲೇ ಇಲ್ಲ. ದಿಢೀರೆಂದು ಕ್ಯಾಬಿನ್ನಿನ ಬಾಗಿಲು ತೆಗೆದುಕೊಂಡಾಗ ರಂಗಣ್ಣ ಅತ್ತ ತಿರುಗಿ ನೋಡಿದ. ಆತುರಾತುರವಾಗಿ ಬಾಸ್ ಎಲ್ಲೋ ಹೊರಗೆ ಹೊರಟೇ ಹೋದರು.

ರಂಗಣ್ಣನ ಚಡಪಡಿಕೆ ಬೆಳೆಯುತ್ತಲೇ ಹೋಗತೊಡಗಿತು. ಇದೇನಿದು ನನ್ನಂಥ ನಿಃಸ್ಪೃಹ ವ್ಯಕ್ತಿಯೊಬ್ಬ ಕೆಲಸದಿಂದಲೇ ಬಿಡುಗಡೆ ಹೊಂದುತ್ತಿದ್ದೇನೆಂದು ಬರೆದುಕೊಟ್ಟರೂ ಏಕೆ, ಏನು, ಎತ್ತ? ಎಂದು ಕರೆದು ಕೇಳುವ ಸೌಜನ್ಯವನ್ನೂ ತೋರಲಿಲ್ಲವಲ್ಲ? ಕತ್ತೆಯಂತೆ ದುಡಿಸಿಕೊಳ್ಳುವುದೊಂದೇ ಈ ಬಾಸ್‌ಗಳಿಗೆ ಗೊತ್ತಿರುವುದು ಎಂದೆನಿಸಿದರೂ, ಅವರ ಗಮನಕ್ಕೆ ಬಂದಿದೆಯೋ ಇಲ್ಲವೋ ನೋಡೋಣವೆಂದು ಮತ್ತಾವುದೋ ಫೈಲನ್ನು ಒಳಗಿಡುವ ನೆಪ ಮಾಡಿಕೊಂಡು ಅವರ ಕ್ಯಾಬಿನ್ನಿನ ಒಳಹೊಕ್ಕು ನೋಡಿದ. ನಿವೃತ್ತಿ ಅರ್ಜಿ ಇವನು ಇಟ್ಟಿದ್ದ ಜಾಗದಲ್ಲೇ ಇದ್ದದ್ದು ಕಂಡು ತನ್ನ ಜಾಗಕ್ಕೆ ಬಂದು ಕುಳಿತ.

ಬಾಸ್ ಮಧ್ಯಾಹ್ನ ಬಂದವರು ಕುಳಿತುಕೊಳ್ಳುತ್ತಿದ್ದಂತೆ ರಂಗಣ್ಣನನ್ನು ಕರೆದರು. ''ಏನ್ ರಂಗಣ್ಣ" ಹೀಗೆ ನಿರ್ಧಾರ ತೆಗೆದುಕೊಂಡು ಬಿಟ್ಟಿದ್ದೀರಾ, ಏನು ಅಂತಹ ತೊಂದರೆ?

ಅಥವಾ ಇದರಿಂದ ನಿಮಗೇನಾದರೂ ಲಾಭವಾಗುತ್ತದೆಂದು ಭಾವಿಸಿದ್ದೀರಾ?" ಎಂದರು.

"ಹೌದು ಸಾರ್, ಬರುವ ಹಣದಲ್ಲಿ ಏನಾದರೊಂದು ಬಿಜಿನೆಸ್ ಪ್ರಾರಂಭಿಸೋಣವೆಂಬು ನಿರ್ಧರಿಸಿದ್ದೇನೆ" ಎಂದ.

"ಸರಿ ನಿಮ್ಮಿಷ್ಟ,"ಹಾಗೆ ಆಗಲಿ. ಆದರೆ ಇನ್ನೂ ಇದಕ್ಕೆ ಮೂರು ತಿಂಗಳು ಕಾಲಾವಕಾಶವಿದೆಯಲ್ಲ. ಅಲ್ಲಿಯವರೆಗೂ ಯೋಚಿಸಿ, ಎಂದು ಹೇಳಿ ಕಳುಹಿಸಿದರು.

ರಂಗಣ್ಣನಿಗೆ ಆದ ಸಂತಸ ಹೇಳತೀರದು. ಸದ್ಯ ಈ ಬಂಧನದಿಂದ ಬಿಡುಗಡೆ ಹೊಂದುತ್ತಿದ್ದೇನೆಂಬ ಭಾವನೆಯೇ ಅವನಿಗೆ ಮತ್ತಷ್ಟು ಸಂತಸ ತಂದಿತು. ಇನ್ನು ಆ ಪ್ರದೀಪನ ಕೈಕೆಳಗೆ ದುಡಿಯುವ, ಕರೆದಾಗ ಓಡಿ ಹೋಗಿ ನಿಲ್ಲುವ ಹಾಗಿಲ್ಲವಲ್ಲ ಎಂದೆನಿಸಿದಾಗ ಅವನನ್ನು ಈ ಕಚೇರಿಯ ಸಂಕಷ್ಟದಿಂದ ಬಿಡುಗಡೆಗೊಳಿಸಿದಂತಿತ್ತು.

ಎರಡು ತಿಂಗಳು ಹೇಗೋ ಕಳೆದೇ ಹೋಯಿತು. ಬಿಡುಗಡೆಯಾಗುತ್ತದೆಂಬ ಭಾವನೆಯಿಂದ ಇತ್ತೀಚೆಗೆ ತನ್ನ ಕೆಲಸದಲ್ಲಿ ತಾನು ಸಂಪೂರ್ಣವಾಗಿ ತೊಡಗಿಸಿಕೊಂಡ. ರಂಗಣ್ಣನ ನಡವಳಿಕೆಯನ್ನು ಅವಲೋಕಿಸುತ್ತಿದ್ದ ಬಾಸ್‌ಗೆ ಕೂಡ ಆಶ್ಚರ್ಯವಾಯಿತು. ಬಿಡುಗಡೆ ಹೊಂದಲು ನನ್ನ ಅಭ್ಯಂತರವೇನಿಲ್ಲ ಎಂದು ಹೇಳಿದ್ದೇ ತಡ, ರಂಗಣ್ಣ ತನ್ನ ಕೆಲಸದಲ್ಲಿ ತಾನು ತಲ್ಲೀನನಾಗಬೇಕಾದರೆ ಅವನ ಈ ರೀತಿಯ ನಿರ್ಧಾರಕ್ಕೆ ಬಹುಶಃ ಕಚೇರಿಯಲ್ಲಿ ನಡೆದಿರುವ ಘಟನೆಯೇ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿ ಈ ರೀತಿ ನಿರ್ಧರಿಸಿ, ತೀರ್ಮಾನ ತೆಗೆದುಕೊಂಡಿರಬಹುದು ಎಂದು ಯೋಚಿಸಿ, ಅದರ ಶೋಧನೆಗೆ ಪ್ರಾರಂಭಿಸಿದರು. ಹಲವಾರು ಬಾರಿ ಪ್ರದೀಪನೊಡನೆಯೂ ಚರ್ಚಿಸಿದರು.

ರಂಗಣ್ಣನು ಪ್ರದೀಪನೊಡನೆ ವ್ಯವಹರಿಸುತ್ತಿದ್ದುದು ಕಚೇರಿಯಲ್ಲಿನ ಮಾತುಕತೆಗೆ ಅಷ್ಟೆ. ಮನೆಯ ಬಳಿ ಕಂಡರೂ ನೋಡದವನಂತೆ ನಡೆದುಬಿಡುತ್ತಿದ್ದನು.

ಹೌದು. ಯಾವುದೋ ವಿಷಗಳಿಗೆಯಲ್ಲಿ ತಂದೆಯೊಡನೆ ಜಗಳವಾಡಿರಬಹುದು. ಆದರೆ ತನ್ನೊಡನೆ ಏಕೆ ಮನಸ್ಸನ್ನು ಕಹಿಮಾಡಿಕೊಳ್ಳುತ್ತಿದ್ದಾರೆ ಎನಿಸಿದರೂ ಪ್ರದೀಪನಿಗೆ ಇದೊಂದು ಅರ್ಥವಾಗದ ಒಗಟಾಗಿತ್ತು.

ಇಷ್ಟರಲ್ಲಿ ಕಚೇರಿಯ ಇತರ ವಿಭಾಗಗಳಿಗೂ ರಂಗಣ್ಣ ಸ್ವಯಂ ನಿವೃತ್ತಿ ಹೊಂದುತ್ತಿದ್ದಾನೆಂಬ ವಿಷಯ ಹರಡಿಹೋಗಿತ್ತು. ಈ ರೀತಿ ಕಚೇರಿಯಲ್ಲಿ ಬೇರೆ ಬೇರೆ ವಿಭಾಗಗಳಿಂದಲೂ ಸ್ವಯಂ ನಿವೃತ್ತಿ ಹೊಂದಲು ಬಯಸಿ ಬರೆದುಕೊಂಡ ಅರ್ಜಿಗಳ ಇತ್ಯರ್ಥ ಆಗಬೇಕಿತ್ತು. ಎಲ್ಲರಿಗೂ ಏನಾಗುವುದೋ ಎಂಬ ಶಂಕೆಯಿತ್ತು. ಸ್ವಯಂ ನಿವೃತ್ತಿ ಬಯಸಿದರೂ ಬಿಡುಗಡೆಗೊಳಿಸಲು ಅದು ಆಯಾ ವಿಭಾಗದ ಬಾಸ್‌ಗಳ ತೀರ್ಮಾನದ ಮೇಲೆ ನಿಂತಿದ್ದರಿಂದ ರಂಗಣ್ಣನೂ ಯೋಚಿಸುವಂತಾಗಿತ್ತು. ಒಪ್ಪಿಗೆಯಾಗಿಬಿಟ್ಟರೆ, ಸದ್ಯ ಪ್ರದೀಪನ ಮುಖ ಕೂಡ ನೋಡುವ ಹಾಗಿಲ್ಲವೆಂದುಕೊಂಡ.

ತೀರ್ಮಾನ ಹೊರಬೀಳುವ ದಿನ ಬಂದೇಬಿಟ್ಟಿತು. ಎಲ್ಲಾ ವಿಭಾಗಗಳಿಂದಲೂ ಅವರು ಹೋಗ್ತಾರೆ, ಇವರಿಗೆ ಒಪ್ಪಿಗೆ ಪತ್ರ ಬಂತಂತೆ ಎಂಬ ಸುದ್ದಿ ಹರಡುತ್ತಿದ್ದಂತೆ ರಂಗಣ್ಣ ಉದ್ವಿಗ್ನನಾದ. ಬಾಸ್ ಈಗ ಕರೆದು ಹೇಳುತ್ತಾರೆ, ಆಗ ಕರೆದು ಹೇಳುತ್ತಾರೆ ಎಂದು ಕಾಯ್ದ. ಕಡೆಗೂ ಬದುಕಿನಲ್ಲಿ ತಿರುವು ಪಡೆದುಕೊಳ್ಳುವಂತಹ ಸಂದರ್ಭ ಕ್ಷಣ ಬಂದೇ ಬಿಟ್ಟಿತು.

ರಂಗಣ್ಣನನ್ನು ಕ್ಯಾಬಿನ್ನಿಗೆ ಕರೆದಾಗ ಸಂತೋಷದಿಂದಲೇ ಒಳಹೋದ. ಆಗಲೇ ಪ್ರದೀಪ್ ಅಲ್ಲಿ ಕುಳಿತಿದ್ದು ನೋಡಿದ ರಂಗಣ್ಣನ ಮನಸ್ಸು ಮುದುಡಿಕೊಂಡಿತು. ಕುಳಿತುಕೊಳ್ಳಿ ಎಂದು ಬಾಸ್ ಹೇಳಿದಾಗ, ವಿಧಿಯಿಲ್ಲದೆ ಪ್ರದೀಪನ ಪಕ್ಕದಲ್ಲಿ ಕುಳಿತ. ಬಾಸ್ ನಿಧಾನವಾಗಿ ಮೇಜಿನ ಖಾನೆ ಎಳೆದು ಪತ್ರವೊಂದನ್ನು ರಂಗಣ್ಣನ ಮುಂದೆ ಇಟ್ಟರು. ಒಪ್ಪಿಗೆ ಪತ್ರವೆಂದು ಆತುರಾತುರವಾಗಿ ಪಡೆದು ಓದಿದ ರಂಗಣ್ಣ ದಿಗ್ಭ್ರಾಂತನಾದ. "ಏನ್ಸಾರ್ ಇದು" ಎಂದು ತೊದಲಿದ.

"ನೋಡಿ ಮಿ. ರಂಗಣ್ಣ", ನೀವು ಈ ವಿಭಾಗಕ್ಕೆ ಹೇಗೆ ಮುಖ್ಯರೋ ಅದೇ ರೀತಿ ಪ್ರದೀಪ್ ಕೂಡಾ. ನೀವು ಬೆಳೆಸಿಕೊಂಡಿರುವ ಕೀಳರಿಮೆಯಿಂದ ಪ್ರದೀಪನ ಕೈಕೆಳಗೆ ದುಡಿಯಲು ಹಿಂಜರಿಯುತ್ತಿದ್ದೀರಷ್ಟೆ. ಎಂದೋ ನಡೆದು ಹೋದ ಘಟನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅದನ್ನೇ ಪರ್ವತಾಕಾರವಾಗಿ ಬೆಳೆಸಿಕೊಂಡು, ಸುಮ್ಮನೆ ನೆಮ್ಮದಿಯನ್ನು ಹಾಳುಮಾಡಿಕೊಂಡು, ಅಚಾನಕವಾಗಿ ತಪ್ಪು ಮಾಡತೊಡಗಿದ್ದೀರಿ.

"ಆದರೆ ಸ್ವಯಂ ನಿವೃತ್ತಿ ಯೋಜನೆಯಿಂದ ಬಿಡುಗಡೆ ಹೊಂದಿಬಿಡಬಹುದೆಂಬುದು ನಿಮ್ಮ ಮನಸ್ಸಿಗೆ ಬಂದದ್ದೇ ತಡ, ಹೇಗೂ ಹೋಗಿ ಬಿಡುತ್ತೇನೆಂಬ ಭಾವನೆಯಿಂದ ಪುನಃ ಕೆಲಸದಲ್ಲಿ ತಲ್ಲೀನರಾದಾಗ ತಪ್ಪುಗಳಾಗುವುದು ಕಡಿಮೆಯಾಗತೊಡಗಿತು. ಈಗ ಹೇಳಿ, ನಿಜವಾಗಿಯೂ ನೀವು ಸ್ವಯಂ ನಿವೃತ್ತಿಯನ್ನು ಬಯಸಿದ್ದೀರಾ? ನಿವೃತ್ತಿಯಿಂದ ನಿಮ್ಮ ಜೀವನ ಸುಖಮಯವಾಗುವುದೆಂದು

ಭಾವಿಸಿದ್ದೀರಾ? ಇಲ್ಲಾ ಸ್ವಯಂ ನಿವೃತ್ತಿಯಿಂದ ಪಲಾಯನ ಮಾಡಲು ನಿರ್ಧರಿಸಿದ್ದೀರಾ? ಈಗ ನಿಮ್ಮ ಕೈಯಲ್ಲಿರುವ ಪತ್ರವನ್ನು ಓದಿದಿರಲ್ಲಾ, ನಾನೇನು ಮಾಡಬೇಕೆಂಬುದನ್ನು ನೀವೇ ಹೇಳಿ", ಎಂದು ಕುರ್ಚಿಗೆ ಆತು ಕುಳಿತರು.

ರಂಗಣ್ಣ ಬಾಸ್ ಮುಖವನ್ನೊಮ್ಮೆ, ಪ್ರದೀಪನ ಮುಖವನ್ನೊಮ್ಮೆ ನೋಡಿದ. ತನ್ನ ಮನಸ್ಸಿನಲ್ಲಿ ಇಷ್ಟು ದಿನವೂ ನಡೆಯುತ್ತಿದ್ದ ತಾಕಲಾಟವನ್ನು ಇಬ್ಬರೂ ಗಮನಿಸಿದ್ದಾರೆ. ವಯಸ್ಸಾಗಿರುವ ನನ್ನಂತಹವನಿಗೆ ಮನನೋಯಿಸಬಾರದೆಂಬ ದೃಷ್ಟಿಯಿಂದ ಪ್ರದೀಪ ಈ ನಿರ್ಧಾರ ತಳೆದಿರಬಹುದೇ? ಮನೆಯ ಬಳಿ ನಡೆದ ನೀರಿನ ವಿಷಯಕ್ಕೆ ನಾನೇಕೆ ಅಷ್ಟೊಂದು ಮಹತ್ವ ಕೊಟ್ಟೆ? ವೃಥಾ ಮನಸ್ಸಿನಲ್ಲಿ ದ್ವೇಷ ಬೆಳೆಸಿಕೊಂಡೆನಲ್ಲಾ. ಅವನಿಗಿರುವ ವಿಶಾಲ ಮನೋಭಾವವನ್ನು ನಾನು ರೂಢಿಸಿಕೊಳ್ಳದೆ ಹೋದೆನಲ್ಲ. ಈಗ ನನ್ನನ್ನು ಎಂಥ ಧರ್ಮ ಸಂಕಟಕ್ಕೆ ಸಿಕ್ಕಿಸಿಬಿಟ್ಟ. ಇವನ ಬುದ್ಧಿಮತ್ತೆಯನ್ನು ಒಪ್ಪಬೇಕಾದ್ದೆ ಎಂದು ಯೋಚಿಸುತ್ತಾ ಕುಳಿತಿದ್ದ ರಂಗಣ್ಣನನ್ನು "ಏನ್ ಯೋಚ್ನೆ ಮಾಡ್ತಿದ್ದೀರಾ?" ಎಂದು ಬಾಸ್ ಎಚ್ಚರಿಸಿದರು.

ಅವರು ಕೊಟ್ಟಿದ್ದ ಪತ್ರವನ್ನು ಮೇಜಿನ ಮೇಲಿಟ್ಟ ರಂಗಣ್ಣ ನಿಧಾನವಾಗಿ ಎದ್ದು ನಿಂತ. ಬಹುಶಃ ಇದಕ್ಕೆ ಅವರೊಪ್ಪಿಗೆ ಇರಬಹುದೆಂದು ಭಾವಿಸಿದ ಪ್ರದೀಪನೂ ಎದ್ದು ನಿಂತ. ರಂಗಣ್ಣ ಪ್ರದೀಪನ ಕೈಹಿಡಿದು, "ಪ್ರದೀಪ್ ನೀವು ನನಗಿಂತ ವಯಸ್ಸಿನಲ್ಲಿ ಕಿರಿಯರು, ಆದರೆ ಇಷ್ಟು ವರುಷದ ನನ್ನ ಅನುಭವವನ್ನು ಮೀರಿನಿಂತ ನಿಮ್ಮ ಅನುಭವ, ಯೋಗ್ಯತೆಯನ್ನು ಮೆಚ್ಚಬೇಕಾದದ್ದೆ. ನಾನೇನೋ ಇನ್ನು ಕೆಲವು ವರ್ಷಗಳಲ್ಲಿ ನಿವೃತ್ತಿ ಹೊಂದುವವನೇ. ಆದರೆ ನಿಮ್ಮಂತಹ ಯುವಕರು ಈ ಸಂಸ್ಥೆಗೆ ಅನಿವಾರ್ಯ. ಆದ್ದರಿಂದ ನೀವು ಬಿಟ್ಟು ಹೋಗಕೂಡದು. ಕ್ಷುಲ್ಲಕ ವಿಚಾರಕ್ಕಾಗಿ ಮನಸ್ಸನ್ನು ಕಹಿಮಾಡಿಕೊಂಡು, ವೃಥಾ ಕಚೇರಿಯ ವಿಷಯದಲ್ಲೂ ಮನಸ್ಸನ್ನು ಕೆಡಿಸಿಕೊಂಡುಬಿಟ್ಟೆ. ನಾನು ನನ್ನ ನಿರ್ಣಯವನ್ನು ಹಿಂತೆಗೆದುಕೊಳ್ಳುವಂತೆ ನೀವು ಕೂಡಾ ಬೇರೆ ವಿಭಾಗಕ್ಕೆ ಕೋರಿರುವ ಅರ್ಜಿಯನ್ನು ಹಿಂತೆಗೆದುಕೊಳ್ಳಿ", ಎಂದಾಗ ಬಾಸ್ ದಿಗ್ಭ್ರಮೆಗೊಳಗಾದರು. ರಂಗಣ್ಣನ ಮನಸ್ಸು ಇಷ್ಟು ಬೇಗ ಪರಿವರ್ತನೆಯಾದೀತೆಂದು ಭಾವಿಸಿರಲಿಲ್ಲ.

"ಏನ್ ರಂಗಣ್ಣ ಇದು, ನಿಮ್ಮಿಬ್ಬರಲ್ಲಿ ಯಾರಾದರೊಬ್ಬರಿಗೆ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಬೇಕಾಗಬಹುದೆಂದು ಭಾವಿಸಿದ್ದೆನಲ್ಲ" ಎಂದರು ಬಾಸ್.

"ಹೌದು ಸಾರ್, ಈಗಲೂ ಬೀಳ್ಕೊಡುಗೆಯಾಗಲೇಬೇಕು. ಆದರೆ ಅದಕ್ಕೆ ಸಮಾರಂಭವೇನೂ ಬೇಕಿಲ್ಲ. ಇದೂ ಒಂದು ರೀತಿ ಪಶ್ಚಾತ್ತಾಪದ ಪರಿಣಾಮದಿಂದ ಉಂಟಾಗಿರುವ ಬೀಳ್ಕೊಡುಗೆಯೇ! ಇಂಥ ಸಂದರ್ಭಗಳಲ್ಲಿ ನಮ್ಮ ನಮ್ಮ ಮನಸ್ಸಿನ ವಿಕಾರಗಳಿಗೆ, ಕ್ಷುಲ್ಲಕ ವಿಷಯಗಳಿಗೆ, ವೈಮನಸ್ಸಿಗೆ ಬೀಳ್ಕೊಡುಗೆಯಾಗಬೇಕಾದದ್ದೆ" ಎಂದಾಗ ಬಾಸ್ ಮತ್ತು ಪ್ರದೀಪ ರಂಗಣ್ಣನ ಮುಖವನ್ನೇ ನೋಡುತ್ತಾ ನಿಂತುಬಿಟ್ಟರು.


ಕರ್ತವ್ಯ ನಿಷ್ಠೆ

ಒಮ್ಮೆ ಮೈಸೂರಿನಲ್ಲಿ ಡೇಮ್ಲರ್ ಕಾರೊಂದು ಬಂದಾಗ ರೈಲ್ವೆ ಗೇಟು ಮುಚ್ಚಿತ್ತು. ನಂಜನಗೂಡಿನ ರೈಲು ಬರುವ ಸಮಯ ಅದು. ಎಷ್ಟು ಹೊತ್ತಾದರೂ ಗೇಟು ತೆಗೆಯದಾಗ ಕಾರಿನ ಡ್ರೈವರ್ ಕಾವಲುಗಾರನ ಬಳಿ ಹೋಗಿ, ಒಳಗೆ ಪ್ರತಿಷ್ಠಿತ ವ್ಯಕ್ತಿಗಳೊಬ್ಬರು ಕುಳಿತಿದ್ದರಿಂದ ಗೇಟು ತೆಗೆದು ಅನುಕೂಲ ಮಾಡಿಕೊಡಬೇಕೆಂದ. ಕಾವಲುಗಾರ ಜಪ್ಪೆನ್ನಲಿಲ್ಲ. ಎಷ್ಟೋ ಹೊತ್ತಿನ ನಂತರ ರೈಲು ಬಂದು ಹೋದ ನಂತರವೇ ಗೇಟನ್ನು ತೆರೆದ. ಕಾರು ಮುಂದಕ್ಕೆ ಹೊರಟಿತು.

ಮರುದಿನ ರೈಲ್ವೆ ಡಿವಿಜನಲ್ ಮ್ಯಾನೇಜರ್ ಆಗಿದ್ದ ಇಂಗ್ಲೀಷ್ ಮನುಷ್ಯ ಕಾವಲುಗಾರನಿಗೆ ಹೇಳಿಕಳಿಸಿದ. ಏಕೋ ಏನೋ ಎಂದು ನಡಗುತ್ತಾ ಬಂದ ಕಾವಲುಗಾರನಿಗೆ ಮ್ಯಾನೇಜರ್ ಸೀಲ್ ಮಾಡಿದ ಲಕೋಟೆಯೊಂದನ್ನು ಕೊಟ್ಟ. ಅದರಲ್ಲಿದ್ದುದು ಅವನ ಕರ್ತವ್ಯನಿಷ್ಠೆಗಾಗಿ ಒಂದು ಪ್ರಶಂಸಾಪತ್ರ ಹಾಗೂ ನೂರು ರೂಪಾಯಿಗಳ ಬಹುಮಾನ. ಕಳಿಸಿಕೊಟ್ಟ ವ್ಯಕ್ತಿ ಆ ದಿನ ಕಾರಿನಲ್ಲಿ ಕಾದು ಕುಳಿತಿದ್ದ ಮೈಸೂರಿನ ಮಹಾಪ್ರಭುಗಳಾಗಿದ್ದ ಶ್ರೀ ಕೃಷ್ಣರಾಜ ಒಡೆಯರು.

• ಟಿ.ಎಸ್. ಲಲಿತ

ಹಣಕ್ಕಾಗಿ ಭ್ರೂಣ ಮಾರಿದ ತಾಯಿ



ಚಳಿಗಾಲದ ಆಗಮನವನ್ನು ಸಾರುವ ದೀಪಾವಳಿ ಆಗಮಿಸಿತ್ತು. ಆಕಾಶದಲ್ಲಿ ಹೊಳೆಯುವ ಹಾವಿನಂತಹ ಸುಸರ್ ಬತ್ತಿ, ನಕ್ಷತ್ರಗಳು, ಬಣ್ಣಬಣ್ಣದ ಹೂ ಗೊಂಚಲು, ಕಿವಿ ಕಿವಿಡಾಗುವಷ್ಟು ಶಬ್ದ ಮಾಡುವ ಪಟಾಕಿಗಳು. ಶ್ರೀರಾಮಚಂದ್ರ ಲಂಕೆಗೆ ಹೋಗಿ, ಯುದ್ಧ ಮಾಡಿ, ರಾವಣನನ್ನು ಕೊಂದು ಸೀತಾದೇವಿಯನ್ನು ಅಯೋಧ್ಯೆಗೆ ಕರೆದುಕೊಂಡು ಬಂದ ದಿನ. ಮೃತರಾದವರ ಆತ್ಮ ಇಂದು ಪರಲೋಕಕ್ಕೆ ಪ್ರಯಾಣ ಮಾಡುತ್ತಿದೆ ಎಂದು ನಂಬಿ ಅದಕ್ಕೆ ದಾರಿ ತೋರಿಸಲು ದೀಪಹಚ್ಚುವ ಹಬ್ಬದ ದಿನ. ಸಂಪತ್ತಿನ ಹಾಗೂ ಸೌಂದರ್ಯದ ಅಧಿದೇವತೆಯಾದ ಲಕ್ಷ್ಮಿಯನ್ನು ಸುಖ ಸಂತೋಷಕ್ಕಾಗಿ ವಿಶೇಷವಾಗಿ ಪೂಜಿಸುವ ದಿನ. ಬಂಗಾಳಿಗಳು, ಕತ್ತಲೆಯೆಂಬ ಅನೇಕ ಕಷ್ಟ ಕಾರ್ಪಣ್ಯಗಳನ್ನು ದಾಟಿ ಮಾನವ ಬೆಳಕಿಗೆ ಬರಬೇಕು ಎಂಬುದು ಈ ಹಬ್ಬದ ಸಂಕೇತ ಎನ್ನುತ್ತಾರೆ. ಉಳಿದೆಲ್ಲ ನಗರಗಳ ಹಾಗೆ ಆನಂದನಗರಿಯವರಿಗೂ ದೀಪಾವಳಿಯು ಕತ್ತಲೆಯನ್ನು ಕಳೆಯುವ ಭರವಸೆಯನ್ನು ತರುತ್ತದೆ.

ಇತರ ಕಡೆ ಆಚರಿಸುವಂತೆ ಆನಂದನಗರಿಯಲ್ಲಿಯೂ ಅಂದು ರಾತ್ರಿಯಿಡಿ ಬಹಳೇ ಜನ

✷ ಮೂಲ: ಡೊಮನಿಕ್ ಲೇಪಿಯರ್‌ನ 'ದಿ ಸಿಟ ಆಫ್ ಜಾಯ್'

✷ ಕನ್ನಡಕ್ಕೆ: ಎಚ್.ಆರ್. ಚಂದ್ರವದನರಾವ್

ಜೂಜಾಡಿದರು. ಹತ್ತಾರು ರೂಪಾಯಿಗಳನ್ನು ಕೆಲವರು ಪಣಕ್ಕಿಟ್ಟು ಇಸ್ಪೀಟು ಮತ್ತು ಪಗಡೆಯಾಡಿದರೆ, ಹಣ ಇಲ್ಲದವರು ಬಾಳೆಹಣ್ಣು, ಕಡಲೇಕಾಯಿ ಅಥವಾ ಏನಾದರೂ ತಿಂಡಿಯನ್ನು ಪಣಕ್ಕಿಟ್ಟು ಪಗಡೆಯಾಡಿದರು. ಕೊವಲಸ್ಕಿ ವಾಸಿಸುತ್ತಿದ್ದ ನಿಜಾಮುದ್ದೀನ್ ಲೇನಿನಲ್ಲೂ ದೀಪಾವಳಿಯ ಜೂಜು ಸಾಗಿತ್ತು. ಎದುರಿಗಿದ್ದ ಹಿಂದೂ ಅಂಗಡಿ ಮಾಲೀಕ ಕೊವಲಸ್ಕಿಯನ್ನು ಆಟಕ್ಕೆ ಕರೆದಿದ್ದ. ಅವನು ಸೋತಿದ್ದ. ಇಪ್ಪತ್ತು ರೂಪಾಯಿಗಳನ್ನು ಕೆಲವರು ಸಹಾಯಮಾಡಿ ಮತ್ತೆ ಗೆಲ್ಲುವಂತೆ ಮಾಡಿದ್ದರು.

ಪಕ್ಕದ ಜೋಪಡಿಯ ಮೆಹಬೂಬ್‌ನ ಹೆಂಡತಿ- ಏಳು ತಿಂಗಳ ಗರ್ಭಿಣಿ- ಸಲೀಮಾ ಕಾಣೆಯಾಗಿದ್ದಾಳೆ ಎನ್ನುವದು ಬೆಳಿಗ್ಗೆ ಜೋಪಡಿಗೆ ಬರುವಾಗ ಕೊವಲಸ್ಕಿಗೆ ಗೊತ್ತಾಯಿತು. ಮೂರು ದಿನಗಳ ಹಿಂದೆ ನಲ್ಲಿಯಿಂದ ನೀರು ತರುತ್ತಿರುವಾಗ ಅವಳು ಒಬ್ಬ ಮುಸ್ಲಿಂ ಹೆಂಗಸಿನೊಡನೆ ಮಾತನಾಡುತ್ತಿದ್ದುದನ್ನಾತ ನೋಡಿದ್ದ. ಮುಖದ ಮೇಲೆ ಸಿಡುಬಿನ ಕಲೆಗಳಿದ್ದ ಅವಳ ಹೆಸರು ಮಮ್ತಾಜ್ ಬೀಬಿ. ಮಮ್ತಾಜ್‌ಳ ಗಂಡ ಒಂದು ಫ್ಯಾಕ್ಟರಿಯಲ್ಲಿ ಕೆಲಸಕ್ಕಿದ್ದ. ಈಗ ಅವನು ಸತ್ತುಹೋಗಿದ್ದರೂ ಮಮ್ತಾಜ್ ತಕ್ಕ ಮಟ್ಟಿಗೆ ಅನುಕೂಲಸ್ಥರ ಜೀವನ ನಡೆಸುತ್ತಿದ್ದಳು. ಅವಳಿದ್ದುದು ವಿದ್ಯುತ್ ದೀಪ ಇರುವ ಇಟ್ಟಿಗೆಯ ಮನೆ. ಕಾಂಪೌಂಡಿನ ಸುತ್ತಲಿದ್ದ ಅನೇಕ ಕೊಠಡಿಗಳು ಅವಳಿಗೆ ಸೇರಿವೆ ಎಂದು ಜನ ಹೇಳುತ್ತಿದ್ದರು. ಅವಳಿಗೆ ಹಣ ಎಲ್ಲಿಂದ ಬರುತ್ತದೆ ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ಕೆಲವರು ತಂತ್ರ ಮಂತ್ರ ಮಾಡಿ ಹಣ ಸಂಪಾದಿಸುತ್ತಾಳೆ ಎನ್ನುತ್ತಿದ್ದರು.

ಅವಳ ಮನೆಗೆ ಗೋಮುಖ ವ್ಯಾಘ್ರಗಳಂತಿದ್ದ ಕೆಲವು ಜನ ಸಮಾಜಘಾತುಕರು ಬರುತ್ತಿದ್ದರು. ಕಳ್ಳಸಾಗಾಣಿಕೆ, ಕಳ್ಳಭಟ್ಟಿ, ವೇಶ್ಯಾವಾಟಿಕೆ, ಡ್ರಗ್ಸ್, ಹುಡುಗಿಯರನ್ನು ಕೊಂಡು ದೆಹಲಿ ಮುಂಬೈಗಳಲ್ಲಿರುವ ವೇಶ್ಯಾವಾಟಿಕೆಗಳಿಗೆ ಸಾಗಿಸುವುದು ಇವೆಲ್ಲಾ ಅಲ್ಲಿ ನಡೆಯುತ್ತದೆ ಎಂದು ಹೇಳುತ್ತಿದ್ದರು. ಆದರೆ ಇದೆಲ್ಲ ಗುಮಾನಿ ಮಾತ್ರ. ಯಾವ ಸಾಕ್ಷ್ಯವೂ ಇರಲಿಲ್ಲ.

"ನೀನು ನೀರು ತೆಗೆದುಕೊಂಡು ಹೋಗುವಾಗ ಮನೆ ಹತ್ತರ ಬಾ, ಸಲೀಮಾ, ನಿನಗೆ ಒಂದು ಸ್ವಾರಸ್ಯದ ಸಲಹೆ ಕೊಡಬೇಕೆಂದಿದ್ದೇನೆ," ಎಂದಳು ಮಮ್ತಾಜ್ ಬೀಬಿ. ಸಲೀಮಳಿಗೆ ಇದನ್ನು ಕೇಳಿ ಆಶ್ಚರ್ಯವಾಗಿ ಸ್ವಾರಸ್ಯದ ಸುದ್ದಿಯನ್ನು ತಿಳಿಯಲು ಅವಳ ಮನೆ ಹತ್ತರ ಹೋದಳು. ಗಂಡ ಕೆಲಸ ಕಳೆದುಕೊಂಡಿದ್ದರಿಂದ ಅವಳು ಬಹಳ ಕುಗ್ಗಿ ಹೋಗಿದ್ದಳು. ಮುಖ ಬಾಡಿಹೋಗಿತ್ತು. ಮೂಗಿನ ಮೇಲೆ ಥಳಥಳಿಸುತ್ತಿದ್ದ ಮೂಗುಬೊಟ್ಟು ಮಾರ್ವಾಡಿ ಅಂಗಡಿ ಸೇರಿತ್ತು. ಯಾವಾಗಲೂ ನಡಿಗೆಯಲ್ಲಿ ಗಾಂಭೀರ್ಯ ಇರುತ್ತಿದ್ದ ಅವಳೀಗ ಮುದುಕಿಯಂತೆ ನಡೆಯುತ್ತಿದ್ದಳು. ಆದರೆ ಹೊಟ್ಟೆ ಮಾತ್ರ ದಪ್ಪವಾಗಿ ಕಾಣುತ್ತಿದ್ದು ಇನ್ನು ಎರಡು ತಿಂಗಳಲ್ಲಿ ಅವಳು ತನ್ನ ನಾಲ್ಕನೆಯ ಮಗುವಿಗೆ ಜನ್ಮ ಕೊಡುವುದರಲ್ಲಿದ್ದಳು.

ಸಲೀಮ ಬಂದೊಡನೆ ಮಮ್ತಾಜ್ ಅವಳನ್ನು ಕೂಡಿಸಿ ಅವಳ ಹೊಟ್ಟೆಯ ಕಡೆ ಬೆರಳು ಮಾಡಿ ತೋರಿಸುತ್ತಾ, "ಮಗುವನ್ನು ಇಟ್ಟುಕೊಳ್ಳಬೇಕೆಂದಿದ್ದೀಯಾ? ನನಗೆ ಮಾರುವ ಹಾಗಿದ್ದರೆ ಅದರ ಬಗ್ಗೆ ಮಾತನಾಡೋಣೂ", ಎಂದು ಹೇಳಿ ಅವಳ ಮುಂದೆ ಸಿಹಿತಿಂಡಿಯ ತಟ್ಟೆ ಮತ್ತು ಟೀಯನ್ನು ಇಟ್ಟಳು.

"ಮಗುವನ್ನು ಮಾರುವುದೇ ?" ಆಶ್ಚರ್ಯದಿಂದ ಸಲೀಮ ಕೇಳಿದಳು.

"ನಾನು ಕೇಳುತ್ತಿರುವುದು ಹೊಟ್ಟೆಯಲ್ಲಿರುವ ಮಗುವನ್ನು. ಅದಕ್ಕೆ ಎರಡು ಸಾವಿರ ರೂಪಾಯಿ ಕೊಡುತ್ತೇನೆ."

ಈ ಧನಿಕ ವಿಧವೆಯ ಗುಟ್ಟಿನ ಕಸಬು ಎಂದರೆ ಮಾನವ ಭ್ರೂಣವನ್ನು ಮಾರಲು ತೆಗೆದುಕೊಳ್ಳುವವರಿಗೆ ಸಹಾಯ ಮಾಡುವುದು. ತಳಿಶಾಸ್ತ್ರದ ಬಗ್ಗೆ ಸಂಶೋಧನೆ ಮಾಡಲು ಮತ್ತು ಯೌವನವನ್ನು ಮರಳಿಸುವ ಔಷಧಿಯನ್ನು ತಯಾರಿಸಲು ಮಾನವ ಭ್ರೂಣ ಬೇಕಾಗಿತ್ತು. ಕಲ್ಕತ್ತಾ ಮಾನವ ಭ್ರೂಣಗಳನ್ನು ಅಂತಾರಾಷ್ಟ್ರೀಯ ಪ್ರಯೋಗಶಾಲೆ

ಗಳಿಗೆ ಒದಗಿಸುವ ಒಂದು ಕೇಂದ್ರ. ಇಂತಹ ಅಪರೂಪದ ಭ್ರೂಣದ ಸಾಗಾಟವನ್ನು ಸುಶೀಲ್ ವೋರಾ ಎಂಬ ಮಾಜಿ ಫಾರ್ಮಸಿಸ್ಟ್ ಮಾಡುತ್ತಿದ್ದ. ಗರ್ಭಪಾತ ಮಾಡಿಸುವ ಕ್ಲಿನಿಕ್‌ಗಳಿಂದ ಭ್ರೂಣಗಳನ್ನು ತರಿಸಿಕೊಂಡು ನಂತರ ಅವುಗಳನ್ನು ಪ್ಯಾಕ್ ಮಾಡಿ ಮಾಸ್ಕೋ ಮೂಲಕ ಯೂರೋಪಿಗೂ ಅಮೆರಿಕಾಕ್ಕೂ ಕಳುಹಿಸುತ್ತಿದ್ದ. ಭ್ರೂಣದ ವಯಸ್ಸು ಜಾಸ್ತಿಯಾದಂತೆ ಅದರ ಬೆಲೆ ಹೆಚ್ಚು. ಅಂತಹವುಗಳಿಗೆ ಬೇಡಿಕೆ ಜಾಸ್ತಿ. ಒಂದೆರಡು ತಿಂಗಳು ಬೆಳೆದ ಭ್ರೂಣಕ್ಕೆ ಇನ್ನೂರು ರೂಪಾಯಿಗಳಾದರೆ, ಆರೆಂಟು ತಿಂಗಳು ಬೆಳೆದ ಭ್ರೂಣಕ್ಕೆ ಸಾವಿರಾರು ರೂಪಾಯಿಗಳಷ್ಟು ಬೆಲೆ.

ಮಮ್ತಾಜ್ ಹೇಳಿದಳು, "ಯೋಚನೆ ಮಾಡು. ನಿನಗೆ ಮೂರು ಮಕ್ಕಳಿವೆ. ಗಂಡನಿಗೆ ಕೆಲಸವಿಲ್ಲ. ಈಗಿರುವ ಮಕ್ಕಳಿಗೇ ಹೊಟ್ಟೆಗೆ ಹಾಕಲು ಆಗುತ್ತಿಲ್ಲ. ಇನ್ನೊಂದು ಮಗುವಾದರೆ ಅದಕ್ಕೇನು ಹಾಕುತ್ತೀಯಾ? ಎರಡು ಸಾವಿರ ನಿನಗೆ ಸಿಕ್ಕಿದರೆ ಹೊಟ್ಟೆ ತುಂಬ ಅನ್ನ ತಿನ್ನಬಹುದು. ಅಲ್ಲವೆ?"

"ನನ್ನ ಬಳಿ ಅಷ್ಟೊಂದು ಹಣವಿರುವುದು ಗೊತ್ತಾದರೆ ಗಂಡ ಏನೆಂದುಕೊಳ್ಳುತ್ತಾನೋ?" ಎಂದಳು ಸಲೀಮಾ. ಅದಕ್ಕುತ್ತರವಾಗಿ ಶ್ರೀಮಂತ ವಿಧವೆ ಹೇಳಿದಳು:

"ಅದೇನೂ ನಿನಗೆ ಸಮಸ್ಯೆಯಾಗುವುದಿಲ್ಲ. ನಿನಗೆ ಎರಡು ಸಾವಿರರೂಪಾಯಿಗಳನ್ನು ಚಿಲ್ಲರೆ ಚಿಲ್ಲರೆಯಾಗಿ ಕೊಡುತ್ತೇನೆ. ನಿತ್ಯ ಸ್ವಲ್ಪ ಸ್ವಲ್ಪ ಉಪಯೋಗಿಸಿಕೋ. ಒಟ್ಟಿಗೆ ನಿನ್ನಲ್ಲಿ ಹಣಕಂಡರೆ ತಾನೇ ನಿನ್ನ ಗಂಡನಿಗೆ ಅನುಮಾನ?"

ಸಲೀಮಾ ಹೊರಡುವವಳಿದ್ದಳು. ಅವಳನ್ನು ತಡೆದು ಮಮ್ತಾಜ್, "ಒಂದು ವಿಷಯ ಹೇಳುವುದನ್ನು ಮರೆತೆ. ನೀನು ಒಪ್ಪಿಕೊಳ್ಳುವ ಹಾಗಿದ್ದರೆ, ಅದರ ಬಗ್ಗೆ ಏನೂ ಹೆದರಿಕೆ ಬೇಡ. ನುರಿತ ಡಾಕ್ಟರ್ ಆಪರೇಷನ್ ಮಾಡುತ್ತಾರೆ. ಒಳ್ಳೆಯ ಸೌಲಭ್ಯವಿರುವ ಕ್ಲಿನಿಕ್ಕು. ಕೇವಲ ಕೆಲವೇ ನಿಮಿಷಗಳಲ್ಲಿ ಆಪರೇಷನ್ ಆಗಿಹೋಗುತ್ತದೆ. ಮೂರು ಗಂಟೆಯೊಳಗೆ ನೀನು ವಾಪಸ್ ಮನೆಗೆ ಬರಬಹುದು."

> "ನೀವು ನಿಮ್ಮ ಉದ್ದಿಮೆಯನ್ನು ಬೆಳೆಸಲು ಇಷ್ಟೆಲ್ಲಾ ಪರಿಶ್ರಮಪಡುತ್ತಿದ್ದೀರಿ. ಶಿಕಾರಿ, ಮೀನು ಹಿಡಿಯುವುದು ಇಂತಹ ಒಂದೆರಡು ಹಾಬಿಗಳನ್ನಾದರೂ ರೂಢಿಸಿಕೊಳ್ಳಬಾರದೆ?'' ಒಬ್ಬ ಪ್ರೆಸ್ ರಿಪೋರ್ಟರ್ ಕೋಟ್ಯಧೀಶನನೊಬ್ಬನ ಸಂದರ್ಶನ ತೆಗೆದುಕೊಳ್ಳುತ್ತಾ ಕೇಳಿದ.
>
> "ಓಹೋ, ಯಾಕಿಲ್ಲ? ನನಗೆ ಶಿಕಾರಿ ಮಾಡುವ ಶೋಕಿಯಿದೆಯೆಂದು ಪತ್ರಿಕೆಯಲ್ಲಿ ಮುದ್ರಿಸಿಬಿಡಿ. ನಾಳೆಯೇ ಶಿಕಾರಿಗೆ ನನ್ನ ಸೆಕ್ರೆಟರಿಯನ್ನು ಕಳಿಸುತ್ತೇನೆ,'' ಕೂಡಲೆ ಬಂತು ಉತ್ತರ.

ಆಶ್ಚರ್ಯವೆಂದರೆ ಸಲೀಮಳಿಗೆ ಇಂತಹ ಆಪರೇಷನ್ ಅಪಾಯವೆಂದೇ ಅನಿಸಿರಲಿಲ್ಲ. ಹಗಲು ರಾತ್ರಿ ಮಮ್ತಾಜ್ ಹೇಳಿದ್ದೇ ಅವಳ ಕಿವಿಯಲ್ಲಿ ಗುಂಯ್‌ಗುಟ್ಟುತ್ತಿತ್ತು. ಭ್ರೂಣದ ಕೊಲೆಗೆ ಅವಳ ಮನಸ್ಸು ಒಪ್ಪುತ್ತಿರಲಿಲ್ಲ. ಎಷ್ಟೇ ಹಣ ಬರಲಿ, ಇದು ಮಾಡಬಾರದ ಕೆಲಸ ಅನ್ನಿಸುತ್ತಿತ್ತು. ಆದರೆ ಇನ್ನೊಂದು ಮನಸ್ಸು, ಮೂರು ಮಕ್ಕಳು ಹಸಿವಿನಿಂದಿದ್ದಾರೆ; ಅವರ ಅಳುವನ್ನು ಭ್ರೂಣಕೊಟ್ಟು ನಿವಾರಿಸು, ಎಂದು ಹೇಳುತ್ತಿತ್ತು. ಸಲೀಮಾ ತುಂಬಾ ಯೋಚಿಸಿ ನಂತರ ತೀರ್ಮಾನ ತೆಗೆದುಕೊಂಡಳು.

ಎರಡು ದಿನದ ಮೇಲೆ 'ಎಲ್ಲಿ' ಎಂದು ನಿರ್ಧಾರವಾಯಿತು. ಏಳು ತಿಂಗಳ ಭ್ರೂಣ ಎಂದರೆ ನವಜಾತ ಶಿಶುವಿನಷ್ಟೇ ಬೆಳೆದಿರುತ್ತದೆ. ಅದನ್ನಿಡಲು ದೊಡ್ಡ ಜಾಡಿಬೇಕು. ಭ್ರೂಣ ಸಾಗಾಟಗಾರ ಸುಶೀಲ್ ವೋರಾ ಒಂದು ದೊಡ್ಡ ಜಾಡಿಯಲ್ಲಿ ಪೂತಿನಾಶಕ ಹಾಕಿಟ್ಟ.

ದೀಪಾವಳಿ ಪ್ರಯುಕ್ತ ಅಂದು ಹಿಂದು ಸರ್ಜನರು ಸಿಗಲಿಲ್ಲವಾದುದರಿಂದ ವೋರಾ ಒಬ್ಬ ಮುಸ್ಲಿಂ ಡಾಕ್ಟರಿಗೆ ಹೇಳಿಕಳುಹಿಸಿದ. ಹಿಂದುವಾದರೂ ಅವನ ಮಟ್ಟಿಗೆ ಹಬ್ಬ ಅಡ್ಡ ಬಂದಿರಲಿಲ್ಲ.

ಆಪರೇಶನ್‌ಗೆ ನಿರ್ಧರಿಸಿದ್ದ ಕ್ಲಿನಿಕ್ ದೊಡ್ಡದಲ್ಲ. ಒಂದೇ ಕೊಠಡಿಯ ಅದರಲ್ಲಿ ಕರ್ಟನ್ ಹಾಕಿ ಎರಡು ಭಾಗ ಮಾಡಿದ್ದರು. ಒಂದು ಭಾಗದಲ್ಲಿ ರಿಸೆಪ್ಷನ್; ಇನ್ನೊಂದು ಭಾಗದಲ್ಲಿ

ಆಪರೇಶನ್. ಆಪರೇಶನ್ನಿಗೆ ಒಂದು ಕಬ್ಬಿಣದ ಟೇಬಲ್, ಮೇಲೆ ಒಂದು ಫ್ಲೂರೆಸೆಂಟ್ ದೀಪ, ಕಪಾಟಿನಲ್ಲಿ ಒಂದು ಬಾಟಲ್ ಈಥರ್. ತುರ್ತು ಉಪಯೋಗಕ್ಕೆಂದು ಅಲ್ಲಿ ಆಮ್ಲಜನಕದ ಸಿಲಿಂಡರ್ ಆಗಲಿ, ರಕ್ತದ ಬಾಟಲುಗಳಾಗಲಿ ಇರಲಿಲ್ಲ. ಆಪರೇಷನ್‌ಗೆ ಬೇಕಾದ ಉಪಕರಣಗಳನ್ನು ವೈದ್ಯರೇ ತರಬೇಕಾಗಿತ್ತು.

ಸರಿಯಾದ ವೇಳೆಗೆ ಅಲ್ಲಿಗೆ ಬಂದಿದ್ದ ಸಲೀಮಾ ಕ್ಲಿನಿಕ್‌ನಲ್ಲಿ ಅಡರಿದ್ದ ಈಥರ್ ವಾಸನೆಯಿಂದ ಅಲ್ಲೇ ಇದ್ದ ಒಂದು ಸ್ಟೂಲಿನ ಮೇಲೆ ಕುಸಿದು ಕುಳಿತಳು. ಮುಂದೊದಗಬಹುದಾದ ರಾಕ್ಷಸೀ ಕೃತ್ಯ ಅನಿವಾರ್ಯವೆಂದು ಅವಳು ಮನಸ್ಸನ್ನು ಗಟ್ಟಿಮಾಡಿಕೊಂಡಿದ್ದಳು.

ಮಮ್ತಾಜ್ ಮುಂಗಡವೆಂದು ಕೊಟ್ಟ ಮೂವತ್ತು ರೂಪಾಯಿಗಳನ್ನು ಸಲೀಮ ರವಿಕೆಯೊಳಗೆ ಇಟ್ಟುಕೊಂಡಿದ್ದಳು. ಅದನ್ನು ಮುಟ್ಟಿ ನೋಡಿಕೊಳ್ಳುತ್ತಾ, 'ಇಂದು ಸಂಜೆ ನನ್ನ ಗಂಡ ಮತ್ತು ಮಕ್ಕಳು ಹೊಟ್ಟೆ ತುಂಬ ಊಟ ಮಾಡಬಹುದು' ಅಂದುಕೊಂಡಳು.

ಬಕ್ಕ ತಲೆಯ, ಕಿವಿಯ ಮೇಲೆ ತುಂಬ ಕೂದಲಿರುವ, ಮಧ್ಯ ವಯಸ್ಸಿನ ಸರ್ಜನನೊಬ್ಬ ಅವಳಿಗೆ ಆಪರೇಷನ್ ಮಾಡುವವನಿದ್ದ. ಸಲೀಮಳನ್ನು ಮೇಜಿನ ಮೇಲೆ ಮಲಗಿಸಿ ಅವನು ಅವಳನ್ನು ಪರೀಕ್ಷಿಸಿದ. ಅವನ ಹಿಂದೆ ನಿಂತಿದ್ದ ವೋರಾಗೆ ಆತುರ. ಇನ್ನು ನಾಲ್ಕು ಗಂಟೆಯಲ್ಲಿ ವಿಮಾನ ಹೊರಡುತ್ತದೆ. ಅಷ್ಟರಲ್ಲಿ ಭ್ರೂಣವನ್ನು ಜಾಡಿಗೆ ಹಾಕಿಕೊಂಡು ಡಂ ಡಂ ವಿಮಾನ ನಿಲ್ದಾಣಕ್ಕೆ ಹೋಗಬೇಕು. ಭ್ರೂಣ ಕಳುಹಿಸುವ ವಿಷಯವನ್ನು ಅವನು ಆಗಲೇ ನ್ಯೂಯಾರ್ಕಿಗೆ ತಿಳಿಸಿದ್ದ. ಈ ವ್ಯವಹಾರದಲ್ಲಿ ಅವನಿಗೆ ಒಂದು ಸಾವಿರ ಅಮೆರಿಕನ್ ಡಾಲರ್ ಸಿಗುತ್ತದೆ. ಅವನು ಅಸಹನೆಯಿಂದ ಕೇಳಿದ, "ಡಾಕ್ಟ್ರೇ, ಏಕೆ ನಿಧಾನ?"

ಸರ್ಜನ್ ಪೆಟ್ಟಿಗೆಯಿಂದ ಸಲಕರಣೆಗಳನ್ನು ತೆಗೆದಿರಿಸಿ, ಗೌನ್ ಹಾಕಿಕೊಂಡು; ಕೈಯನ್ನು ಸಾಬೂನಿನಿಂದ ತೊಳೆದುಕೊಂಡು, ನಂತರ ಹತ್ತಿ ಉಂಡೆಯನ್ನು ಈಥರ್‌ನಲ್ಲಿ ನೆನೆಸಿ ಅದನ್ನು ಸಲೀಮಳ ಮೂಗು ಮತ್ತು ಬಾಯಿಯ ಮೇಲಿಟ್ಟ. ಅವಳು ಪ್ರಜ್ಞಾಶೂನ್ಯಳಾಗುತ್ತಿದ್ದಾಗ ಕೈಗೆ ಚಾಕು ತೆಗೆದುಕೊಂಡ.

ಇಪ್ಪತ್ತು ನಿಮಿಷಗಳಲ್ಲಿ ಗರ್ಭಕೋಶದಿಂದ ಹೊಕ್ಕಳು ಬಳ್ಳಿ ಸಮೇತ ತೆಗೆದ. ಭ್ರೂಣವನ್ನು ಅಲ್ಲೇ ಇದ್ದ ವೋರಾನ ಕೈಲಿ ಕೊಟ್ಟು, ಒಸರುತ್ತಿದ್ದ ರಕ್ತವನ್ನು ಒರೆಸುತ್ತಾ, ಹೊಕ್ಕಳು ಬಳ್ಳಿಯನ್ನು ಕತ್ತರಿಸಿದ. ಸಲೀಮಳ ಗರ್ಭದಿಂದ ರಕ್ತದ ಪ್ರವಾಹ ಹರಿಯಲು ಶುರುವಾಯಿತು. ಏನು ಮಾಡಿದರೂ ನಿಲ್ಲಲೊಲ್ಲದು. ನೆಲವೆಲ್ಲಾ ರಕ್ತಮಯವಾಯಿತು. ಸರ್ಜನ್ ಅವಳ ಕಿಬ್ಬೊಟ್ಟೆಯನ್ನು ಬ್ಯಾಂಡೇಜ್‌ನಿಂದ ಬಿಗಿಯಾಗಿ ಕಟ್ಟಿ ರಕ್ತಸ್ರಾವವನ್ನು ನಿಲ್ಲಿಸಲು ಪ್ರಯತ್ನಪಟ್ಟ. ಪ್ರಯತ್ನ ಸಫಲವಾಗಲಿಲ್ಲ. ಡ್ರೆಸಿಂಗ್‌ನ್ನು ಬಿಚ್ಚಿ ರಕ್ತಬರುತ್ತಿದ್ದ ನಾಳವನ್ನು ಹುಡುಕಿದ. ಅದನ್ನು ಅದುಮಿ ರಕ್ತ ಹರಿಯುವುದನ್ನು ನಿಲ್ಲಿಸುವ ಪ್ರಯತ್ನವೂ ಪ್ರಯೋಜನಕ್ಕೆ ಬರಲಿಲ್ಲ. ಶೀಘ್ರವಾಗಿ ರಕ್ತ ಹೆಪ್ಪುಗಟ್ಟುವ ಔಷಧಿಯೂ ಅಲ್ಲಿರಲಿಲ್ಲ.. ಕೈ ಹಿಡಿದು ನಾಡಿಮಿಡಿತವನ್ನು ಪರೀಕ್ಷಿಸಿದ. ಮಿಡಿತ ದುರ್ಬಲವಾಗಿತ್ತು. ಜಾಡಿಗೆ ಭ್ರೂಣ ತುಂಬಿಕೊಂಡ ವೋರಾ ಆತುರಾತುರವಾಗಿ ಹೊರಟುಹೋದ. ಮಮ್ತಾಜ್ ಒಳಗೆ ಹೋಗಿ ಸಲೀಮಳ ರವಿಕೆಯೊಳಗೆ ಕೈಹಾಕಿ ಅಲ್ಲಿದ್ದ ಮೂವತ್ತು ರೂಪಾಯಿಗಳನ್ನು ತೆಗೆದುಕೊಂಡು ಹೊರಟುಹೋದಳು. ಈಗ ಅಲ್ಲಿ ಉಳಿದವರು ಇಬ್ಬರೇ-ಸರ್ಜನ್ ಮತ್ತು ಕ್ಲಿನಿಕ್ಕಿನ ನೌಕರ. ಅವನೊಬ್ಬ ಬೆಳವಣಿಗೆಯಿಲ್ಲದ ಕುಬ , ಕೊಕ್ಕಿನಂತೆ ಬಗ್ಗಿದ ಮೂಗು, ಹುಬ್ಬಿನ ಮೇಲೆ ವಿಪರೀತ ಕೂದಲು. ಸರ್ಜನ್ ಸಲೀಮಳ ಮೈಮೇಲೆ ಸೀರೆ ಮುಚ್ಚಿ, ಕೈತೊಳೆದುಕೊಂಡು, ತಂದ ಉಪಕರಣಗಳನ್ನು ಪೆಟ್ಟಿಗೆಯಲ್ಲಿಟ್ಟುಕೊಂಡು ಕ್ಲಿನಿಕ್ ಬಿಟ್ಟ. ರಕ್ತವನ್ನೆಲ್ಲಾ ಕಳೆದುಕೊಂಡ ದೇಹ ಮೇಜಿನ ಮೇಲೆ ಮಲಗಿತ್ತು. ನೌಕರನಿಗೆ ಆ ದೀಪಾವಳಿ ಹೆಚ್ಚು ಲಾಭಕರವಾಗಿತ್ತು. ಏಕೆಂದರೆ ಹೆಣಗಳನ್ನು ಕತ್ತರಿಸಿ ಅಸ್ಥಿಪಂಜರವನ್ನು ಮಾರುವ ವಿಳಾಸ ಅವನಿಗೆ ಗೊತ್ತಿತ್ತು. ●

ಅಗ್ಗದ ಬೆಲೆಗೆ ಮಾರಿ, ಹಿಗ್ಗಿದ ಬೆಲೆಗೆ ಕೊಂಡ!

ವಿಕ್ಟರ್ ರೋಸೆಂಥಾಲ್ ಜಾಗತಿಕ ಮುತ್ತಿನ ಪೇಟೆಯ ಅನಭಿಷಿಕ್ತ ದೊರೆ. ಜವಾಹಿರಿಗಳ ಅದ್ವಿತೀಯ ವಿನ್ಯಾಸಕಾರನೆನಿಸಿದ್ದ ಪಿಯರ್ ಕಾರ್ಟಿಯರ್ ಹಾಗೂ ರೋಸೆಂಥಾಲ್ ಒಲವಿನ ಗೆಳೆಯರಾಗಿದ್ದರೂ, ಯಾವಾಗಲೂ ತನ್ನದೇ ಮೇಲುಗೈ ಎಂಬಂತೆ ವ್ಯಾಪಾರದ ವಿಷಯದಲ್ಲಿ ಮಾತ್ರ ತೀವ್ರ ಸ್ಪರ್ಧಿಗಳು.

ಒಮ್ಮೆ ಮುತ್ತಿನ ವ್ಯಾಪಾರಕ್ಕಾಗಿ ಮಸ್ಕತ್ತಿಗೆ ಹೋದ ರೋಸೆಂಥಾಲ್ ದೋಣಿಯೊಂದರಲ್ಲಿ ತಂಗಿದ್ದಾಗ ಅರಬನೊಬ್ಬ ಪ್ರಾರ್ಥನೆ ಸಲ್ಲಿಸಲು ಬಳಿಯಲ್ಲಿಯೇ ಸಮುದ್ರ ತೀರದ ಮರಳಿನ ಮೇಲೆ ತನ್ನ ರತ್ನಗಂಬಳಿ ಹಾಸಿದ್ದ. ಮುತ್ತಿನ ಬಗ್ಗೆ ಸರ್ವಜ್ಞನೆನಿಸಿದ ರೋಸೆಂಥಾಲ್‌ಗೆ ರತ್ನಗಂಬಳಿಯ ಬಗ್ಗೆ ಹೆಚ್ಚಿನ ಅರಿವಿರಲಿಲ್ಲ. ಅರಬನ ರತ್ನಗಂಬಳಿಯನ್ನು ತುಂಬಾ ಮೆಚ್ಚಿದ ಅವನು, ಅದನ್ನು ಇಂದಿನ ಲೆಖ್ಖದಲ್ಲಿ ೧೦೦ ರೂ. ಕೊಟ್ಟು ಕೊಂಡ.

ಮರುವರ್ಷ ರೋಸೆಂಥಾಲ್ ಪ್ಯಾರಿಸ್ಸಿಗೆ ಹೋಗಿ ಮುತ್ತು ಮಾರಲು ಪಿಯರ್ ಕಾರ್ಟಿಯರ್‌ನನ್ನು ತನ್ನ ಮನೆಗೆ ಆಹ್ವಾನಿಸಿದ. ಆಗ ಜಗತ್ತಿನಲ್ಲೆಲ್ಲ ಆರ್ಥಿಕ ಮುಗ್ಗಟ್ಟಿದ್ದುದರಿಂದ ಕಾರ್ಟಿಯರ್‌ಗೆ ಮುತ್ತುಕೊಳ್ಳುವ ಉತ್ಸಾಹವೇನೂ ಇರಲಿಲ್ಲ. ಸುತ್ತ ನೋಡಿದ ಕಾರ್ಟಿಯರ್‌ನ ವ್ಯಾಪಾರೀ ದೃಷ್ಟಿ ರೋಸೆಂಥಾಲ್ ಕೊಂಡಿದ್ದ ರತ್ನಗಂಬಳಿಯ ಮೇಲೆ ಬಿತ್ತು. ಆ ರತ್ನಗಂಬಳಿಯನ್ನು ನೀನು ನನಗೆ ಮಾರುವಿಯಾದರೆ ಮಾತ್ರ ನೀನು ಹೇಳುವ ಬೆಲೆಗೆ ನಾನು ಮುತ್ತು ಕೊಳ್ಳುತ್ತೇನೆಂದ ಕಾರ್ಟಿಯರ್.

ಆಗ ಮುತ್ತುಗಳ ಬೆಲೆ ಕುಸಿದಿತ್ತು. ರೋಸೆಂಥಾಲ್‌ಗೆ ಹಣದ ಅವಶ್ಯಕತೆ ಹೆಚ್ಚಾಗಿಯೇ ಇತ್ತು. ಹಾಗಾಗಿ ಕಾರ್ಟಿಯರ್‌ಗೆ ಮುತ್ತುಗಳೊಂದಿಗೆ ರತ್ನಗಂಬಳಿಯನ್ನೂ ಕಡಿಮೆ ಬೆಲೆಗೆ ಮಾರಿದ. ನಂತರ ಪರಿಸ್ಥಿತಿ ಸುಧಾರಿಸುತ್ತ ಬಂದು, ರೋಸೆಂಥಾಲ್ ಲಂಡನ್ನಿಗೆ ಹೋಗುವ ವೇಳೆಗೆ ಮತ್ತೆ ಶ್ರೀಮಂತನೆನಿಸಿದ್ದ.

ಲಂಡನ್ನಿನಲ್ಲಿರುವಾಗ ಪದ್ಧತಿಯ ಪ್ರಕಾರ ರೋಸೆಂಥಾಲ್ ಕ್ರಿಸ್ಟಿಯ ಹರಾಜಿಗೆ ಹೋದ. ಅಲ್ಲಿ ತನ್ನ ಕಣ್ಣನ್ನು ತಾನೇ ನಂಬಲಿಲ್ಲ ಆತ. ಆ ದಿನದ ಹರಾಜಿನ ಮುಖ್ಯ ವಸ್ತುವಾಗಿದ್ದುದು ಕಲಾತ್ಮಕ ಹೊದಿಕೆಯೊಳಗಿದ್ದ, ತಾನೇ ಕಾರ್ಟಿಯರ್‌ಗೆ ಮಾರಿದ್ದ ರತ್ನಗಂಬಳಿ! ನಿಮಿಷಗಳಲ್ಲಿ ಅದರ ಬೆಲೆ ೩೦೦೦ ಪೌಂಡುಗಳಿಗೇರಿತು. ಈ ಬಾರಿ ರೋಸೆಂಥಾಲ್ ಬಳಿ ಹಣವಿತ್ತು. ಬೆಲೆಯರಿಯದೆ, ತನ್ನ ಕೈಬಿಟ್ಟು ಹೋಗಿದ್ದ ಆ ರತ್ನಗಂಬಳಿಯನ್ನು ಪುನಃ ಪಡೆಯಲು ನಿರ್ಧರಿಸಿ ತಾನೇ ಅದನ್ನು ಖರೀದಿಸಿದ. ಆದರೆ ತಾನು ಕಾರ್ಟಿಯರ್‌ಗೆ ಯಾವ ಬೆಲೆಗೆ ಮಾರಿದ್ದನೋ ಅದಕ್ಕಿಂತ ಈಗ, ಅದೇ ರತ್ನಗಂಬಳಿಯ ಬೆಲೆ ಅತ್ಯಂತ ದುಬಾರಿಯಾಗಿತ್ತು.

(ಸಂಗ್ರಹ) ✚ ಟಿ.ಎಸ್. ಲಲಿತ

ಕಂನಾಡಿಗನ ಆತ್ಮನಿರೀಕ್ಷಣೆ....

✷ ಶಂ.ಬಾ. ಜೋಶಿ

ಸ್ವತಂತ್ರ ಭಾರತದಲ್ಲಿ ಕನ್ನಡನಾಡು ಮಾನದಿಂದ ತಲೆಯೆತ್ತಿ ಮೆರಿಯಬೇಕಾದರೆ, ಉಳಿದ ಪ್ರಾಂತಗಳೊಡನೆ ಸರಿಸಮಾನತೆಯಿಂದ ಮುಂದುವರಿಯಬೇಕಾದರೆ ಗುಣ ಪಕ್ಷಪಾತಿಗಳಾಗಲು ಕಲಿಯಬೇಕೇ ಹೊರತು ಜಾತಿ, ಮತ, ಪಕ್ಷ, ಪಂಗಡಗಳ ಮೋಹಜನ್ಯವಾದ ಪೂರ್ವಸಿದ್ಧ ಅಭಿಪ್ರಾಯಗಳಿಂದ ಉದ್ರಿಕ್ತರಾಗಿ ಕಾರ್ಯಪ್ರವೃತ್ತರಾಗಬಾರದೆಂಬುದನ್ನು ಪ್ರತಿಯೊಬ್ಬ ಕನ್ನಡಿಗನೂ ಮನನ ಮಾಡಬೇಕೆಂದು ಕರ್ಮವೀರದ ೧೮-೮-೧೯೪೭ ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಈ ಲೇಖನದಲ್ಲಿ ಪ್ರತಿಪಾದಿಸಲಾಗಿದೆ. ಈ ಅಂಶಗಳು ಇಂದಿಗೂ ಪ್ರಸ್ತುತವಾಗಿವೆ.

ಭಾರತವು ಸ್ವತಂತ್ರವಾಯ್ತು. ಇನ್ನು ಬೇಗನೆ ಕರ್ನಾಟಕವೂ ಏಕೀಕೃತವಾಗಲಿದೆ. ಇಂತಹ ಸಮಯದಲ್ಲಿ ಕಂನಾಡಿಗರು ತಮ್ಮ ಆತ್ಮನಿರೀಕ್ಷಣೆಯನ್ನು ಮಾಡಿಕೊಳ್ಳುವುದು ಅವಶ್ಯವಿದೆ. ಏಳ್ಗೆಯನ್ನು ಹಾರಯಿಸುವವರಿಗೆ ಆತ್ಮನಿರೀಕ್ಷಣೆಯು ಅತ್ಯಂತ ಉಪಯುಕ್ತವಾದ ಸಾಧನವಾಗಿದೆ. ವರ್ತಕರಿಗೆ, ಆಗುಹೋಗಿನ ಲೆಕ್ಕವನ್ನು ನೋಡುವುದು ಅವಶ್ಯಕವಾಗಿರುವಂತೆ ವಿಚಾರಿಗೆ ಆತ್ಮನಿರೀಕ್ಷಣೆಯು ಬೇಕೇ ಬೇಕು, ಏನಿದ್ದೆ; ಏನಾಗಿದ್ದೇನೆಂಬುದು ಗೊತ್ತಾದರೆ ಇನ್ನು ಮುಂದೆ ತಾನು ಏನು ಆಗಬೇಕೆಂಬ ಯೋಜನೆಯನ್ನು ಸರಿಯಾಗಿ ಮಾಡಿಕೊಳ್ಳಲು ಅನುಕೂಲವಾಗುವುದು.

ಚಿಕ್ಕಂದು, ಶ್ರೀ ಆಲೂರ ವೆಂಕಟರಾಯರು ಬರೆದ ಕರ್ಣಾಟಕದ ಗತವೈಭವವನ್ನು ಓದಿದಾಗ ನನ್ನ ಮನದಲ್ಲಿ ಒಂದು ಪ್ರಬಲವಾದ ವಿಚಾರದ ಸುಳಿಯೆದ್ದಿತು. ಕರ್ಣಾಟಕವು ಪ್ರಾಚೀನ ಕಾಲದಲ್ಲಿ ಇಷ್ಟು ವೈಭವಶಾಲಿಯಾಗಿದ್ದುದು ನಿಜವಿದ್ದರೆ, ನಮ್ಮ ನಾಡಿನ ಇಂದಿನ ಈ ದುರವಸ್ಥೆಯ ಕಾರಣವೇನು? ನೇಪಾಳದಲ್ಲಿ ಕರ್ಣಾಟರ ಒಂದು ಮನೆತನ ರಾಜ್ಯ ವಾಳಿತು; ಬಂಗಾಳದ ಸೇನ-ಬಲ್ಲಾಳ ರಾಜರು ಕರ್ಣಾಟದ ಬ್ರಹ್ಮ ಕ್ಷತ್ರಿಯ ವಂಶದವರು; ಮಿಥಿಲೆಯ ನಾನ್ಯದೇವನು ತಾನು ಕರ್ಣಾಟನೆಂದು ಬರೆದುಕೊಂಡಿದ್ದಾನೆ. ಚಾಲುಕ್ಯ ರಾಷ್ಟ್ರಕೂಟರು ದಕ್ಷಿಣ ಪಥವನ್ನೆಲ್ಲ ಒಂದೆ ಕೊಡೆಯಿಂದ ಆಳಿದರು. ವಿಜಯನಗರವು ಮಹಮ್ಮದೀಯರನ್ನು ತಡೆಗಟ್ಟಿ ಭಾರತದ ಸಂಸ್ಕೃತಿಯನ್ನು ಉಳಿಸಿತು.... ಇಂತಿವೆಲ್ಲ ಸಂಗತಿಗಳನ್ನು ಓದುವಾಗ ನಾವು ಓದುತ್ತಿರುವುದು ಕಾಲ್ಪನಿಕ ಕಾದಂಬರಿಯಲ್ಲವಷ್ಟೆ? ಎಂಬ ಸಂದೇಹವು ಉಂಟಾಗುವಂತಿದೆ. ಏಕೆಂದರೆ ನಮ್ಮ ನಾಡಿನ ಇಂದಿನ ಪಾಡು ಅಷ್ಟು ಕೆಳಗಿನ ಮಟ್ಟಕ್ಕೆ ಬಂದು ನಿಂದಿದೆ.

ನಮ್ಮ ನಾಡಿನ ಇಂದಿನ ಪಾಡಿಗೆ ನಮ್ಮ ಹಿಂದಿನ ಕರ್ಮ, ವಿಚಾರಗಳೇ ಮೂಲಕಾರಣವೆಂದು ಒಪ್ಪಿಕೊಳ್ಳಲೇಬೇಕಾದ ಮಾತು. ಆದಕಾರಣ ಇಂದಿನ ಅವನತಿಯ ಪರಮಾವಧಿಯ ಬೇರುಗಳು ಹಿಂದೆ ಎಷ್ಟೋ ಶತಮಾನಗಳ ಹಿಂದೆ ಇದ್ದುದನ್ನು ಕಂಡು ಹಿಡಿಯುವುದು ಅವಶ್ಯವಿದೆ. ನಮ್ಮಿಂದ ಆದ ಹಾಗೂ ಆಗುತ್ತಿರುವ ತಪ್ಪುಗಳು ಯಾವುವು ಎಂಬುದು ಸರಿಯಾಗಿ ತಿಳಿಯದಿದ್ದರೆ ಆ ದೋಷಗಳ ವಜ್ರಮುಷ್ಟಿಯೊಳಗಿಂದ ನಾವು ಪಾರಾಗಿ ಹೊರಬೀಳುವುದೆ ಶಕ್ಯವಿಲ್ಲ.

ನಮ್ಮ ಹಿರಿಯರು ನಮಗೆ ಪೂಜ್ಯರು, ನಿಜ.

ಆದರೆ ಅವರ ಪ್ರತಿಯೊಂದು ಮಾತೂ ಮಾನ್ಯ ವೆಂದು ಎತ್ತಿಕೊಂಬುದು ತಪ್ಪು. ಉಪನಿಷತ್ಕಾರ ಒಬ್ಬ ಋಷಿಯು ಈ ವಿಚಾರದಲ್ಲಿ ಒಂದು ಅಮೌಲಿಕವಾದ ಸೂತ್ರವಾಕ್ಯವನ್ನು ಹೇಳಿದ್ದಾನೆ. "ಯಾನಿ ಅನವದ್ಯಾನಿ ಕರ್ಮಾಣಿ ತಾನಿ ಸೇವಿತ ವ್ಯಾಣಿ; ನೋ ಇತರಾಣಿ" ಎಂಬ ಈ ಸಂದೇಶ ವನ್ನು ಮರೆತುದರಿಂದಲೇ ನಾವಿಂದು ಈ ಹೀನ ಸ್ಥಿತಿಗೆ ಇಳಿದಿದ್ದೇವೆ.

ಕಂನಾಡವರ ಪರಂಪರಾಪ್ರಿಯತ ಇದೆಲ್ಲವನ್ನೂ ಕಣ್ಣುಮುಚ್ಚಿ ಮಾಡಹಚ್ಚಿದೆ, ಆಚಾರ್ಯತ್ರಯರು, ಅವರ ಕಾಲದಲ್ಲಿ ಅವರು ಹೇಳಿದ ತತ್ವಜ್ಞಾನ ಅವಶ್ಯಕವಿರಬಹುದು. ಆದರೆ ಅದುವೆ ಈಗಲೂ ನಮ್ಮ ಸಮಾಜಧಾರಣೆಗೆ ಚಾಚೂ ಬಿಡದಂತೆ ಸರಿಹೋಗುವುದೆಂದು ಬಗೆಯಲಿಕ್ಕಾದೀತೆ?

ಶ್ರೀ ಬಸವಣ್ಣನವರು ಸ್ತ್ರೀಯರಿಗೆ ಸಮಾನಹಕ್ಕು ಕೊಟ್ಟರೆಂದೂ ಅಸ್ಪೃಶ್ಯೋದ್ಧಾರ ಮಾಡಿದರೆಂದೂ ಹೇಳುತ್ತೇವೆ. ಇಂದು ಮಹಾತ್ಮಾಜಿಯವರು ಮಾಡಿದ ಕಾರ್ಯ ಅಂದು ೧೨ನೆಯ ಶತಮಾನ ದಲ್ಲಿ ೮೦೦ ವರುಷಗಳ ಮೊದಲೇ ಯುಗಪ್ರವ ರ್ತಕ ಬಸವಣ್ಣನವರು ನೆರವೇರಿಸಿದರೆಂದು ಸಾರು ತ್ತೇವೆ. ಆದರೆ ಇದೂ ಒಂದು ಪರಂಪರಾಪ್ರೀತಿ ಯಿಂದ, ತಮ್ಮವರೆಂಬ ಅಭಿಮಾನ ಕೌತುಕದಿಂದ ಆಡಿದ ಮಾತೇ ಸರಿ. ಏಕೆಂದರೆ ಶ್ರೀ ಬಸವಣ್ಣನವರ ಹಾಗೂ ಶ್ರೀ ಗಾಂಧೀಜಿಯವರ ಸುಧಾರಣೆಗಳ ಹಿನ್ನೆಲೆಯಲ್ಲಿರುವ ಮನೋಭೂಮಿಕೆಯಲ್ಲಿ ಅದೆಷ್ಟು ಅಂತರ! ಮುಕ್ತಿಪಥದ ಆಚರಣೆಗಾಗಿ ಶ್ರೀ ಬಸವಣ್ಣನವರು ಸಾಧನಾ ಮಾರ್ಗದಲ್ಲಿ ಸ್ತ್ರೀಯ ರಿಗೂ ಮುಕ್ತದ್ವಾರವಿಟ್ಟರು ನಿಜ. ಆದರೆ ಇಂದಿನ ಸ್ತ್ರೀ ಸ್ವಾತಂತ್ರ್ಯದ ಕಲ್ಪನೆಗೂ ಅಂದಿನದಕ್ಕೂ ಅಜಗ ಜಾಂತರವಿದೆ.

ಸ್ವತಂತ್ರ ಭಾರತದಲ್ಲಿ ಉಳಿದ ಮುಂದುವರಿದ ಪ್ರಾಂತಗಳೊಡನೆ ಕಂನಾಡು ತನಗೂ ಒಂದು ಸನ್ಮಾನದ ಸ್ಥಾನವನ್ನು ಪಡೆಯಬೇಕಿದ್ದರೆ ಹಳಗಾ ಲದ ಆ ಜಾತಿ-ಪಕ್ಷ- ಪಂಗಡಗಳ ವಿಚಾರವನ್ನು ತಲೆಯೊಳಗಿಂದ ತೆಗೆದುಹಾಕುವುದು ಅವಶ್ಯವಿದೆ. ಇದು ಸಾಧ್ಯವಾಗಬೇಕಾದರೆ ನಮ್ಮಲ್ಲಿ ವಿಚಾರಿಗ ಳಾದ ಲೇಖಕರೂ, ವಾಗ್ಮಿಗಳೂ, ಮುಂದಾಳು ಗಳೂ, ಸಾಹಿತಿಗಳೂ ನಮ್ಮ ನಾಡಿನಲ್ಲಿ ಬೇರು ಹಿಡಿದಿರುವ ಪರಂಪರಾಪ್ರಿಯತೆಯನ್ನು ತೊಡೆದು ಹಾಕಲು ಸೊಂಟ ಕಟ್ಟಬೇಕು.

ರೂಢಿಮೂಢರಾಗಿ, ಸಂಪ್ರದಾಯ ಶರಣರಾಗಿ ಕಂನಾಡವರು ಮಿತಿಮೀರಿದ ಹಾನಿಗೆ ಒಳಗಾಗಿ ದ್ದಾರೆ. ಒಂದು ಕಾಲದಲ್ಲಿ ಅಖಿಲ ಭಾರತೀಯ ರಾಜಕೀಯ, ತಾತ್ವಿಕ ಚಳವಳಿಗಳ ಸೂತ್ರಗಳನ್ನು ತಮ್ಮ ಕೈಯ್ಯಲ್ಲಿರಿಸಿಕೊಂಡ ಕಂನಾಡವರಿಗೆ ಪರರು ಇಂದು ಕುರಿನಾಡವರೆಂದು ಹೀಯಾಳಿಸುವ ಹೊತ್ತು ಬಂದಿದೆ!

ಕಿತ್ತೂರು ಚೆನ್ನಮ್ಮ ಹೇಮರೆಡ್ಡಿ ಮಲ್ಲಮ್ಮನಿ ಗಿಂತ ಹೆಚ್ಚಿನ ವೈಭವಶಾಲಿಯಾಗಿ ಬಾಳಿದವರ ಇತಿಹಾಸವನ್ನು ನಾವು ಮರೆತುಬಿಟ್ಟಿದ್ದೇವೆ. ಪುಲಿ ಕೇಶಿಯ ಸೊಸೆ 'ಕರ್ನಾಟ ರಾಜಪ್ರಿಯೆ ವಿಜ ಯಾಂಕೆ'ಯನ್ನು ದಂಡಿ ಮೊದಲಾದವರು ಪ್ರತ್ಯಕ್ಷ ಸರಸ್ವತಿಯೆಂದು ಹೊಗಳಿ ಅವರ ಕಾರ್ಯ ಪ್ರಶಂಸೆ ಮಾಡಿದ್ದಾರೆ. ವಿಕ್ರಮನ ತಂಗಿ ಅಕ್ಕಾದೇವಿ ಇಂದಿನ ಒಂದು ಪ್ರಾಂತದಷ್ಟು ವಿಸ್ತಾರವಾದ ರಾಜ್ಯವನ್ನು ಆಳಿದಳು. ಅವಳ ನೆನಪಿಲ್ಲ. ವಿದ್ಯೆ-ಅವಿದ್ಯೆಗಳ ತ್ಯಾಗಭೋಗಗಳ ಸಮನ್ವಯ ಮಾಡಿದ ಯೋಗೀ ಶ್ವರ ಯಾಜ್ಞವಲ್ಕನ ತತ್ವಗಳು ಕಣ್ಮರೆಯಾದವು.

ನಮ್ಮ ಇಳಿಗಾಲದೊಳಗಿನ ಇತಿಹಾಸದ ನೆನಪು ಮಾತ್ರ ನಮ್ಮ ನಾಡಿಗರಿಗೆ ತುಂಬಾ ಉಳಿದಿದೆ!

೧೨ನೆಯ ಶತಮಾನದಿಂದ ಕಂನಾಡಿನ ವೈಭ ವದ ಇಳಿಗಾಲಕ್ಕೆ ಆರಂಭವಾಯಿತು. ಅಂದಿನಿಂದ ಮುಂದಿನ ಕಾಲದ ಶಾಸ್ತ್ರ, ಸಾಹಿತ್ಯ, ಶಿಲ್ಪ ಮೊದ ಲಾದ ಎಲ್ಲ ಭಾಗದಲ್ಲಿಯೂ ನಡುವಿನ ಸಣ್ಣಪುಟ್ಟ ಅಪವಾದ ಬಿಟ್ಟರೆ ಅವನತಿಯ ಸ್ಪಷ್ಟವಾದ ಕುರು ಹುಗಳು ಕಾಣುತ್ತವೆ. ವಿಜಯನಗರದ ಸಾಮ್ರಾಜ್ಯ ವೆಂಬುದು ದೀಪವು ಆರುವಾಗ ಎದ್ದ ಕೊನೆಯ ದೊಡ್ಡ ಬೆಳಕು. ಆದಕಾರಣ ಈ ಕಾಲದಲ್ಲಿ ಎದ್ದ ವಿಚಾರ ಪ್ರವಾಹದ ವರ್ಚಸ್ಸು, ನಮ್ಮ ನಾಡವರಿಗೆ ಈಗಿನ ನವಕರ್ನಾಟಕದ ನಿರ್ಮಾಣ ಕಾಲದಲ್ಲಿ ಉಪಕಾರಕವಾಗಲಾರದೆಂದು ನನ್ನ ತಿಳುವಳಿಕೆಯಾ ಗಿದೆ.

ಕಂನಾಡಿಗನು ಆತ್ಮವಿಮರ್ಶೆ ಮಾಡಿಕೊಂಡು ತನ್ನ ಏಳ್ಗೆಗೆ ಕಾಲ್ತೊಡಕಾಗುವ ಸಂಗತಿಗಳನ್ನು

ಕತ್ತರಿಸಿಬಿಡಲು ಸಿದ್ಧನಾಗಬೇಕು. ಇಲ್ಲವಾದರೆ ಏಳ್ಗೆಯ ಆಸೆಯನ್ನಾದರೂ ಬಿಡಬೇಕು.

ನಿಷ್ಪಕ್ಷಪಾತದಿಂದ ಆತ್ಮವಿಮರ್ಶೆ ಮಾಡಿಕೊಂಡಲ್ಲಿ ಜಾತಿಮತಗಳ ತಿಕ್ಕಾಟ, ಅಸೂಯೆ, ಏರಾಟಗಳಿಂದ ಹಾನಿಗೆ ಈಡಾಗಬೇಕಾಗಿದೆ ಎಂದು ಪ್ರತಿಯೊಬ್ಬ ಕಂನಾಡಿಗನೂ ಒಪ್ಪಲೇಬೇಕಾದೀತು. ಆದುದರಿಂದ ಇನ್ನು ಮುಂದೆ ಈ ಬಗೆಯ ತಪ್ಪು ನಮ್ಮಿಂದಾಗಬಾರದಾಗಿದ್ದರೆ ಜಾತೀಯ ದ್ವೇಷದ, ಈರ್ಷ್ಯೆಗಳ ಲಾಭ ಪಡೆದು ತಮ್ಮ ಮುಂದಾಳುತನವನ್ನು ಭದ್ರವಾಗಿ ಇರಿಸಿಕೊಂಬುದು ಸಮಾಜ ದ್ರೋಹ, ದೇಶದ ಘಾತವೆಂದು ನಮ್ಮ ತರುಣರಿಗೆ ನೆರೆ ನಂಬುಗೆಯಾಗಬೇಕು. ಈ ಬಗೆಯ ಹೀನ ಮಾರ್ಗದಿಂದ ಮುಂದಾಳುಗಳಾಗಿರುವವರನ್ನು ಬೈಲಿಗೆಳೆದು ಸ್ವಾರ್ಥತ್ಯಾಗ, ಶ್ರೇಷ್ಠವಾದ ಆದರ್ಶವುಳ್ಳ ಸಮಾಜ ಸೇವಕರಿಗೆ ಬೆಂಬಲ ಕೊಡಬೇಕು.

ತಮ್ಮ ನಾಡಿನ ಪರವಾಗಿ ಯಾವನಾದರೂ ಹೊರಗೆ ಮೇಲ್ಮೆಯ ಸ್ಥಳವನ್ನು ಪಡೆದುಕೊಳ್ಳುತ್ತಿರುವಾಗ ಅದಕ್ಕೆ ಅವಶ್ಯಕವಾದ ಅರ್ಹತೆಯು ತನ್ನಲ್ಲಿ ಇಲ್ಲದಿದ್ದರೂ ಆ ಸ್ಥಾನವು ಆ ವಿಶಿಷ್ಟ ವ್ಯಕ್ತಿಗೆ ಸಿಕ್ಕಲಾಗದೆಂದು ಒಳಸಂಚು ನಡೆಸಿ ಆ ಕೆಲಸಕ್ಕೆ ಅಡ್ಡ ಬರುವ ಅಸುರೀ ಕೃತ್ಯಕ್ಕೆ ನಮ್ಮವರು ಯಾರೂ ಮನಸು ಮಾಡಲಾಗದು. ತನ್ನ ಮೂಗು ಕೊಯ್ದುಕೊಂಡು ಇನ್ನೊಬ್ಬರಿಗೆ ಅಪಶಕುನ ಮಾಡುವ ನೀಚತನದಿಂದ ನಾಡಿಗೆ ಹೇಳಲಾರದಷ್ಟು ಕೇಡು ಸಂಭವಿಸುತ್ತದೆ.

ಸಮಾಜದಲ್ಲಿ ಮುಂದೆ ಬರಲು ಯೋಗ್ಯತೆ, ಸುಗುಣಗಳನ್ನು ಪರಿಶ್ರಮದಿಂದ ಪಡೆಯಬೇಕೇ ಹೊರತು ಬರಿ ಅಸೂಯೆ, ದ್ವೇಷ, ಈರ್ಷ್ಯೆಗಳಿಂದ ಏನೂ ಲಾಭವಾಗದು. ಶ್ರೀ ಮೋಹನದಾಸ ಗಾಂಧಿಯವರು ಮಹಾತ್ಮಾಜೀಯವರಾದುದು ಹೇಗೆ? ಬ್ರಾಹ್ಮಣರು ತಮ್ಮನ್ನು ಹಿಂದೆ ತಳ್ಳಿದರೆಂದು ಕುತ್ತುಸಿರು ಬಿಡುತ್ತಾ ದೇಶದ ತುಂಬಾ ಅವರು ಅಲೆಯಬಹುದಿತ್ತು. ಆಗ ೧೯೨೦ರ ಸುಮಾರಿಗೆ ಉತ್ತರ ಕಂನಾಡಿನಲ್ಲಿ ಶ್ರೀ ಲಠ್ಠೆಯವರು ಅದೇ ಕೆಲಸ ನಡೆಸಿದ್ದರು. ದಕ್ಷಿಣ ದೇಶದಲ್ಲಿ ಜಸ್ಟಿಸ ಪಾರ್ಟಿ ನಡೆಸಿದ ಕಾಯಕವಾದರೂ ಬೇರೆ ಇದ್ದಿಲ್ಲ. ಶ್ರೀ ಗಾಂಧಿಯವರಿಗೆ ಆ ಕೆಲಸಕ್ಕೆ ಬೇಕಾದಷ್ಟು ಅವಕಾಶವಿದ್ದಿತು. ಟಿಳಕರಂತಹ ಬ್ರಾಹ್ಮಣ ಮುಂದಾಳುವನ್ನು ಹಿಮ್ಮೆಟ್ಟಲಿಕ್ಕೆ ಇದು ಸುಲಭವಾದ ಉಪಾಯವಾಗಿತ್ತು.

ಆದರೆ ಶ್ರೀ ಗಾಂಧಿಯವರು ಅನುಸರಿಸಿದ ದಾರಿ ಯಾವುದು? ಸತ್ಯ, ಅಹಿಂಸೆಗಳ ಅಮೋಘ ಶಕ್ತಿಗೆ ಶರಣು ಹೋದರು. ದೈವಿಸಂಪತ್ತು ಗಳಿಸಿದರು. ಅವರ ಪಾದಧೂಳಿಯನ್ನು ಪಡೆಯುವುದರಲ್ಲಿ ಇಂದು ಬ್ರಾಹ್ಮಣರಲ್ಲಿ ಯಾರಿಗೂ ಹೆಮ್ಮೆಯೆನಿಸದೆ ಇರದು!

ಆದರೆ ಇದು ಗಡಚು ದಾರಿ. ಕಡುತರ ತಪಸ್ಸಿನ ದಾರಿ. ಇದಕ್ಕಿಂತ ದ್ವೇಷ, ಅಸೂಯೆಗಳ, ಜಾತ್ಯಂಧತೆಯ ಪ್ರಸಾರ, ಉಪದೇಶದಿಂದ ಮುಂದಾಳುತನವೂ ಫಂಡುಗಳೂ ಬೇಗನೆ ಲಭಿಸುವುದರಿಂದ ಇತ್ತ ಕಡೆಗೇ ಮನಸು ಬೇಗನೆ ಹರಿದರೆ ಸೋಜಿಗವೇನು?


ಆದರೆ ಕಂನಾಡು ಸ್ವತಂತ್ರ ಭಾರತದಲ್ಲಿ ಮಾನದಿಂದ ತಲೆಯೆತ್ತಿ ಮೆರೆಯಬೇಕಾದರೆ, ಉಳಿದ ಪ್ರಾಂತಗಳೊಡನೆ ಅದು ಸರಿಸಮಾನತೆಯಿಂದ ಮುಂದುವರಿಯಬೇಕಾದರೆ ಗುಣಪಕ್ಷಪಾತಿಗಳಾಗಲು ಕಲಿಯಬೇಕೇ ಹೊರತು ಯಾವ ಜಾತಿ; ಮತದ ಪಕ್ಷಪಾತವು ಕಲ್ಯಾಣಕರವಾಗಲಾರದು. ●

"ಜನಸಂಖ್ಯೆ ಸ್ಫೋಟ ಅನ್ನುವುದು ಬಂಡವಾಳಶಾಹಿಯನ್ನು ಪ್ರತಿಪಾದಿಸುವವರು ಎಬ್ಬಿಸಿರುವ ಕೂಗು. ದೇಶದ ಅಭಿವೃದ್ಧಿಗೂ, ಕುಟುಂಬಯೋಜನೆಗೂ ಸಂಬಂಧವಿಲ್ಲ. ನಿಯಂತ್ರಿತ ಕುಟುಂಬ ನಮ್ಮ ಮುಖ್ಯ ಪ್ರಯತ್ನವಾಗಬಾರದು"ಇದು ನೆಹರೂರವರ ನಂಬಿಕೆಯಾಗಿತ್ತು. ೧೯೫೮ರಲ್ಲಿ, ಅವರ ಜೀವನ ಚರಿತ್ರೆಯನ್ನು ಬರೆದ ಮೈಕೇಲ್ ಬ್ರೆಚರ್‌ಗೆ ಅವರು ಹೀಗೆ ತಿಳಿಸಿದ್ದರು.
(ಆಧಾರ)

✤ ಎಚ್.ಎಸ್.ಎನ್.

ಮದ್ಯದಿಂದ ಸುಖವಿದೆಯೆ?

✷ ಬೋನ್ಸಾಯ್ ಶ್ರೀನಿವಾಸ್



ಸಾವು ಸಮೀಪಿಸುತ್ತಿರುವ ಸಿರ್ರೋಸಿಸ್ ಪೀಡಿತ ಕುಡುಕ

ಮದ್ಯ ಅರ್ಥಾತ್ ಮದಿರೆ ಮಾನವನ ಜೀವನದಲ್ಲಿ ಹೊಕ್ಕು ಇತಿಹಾಸದಷ್ಟೇ ಕಾಲಗತಿಸಿದೆ. ಸುರರೆಂದರೆ ಸುರಾಪಾನ ಮಾಡುವವರು; ಅಸುರರೆಂದರೆ ಸುರಾಪಾನ ಮಾಡದವರು. ಮತ್ತು ಭೂಸುರರೆಂದರೆ 'ನಾವೆಲ್ಲಾ' ಸುರಾಪಾನ ಮಾಡಲೆಂದೇ ಈ ಭೂಮಿಯ ಮೇಲೆ ಅವತರಿಸಿದವರು ಎಂಬುದೊಂದು ಯಾರೋ ಕುಚ್ಯೋದ್ಯಕ್ಕೆ ಹೇಳಿದ ಮಾತು.

ಇಂದಿನ ಫ್ಯಾಶನ್ ಯುಗದಲ್ಲಿ ಯಾರಾದರೂ ಗಾಜಿನ ಲೋಟವನ್ನು ಮೇಲೆತ್ತಿ ಸ್ವಸ್ತಿಪಾನ ಮಾಡಿ ಗುಟುಕರಿಸಿದರೆಂದರೆ ನಾಲಿಗೆ ಸಡಿಲವಾಗುತ್ತದೆ. "ಸಡಿಲವಾದ ನಾಲಿಗೆ ಸ್ನೇಹದ ಬಂಧವನ್ನು ಬಿಗಿಗೊಳಿಸುತ್ತದಂತೆ." ಒಂದು ವಿಧದಲ್ಲಿ ಇದು ನಿಜವೆನಿಸಿದರೂ ಇದರ ಮತ್ತೊಂದು ಮುಖವಿದೆ. ಈ ಸುರೆಗೆ ಸೈತಾನನ ಶಕ್ತಿಯೂ ಇದೆ. ಅದು ಅನೇಕರ ಜೀವನವನ್ನು ನಾಶಗೊಳಿಸುವುದೇ ಅಲ್ಲದೆ ಸಂಸಾರಗಳನ್ನು ಹಾಳುಗೆಡುವಬಲ್ಲದು. ಅಷ್ಟೇ ಅಲ್ಲ, ಅಪಘಾತಗಳಿಗೂ ಕಾರಣವಾಗಬಲ್ಲದು. ಮತ್ತನ್ನು ಬರಿಸಿ ವಿಚಿತ್ರ ಲೋಕಕ್ಕೆ ಕರೆದೊಯ್ದು ತನ್ನ ಮನಬಂದಂತೆ ಆಡಿಸುವ ಈ ಪೇಯ ಶಿಲಾಯುಗದಿಂದಲೂ ಚಿರಪರಿಚಿತ. ಮೊದಲ ಬಾರಿ ದ್ರಾಕ್ಷಿ ಹಣ್ಣುಗಳನ್ನು ಕಿವುಚಿ ಅದಕ್ಕೆ ಹೆಪ್ಪು(?)ಹಾಕಿದಾಗ ಹುಳಿಬಂದ ಪದಾರ್ಥದಿಂದ ಭಟ್ಟಿ ಇಳಿಸಿಬಂದ ಪೇಯವೇ ಮತ್ತು ಬರಿಸುವ ಸುರೆ, ಹೆಂಡ, ರಸಾಯನ ಎಥೆನಾಲ್ ಅಥವಾ ಸಾಮಾನ್ಯವಾಗಿ ಬಳಕೆಯಲ್ಲಿರುವ ಎಲ್ಲರಿಗೂ ತಿಳಿದಿರುವ, ಆಲ್ಕೋಹಾಲ್. ನಿಜವಾಗಿ ಈ ಪೇಯ ಹೇಗೆ ತಯಾರಾಗುತ್ತದೆ ಗೊತ್ತೆ? ಕಿವುಚಿದ ದ್ರಾಕ್ಷಿ ಹಾಗೂ ಉಗುರು ಬೆಚ್ಚಗಿನ ನೀರಿನಲ್ಲಿ ನೆನೆಸಿದ ಧಾನ್ಯಗಳಿಗೆ ಯೀಸ್ಟ್ ಎಂಬ ಕಿಣ್ವವನ್ನು ಬೆರೆಸುತ್ತಾರೆ. ಈ ಯೀಸ್ಟ್ ಜೀವಂತ ಬ್ಯಾಕ್ಟೀರಿಯ. ಈ ಸೂಕ್ಷ್ಮಾಣುಗಳು ಹುದುಗು ಹಾಕಿದ ಪಾತ್ರೆಗಳಲ್ಲಿನ ರಸವನ್ನೆಲ್ಲಾ ಕುಡಿದು ತಮ್ಮ ಜಠರಗಳಲ್ಲಿ ಜೀರ್ಣಿಸಿಕೊಂಡ ಮೇಲೆ ಅವುಗಳನ್ನು ಹೊರತಳ್ಳುವ ಮಲವೇ ಆಲ್ಕೋಹಾಲ್!!!

ಹಣ್ಣು, ಧಾನ್ಯ ಮತ್ತು ಎಲ್ಲಾ ವಿಧದ ಸಸ್ಯಗಳಲ್ಲಿ ಸಕ್ಕರೆ ಇರುತ್ತದೆ. ಯೀಸ್ಟ್ ಎಲ್ಲೆಲ್ಲೂ ಇರುತ್ತದೆ. ದ್ರಾಕ್ಷಾರಸ ಅಥವಾ ಬೆಚ್ಚನೆಯ ನೀರಿನಲ್ಲಿ ನೆನೆಸಿದ ಧಾನ್ಯಗಳನ್ನು ಪಾತ್ರೆಗಳಲ್ಲಿ ಮುಚ್ಚಿಟ್ಟಾಗ ಕೆಲ ಸಮಯದ ನಂತರ ಅವುಗಳಿಂದ ಅನಿಲದ ಗುಳ್ಳೆಗಳು ಹೊರಬರುತ್ತವೆ. ಅನಂತರ ಪಾತ್ರೆಯಲ್ಲಿನ ತಿಳಿರಸವನ್ನು ಕುಡಿದಾಗ ಅಮಲು ಬರುವ ಪದಾರ್ಥ ಉಂಟಾಗುತ್ತದೆಂಬುದನ್ನು ಮೊಟ್ಟಮೊದಲು ಕಂಡುಹಿಡಿದವರು ಬ್ಯಾಬಿಲೋನಿನವರು.

ವಾಸ್ತವಿಕವಾಗಿ ಯೀಸ್ಟ್ ಎನ್ನುವುದು ಏಕಕೋಶದ ಜೀವಂತ ಬೀಜೆಂಬುದನ್ನು ಪತ್ತೆಹಚ್ಚಿದಾತ ಲೂಯಿ ಪಾಶ್ಚರ್. ಈ ಏಕಾಣುಜೀವಿಗಳು ತಮ್ಮ ಜೀವನ್ಮರಣಗಳ ಮಧ್ಯೆ ನಡೆಸುವ ದೊಂಬರಾಟವೇ ಹುದುಗಿನ ಕ್ರಿಯೆ, ಇದೇ ಮಾದಕ ಪೇಯಗಳ ಮೂಲ.

ಹುದುಗು ಹಾಕುವವರು ಮೊದಲು ಬಾರ್ಲಿಯನ್ನು ಬೆಚ್ಚನೆಯ ನೀರಿನಲ್ಲಿ ನೆನೆಹಾಕದ ಹೊರತು ಕಿಣ್ವಗಳು ಅದನ್ನೇನೂ ಮಾಡಲಾರವು. ಎಂದರೆ ಎನ್ಜೈಮುಗಳು ಬಿಡುಗಡೆಯಾಗುವಷ್ಟು ಧಾನ್ಯ ಮೊಳೆತಾಗ ಮಾತ್ರ ಅದರಲ್ಲಿರುವ ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸಬಲ್ಲವು ಈ ಕಿಣ್ವಗಳು.

ಮದ್ಯಸಾರ ವಿಷವಸ್ತುವಾದ್ದರಿಂದ ಹುದುಗು ಬರಿಸುವ ಕ್ರಿಯೆಗೆ ತನ್ನದೇ ಆದ ಪರಿಮಿತಿಯುಂಟು. ಮದ್ಯಸಾರದ ಬಲವರ್ಧನೆ ೧೪% ಮುಟ್ಟಿದಾಗ ಅಥವಾ ಇದರಲ್ಲಿನ ಶರ್ಕರಾಂಶ ಕೊನೆಗೊಂಡಾಗ ಸಂತಾನಾಭಿವೃದ್ಧಿಯಾಗುವ ಯೀಸ್ಟ್ ಸಹ ಕೊನೆಗೊಂಡು ಹುದುಗಿನ ಕ್ರಿಯೆಯೂ ನಿಂತುಹೋಗುತ್ತದೆ. ಹೆಚ್ಚು ಸಾರಯುಕ್ತ ಪೇಯ ಬೇಕಾದಲ್ಲಿ ಇದನ್ನು ಭಟ್ಟಿ ಇಳಿಸಬೇಕಾಗುತ್ತದೆ.

ಆಲ್ಕೋಹಾಲ್ ಶಬ್ದ ಹೇಗೆ ಬಂತೆನ್ನುವುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಅರಬ್ಬಿ ಭಾಷೆಯಲ್ಲಿ

ಆಲ್ಕೋಹಾಲ್ **(Al-Kohal)** ಎಂದರೆ ನುಣ್ಣಗೆ ಅರೆದ ಆಂಟಿಮನಿ. **(Antimony).** ಅಂದವನ್ನು ಹೆಚ್ಚಿಸಿಕೊಳ್ಳಲು ಈ ರಸಾಯನವನ್ನು ಹಲವು ವಸ್ತುಗಳೊಂದಿಗೆ ಅರೆದು ಕಣ್ಣಿಗೆ ಹಚ್ಚಿಕೊಳ್ಳುತ್ತಿದ್ದರು ಅರಬ್ಬರು.ಅದು ಕ್ರಮೇಣ ಅರ್ಥ ವಿಸ್ತಾರ ಹೊಂದಿ ಇಂದಿನ ಅರ್ಥವನ್ನು ಪಡೆಯಿತು.

ಇದುವರೆಗೆ ದೊರೆತಿರುವ ದಾಖಲೆಗಳ ಪ್ರಕಾರ ಮೊದಲು ಭಟ್ಟಿ ಇಳಿಸಿದವರು ಮಧ್ಯ ಯುಗದಲ್ಲಿ ಇಟಲಿಯ ಸೋಲೆರ್ನೋವಿನ ವೈದ್ಯ ಶಾಲೆಯವರು. ಔಷಧಿಯೆಂದೇ ಪರಿಗಣಿಸಲಾದ ಈ ದ್ರಾಕ್ಷಾರಸವನ್ನು ಕುದಿಸಿ, ಹಬೆಯನ್ನು ತಣಿಸಿ, ಸಾರವನ್ನು ಮತ್ತಷ್ಟು ತೀಕ್ಷ್ಣಗೊಳಿಸಲಾಯಿತು. ಸ್ಪಾನಿಷ್ ಪಂಡಿತನೊರ್ವ ಈ ಒರಟು ಬ್ರಾಂದಿಗೆ ('ಆಕ್ವಾ ವಿಟೆ') ಜೀವಜಲ ಎಂದು ನಾಮಕರಣ ಮಾಡಿದ.

ಭಟ್ಟಿ ಇಳಿಸಿದ ಮದ್ಯಕ್ಕೆ ರಶಿಯನ್ನರು ವೋಡ್ಕಾ ಎನ್ನುತ್ತಾರೆ. ಜುನಿಪರ್ ಮರದ ಎಲೆಗಳ ಸುವಾಸನೆ ಇರುವ ಇದನ್ನು ಹಾಲೆಂಡಿನವರು ಜಿನೆವರ್ ಎಂದರು. ಫ್ರೆಂಚರು ಇದನ್ನೇ ಜಿನಿವ್ರೇ ಎಂದರೆ, ಬ್ರಿಟಿಷರು ಇದನ್ನು ಜಿನ್ ಎಂದು ಮೊಟಕುಗೊಳಿಸಿದರು ಹಾಗೂ ಸುಟ್ಟು ಕರಕಾದ ಓಕ್ ಪೀಪಾಯಿ ಮತ್ತು ಬೆಂಕಿಯಿಟ್ಟ ಪೀಟ್ (ಒಂದು ವಿಧದ ಪಳೆಯುಳಿಕೆ) ಹೊಗೆಯ ಮೂಲಕ ಹಾಯಿಸಿ ಅದನ್ನು ವ್ಹಿಸ್ಕಿ ಎಂದರು.



ಎಡಗೈಯಲ್ಲಿ ಹಿಡಿದದ್ದು ಆರೋಗ್ಯಕರ ಹೃದಯ. ಬಲಗೈಯಲ್ಲಿರುವುದು ಮಿತಿಮೀರಿದ ಕುಡಿತದಿಂದ ಊದಿಕೊಂಡಿದೆ.

ಮದ್ಯಸಾರಗಳಲ್ಲಿ ಅನೇಕ ವಿಧಗಳಿವೆ: ಮೂಲತಃ ಹಸಿ ಮರದ ತುಂಡಿನಿಂದ ತಯಾರಿಸಿದ ಮೆಥೆನಾಲ್ (ಈಗ ಮಿಥೇನ್ ಅನಿಲದಿಂದ)ಅನ್ನು ಫರ್ಮೋಲ್‌ಡಿಹೈಡ್ ಆಗಿ ಪರಿವರ್ತಿಸಿ ನಂತರ ಪ್ಲಾಸ್ಟಿಕ್ ತಯಾರಿಸುವರು. ಮೆಥೆನಾಲನ್ನು ಕುಡಿದರೆ ದೃಷ್ಟಿಯ ನರಗಳು ದುರ್ಬಲಗೊಂಡು ಅಂಧತ್ವ ಉಂಟಾಗುತ್ತದೆ. ಎಥಿಲೀನ್ ಗ್ಲಾಯ್ಕೋಲ್ ಅನ್ನು ಪದಾರ್ಥಗಳು ಹೆಪ್ಪುಗಟ್ಟದಿರಲು ಉಪಯೋಗಿಸುವರು. ಐಸೋಪ್ರೋಪೆನಾಲ್ ಅನ್ನು ರಬ್ಬಿಂಗ್ ಆಲ್ಕೋಹಾಲ್ ಆಗಿ ಉಪಯೋಗಿಸುವರು.

ಹಣ್ಣುಗಳು, ಬೆರ್ರಿಗಳು ಸಮುದ್ರದ ಕೆಂಪು ಪಾಚಿ, ಗುಲಾಬಿ ಮತ್ತು ಜಿರೇನಿಯಮ್ ಎಣ್ಣೆಗಳು ಮದ್ಯಸಾರದಿಂದ ಕೂಡಿವೆ. ಕಿತ್ತಳೆ ಮತ್ತು ಟೊಮೆಟೊ ರಸಗಳಲ್ಲಿ ಅಲ್ಪಪ್ರಮಾಣದ ಎಥೆನಾಲ್ ಇದೆ. ಪಾಶ್ಚಾತ್ಯ ದೇಶಗಳಲ್ಲಿ ಎಥೆನಾಲನ್ನು (ಗ್ಯಾಸೊಹಾಲ್) ವಾಹನಗಳ ಇಂಧನವಾಗಿ ಉಪಯೋಗಿಸುವರು. ಇಷ್ಟೇ ಅಲ್ಲ, ಇದು ಅನೇಕ ಪದಾರ್ಥಗಳನ್ನು ಕರಗಿಸಬಲ್ಲ ದ್ರಾವಣವೂ ಹೌದು. ಗೋಡೆ ಮತ್ತು ಪೀಠೋಪಕರಣಗಳಿಗೆ ಬಳಿಯುವ ಬಣ್ಣ, ಪಾಲಿಶ್, ವಾರ್ನಿಶ್ ಮತ್ತು ಮೆರುಗೆಣ್ಣೆಗಳನ್ನು ತಯಾರಿಸಲು ಮೆಥೆನಾಲ್ ಬೇಕೇ ಬೇಕು. ಸುಗಂಧ ದ್ರವ್ಯಗಳು ಮತ್ತು ಆಹಾರಕ್ಕೆ ರುಚಿ ಮತ್ತು ಸುವಾಸನೆಯನ್ನುಂಟುಮಾಡುವ ಚಂಚಲ ದ್ರವ್ಯಗಳ ತಯಾರಿಕೆಯಲ್ಲಿ ಅದು ಬೇಕು.

ಬೀಯರ್-ಸೆರೆಯ ತಯಾರಿಕೆ ಬಹಳ ಸುಲಭ. ಈಗ ದೊರೆಯುತ್ತಿರುವ ಬೀಯರ್ ಬಹಳ ತೆಳು. ಯೀಸ್ಟ್ ಪರಿವರ್ತಿಸಿದ ಸಾರಕ್ಕೆ ಅಮೈನೊ ಆ್ಯಸಿಡ್ ಮತ್ತು ಅವಶ್ಯಕವಾದ ಅನ್ನಾಂಗ 'ಬಿ'ಯನ್ನು ಹುದುಗು ಹಾಕಿದ ಬಾರ್ಲಿಯು ಒದಗಿಸುತ್ತದೆ. ಅಷ್ಟೇ ಅಲ್ಲ, ಬಾರ್ಲಿಯಲ್ಲಿ ವಿಷಯುಕ್ತ ವಸ್ತುಗಳನ್ನು ಯೀಸ್ಟ್ ವಿಷರಹಿತಗೊಳಿಸಿ ರುಚಿಗೊಳಿಸುತ್ತದೆ. ಜೀವನದ ಕಷ್ಟ-ಕಾರ್ಪಣ್ಯಗಳಿಂದ ಪರಿಹಾರ ಪಡೆಯಲು ಮತ್ತು ಕೊಳಕು ನೀರನ್ನು ಕುಡಿಯುವ ಬದಲು ಅಂದಿನ ಪಾಶ್ಚಾತ್ಯ ಜನಾಂಗ ಸುರೆಗೆ ಮೊರೆ ಹೋದದ್ದು ಒಂದು ಚಾರಿತ್ರಿಕ ಸತ್ಯ. ಯಹೂದ್ಯರು ಬಾಯಾರಿದಾಗಲೆಲ್ಲ ಮದ್ಯವನ್ನು ಕುಡಿಯುತ್ತಿದ್ದರು. ಸುಖದ ಮರೀಚಿಕೆಯ ಬೆನ್ನಟ್ಟಲು ಹಾಗೂ ಹುಟ್ಟುಹಬ್ಬ, ಸಾವು, ಹಬ್ಬ ಹುಣ್ಣಿಮೆಯ ಸಂದರ್ಭಗಳಲ್ಲಿ ಪಾಶ್ಚಾತ್ಯ ಸಮಾಜದಲ್ಲಿ ಮದ್ಯ ಎಲ್ಲರ ಮನ್ನಣೆಗೂ ಪಾತ್ರವಾಗಿತ್ತು. ಹಳೆಯ ಒಡಂಬಡಿಕೆಯ ಧರ್ಮೋಪದೇಶಕರು ಮಿತಿ ಮೀರಿದ ಮದ್ಯಪಾನದ ವಿರುದ್ಧ ಅಂದೇ ಎಚ್ಚರಿಕೆಗಳನ್ನು ನೀಡಿದ್ದರು. ಅಷ್ಟೇ ಅಲ್ಲ, ಅತಿ ಕುಡಿತದ ಚಟವಿದ್ದ ತನ್ನ ಮಕ್ಕಳಿಗೆ ಮೋಸೆಸ್ ಮರಣದಂಡನೆಯನ್ನೇ ವಿಧಿಸಿದ್ದ. ಬಹುಶಃ ಜನಾಭಿಪ್ರಾಯಕ್ಕೆ ಮಣಿದು ಯಹೂದ್ಯ ರಬ್ಬಿಗಳು ಕಾಲಕ್ರಮೇಣ ತಮ್ಮ ನಿಲುವನ್ನು ಸಡಿಲಿಸಿದರು.

ಏಸುವು ನೀರನ್ನು ಮದ್ಯವನ್ನಾಗಿ ಪರಿವರ್ತಿಸಿ ಪವಾಡವನ್ನೇ ಗೈದ. ಮತ್ತು 'ಕೊನೆಯ ಭೋಜನ'ವೆಂದು ಅವನು ಕುಡಿದ ಮದ್ಯ ಅವನ ರಕ್ತದ ಗುರುತೇ ಆಗಿತ್ತೆಂದು ಪರಿಗಣಿಸಲಾಗಿದೆ. ಪ್ರಾಚೀನ ಮದ್ಯ ವಿನಿಗರ್‌ಯುಕ್ತವಾಗಿದ್ದು, ಅದನ್ನು ಪುನಃ ನೀರಿನೊಡನೆ ಬೆರೆಸಿ ತಿಳಿಗೊಳಿಸಲಾಗುತ್ತಿತ್ತು. ಕಾಲಕ್ರಮೇಣ ಪಾದ್ರಿಗಳು ದ್ರಾಕ್ಷಾರಸವನ್ನು ಹುದುಗು ಹಾಕುವ ಕಾರ್ಯವನ್ನು ಒಂದು ಕಲೆಯನ್ನಾಗಿಸಿ, ಪೀಪಾಯಿಗಳಲ್ಲಿ ಮದ್ಯವನ್ನು ಕೂಡಿಟ್ಟು ಹಳತುಗೊಳಿಸಲಾರಂಭಿಸಿದರು.

ಅತಿ ಕುಡಿತ ಹೃದಯದ ಸ್ನಾಯುಗಳನ್ನು ದುರ್ಬಲಗೊಳಿಸುತ್ತದೆ. ಆದರೂ ಹಿಡಿತದ ಮದ್ಯ ಸೇವನೆ ಹೃದ್ರೋಗ ಸಂಬಂಧ ಕಾಯಿಲೆಗಳನ್ನು ದೂರವಿಡಬಲ್ಲದು ಎಂಬುದು ಇತ್ತೀಚಿನ ವೈದ್ಯಕೀಯ ಅಭಿಪ್ರಾಯವಾಗಿದೆ. ಮದ್ಯಸಾರದಲ್ಲಿರುವ ಯಾವುದೋ ಒಂದು ಪದಾರ್ಥ ರಕ್ತದಲ್ಲಿನ **hdl** (ಒಳ್ಳೆಯ ಕೊಲೆಸ್ಟರಾಲ್) ಅಂಶವನ್ನು ಹೆಚ್ಚಿಸಿ ರಕ್ತನಾಳಗಳಲ್ಲಿ

ಕೊಬ್ಬು ಸೇರ್ಪಡೆಯಾಗದಂತೆ ತಡೆದು ಹೃದಯಾಘಾತವಾಗುವುದನ್ನು ತಪ್ಪಿಸುತ್ತದೆ. ಕುಡಿತವನ್ನು ಒಂದು ಅಥವಾ ಎರಡು ಪೆಗ್‌ಗಳಿಗೆ ಸೀಮಿತಗೊಳಿಸಿದರೆ- ಹೆಂಗಸರು ಇದಕ್ಕಿಂತ ಕಡಿಮೆ- ಕುಡಿತ ಕೆಟ್ಟದಲ್ಲ.

ಆದರೆ ಕುಡಿತವನ್ನು ಎಷ್ಟು ಮಂದಿ ಹಿಡಿತದಲ್ಲಿಟ್ಟುಕೊಳ್ಳಬಲ್ಲರು? ಮಿತಿ ಮೀರಿ ಕುಡಿಯುವುದೇ ಚಟವಾದಾಗ ಅಮೃತವೂ ವಿಷವಾಗಬಲ್ಲದು.

ಕುಡಿತದ ಕೆಮಿಸ್ಟ್ರಿ: ಮದ್ಯವು ರಕ್ತ ಪ್ರವಾಹದೊಡನೆ ಬೆರೆತ ಕೂಡಲೇ ತನ್ನ 'ಬುದ್ಧಿ ಬಾಗಿಸುವ' ಕ್ರಿಯೆಯನ್ನು ಆರಂಭಿಸುತ್ತದೆ. ಮಿದುಳನ್ನು ಪ್ರವೇಶಿಸಿದ ಕೆಲವೇ ನಿಮಿಷಗಳಲ್ಲಿ ನರಕೋಶಗಳನ್ನು ಮರಗಟ್ಟಿಸುತ್ತದೆ. ಹೀಗಾಗಿ ದೇಹಕ್ಕೆ ನೀಡುವ ಆದೇಶಗಳನ್ನು ನಿಧಾನಿಸುತ್ತದೆ. ಹೃದಯದಲ್ಲಿ ಮದ್ಯದ ಕುಗ್ಗಿಸುವ ಕ್ರಿಯೆಯನ್ನು ನಿಭಾಯಿಸುವ ಸಲುವಾಗಿ ಹೃದಯದ ಸ್ನಾಯುಗಳು ನಾಡಿಯ ಬಡಿತದ ವೇಗವನ್ನು ತೀವ್ರಗೊಳಿಸುತ್ತವೆ.

ಕುಡಿತ ಮುಂದುವರೆದರೆ ರಕ್ತ ಪ್ರವಾಹದಲ್ಲಿ ಮದ್ಯದ ಅಂಶ ಏರುತ್ತಾ ಹೋಗುತ್ತದೆ. ಮಾತನ್ನು, ದೃಷ್ಟಿಯನ್ನು, ಸ್ಥಿರತೆ ಮತ್ತು ನಿರ್ಣಾಯಕ ಶಕ್ತಿಯನ್ನು ಹತೋಟಿಯಲ್ಲಿಡಬಲ್ಲ ಮಿದುಳಿನ ನರಕೇಂದ್ರಗಳು ಯದ್ವಾತದ್ವಾ ವರ್ತಿಸಲಾರಂಭಿಸುತ್ತವೆ. ಇನ್ನಷ್ಟು ಮದ್ಯವನ್ನು ಸೇವಿಸಿದರೆ ಪ್ರಜ್ಞೆ ತಪ್ಪುತ್ತದೆ. ರಕ್ತ ಪ್ರವಾಹದಲ್ಲಿ ಮದ್ಯದ ಪ್ರಮಾಣ ಮಿತಿ ಮೀರಿದಾಗ ಅಮಲೇರಿದವನ ಉಸಿರಾಟ ಸ್ಥಗಿತಗೊಂಡು ಸಾವನ್ನಪ್ಪುತ್ತಾನೆ.

ಮಿತಿ ಮೀರಿದ ಕುಡಿತ ಹೃದ್ರೋಗ ಹಾಗೂ ಕ್ಯಾನ್ಸರಿಗೂ ಕಾರಣವಾಗಬಹುದು. ಯಕೃತ್ತಿನ ವೈಫಲ್ಯ ಕೊನೆಯ ಹಂತ. ಯಕೃತ್ತಿನಲ್ಲಿ ಮದ್ಯಾಂಶ ಹೆಚ್ಚಿದಂತೆಲ್ಲ, ಅದು ಕೊಬ್ಬನ್ನು ಶೇಖರಿಸಿಕೊಳ್ಳಲಾರಂಭಿಸುತ್ತದೆ. ಕೊಬ್ಬಿನ ಅಂಶ ಏರುತ್ತಿದ್ದಂತೆ ಯಕೃತ್ತು ಹಿಗ್ಗಲಾರಂಭಿಸಿ ಕೊನೆಗೊಂದು ದಿನ ಒಡೆದೇ ಹೋಗುತ್ತದೆ. ಅಥವಾ ಅದರಲ್ಲಿ ಗಂಟುಗಳಾಗಲಾರಂಭಿಸುತ್ತದೆ. ಈ ಗಂಟುಗಳು ಕ್ರಮೇಣ ಮಾಮೂಲು ಕೋಶಗಳನ್ನು ಸ್ಥಳಾಂತರಿಸುತ್ತವೆ. ದೀರ್ಘ ಕಾಲದ ಅತಿ ಮದ್ಯಪಾನ ಯಕೃತ್ತಿನಲ್ಲಿ ನಾರುಗಟ್ಟಿ ಅಥವಾ ಸ್ಕೀರೋಸಿಸ್ ಉಂಟುಮಾಡಿ ತತ್ಪರಿಣಾಮವಾಗಿ ಅಪಧಮನಿ ಹಾಗೂ ಮಲಿನ ರಕ್ತ ಪ್ರವಾಹಕ್ಕೆ ಅಡಚಣೆಯುಂಟಾಗಿ ಕುಡುಕ ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ. ●

ಅವನನ್ನು ಒಪ್ಪಿಸಬೇಕಾಗಿದೆ

ಮಹಾರಾಷ್ಟ್ರದಲ್ಲಿ ಹಿಂದೆ ರಾಜ್ಯಪಾಲರಾಗಿದ್ದ ಸಿ. ಸುಬ್ರಮ್ಮಣ್ಯಂ ಇನ್ನೂ ವಕೀಲಿವೃತ್ತಿ ನಡೆಸುತ್ತಿದ್ದ ಕಾಲ. ಅವರು ಒಂದು ಸಲ ಕೊಲೆಯ ಆರೋಪವನ್ನು ಹೊತ್ತವನ ಪರವಾಗಿ ವಾದಿಸಿ ಖುಲಾಸೆ ಮಾಡಿಸಿದರು. ನ್ಯಾಯಾಧೀಶರು ತೀರ್ಪು ಹೇಳಿದರೂ ಆರೋಪಿ ಕಟಕಟೆಯಲ್ಲೆ ನಿಂತಿದ್ದ. ಆಗ ನ್ಯಾಯಾಧೀಶರು ಸುಬ್ರಹ್ಮಣ್ಯಂರಿಗೆ "ಕಕ್ಷಿದಾರ ಇನ್ನೂ ಕಟಕಟೆಯಲ್ಲೆ ನಿಂತಿದ್ದಾನಲ್ಲಾ?" ಎಂದು ಕೇಳಿದರು.

ಆಗ ಸುಬ್ರಹ್ಮಣ್ಯಂ "ನ್ಯಾಯಾಧೀಶರೆ, ಆತ ನಿರ್ದೋಷಿಯೆಂದು ನಿಮ್ಮನ್ನು ಒಪ್ಪಿಸಿದೆ. ಆದರೆ ಅವನನ್ನು ಇನ್ನೂ ಒಪ್ಪಿಸಬೇಕಾಗಿದೆ" ಎಂದರು ನಗುತ್ತಾ.

ಅಲ್ಲಿದ್ದವರೆಲ್ಲಾ ನಕ್ಕರು. ಕಕ್ಷಿದಾರನ ಅದೃಷ್ಟ ಚೆನ್ನಾಗಿತ್ತು. ನ್ಯಾಯಾಧೀಶರು ಆಗಲೇ ತೀರ್ಪು ಹೇಳಿದ್ದರಿಂದ ಯಾವ ಪ್ರಮಾದವೂ ಆಗಲಿಲ್ಲ.

- ಕೋಲಾರ್ ಕೃಷ್ಣ ಅಯ್ಯರ್

ನೆನಪು ನೆರಳಿನಲ್ಲಿ

ನಾನಾಗ ಪಿಯುಸಿ ವಿದ್ಯಾರ್ಥಿನಿ. ಶೇಷಾದ್ರಿ ಎಂಬುವವರು ನಮಗೆ ಫಿಸಿಕ್ಸ್‌ಗೆ ಜ್ಯೂನಿಯರ್ ಲೆಕ್ಚರ್ ಆಗಿ ಬಂದರು. ಆಗ ತಾನೆ ಎಂಎಸ್ಸಿ ಮುಗಿಸಿದ್ದರಂತೆ. ಮೇಧಾವಿ, ರ‍್ಯಾಂಕ್ ವಿಜೇತರು ಎಂದು ತಿಳಿದುಬಂದಿತು. ನೋಡಲು ಮಾತ್ರ ೧೬-೧೭ ವರ್ಷದ ಹುಡುಗನಂತಿದ್ದರು.

ಅವರು ಪ್ರಾಕ್ಟಿಕಲ್ಸ್‌ಗೆ ಸಂಬಂಧಪಟ್ಟ ಥಿಯರಿಯನ್ನು ವಿವರಿಸುವರು. ನಮಗೆ ಅವರನ್ನು ಕಂಡರೆ ಮರ್ಯಾದೆ ಇದ್ದರೂ ಇತರ ಹಿರಿಯ ಲೆಕ್ಚರರ್‌ಗಳಲ್ಲಿದ್ದ ಭಯಭಕ್ತಿ ಇರಲಿಲ್ಲ.

ಪರೀಕ್ಷೆಗೆ ಒಂದೂವರೆ ತಿಂಗಳು ಇದ್ದಾಗ ನಮ್ಮ ಒಬ್ಬ ಫಿಜಿಕ್ಸ್ ಲೆಕ್ಚರರಿಗೆ ಬಹಳ ಅಸೌಖ್ಯವಾದ ಕಾರಣ ಶೇಷಾದ್ರಿಯವರು ಥಿಯರಿ ಕ್ಲಾಸ್ ಸಹ ತೆಗೆದುಕೊಂಡರು. ಬಿಡುವಿದ್ದರೂ ಸ್ಪೆಷಲ್ ಕ್ಲಾಸಿಗಾಗಿ ದಿನಾಲು ಕಾಲೇಜಿಗೆ ಹೋಗುವ ಪರಿಸ್ಥಿತಿ. ಅಂದು ಭಾನುವಾರ. ೮ ರಿಂದ ೧೦ ರವರೆಗೆ ಒಬ್ಬರ ತರಗತಿ. ನಂತರ ಶೇಷಾದ್ರಿ ಅವರು ಪಾಠ ಮಾಡತೊಡಗಿದರು. ಲೆಕ್ಚರ್ ಮಾಡಿ ಅಭ್ಯಾಸವಿಲ್ಲದ ಕಾರಣ ವಿಷಯ ಒತ್ತಿ ಹೇಳುವಾಗ ಸ್ವಲ್ಪ ಅರಚುವಂತೆ ಮಾತಾಡುವರು. ಗಂಟಲ ನರ ಉಬ್ಬಿ ತೋರುವುದು. ಸತತವಾಗಿ ಮಾತನಾಡಿ ಅವರ ಗಂಟಲು ಕಟ್ಟಬಂದಿತು. ೧೫ ನಿಮಿಷ ವಿಶ್ರಾಂತಿ ನಂತರ ಮುಂದುವರಿಸುವುದಾಗಿ ಹೇಳಿದರು. ನಾವು ಆಗ ಗಡಿಯಾರ ನೋಡಿದೆವು. ಮಧ್ಯಾಹ್ನ ೨ ಗಂಟೆ. ೮ ಗಂಟೆಗೆ ಬಂದ ನಮಗೆ ಹಸಿವು, ಸುಸ್ತು, ಒಂದೇ ಸಮನೋಟ್ಸು ಬರೆದುಕೊಂಡು ಕೈ ನೋವು. "ಇವತ್ತಿಗೆ ಸಾಕು" ಎಂದೆವು. ಅವರು, "ಎರಡೇ ಎರಡು ಸಣ್ಣ ಚಾಪ್ಟರ್ ಬಾಕಿ, ಅರ್ಧ ಗಂಟೆಯಲ್ಲಿ ಮುಗಿಸಿ ಬಿಡುತ್ತೇನೆ; ಪ್ಲೀಸ್ ಬನ್ನಿ,"ಎಂದು ನುಡಿದರು. ನಾವು, "ತುಂಬಾ ಸುಸ್ತಾಗಿದೆ ಸಾರ್, ನಾಳೆ ತೆಗೆದುಕೊಳ್ಳಿ,"ಎಂದು ಹೇಳಿಬಿಟ್ಟೆವು.

ಏನೋ ಕಾರಣ ಅವರು ಮತ್ತೆ ಸ್ಪೆಷಲ್ ಕ್ಲಾಸ್ ತೆಗೆದುಕೊಳ್ಳಲು ಆಗಲಿಲ್ಲ. ಆದರೂ ಇತರ ಸಂದರ್ಭದಲ್ಲಿ ಸಹಾಯ ಮಾಡಿದರು. ತನ್ನ ಮಾತು ಕೇಳಲಿಲ್ಲವೆಂದು ಮನಸ್ಸಿನಲ್ಲಿ ಕಹಿ ಇಟ್ಟುಕೊಳ್ಳಲಿಲ್ಲ.

ವಾರ್ಷಿಕ ಪರೀಕ್ಷೆ ಮುಗಿದು ನಾವು ಮೊದಲ ಬಿಎಸ್ಸಿಗೆ ಬಂದೆವು. ಮೊದಲ ದಿನ ಮೊದಲ ತರಗತಿಯಲ್ಲಿ ನಮ್ಮ ಗಣಿತದ ಲೆಕ್ಚರರ್ ಒಬ್ಬರು, "ಎಲ್ಲರೂ ಎದ್ದು ನಿಂತು ಎರಡು ನಿಮಿಷ ಮೌನ ಆಚರಿಸಿ,"ಎಂದರು. ಯಾರಿಗೆ ಏನಾಯಿತು ಎಂಬ ದಿಗ್ಭ್ರಮೆ ನಮಗೆ. ವಿಚಾರಿಸಿದಾಗ ಕಳೆದ ತಿಂಗಳು ಈಜಲು ಹೋಗಿ ಶ್ರೀ ಶೇಷಾದ್ರಿ ಮುಳುಗಿ ತೀರಿಹೋದರು ಎಂದು ತಿಳಿಯಿತು.

ಇಷ್ಟು ವರ್ಷಗಳಾದರೂ ನನಗೆ, ಪಾಪ ಅವರು ಶ್ರದ್ಧೆಯಿಂದ ಪಾಠ ಮುಗಿಸುತ್ತೇನೆಂದು ಸ್ವಲ್ಪ ಕಾಲ ನಮ್ಮನ್ನು ಇರಲು ಕೇಳಿದಾಗ ನಾವು ಅವರ ಮಾತನ್ನು ಕೇಳಲಿಲ್ಲವಲ್ಲಾ ಎಂದು ಮನಸ್ಸಿಗೆ ದುಃಖವಾಗುತ್ತದೆ.

ನಳಿನಾ ಶ್ರೀರಾಘವನ್

ಸುಮಾರು ಐವತ್ತೈದು ವರ್ಷಗಳ ಹಿಂದೆ ನಡೆದ ಘಟನೆಯದು. ನನ್ನ ಅಜ್ಜ ಪಂಢರಪುರದ ವಿಠ್ಠಲನ ಭಕ್ತರಾಗಿದ್ದರು. ಪ್ರತಿ ವರ್ಷ ಕಾರ್ತೀಕ ಏಕಾದಶಿಯಂದು ಪಂಢರಪುರಕ್ಕೆ ಹೋಗಿ ಪಾಂಡುರಂಗನ ದರ್ಶನ ಪಡೆದು ಪೂಜೆ ಮುಗಿಸಿಕೊಂಡು ಕಟ್ಟುಪವಾಸವನ್ನು ಮಾಡಿ ಭಜನೆ ಕೀರ್ತನೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ವಿಜಾಪುರದ ಹತ್ತಿರದ ಹಳ್ಳಿಯೊಂದರಲ್ಲಿ ಅವರು ಇರುತ್ತಿದ್ದರು. ಆಗಿನ ಕಾಲದಲ್ಲಿ ಊರಿಂದೂರಿಗೆ ಹೋಗುವ ಬಸ್ಸುಗಳೂ ಸಾಕಷ್ಟಿರಲಿಲ್ಲ. ಒಳ್ಳೆಯ ಕುದುರೆ ಸವಾರರಾದ ನನ್ನ ಅಜ್ಜ ಕುದುರೆಯ ಮೇಲೆ ಪಂಢರಪುರಕ್ಕೆ ಹೋಗುತ್ತಿದ್ದರು. ವೇಗವಾಗಿ ಹೋದರೆ ೨-೩ ದಿನದಲ್ಲೇ ಅಲ್ಲಿಗೆ ಮುಟ್ಟಬಹುದಾಗಿತ್ತು. ಈ ನಿಯಮವನ್ನು ಅವರು ಬಹಳ

ವರ್ಷಗಳ ವರೆಗೆ ತಪ್ಪದೇ ನಡೆಸಿಕೊಂಡು ಬಂದಿದ್ದರು: ಒಂದು ಸಲ ಯಾವುದೋ ಕಾರಣದಿಂದಾಗಿ ಅವರಿಗೆ ಕಾರ್ತಿಕಮಾಸದ ಯಾತ್ರೆಗೆ ಹೊರಡಲು ಸ್ವಲ್ಪ ತಡವಾಗಿತ್ತು. ಆದರೂ ಏಕಾದಶಿಯಂದಾದರೂ ಮುಟ್ಟುವ ದೃಢಸಂಕಲ್ಪದಿಂದ ಹೊರಟದ್ದರು.

ನಮ್ಮ ತೋಟದ ಮನೆಯಿಂದ ಮುಖ್ಯ ರಸ್ತೆಗೆ ಎರಡು ಮೈಲು ದೂರ. ಅಲ್ಲಿಗೆ ಅವರು ಬಂದಾಗ ದಾರಿಬದಿಯಲ್ಲಿ ಕರುಣಾಜನಕ ದೃಶ್ಯವೊಂದು ಕಂಡಿತು. ಏನೆಂದು ವಿಚಾರಿಸಲು ನನ್ನ ಅಜ್ಜ ಕೆಳಗಿಳಿದರು. ವೇದನೆಯನ್ನು ಅನುಭವಿಸುತ್ತ ಚಡಪಡಿಸುತ್ತಿದ್ದ ಗರ್ಭಿಣಿಯೊಬ್ಬಳೊಂದಿಗೆ ಓರ್ವ ವೃದ್ಧ ಹಾಗೂ ಹೆಣ್ಣುಮಗಳು ನಿಂತು, ಅಸಹಾಯಕರಾಗಿ, ಯಾವುದಾದರೂ ವಾಹನದ ದಾರಿ ನೋಡುತ್ತಿದ್ದರು. ಹಳ್ಳಿಯಲ್ಲಿ ಆ ಬಸುರಿಯ ಹೆರಿಗೆ ಮಾಡಿಸಲಾಗದ ಸೂಲಗಿತ್ತಿಯು ವಿಜಾಪುರದ ಆಸ್ಪತ್ರೆಗೆ ಅವಳನ್ನು ಕರೆದೊಯ್ಯಿರಿ ಎಂದು ಹೇಳಿಬಿಟ್ಟದ್ದಳು. ನಡೆಯಲೂ ಸಾಧ್ಯವಾಗದ ಆ ಬಸುರಿಯನ್ನು ವಿಜಾಪುರಕ್ಕೆ ಕೊಂಡು ಹೋಗಲು ಬಸ್ಸು ಅಥವಾ ಯಾವುದೇ ವಾಹನ ಅವರಿಗೆ ಸಿಕ್ಕಿರಲಿಲ್ಲ. ಆ ವೃದ್ಧರು ತಮ್ಮನ್ನು ಹೇಗಾದರೂ ಮಾಡಿ ವಿಜಾಪುರದ ಆಸ್ಪತ್ರೆಗೆ ಮುಟ್ಟಸಿರಿ ಎಂದು ಬೇಡಿಕೊಂಡಾಗ, ಇದನ್ನೆಲ್ಲ ಮಾಡುತ್ತ ಕುಳಿತರೆ ಊರು ಮುಟ್ಟುವುದು ಮತ್ತೂ ತಡವಾದೀತು; ಕಾರ್ತಿಕ ಏಕಾದಶಿಯ ಪೂಜೆ ತಪ್ಪಿಹೋದೀತೆಂಬ ಭಾವನೆ ಅಜ್ಜನ ಮನಸ್ಸಿನಲ್ಲಿ. ಈ ಭಾವನೆ ಕ್ಷಣಕಾಲ ಮಿಂಚಿಹೋದರೂ ಇದೂ ಪಾಂಡುರಂಗನ ಇಚ್ಛೆಯಿರಬಹುದು ಎಂದು ಸಮಾಧಾನಿಸಿಕೊಂಡರು. ಆ ಬಸುರಿಯನ್ನು ಕುದುರೆಯ ಮೇಲೆ ಮೆತ್ತೆ ಹಾಕಿ ಕುಳ್ಳರಿಸಿ ತಾವು ಮೂವರೂ ನಡೆದುಕೊಂಡು ಅಲ್ಲಿಂದ ೬ ಮೈಲು ದೂರವಿದ್ದ ವಿಜಾಪುರದ ಆಸ್ಪತ್ರೆ ಸೇರಿದರು. ಆಸ್ಪತ್ರೆ ಸೇರಿದ ಅರ್ಧ ಗಂಟೆಯಲ್ಲೇ ಹೆರಿಗೆಯಾಯಿತು. ದುಂಡು ದುಂಡಾದ, ಕಪ್ಪಗಿದ್ದರೂ ಸುಂದರವಾದ ಮಗು. ಏನಾದರೂ ಆಗಲಿ, ಮಗು, ತಾಯಿಯ ಪ್ರಾಣ ಉಳಿಯಿತಲ್ಲ ಎಂಬ ಸಂತೋಷದಿಂದ ನನ್ನ ಅಜ್ಜ ಮುಂದೆ ಸಾಗಿದರು. ಆಗಲೇ ಸಾಕಷ್ಟು ತಡವಾಗಿತ್ತು. ಪೂಜೆ ತಪ್ಪುವದೇನೋ ಎಂಬ ಅಳುಕು ಅಜ್ಜನಿಗಿತ್ತಾದರೂ, ಕುದುರೆ ತನ್ನ ಯಜಮಾನನ ಮನಸ್ಸರಿಯಿತೇನೋ, ವೇಗವಾಗಿ ಓಡಿ ಏಕಾದಶಿಯ ನಸುಕಿನಲ್ಲೇ ಅವರನ್ನು ಪಂಢರಪುರಕ್ಕೆ ತಂದುಬಿಟ್ಟಿತು. ಆತ್ಮಾನಂದದಿಂದ ನನ್ನ ಅಜ್ಜ ನದೀ ಸ್ನಾನ ಮುಗಿಸಿ ಗುಡಿಗೆ ಬಂದಾಗ ಪೂಜೆ ನಡೆದಿತ್ತು. ಪಾಂಡುರಂಗನ ದರ್ಶನ ಪಡೆದು ಅವನ ಕಾಲುಗಳಿಗೆ ಹಣೆಯಿಟ್ಟು ಮತ್ತೆ ತಲೆಯೆತ್ತಿ ನೋಡಿದಾಗ ಪಾಂಡುರಂಗನ ಮುಖದಲ್ಲಿ, ಆ ಸುಂದರ ಮಗುವಿನ ಮುಖ ಕಂಡಂತೆ ಭಾಸವಾಯಿತಂತೆ ನನ್ನ ಅಜ್ಜನಿಗೆ. ತಾವು ಮಾಡಿದ ಒಂದು ಸತ್ಕಾರ್ಯ ಪಾಂಡುರಂಗನಿಗೆ ಮೆಚ್ಚಿಗೆಯಾಯಿತೆಂಬ ಸಂತೋಷ, ಧನ್ಯತೆಯಿಂದಲೇ ಊರಿಗೆ ಮರಳಿದರು ಅಜ್ಜ.

ಜಯಶ್ರೀ ಎಸ್. ದೇಶಪಾಂಡೆ

ಆಗ ನಾನಿನ್ನೂ ೫ ನೇ ತರಗತಿಯಲ್ಲಿ ಓದುತ್ತಿದ್ದೆ. ತಾಯಿಯ ಆರೋಗ್ಯ ಸರಿಯಿಲ್ಲದಿದ್ದರಿಂದ ಮೈಸೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪದೇ ಪದೇ ನಮ್ಮ ಊರಿನಿಂದ ಮೈಸೂರಿಗೆ ಹೋಗಲು ಸಾಧ್ಯವಿಲ್ಲದಿದ್ದರಿಂದ, ಮೈಸೂರಿನಲ್ಲೇ ಒಂದು ಸಣ್ಣ ಕೊಠಡಿಯಲ್ಲಿ ತಂದೆಯವರನ್ನು ಹೊರತುಪಡಿಸಿ ಸಂಸಾರ ವಾಸ್ತವ್ಯ ಹೂಡಿತ್ತು. ನಮ್ಮ ಸಂಸಾರವನ್ನು ಕಿತ್ತು ತಿನ್ನುವ ಬಡತನದ ಕಾಲವದು. ತಂದೆಯವರ ಸಂಪಾದನೆಯಲ್ಲಿ ತಾಯಿಯವರ ಔಷಧಿ ಮತ್ತು ಸಂಸಾರ ಎರಡನ್ನೂ ದೂಡುವುದು ಬಲು ಪ್ರಯಾಸದ ಮಾತಾಗಿತ್ತು. ಈಗಿನ ಬಲ್ಲಾಳ್ ಸರ್ಕಲ್‌ನಲ್ಲಿರುವ ಲಕ್ಷ್ಮೀಪುರಂ ಬಾಲಕರ ಶಾಲೆಯಲ್ಲಿ ನಾನು ೫ ನೇ ಈಯತ್ತೆಯಲ್ಲಿ ಓದುತ್ತಿದ್ದೆ. ಸಮವಸ್ತ್ರ ಹೊಲಿಸಲಾಗದೆ ಪ್ರತಿದಿನ ಶಿಕ್ಷೆಗೆ ಒಳಗಾಗಬೇಕಾಗುತ್ತಿತ್ತು. ಒಂದು ದಿನ ಯಾವುದೋ ವಿಚಾರಕ್ಕೋಸ್ಕರ ನನ್ನನ್ನು ನೋಡಲು ಬಂದ ತಾಯಿ ನಾನು ಶಿಕ್ಷೆಗೆ ಒಳಗಾಗಿದ್ದನ್ನು ನೋಡಿದಳು. ಶಿಕ್ಷೆಯೆಂದು ಇಡೀ ಮೈದಾನವನ್ನು ನಾಲ್ಕು ಸುತ್ತು ಹೊಡೆದು ಓಡಿಬಂದು ತಾಯಿಯನ್ನು ಬಾಚಿತಬ್ಬಿ ಅಳಲು ಶುರುಮಾಡಿದೆ. ನನ್ನನ್ನು ಸಂತೈಸಲೂ ಆಗದ ತಾಯಿ ತಾನೂ ಅಳಲು ಪ್ರಾರಂಭಿಸಿದಳು. ನಮ್ಮಿಬ್ಬರನ್ನೂ ನೋಡಿದ ಶಿಕ್ಷಕರು ಭಾವುಕರಾದರು. ಇದಾದ ಒಂದೆರಡು ದಿನಗಳಲ್ಲೇ ಸಮವಸ್ತ್ರವನ್ನು ಧರಿಸಿ ಹುರುಪಿನಿಂದ ಶಾಲೆಯ ಕಡೆ ಹೆಜ್ಜೆ ಹಾಕಿದ್ದೆ. ಈಗಲೂ [illegible] ನಿಮಿತ್ತ ಲಕ್ಷ್ಮೀಪುರಂನ ಶಾಲೆಯ ಕಡೆ ಹೋದಾಗಲೆಲ್ಲ ಹಳೆಯದೆಲ್ಲಾ ನೆನಪಾಗಿ ಒಂದೆರಡು ಕ್ಷಣ ಭಾ[illegible]ನಾಗಿ ಬಿಡುತ್ತೇನೆ.

ಜಿ.ಎಸ್. ಬ[illegible]ಪ್ರಸನ್ನ

ವಾಲ್ಟರ್ಸ್: ಶರವೇಗದ ಶತಕ

ವೆಸ್ಟ್‌ಇಂಡೀಸ್ ವಿರುದ್ಧ ೧೯೬೮-೬೯ರಲ್ಲಿ ನಡೆದ ಸರಣಿಯ ನೆನಪು. ಎರಡನೆ ಬ್ರಾಡ್‌ಮನ್ ಎಂದು ಹಣೆಪಟ್ಟಿ ಕಟ್ಟಿಕೊಂಡಿದ್ದ ಡಗ್ ವಾಲ್ಟರ್ಸ್ ಆಗ ನಾಲ್ಕು ಟೆಸ್ಟ್‌ಗಳ ಸರಣಿಯಲ್ಲಿ ಒಂದು ದ್ವಿಶತಕ (೨೪೨) ಹಾಗೂ ಶತಕ (೧೦೩) ಸೇರಿದಂತೆ ಒಟ್ಟು ೬೯೯ ರನ್‌ಗಳನ್ನು ಬಾರಿಸಿ ಬ್ಯಾಟಿಂಗ್ ಸರಾಸರಿಯಲ್ಲಿ ಮೇಲಕ್ಕೇರಿದ್ದ. ಇದಾದ ನಂತರ ೧೯೭೨-೭೩ರ ವೆಸ್ಟ್‌ಇಂಡೀಸ್ ಪ್ರವಾಸ ಕೈಕೊಂಡ ಆಸ್ಟ್ರೇಲಿಯಾ ತಂಡದಲ್ಲಿ ಸ್ಥಾನ ಪಡೆದಿದ್ದ ವಾಲ್ಟರ್ಸ್ ಅಲ್ಲಿಯೂ ಪ್ರತಿ ಟೆಸ್ಟ್‌ನಲ್ಲಿ ಸರಾಸರಿ ೭೧ ರನ್ ಗಳಿಸಿ ಕರಿಬಿಯನ್ನರ ನೆಲದಲ್ಲಿ ತನ್ನ ಬ್ಯಾಟಿಂಗ್ ಸಾಮರ್ಥ್ಯ ಪರಿಚಯಿಸಿದ್ದ.

ಅದರಲ್ಲಿಯೂ ಮುಖ್ಯವಾಗಿ ಟ್ರಿನಿದಾದಿನ ಕ್ವೀನ್ಸ್ ಪಾರ್ಕ್ ಓವಲ್‌ದಲ್ಲಿ ನಡೆದ ಮೂರನೆ ಟೆಸ್ಟ್ ಪಂದ್ಯದ ಭೋಜನ ಹಾಗೂ ಚಹಾ ವಿರಾಮದ ಮಧ್ಯೆ ವಾಲ್ಟರ್ಸ್ ಗಳಿಸಿದ ಶತಕ ಅಂತಾರಾಷ್ಟ್ರೀಯ ಕ್ರಿಕೆಟ್ ಇತಿಹಾಸದಲ್ಲಿ ಹೊಸ ದಾಖಲೆಯನ್ನೇ ಬರೆಯಿತು. ಆಗ ಅಲ್ಲಿ ನರೆದಿದ್ದ ಪ್ರತಿಯೊಬ್ಬ ಕ್ರಿಕೆಟ್ ಅಭಿಮಾನಿಯ ಬಾಯಲ್ಲೂ ನಲಿಯುತ್ತಿದ್ದುದು ಒಂದೇ ಹೆಸರು ವಾಲ್ಟರ್ಸ್, ವಾಲ್ಟರ್ಸ್.

ಮೈದಾನದಲ್ಲಿ

ಕ್ವೀನ್ಸ್ ಪಾರ್ಕ್‌ದಲ್ಲಿ ಮೊದಲು ಬ್ಯಾಟಿಂಗ್ ಮಾಡಲು ಬಂದ ಕಾಂಗರೂ ತಂಡಕ್ಕೆ ಆರಂಭ ಚೆನ್ನಾಗಿರಲಿಲ್ಲ. ಪಂದ್ಯದ ಮೂರನೆ ಓವರ್‌ನಲ್ಲೇ ಕೀಥ್ ಬಾಯ್ಸ್ ಇನ್ನೂ ಖಾತೆ ತೆರೆಯದಿದ್ದ ಕೀಥ್ ಸ್ಟ್ಯಾಕ್‌ಪೋಲ್ ವಿಕೆಟ್ ಎಗರಿಸಿದ. ಆದರೆ ಗ್ರೆಗ್ ಚಾಪೆಲ್ (೫೬) ಮತ್ತು ಇಯಾನ್ ರೆಡ್‌ಪಾತ್ (೬೬) ಎರಡನೆ ವಿಕೆಟ್ ಜೊತೆಯಾಟದಲ್ಲಿ ೧೦೭ ರನ್ ಸೇರಿಸಿ ಆಸ್ಟ್ರೇಲಿಯದ ಹೋರಾ



ಕ್ರಿಕೆಟ್ ಪ್ರಿಯ

● ಆದಿಕೇಶವ

ಅಂದಿನ ಆಟ! ಇಂದಿನ ನೋಟ!

ವೆಸ್ಟ್‌ಇಂಡೀಸ್-ಆಸ್ಟ್ರೇಲಿಯ ಮೂರನೇ ಟೆಸ್ಟ್

ಸ್ಥಳ: ಕ್ವೀನ್ಸ್ ಪಾರ್ಕ್, ಓವಲ್ ಮೈದಾನ, ಟ್ರಿನಿದಾದ.

ದಿನಾಂಕ:

ಮಾರ್ಚ್ ೨೩, ೨೪, ೨೫, ೨೭, ೨೮.

೧೯೭೨-೭೩

ಟಕ್ಕೆ ಜೀವ ತುಂಬಿದರು.

ಭೋಜನ ವಿರಾಮದ ಕಡೆಯ ಓವರು ಮಾಡಲು ಬಂದ ಲಾನ್ಸ್‌ಗಿಬ್ಸ್ ಆಟಕ್ಕೆ ಕುದುರಿಕೊಂಡಿದ್ದ ಚಾಪೆಲ್‌ನನ್ನು ಉರುಳಿಸಿ ಆತಿಥೇಯರು ಸಮಾಧಾನದಿಂದ ಭೋಜನಕ್ಕೆ ತೆರಳುವಂತೆ ಮಾಡಿದ.

ಎರಡನೆ ವಿಕೆಟ್ ಬೀಳುವುದನ್ನೇ ಕಾಯುತ್ತಿದ್ದ ಡಗ್ ವಾಲ್ಟರ್ಸ್ ಪ್ಯಾಡ್ ಕಟ್ಟಕೊಂಡು ಮೈದಾನಕ್ಕಿಳಿದಾಗ ಆಟದ ಚಿತ್ರಣವೇ ಬದಲಾಯಿತು. ಅಂಪೈರ್‌ನಿಂದ ಗಾರ್ಡ್ ತೆಗೆದುಕೊಂಡು ಒಂದು ದಿನದ ಪಂದ್ಯದ ಶೈಲಿಯಲ್ಲಿ ಆಡಲಾರಂಭಿಸಿದ ವಾಲ್ಟರ್ಸ್ ವಿಂಡೀಸ್ ಬೌಲರ್‌ಗಳನ್ನು ನಿರ್ದಯವಾಗಿ ಶಿಕ್ಷಿಸಿದ.

ವಾಲ್ಟರ್ಸ್‌ನ ಬ್ಯಾಟಿಂಗ್ ಭರಾಟೆಗೆ ಕಡಿವಾಣಹಾಕಲು ವಿಂಡೀಸ್ ನಾಯಕ ರೋಹನ್ ಕನ್ಹಾಯ್ ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದವು. ವಾಲ್ಟರ್ಸ್ ರನ್ ಗಳಿಸದಂತೆ ತಡೆಯಲು ಮೇಲಿಂದಮೇಲೆ ಕ್ಷೇತ್ರರಕ್ಷಣೆಯಲ್ಲಿ ಬದಲಾವಣೆ ಮಾಡಲಾಯಿತಾದರೂ ಪ್ರಯೋಜನವಾಗಲಿಲ್ಲ. ಇದಕ್ಕೆ ಪ್ರತಿಯಾಗಿ ಖಾಲಿ ಜಾಗೆಯನ್ನು ನೋಡಿ ಆಕರ್ಷಕ 'ಡ್ರೈವ್'ಗಳ ಮೂಲಕ ಬೌಂಡರಿ ಗಿಟ್ಟಿಸುತ್ತಿದ್ದ ವಾಲ್ಟರ್ಸ್‌ಗೆ ಸ್ಥಳೀಯ ಅಭಿಮಾನಿಗಳಿಂದ ಭಾರೀ ಬೆಂಬಲ ದೊರೆಯಿತು.

ಭೋಜನ ವಿರಾಮದ ನಂತರ ಮೈದಾನಕ್ಕಿಳಿದಿದ್ದ ವಾಲ್ಟರ್ಸ್ ಚಹಾ ಸೇವನೆಗೆ ತೆರಳುವ ಮುನ್ನ ಸರಿಯಾಗಿ ೧೦೦ ಓಟ ಬಾರಿಸಿದಾಗ ವಿಂಡೀಸ್ ಆಟಗಾರರು, ಪ್ರೇಕ್ಷಕರು ಕರತಾಡನದೊಂದಿಗೆ ಅಭಿನಂದಿಸಿದರು.

ಮುಂದೆ ೧೧೨ ರನ್ ಗಳಿಸಿ ಎಡಗೈ ಸ್ಪಿನ್ನರ್ ಇನ್‌ಶಾಅಲಿಗೆ ವಿಕೆಟ್ ಒಪ್ಪಿಸಿದ ವಾಲ್ಟರ್ಸ್ ಪೆವಿಲಿಯನ್‌ಗೆ ವಾಪಸಾಗುತ್ತಿದ್ದಾಗ ವಿಂಡೀಸ್ ಶಿಬಿರದಲ್ಲಿ ಏನೋ ಭಾರೀ ಸಾಧನೆ ಮಾಡಿದ ತೃಪ್ತಿ.

ಡಗ್ ವಾಲ್ಟರ್ಸ್ ಹೊಡೆದ ಬಿರುಸಿನ ಶತಕದ ಫಲವಾಗಿ ಆಸ್ಟ್ರೇಲಿಯಾ ಎಲ್ಲ ವಿಕೆಟ್ ಕಳೆದುಕೊಂಡು ೩೩೨ ರನ್ ಸಂಪಾದಿಸಿತು.

ಎರಡು ತಾಸು ೨೮ ನಿಮಿಷಗಳ ಕಾಲ ಸೊಗಸಾದ ಆಟ ಪ್ರದರ್ಶಿಸಿ ಕರಿಬಿಯನ್ ಬೌಲರ್‌ಗಳ ಮೇಲೆ ಅಟ್ಟಹಾಸ ಮೆರೆದ ಡಗ್ ವಾಲ್ಟರ್ಸ್ ಒಟ್ಟು ಒಂದು ಸಿಕ್ಸರ್ ಹಾಗೂ ೧೬ ಬೌಂಡರಿಗಳನ್ನು ಬಾರಿಸಿದ. ವಾಲ್ಟರ್ಸ್‌ಗೆ ಉತ್ತಮ ಕಂಪನಿ ನೀಡಿದ ಕೀಫಿ ೩೭ ರನ್ ಹೊಡೆದ. ಮೊದಮೊದಲು ಸ್ಪಿನ್‌ಗೆ ಸ್ವಲ್ಪ ನೆರವು ನೀಡಿದ ಪಿಚ್‌ನಲ್ಲಿ ಮಿಂಚಿದ ಲಾನ್ಸ್ ಗಿಬ್ಸ್ ಮೂರು ವಿಕೆಟ್‌ಗಳನ್ನು ಹೆಕ್ಕಿ ವಿಂಡೀಸ್ ಪರ ಯಶಸ್ವಿ ಬೌಲರ್ ಎನಿಸಿದ. ಆದರೆ ದಿನದ ಕೊನೆಗೆ ಬ್ಯಾಟ್ಸಮನ್ ಲಾನ್ಸ್ ರೋವ್ ಫೀಲ್ಡಿಂಗ್ ಮಾಡುವಾಗ ಬಿದ್ದು ಗಾಯಗೊಂಡು ಪಂದ್ಯದಿಂದ ಹೊರಗುಳಿಯಬೇಕಾಗಿದ್ದು ಆತಿಥೇಯರಿಗೆ ಭಾರೀ ದೊಡ್ಡ ಪೆಟ್ಟಾಯಿತು.

ವೆಸ್ಟ್‌ಇಂಡೀಸಿನ ಆರಂಭ ಆಸ್ಟ್ರೇಲಿಯಾದಷ್ಟು ಶೋಚನೀಯವಾಗಲಿಲ್ಲ. ರಾಯ್ ಫ್ರೆಡ್ರಿಕ್ಸ್ (೧೬) ಮತ್ತು ಫಾಸ್ಟರ್ (೨೫) ಮೊದಲ ವಿಕೆಟ್ ಪಾಲುಗಾರಿಕೆಯಲ್ಲಿ ೩೩ ರನ್ ಗಳಿಸಿದ್ದಾಗ ಜೆನ್ನರ್ ವಿಂಡೀಸಿನ ವಿಕೆಟ್ ಪತನಕ್ಕೆ ನಾಂದಿ ಹಾಕಿದ. ಆದರೆ ಈ ಹಂತದಲ್ಲಿ ಮೈದಾನಕ್ಕಿಳಿದ ಅಲ್ವಿನ್ ಕಾಳಿಚರಣ (೫೩) ತಾಳ್ಮೆಯುತ ಬ್ಯಾಟಿಂಗ್ ಪ್ರದರ್ಶಿಸಿ ಕಾಂಗರೂಗಳ ಮೇಲುಗ್ಗೆಗೆ ಕಡಿವಾಣ ಹಾಕಿದ. .

೨೦ ರನ್ ಗಳಿಸಿದ್ದ ಕ್ಲೈವ್ ಲಾಯ್ಡ್ ಚಾಪೆಲ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದ ನಂತರ ಕಾಳಿಚರಣನನ್ನು ಸೇರಿಕೊಂಡ ನಾಯಕ ರೋಹನ್ ಕನ್ಹಾಯ್ (೫೬) ನಾಲ್ಕನೆ ವಿಕೆಟ್ ಜೊತೆಯಾಟದಲ್ಲಿ ೪೯ ರನ್ ಸೇರಿಸಿದ್ದಲ್ಲದೆ ವಿಕೆಟ್‌ಕೀಪರ್ ಡೆರಿಕ್ ಮರ‍್ರೆ (೪೦)ಯೊಂದಿಗೆ ೫೭ ರನ್ ಕೂಡಿಹಾಕಿದರು.

ವೆಸ್ಟ್‌ಇಂಡೀಸಿನ ಹತ್ತೂ ಮಂದಿಯ ಆಟ ಮುಗಿದಾಗ ಸ್ಕೋರು ೨೮೦ಕ್ಕೆ ತಲುಪಿತ್ತು. ಆತಿಥೇಯರಿಗೆ ಪಿಚ್‌ನಲ್ಲಿ ಹೆಚ್ಚು ಹೊತ್ತು ನಿಲ್ಲದಂತೆ ಮಾಡಿ ನಾಲ್ಕು ಪ್ರಮುಖ ಬ್ಯಾಟ್ಸಮನ್‌ಗಳನ್ನು ಬಲಿಹಾಕಿದ ಜೆನ್ನರ್ ಆಸ್ಟ್ರೇಲಿಯಾಕ್ಕೆ ೫೨ ರನ್‌ಗಳ ಮುನ್ನಡೆ ಒದಗಿಸಿಕೊಟ್ಟ.

ಕಾಂಗರೂ ತಂಡದ ಪರ ಯಶಸ್ವಿ ಬೌಲರ್ ಎನಿಸಿಕೊಂಡ ಟೆರ್ರಿ ಜೆನ್ನರ್ ಕೇವಲ ೯೮ ರನ್‌ಗಳನ್ನು ನೀಡಿ ಕರಿಬಿಯನ್ನರ ನಾಲ್ಕು ವಿಕೆಟ್‌ಗಳನ್ನು ತನ್ನ ಬಲೆಗೆ ಹಾಕಿಕೊಂಡ.

ಮೊದಲ ಇನ್ನಿಂಗ್ಸ್ ಮುನ್ನಡೆ ಗಳಿಸಿದ ಹುರುಪಿನಿಂದ ದ್ವಿತೀಯ ಸರದಿ ಆರಂಭಿಸಿದ ಆಸ್ಟ್ರೇಲಿಯಾಕ್ಕೆ ರೆಡ್‌ಪಾತ್ (೪೪) ಇಯಾನ್ ಚಾಪೆಲ್ (೯೭) ಮತ್ತು ಪ್ರಥಮ ಇನ್ನಿಂಗ್ಸ್ ಶತಕವೀರ ವಾಲ್ಟರ್ಸ್ (೩೨) ತಮ್ಮಿಂದಾದ ಕಾಣಿಕೆ ಸಲ್ಲಿಸಿದರು. ಆದರೆ ಕಾಂಗರೂಗಳ ಆರಂಭ ಮಾತ್ರ ಚೆನ್ನಾಗಿರಲಿಲ್ಲ.

ಪ್ರಥಮ ಸರದಿಯಲ್ಲಿ ಖಾತೆ ತೆರೆಯುವ ಮೊದಲೇ ಪೆವಿಲಿಯನ್ ಕಂಡಿದ್ದ ಸ್ಟಾಕ್‌ಪೋಲ್ ಈ ಬಾರಿ ೧೮ ರನ್ ಮಾತ್ರ ಗಳಿಸುವಲ್ಲಿ ಯಶಸ್ವಿಯಾದ. ಈ ವಿಕೆಟ್ ಪತನದ ನಂತರ ಬಂದ ಗ್ರೆಗ್ ಚಾಪೆಲ್ (೧) ಇನ್ನೂ

ಪಿಚ್‌ಗೆ ಹೊಂದಿಕೊಳ್ಳುವ ಮೊದಲೇ ಗಿಬ್ಸ್ ಚಾಪೆಲ್‌ನನ್ನು ಆಹುತಿ ತೆಗೆದುಕೊಂಡ.

ಮುಂದೆ ಬಂದ ಯಾವೊಬ್ಬ ಬ್ಯಾಟ್ಸಮನ್ ಇಂಡೀಸ್‌ನ ಬೌಲಿಂಗ್ ಹೊಡೆತ ತಡೆದುಕೊಳ್ಳದೆಹೋದ. ಇದರಿಂದಾಗಿ ಆಸ್ಟ್ರೇಲಿಯಾ ೨೮೧ ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡು ಆತಿಥೇಯರಿಗೆ ಜಯಕ್ಕಾಗಿ ೩೩೪ ರನ್‌ಗಳ ಸವಾಲು ಒಡ್ಡಿತು.

ಎರಡನೆ ಇನಿಂಗ್ಸ್‌ದಲ್ಲಿ ಆದಷ್ಟು ಜಾಸ್ತಿ ರನ್ ಸೇರಿಸಿ ಎದುರಾಳಿಯ ಮೇಲೆ ಒತ್ತಡ ಹೇರಬೇಕೆಂಬ ಆಸ್ಟ್ರೇಲಿಯಾ ಯೋಜನೆಗೆ ಕಡಿವಾಣ ಹಾಕಿದ ಲಾನ್ಸ್ ಗಿಬ್ಸ್ ೧೦೨ ರನ್ ನೀಡಿ ಐದು ವಿಕೆಟ್‌ಗಳನ್ನು ಎಗರಿಸಿ ಮತ್ತೊಮ್ಮೆ ತನ್ನ ಸಾಮರ್ಥ್ಯ ಪ್ರದರ್ಶಿಸಿದ.

ಗಮನಾರ್ಹ ತಿರುವು ತೆಗೆದುಕೊಳ್ಳುತ್ತಿದ್ದ ಪಿಚ್‌ನಲ್ಲಿ ೧೦ ಮಂದಿಯ ಇಂಡೀಸ್‌ಗೆ ೩೩೪ ರನ್‌ಗಳ ಗುರಿ ಭಾರೀ ಸವಾಲಾಗಿ ಕಂಡಿತ್ತು. ಆದರೆ ಫಾಸ್ಟರ್ (೩೪)ನೊಂದಿಗೆ ಇನ್ನಿಂಗ್ಸ್ ಆರಂಭಿಸಿದ ರಾಯ್ ಫ್ರೆಡ್ರಿಕ್ಸ್ (೭೬) ಆಸ್ಟ್ರೇಲಿಯಾ ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಯಾವುದೇ ಅಳುಕಿಲ್ಲದೆ ಎದುರಿಸತೊಡಗಿದಾಗ ಇಂಡೀಸ್‌ಗೆ ಜಯದ ವಾಸನೆ ಬಡಿದಿತ್ತು. ಅನಂತರ ಬಂದ ಕಾಳಿಚರಣ ಅತ್ಯಾಕರ್ಷಕ ಹೊಡೆತಗಳಿಂದ ನಿಧಾನವಾಗಿ ರನ್‌ಗಳಿಸತೊಡಗಿದಾಗ ಸ್ಥಳೀಯ ಪ್ರೇಕ್ಷಕರು ತಾವು ಗೆಲ್ಲುವುದು ಖಚಿತ ಎಂಬ ಹುರುಪಿನಲ್ಲಿ ಕುಣಿದಾಡತೊಡಗಿದರು.

ಫ್ರೆಡ್ರಿಕ್ಸ್ ನಿರ್ಗಮನದ ನಂತರ ಫಾಸ್ಟರ್‌ನನ್ನು ಸೇರಿಕೊಂಡಿದ್ದ ಕಾಳಿಚರಣ (೯೧) ಎರಡನೆ ವಿಕೆಟ್ ಪಾಲುಗಾರಿಕೆಯಲ್ಲಿ ಅಮೂಲ್ಯ ೧೦೨ ರನ್ ಸೇರಿಸಿದ. ಫಾಸ್ಟರ್ ಪೆವಿಲಿಯನ್‌ಗೆ ಮರಳಿದ ನಂತರ ಪೂರ್ತಿ ಬ್ಯಾಟಿಂಗ್ ಹೊಣೆಹೊತ್ತ ಕಾಳಿಚರಣ ಪಂದ್ಯದ ಕಡೆಯ ದಿನದ ಭೋಜನ ವಿರಾಮದವರೆಗೆ ಸ್ಕೋರನ್ನು ೨೬೮ರವರೆಗೆ ತಲುಪಿಸಿ ತಂಡವನ್ನು ಗೆಲುವಿನ ಹೊಸ್ತಿಲಿಗೆ ಕೊಂಡೊಯ್ದ.

ಭೋಜನದ ನಂತರ ಇಂಡೀಸ್‌ಗೆ ನಿಚ್ಚಳ ಗೆಲುವು ಸಾಧಿಸಲು ಕೇವಲ ೬೬ ರನ್‌ಗಳು ಬೇಕಿದ್ದವಲ್ಲದೆ ಕೈಯಲ್ಲಿ ಇನ್ನೂ ಆರು ವಿಕೆಟ್‌ಗಳನ್ನು ಹೊಂದಿದ್ದರಿಂದ ಆಸ್ಟ್ರೇಲಿಯಾ ಗೆಲುವಿನ ಆಸೆಯನ್ನೇ ಬಿಡಬೇಕಾಯಿತು.

ಆದರೆ ಭೋಜನದಿಂದ ಮರಳಿದ ನಂತರ ಮೊದಲ ಚೆಂಡಿನಲ್ಲೇ ಕಾಳಿಚರಣನನ್ನು ಎಗರಿಸಿದ ಮ್ಯಾಕ್ಸ್ ವಾಕರ್ ಪಂದ್ಯಕ್ಕೆ ಅನಿರೀಕ್ಷಿತ ತಿರುವು ನೀಡಿದ. ಇಲ್ಲಿಂದ ಶುರುವಾಯಿತು ಇಂಡೀಸ್‌ನ ಪತನ. ನಂತರ ಬಂದ ಪ್ರತಿಯೊಬ್ಬ ಬ್ಯಾಟ್ಸಮನ್ ವಾಕರ್ (೩-೪೩) ಮತ್ತು ಹೇಫಿ (೪-೫೭) ಅವರ ದಾಳಿಯನ್ನು ಎದುರಿಸಲಾಗದೆ ಪೆವಿಲಿಯನ್‌ಗೆ ಪರೇಡ್ ನಡೆಸಿದರು.

ಒಂದು ಹಂತದಲ್ಲಿ ನಾಲ್ಕು ವಿಕೆಟ್‌ಗಳಿಗೆ ೨೬೯ ರನ್ ಗಳಿಸಿದ್ದ ವೆಸ್ಟ್‌ಇಂಡೀಸ್ ೨೮೯ ರನ್‌ಗಳಿಗೆ ಆಲೌಟ್ ಆಯಿತು. ಕನಸಿನಲ್ಲಿಯೂ ನಿರೀಕ್ಷಿಸದಿದ್ದ ಆಸ್ಟ್ರೇಲಿಯ ೪೪ ರನ್‌ಗಳಿಂದ ಗೆಲುವಿನ ಮಾಲೆ ಧರಿಸಿತು.

ಡಗ್ ವಾಲ್ಟರ್ಸ್: "ನನ್ನ ಕ್ರಿಕೆಟ್ ಜೀವನದಲ್ಲಿ ಅತ್ಯಂತ ಸಂತೃಪ್ತಿ ನೀಡಿದ ಟೆಸ್ಟ್ ಪಂದ್ಯ ಇದು. ಚಹಾ ವಿರಾಮದ ವೇಳೆಗೆ ನಾನು ಶತಕ ಬಾರಿಸಲೇಬೇಕೆಂಬ ಗುರಿಯನ್ನೇನೂ ಹೊಂದಿರಲಿಲ್ಲ. ಆದರೆ ತಂಡಕ್ಕೆ ಸಾಧ್ಯವಾದಷ್ಟು ಉತ್ತಮ ಕಾಣಿಕೆ ಸಲ್ಲಿಸಬೇಕೆಂಬ ಇಚ್ಛೆ ಮಾತ್ರ ಇತ್ತು. ಅದು ಈಡೇರಿದ್ದಕ್ಕೆ ಸಂತಸವಾಗಿದೆ".

ಇಯಾನ್ ಚಾಪೆಲ್: "ಡಗ್ ವಾಲ್ಟರ್ಸ್ ಪ್ರಥಮ ಇನಿಂಗ್ಸ್‌ನಲ್ಲಿ ಬಾರಿಸಿದ ಬಿರುಸಿನ ಶತಕ ನಮ್ಮ ಈ ಗೆಲುವಿಗೆ ಬಹಳ ನೆರವಾಯಿತು. ಪಂದ್ಯವನ್ನು ಹೇಗಾದರೂ ಗೆಲ್ಲಲೇಬೇಕೆಂಬ ಹಟಹೊಂದಿದ್ದ ವೆಸ್ಟ್‌ಇಂಡೀಸ್ ಅದಕ್ಕಾಗಿ ಪ್ರತಿ ಹಂತದಲ್ಲಿ ಸಾಕಷ್ಟು ಪ್ರಯತ್ನ ಮಾಡಿತು. ಆದರೆ ವಾಲ್ಟರ್ಸ್‌ನಂತೆ ಎರಡನೆ ಸರದಿಯಲ್ಲಿ ಕಾಳಿಚರಣ ವಿಕೆಟ್ ಕೆಡವಿದ ಮ್ಯಾಕ್ಸ್ ವಾಲ್ಕರ್ ಪಂದ್ಯಕ್ಕೆ ಅನಿರೀಕ್ಷಿತ ತಿರುವು ನೀಡಿದ".

ರೋಹನ್ ಕನ್ಹಾಯ್; "ವಾಲ್ಟರ್ಸ್ ಬಾರಿಸಿದ ಭರ್ಜರಿ ಶತಕ ನಮ್ಮ ಗೆಲುವಿನ ಆಸೆಯನ್ನೆಲ್ಲ ಮಣ್ಣುಪಾಲು ಮಾಡಿತು. ಆದರೆ ಮೊದಲ ದಿನ ನಾವು ಪ್ರಮುಖ ಬ್ಯಾಟ್ಸಮನ್ ಲಾರೆನ್ಸ್ ರೋವ್‌ನನ್ನು ಕಳೆದುಕೊಳ್ಳದಿದ್ದರೆ ಪಂದ್ಯದ ಫಲಿತಾಂಶವೇ ಬೇರೆ ಆಗುತ್ತಿತ್ತು".

ದಾಖಲೆಯಲ್ಲಿ

ಮೂರು ಟೆಸ್ಟ್‌ಗಳು ಡ್ರಾದಲ್ಲಿ ಮುಗಿದ ನಂತರ ಆಸ್ಟ್ರೇಲಿಯಾ ಈ ಸರಣಿಯನ್ನು ೨-೦ ಅಂತರದಿಂದ ಗೆದ್ದು ಇಂಡೀಸ್‌ಗೆ ಅದರ ನೆಲದಲ್ಲೇ ಭಾರೀ ಅವಮಾನ ಮಾಡಿತು.

ನಾಲ್ಕನೆ ಟೆಸ್ಟ್ ಪಂದ್ಯದಲ್ಲಿ ಇಂಡೀಸ್‌ನ ಕ್ಲೈವ್ ಲಾಯ್ಡ್ (೧೭೮) ಮತ್ತು ಆಸ್ಟ್ರೇಲಿಯಾ ಪರ ಇಯಾನ್ ಚಾಪೆಲ್ (೧೦೯) ಶತಕ ಬಾರಿಸಿದರು. ಆದರೆ ಈ ಪಂದ್ಯವನ್ನು ಆಸ್ಟ್ರೇಲಿಯಾ ಹತ್ತು ವಿಕೆಟ್‌ಗಳ ಭಾರೀ ಅಂತರದಿಂದ ತನ್ನದಾಗಿಸಿಕೊಂಡಿತು. ಇಂಡೀಸ್ ಈ ಪಂದ್ಯದ ಎರಡನೆ ಸರದಿಯಲ್ಲಿ ಕೇವಲ ೧೦೯ ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು.



ವಿದ್ಯಾರ್ಥಿ ಅಂಕಣ

ವೈಸ್ ಸ್ಪೆಕ್ಟ್ರೋಗ್ರಾಫ್ ಎಂದರೇನು?

ದೂರವಾಣಿಯ ಕರೆಗಂಟೆ ಬಾರಿಸಿ ರೀಸಿವರನ್ನು ಕಿವಿಗಿಟ್ಟುಕೊಂಡೊಡನೆಯೇ ಮಾತನಾಡುತ್ತಿರುವವರು ಯಾರು ಎಂಬುದು ಕೆಲವೊಮ್ಮೆ ನಮಗೆ ತಿಳಿಯುತ್ತದೆ. ಆದರೆ ಹಾಗೆ ತಿಳಿಯಬೇಕಾದರೆ ಆ ಧ್ವನಿ ನಮಗೆ ಪರಿಚಿತವಾದುದಾಗಿರಬೇಕು. ಹೊಸಬರೊಬ್ಬರು ಫೋನಿನಲ್ಲಿ ಮಾತನಾಡಿದಾಗ ಕೇವಲ ಧ್ವನಿಯ ಸಹಾಯದಿಂದ ಅವರನ್ನು ಗುರುತಿಸುವುದು ಸಾಧ್ಯವಾಗುವುದಿಲ್ಲ. ಆದರ ಕೇವಲ ಧ್ವನಿಯ ಸಹಾಯದಿಂದಲೇ ಮಾತನಾಡಿದ ವ್ಯಕ್ತಿಯನ್ನು ಪತ್ತೆ ಮಾಡಬಲ್ಲ ಉಪಕರಣವೊಂದಿದೆ. ಆ ಉಪಕರಣವೇ ವೈಸ್ ಸ್ಪೆಕ್ಟ್ರೋಗ್ರಾಫ್. ಹೇಗೆ ಒಬ್ಬರ ಬೆರಳ ಗುರುತು ಇನ್ನೊಬ್ಬರದಂತಿರುವುದಿಲ್ಲವೋ ಹಾಗೆಯೇ ಒಬ್ಬರ ಧ್ವನಿಯಂತೆ ಇನ್ನೊಬ್ಬರ ಧ್ವನಿ ಇರುವುದಿಲ್ಲ. ಏಕೆಂದರೆ ಪ್ರತಿಯೊಬ್ಬರ ಧ್ವನಿಗೂ ಒಂದು ನಿರ್ದಿಷ್ಟವಾದ 'ತರಂಗಾಂತರ' (Wave Length) ಇರುತ್ತದೆ. ಈ ತರಂಗಾಂತರವನ್ನು ಕಂಡುಹಿಡಿಯುವ ಕಾರ್ಯವನ್ನೇ ವೈಸ್ ಸ್ಪೆಕ್ಟ್ರೋಗ್ರಾಫ್ ಮಾಡುತ್ತದೆ.

ಜ್ಞಾನನಿಧಿ

ಈ ಉಪಕರಣ ಒಂದು ಸರಳವಾದ ಚಿಕ್ಕ ಯಂತ್ರವಾಗಿದ್ದು ಇದನ್ನು ಎಲ್ಲಿ ಬೇಕಾದರೂ ಸುಲಭವಾಗಿ ಕೊಂಡೊಯ್ಯಬಹುದು. ಈ ಯಂತ್ರವು ಧ್ವನಿಯನ್ನು ವಿಶ್ಲೇಷಿಸಿ ಅದರ ತರಂಗಾಂತರವನ್ನು ಕಾರ್ಡಿಯೋಗ್ರಾಫಿನ ರೀತಿಯಲ್ಲಿ ಒಂದು ಚಾರ್ಟಿನ ಮೇಲೆ ದಾಖಲಿಸುತ್ತ ಹೋಗುತ್ತದೆ. ಈ ಚಾರ್ಟಿನ ಸಹಾಯದಿಂದ ಫೋನಿನಲ್ಲಿ ಮಾತನಾಡಿದ ವ್ಯಕ್ತಿ ಯಾರು ಎಂಬುದನ್ನು ಪತ್ತೆ ಮಾಡಬಹುದು. ಈ ಯಂತ್ರದ ಸಹಾಯದಿಂದ ಫೋನಿನ ಮೂಲಕ ಬೆದರಿಕೆ ಒಡ್ಡುವ ಅಪರಾಧಿಗಳನ್ನು ಕಂಡುಹಿಡಿಯಲು ಅಪರಾಧಿ ಪತ್ತೆ ದಳದವರಿಗೆ ತುಂಬ ಅನುಕೂಲವಾಗಿದೆ.

ಸಿಬಿಐನವರು ಈ ಯಂತ್ರವನ್ನು ಬಳಸ ತೊಡಗಿದ್ದಾರೆ. ಟೆಲಿಫೋನಿನ ಮೂಲಕ ಒಬ್ಬ ವ್ಯಕ್ತಿ ಮತ್ತೊಬ್ಬನಿಗೆ ಕೊಲೆಯ ಬೆದರಿಕೆಯನ್ನೊಡ್ಡುತ್ತಾನೆ ಎಂದಿಟ್ಟುಕೊಳ್ಳೋಣ. ಆಗ ಆ ರೀತಿ ಬೆದರಿಕೆ ಒಡ್ಡಿದ ವ್ಯಕ್ತಿಯನ್ನು ಪತ್ತೆ ಮಾಡುವುದು ತುಂಬ ಕಷ್ಟವಾಗುತ್ತದೆ. ಒಂದು ವೇಳೆ ಅಪರಾಧಿಯನ್ನು ಪತ್ತೆ ಮಾಡಿದರೂ ಕೋರ್ಟಿನಲ್ಲಿ ಒದಗಿಸಲು ಪೊಲೀಸರ ಬಳಿ ನಿರ್ದಿಷ್ಟ ಸಾಕ್ಷಿ ಇಲ್ಲದ್ದಕ್ಕಾಗಿ ಅವನು ಪಾರಾಗಿಬಿಡುತ್ತಾನೆ. ಆದರೆ ಆ ಧ್ವನಿಯನ್ನು ಟೇಪ್ ಮಾಡಿಕೊಂಡರೆ ವೈಸ್ ಸ್ಪೆಕ್ಟ್ರೋಗ್ರಾಫ್‌ನ ಸಹಾಯದಿಂದ ಆ ಧ್ವನಿಯ ತರಂಗಾಂತರವನ್ನು ದಾಖಲಿಸಿಕೊಳ್ಳಬಹುದು. ಅಪರಾಧಿಯು ಸಿಕ್ಕಿಬಿದ್ದ ಮೇಲೆ ಅವನ ಧ್ವನಿಯನ್ನು ಪುನಃ ವೈಸ್ ಸ್ಪೆಕ್ಟ್ರೋಗ್ರಾಫ್‌ನ ಸಹಾಯದಿಂದ ದಾಖಲಿಸಿದರೆ ಮತ್ತು ಎರಡು ಗ್ರಾಫ್‌ಗಳ ತರಂಗಾಂತರದಲ್ಲಿ ಸಾಮ್ಯವಿದ್ದರೆ ಅವನೇ ಅಪರಾಧಿ ಎಂದು ನಿರ್ಧರಿಸಬಹುದು. ಇದು ಕೋರ್ಟಿನಲ್ಲಿಯೂ ಒಂದು ಖಚಿತ ಪುರಾವೆಯಾಗಬಲ್ಲದು. ಫೋನಿನಲ್ಲಿ ಲಂಚ ಕೇಳುವ ಅಧಿಕಾರಿಗಳನ್ನು, ಕೊಲೆ ಬೆದರಿಕೆ ಒಡ್ಡುವ ಅಪರಾಧಿಗಳನ್ನು, ಮಕ್ಕಳನ್ನು ಅಪಹರಿಸಿ ಅವರ ತಂದೆ-ತಾಯಿಗಳಿಂದ ದೊಡ್ಡ ಮೊತ್ತದ ಹಣವನ್ನು ಕೇಳುವ ಅಪಹರಣಕಾರರನ್ನು, ಫೋನಿನಲ್ಲಿ ಅಶ್ಲೀಲವಾಗಿ ಮಾತಾಡುವ ಮೂಲಕ ಮಹಿಳೆಯರನ್ನು ಪೀಡಿಸುವ ಕಾಮಣ್ಣರನ್ನು ಬಲಿಹಾಕಲು ಈ ಯಂತ್ರ ತುಂಬ ಉಪಯುಕ್ತ. ಆದರೆ ಫೋನಿನಲ್ಲಿ ಬರುವ ಧ್ವನಿಯನ್ನು ದಾಖಲಿಸುವುದು ಮಾತ್ರ ಅತ್ಯವಶ್ಯ.

ಚಾಣಾಕ್ಷನಾದ ಅಪರಾಧಿ ಫೋನಿನಲ್ಲಿ ಮಾತನಾಡುವಾಗ ತನ್ನ ಧ್ವನಿಯನ್ನು ಬದಲಾಯಿಸಬಹುದು. ಇದರಿಂದ ರಿಸೀವರನ್ನೆತ್ತಿಕೊಂಡ ವ್ಯಕ್ತಿಗೆ ಅವನಾರೆಂಬುದು ಗೊತ್ತಾಗಲಾರದು. ಆದರೆ ಮನುಷ್ಯರನ್ನು ಮೋಸಗೊಳಿಸದಂತೆ ಯಂತ್ರವನ್ನು ಮೋಸಗೊಳಿಸಲಾಗುವುದಿಲ್ಲ. ಏಕೆಂದರೆ ಕೇವಲ ಧ್ವನಿಯನ್ನು ಬದಲಾಯಿಸುವುದರಿಂದ ಅದರ ತರಂಗಾಂತರದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಇದರಿಂದ ಅಪರಾಧಿಯನ್ನು ಪತ್ತೆಮಾಡಲು ಸುಲಭವಾಗುವುದು.

ಎಕ್ಸ್‌ಚೇಂಜಿನವರ ಸಹಾಯದಿಂದ

ವಿಳಾಸ

ನಮ್ಮ ತಂದೆ ಲಯನ್ಸ್ ಕ್ಲಬ್ಬಿನ ಮೆಂಬರು. ನಮ್ಮ ಮನೆಯನ್ನು ಜೂ ರೋಡಿನಲ್ಲಿರುವ ಒಂದು ಬಂಗಲೆಗೆ ಬದಲಾಯಿಸಿದೆವು. ಕೆಲವು ದಿನಗಳ ನಂತರ ಅಲ್ಲಿಗೆ ಬಂದ ಕಾಗದದ ಮೇಲಿನ ವಿಳಾಸ ಹೀಗಿತ್ತು: "ಲಯನ್ ಸಿಂಗ್, ಜೂ ರೋಡ್, ಸಿಂಹಪುರಿ, ಆನೇಕಲ್ ತಾಲ್ಲೂಕು."

- ಹೆಚ್.ಎಸ್.ಎನ್.

ಜ್ಞಾನನಿಧಿ

ಫೋನ್ ನಂಬರನ್ನು ಪತ್ತೆ ಹಚ್ಚುವರೆಂದು ತಿಳಿದ ಚಾಣಾಕ್ಷ ಅಪರಾಧಿಗಳು ತಮ್ಮ ಫೋನನ್ನು ಬಳಸದೆ ಸಾರ್ವಜನಿಕ ಉಪಯೋಗಕ್ಕಾಗಿ ಇರುವ ಟೆಲಿಫೋನನ್ನು ಬಳಸಬಹುದು. ಇಂಥ ಅಪರಾಧಗಳನ್ನು ಪಬ್ಲಿಕ್ ಟೆಲಿಫೋನ್ ಬೂತಿನ ಬಳಿ ಹೊಂಚುಹಾಕಿ ಹಿಡಿಯಬಹುದು. ಉದಾಹರಣೆಗೆ, ಒಮ್ಮೆ ಒಬ್ಬಾತ ಚರ್ಚ್ ಬಳಿಯಲ್ಲಿರುವ ಪಬ್ಲಿಕ್ ಟೆಲಿಫೋನ್ ಬೂತಿನಿಂದ ಕೊಲೆ ಬೆದರಿಕೆಯೊಡ್ಡಿ ಮತ್ತೊಬ್ಬ ವ್ಯಕ್ತಿಗೆ ಫೋನ್ ಮಾಡಿದ. ಆ ವ್ಯಕ್ತಿ ಆ ಸಂಭಾಷಣೆಯನ್ನು ಟೇಪ್ ಮಾಡಿ ಪೊಲೀಸರಿಗೊಪ್ಪಿಸಿದ. ಪೋಲೀಸರು ಗಮನವಿಟ್ಟು ಟೇಪನ್ನು ಆಲಿಸಿದಾಗ ಅದರಲ್ಲಿ ಗಂಟೆಯ ಧ್ವನಿಯೊಂದು ಕೇಳಿಸಿತು. ಅದು ಚರ್ಚಿನ ಗಂಟೆಯ ಧ್ವನಿ ಎಂದು ಅವರು ಖಚಿತಪಡಿಸಿಕೊಂಡರು. ಆ ಊರಿನಲ್ಲಿ ಮೂರು ಚರ್ಚುಗಳಿದ್ದವು. ಆದರೆ ಪಬ್ಲಿಕ್ ಟೆಲಿಫೋನ್ ಬೂತು ಒಂದು ಚರ್ಚಿನ ಬಳಿ ಮಾತ್ರ ಇತ್ತು. ಮಾರುವೇಷದಲ್ಲಿದ್ದ ಪೋಲೀಸರು ಆ ಚರ್ಚಿನ ಬಳಿ ಹೊಂಚುಹಾಕಿ ಮತ್ತೊಮ್ಮೆ ಫೋನ್ ಮಾಡಲು ಬಂದ ಆ ವ್ಯಕ್ತಿಯನ್ನು ಬಂಧಿಸಿದರು. ವೈಸ್ ಸ್ಪೆಕ್ಟ್ರೋಗ್ರಾಫ್‌ನ ಮೂಲಕ ಮೊದಲು ಫೋನ್ ಮಾಡಿದ ಧ್ವನಿ ಮತ್ತು ನಂತರದ ಧ್ವನಿ ಎರಡೂ ಒಂದೇ ಎಂದು ಪತ್ತೆ ಮಾಡಿದರು. ಹೇಗಿದೆ ವಿಜ್ಞಾನದ ಚಮತ್ಕಾರ?

• **ಮುರಳೀಧರ ಕುಲಕರ್ಣಿ**

ಜೇಡನೆಂಬ ಮಹಾ ದೈತ್ಯ

'ಜೇಡ' ಎಂದಾಕ್ಷಣ ಕಿಂಗ್ ಬ್ರೂಸ್‌ನ ನೆನಪಾಗುವುದು ಸಹಜ. ಯುದ್ಧದಲ್ಲಿ ಸೋತು ನಿರಾಶೆಗೊಂಡು ಕುಳಿತಿದ್ದಾಗ, ಎದುರಿನ ಒಂದು ಮೂಲೆಯಲ್ಲಿ ಜೇಡವೊಂದು ಬಲೆ ನೇಯುತ್ತಿರುವುದನ್ನು ಕಂಡ. ಅದು ಬಲೆ ನೇಯುವಾಗ ಮೇಲಿಂದ ಮೇಲೆ ಕೆಳಗೆ ಬೀಳುತ್ತಿತ್ತು. ಮತ್ತೆ ಮೇಲೆ ಹೋಗಿ ತನ್ನ ಬಲೆ ನೇಯುತ್ತಿತ್ತು. ಹೀಗೆ ಅದು ಬೀಳುವುದು ಏಳುವುದು ನಡೆದಿದ್ದರೂ ಧೈರ್ಯಗುಂದದೆ ತನ್ನ ಬಲೆಯನ್ನು ಸಂಪೂರ್ಣವಾಗಿ ಮುಗಿಸಿತು. ಇದನ್ನು ಕಂಡ ರಾಜಾ ಬ್ರೂಸ್, 'ಒಂದು ಕ್ಷುಲ್ಲಕ ಜೀವಿಯಾದ ಜೇಡನು ಧೈರ್ಯಗುಂದದೆ ತನ್ನ ಛಲ ಸಾಧಿಸಿದಾಗ ಮನುಷ್ಯನಾದ ನಾನು ಸಾಧಿಸಬಾರದೇಕೆ?' ಎಂದುಕೊಂಡು ಪುನಃ ಯುದ್ಧಮಾಡಿ ಗೆದ್ದ. ಈ ಕತೆ ಎಲ್ಲರಿಗೂ ಗೊತ್ತೇ ಇದೆ.

ಅನೇಕರು ಭಾವಿಸಿದ ಹಾಗೆ ಜೇಡರ



ಹುಳು ಕೀಟವಲ್ಲ. ಏಕೆಂದರೆ ಕೀಟಗಳಿಗೆ ಆರು ಕಾಲುಗಳು ಮಾತ್ರ ಇದ್ದರೆ ಜೇಡನಿಗೆ ಎಂಟು ಕಾಲುಗಳು ಇವೆ. ಜೇಡನ ದೇಹದ ಹಿಂಭಾಗದಲ್ಲಿ ಹೊಟ್ಟೆಯು ಜೋತಾಡುತ್ತಿರುತ್ತದೆ.

ಜ್ಞಾನನಿಧಿ

ಬಲೆ ಹೆಣೆಯಲು ನೂಲು ಹೊರಡಿಸುವ ಗ್ರಂಥಿಯು ಹೊಟ್ಟೆಯ ಭಾಗದಲ್ಲೇ ಇದೆ. ಜೇಡರ ಬಲೆಯೆಂಬುದು ಒಂದು ಅದ್ಭುತ ರಚನೆ. ಸುಂದರ ಆಕೃತಿಯಲ್ಲಿ ತನಗೆ ಅತ್ಯಂತ ಉಪಯೋಗಕರವಾಗುವಂತೆ ಬಲೆಯನ್ನು ನೇಯುತ್ತದೆ. ಬಲೆಯು ಎಳೆ ರೇಶಿಮೆಯಂತೆ ಹೊಳೆಯುತ್ತಿರುತ್ತದೆ. ಎಳೆಗಳು ಬಲು ಗಟ್ಟಿಯಾಗಿರುತ್ತವೆ. ಬಲೆ ರೇಷ್ಮೆಗಿಂತ ನವಿರಾದ ನೂಲಿನಿಂದ ರಚಿತವಾಗಿರುತ್ತದೆ. ಮುಂಜಾವಿನ ಪ್ರಕಾಶದಲ್ಲಿ ಈ ಬಲೆಯು ಸಪ್ತವರ್ಣಗಳಲ್ಲಿ ಹೊಳೆಯುವುದನ್ನು ನಾವು ಕಾಣಬಹುದು. ಚೆನ್ನಾಗಿ ಬೆಳೆದ ಜೇಡರ ಬಲೆಯ ನೂಲು ಎಷ್ಟು ಸೂಕ್ಷ್ಮವಾಗಿರುತ್ತದೆಂದರೆ ಅಂಥ ಹತ್ತುಸಾವಿರ ನೂಲುಗಳು ಸೇರಿದರೆ ಮಾನವನ ಒಂದು ತಲೆಗೂದಲಿನಷ್ಟು ದಪ್ಪವಾಗಬಹುದು.

ಸುಮಾರು ಮೂವತ್ತುಸಾವಿರ ಜಾತಿಯ ಜೇಡಗಳಿವೆ ಎಂಬುದೊಂದು ಅಂದಾಜು. ಅದಕ್ಕೆ ಎರಡು ಕಣ್ಣುಗಳು ಇವೆ. ಏಕಕಾಲದಲ್ಲಿ ಸುತ್ತಲೂ ನೋಡುವ ಶಕ್ತಿ ಇದಕ್ಕೆ ನಿಸರ್ಗದತ್ತವಾಗಿದೆ. ಆದರೆ ಇವುಗಳ ದೃಷ್ಟಿ ತೀರ ಮಂದ. ಒಂದು ಅಡಿಗಿಂತ ಹೆಚ್ಚು ದೂರ ನೋಡಲಾರವು. ಹಾಗೆಯೇ, ಜೇಡನಿಗೆ ವಾಸನೆಯ ಪ್ರಜ್ಞೆಯಾಗಲಿ ಕಿವಿಯಾಗಲಿ ಇಲ್ಲ. ಸ್ಪರ್ಶಜ್ಞಾನ ಹಾಗೂ ರುಚಿಯ ಜ್ಞಾನ ಮಾತ್ರ ಚುರುಕಾಗಿದೆ.

ಪ್ರಾಣಿಲೋಕದ ವೈಚಿತ್ರ್ಯಗಳು

ಕಟಲ್ ಫಿಶ್ ಜಾತಿಯ ಮೀನಿಗೆ ಮೂರು ಹೃದಯಗಳಿರುತ್ತವೆ. ಎರಡು ಗಂಟಲಿನ ಹತ್ತಿರವಿದ್ದರೆ, ಮೂರನೆಯದು ಶರೀರದ ಮಧ್ಯಭಾಗದಲ್ಲಿರುತ್ತದೆ.

ಆನೆಮರಿ ತನ್ನ ತಾಯಿಯ ಮುಂಗಾಲುಗಳ ಮಧ್ಯೆ ನಿದ್ದೆ ಹೋಗುತ್ತದೆಯಾದರೆ ಆನೆ ನಿಂತೇ ನಿದ್ದೆಹೋಗುತ್ತದೆ.

ರೆಕ್ಕೆಯಿಲ್ಲದೆ ಹಾರುವ ಒಂದು ಜಾತಿಯ ಹುಳು ಅನೇಕ ತಿಂಗಳು ದಕ್ಷಿಣ ಧ್ರುವದ ಮಂಜಿನಲ್ಲಿ ಮಂಜಾಗಿ ಬದುಕಿರುತ್ತದೆ. ಆದರೆ ಅದು ಮನುಷ್ಯನ ಸಂಪರ್ಕಕ್ಕೆ ಬಂದಾಗ ಅವನ ಕೈಯ ಉಷ್ಣವನ್ನು ಸಹಿಸಲಾರದೆ ಸತ್ತುಹೋಗುತ್ತದೆ.

ಗಂಡು ಸಿಂಹ ತನ್ನ ಹೆಣ್ಣು ಹಾಗೂ ಮರಿಗಳಿಗೆ ಭೋಜನದ ವ್ಯವಸ್ಥೆ ಮಾಡುತ್ತದೆ. ಆದರೆ ಗಂಡು ಹುಲಿಗೆ ಇದರ ಯೋಚನೆಯೇ ಇರುವುದಿಲ್ಲ. ಅದರ ಹೆಣ್ಣು ಮತ್ತು ಮರಿಗಳು ಎಲ್ಲಿವೆ, ಏನು ತಿನ್ನುತ್ತಿವೆ ಎಂಬ ಚಿಂತೆಯೇ ಗಂಡು ಹುಲಿಗೆ ಇರುವುದಿಲ್ಲ.

ಮಂಟಿಸ್ ಎಂಬ ಹುಳು (ಹೆಣ್ಣು) ಗಂಡಿನ ಜೊತೆ ಮೈಥುನ ನಡೆಸಿದ ತಕ್ಷಣ ಗಂಡಿನ ಕತ್ತನ್ನು ಕತ್ತರಿಸಿ ಹಾಕಿಬಿಡುತ್ತೆ. ಒಮ್ಮೊಮ್ಮೆ ಇನ್ನೂ ಮೈಥುನ ಪೂರ್ಣವಾಗದಿದ್ದಾಗಲೇ ಅದರ ಕತ್ತು ಕತ್ತರಿಸಿಹಾಕಿಬಿಡುತ್ತೆ.

ಪೆಲಿಕನ್ ಪಕ್ಷಿಯ ಪ್ರಾಕೃತಿಕ ಚೀಲ ಎಷ್ಟು ದೊಡ್ಡದಾಗಿ ಹರಡಬಹುದೆಂದರೆ ಅದರಲ್ಲಿ ಮೂರು ಗ್ಯಾಲನ್ ನೀರು ಹಾಗೂ ೩೦ ಪೌಂಡ್ ಮೀನು ಅದರಲ್ಲಿ ಹಿಡಿಸುತ್ತೆ.

ನಮ್ಮ ಶಾಸ್ತ್ರಗಳು ಪೃಥ್ವಿಯ ಮೇಲೆ ಪ್ರಕೃತಿ ೮೪ ಲಕ್ಷ ಜೀವರಾಶಿಗಳನ್ನು ಸೃಷ್ಟಿಸಿದೆ ಎಂದು ಹೇಳುತ್ತವೆ. ಆದರೆ ವಿಜ್ಞಾನ ಇದುವರೆಗೆ ಜೀವತಂತುಗಳ ೧೪ ಲಕ್ಷ ಜೀವರಾಶಿಗಳನ್ನು ಹಾಗೂ ವನಸ್ಪತಿಗಳ ೫ ಲಕ್ಷ ಜಾತಿಗಳನ್ನು ಕಂಡುಹಿಡಿದಿದೆ.

– ಟೇಕಲ್ ಗೋಪಾಲಕೃಷ್ಣ

ಗಂಡು ಜೇಡನ ಹತ್ತುಪಟ್ಟು ದೊಡ್ಡದಾಗಿ ಹೆಣ್ಣುಜೇಡವಿರುತ್ತದೆ. ಈ ಹೆಣ್ಣುಜೇಡದ ಹಸಿವು ಭಯಂಕರವಾದದ್ದು. ತಿನ್ನಲು ಯಾವುದೇ ಬೇಟೆ ಸಿಗದಿದ್ದರೆ ಗಂಡು ಜೇಡ ನನ್ನೇ ನುಂಗಿ ಹೊಟ್ಟೆ ತುಂಬಿಸಿಕೊಳ್ಳುತ್ತದೆ. ಹೀಗಾಗಿ ದುರ್ಬಲವಾಗಿರುವ ಗಂಡು ಕಬಳಿ ಸಲ್ಪಡುವುದೇ ಹೆಚ್ಚು.

ಏಡಿ ಜಾತಿಯ ಜೇಡಗಳು ತುಂಬಾ ವಿಚಿತ್ರ. ದುಂಬಿ, ಪತಂಗಗಳನ್ನೂ ಬೇಟೆಯಾಡುವ ಈ ಜೇಡಗಳು ನೋಡಲು ತುಂಬಾ ಅಸಹ್ಯ. ಈ ಜಾತಿಯ ಗಂಡು ಜೇಡಗಳು ಬುದ್ಧಿವಂತ ಜೇಡಗಳೆಂದು ಹೆಸರು ಪಡೆದಿವೆ. ಹೆಣ್ಣುಜೇಡದ ಬಾಯಿಗೆ ತುತ್ತಾಗುವ ಮುಂಚೆಯೇ ಮುಂಜಾಗ್ರತೆಯ ಕ್ರಮ ಕೈಗೊಂಡು ಪಾರಾಗುತ್ತವೆ. ತೋಳ ಜಾತಿಯ ಗಂಡು ಜೇಡಗಳು ಹೆಣ್ಣನ್ನು ಮುಗ್ಧವಾಗಿಸಿ ಹೆಂಡತಿಯಾಗಿ ಸ್ವೀಕರಿಸುತ್ತವೆ.

ತೋಟಗಳಲ್ಲಿ ಸುಂದರ ಚಿತ್ತಾಕಾರದ ಬಲೆಗಳನ್ನು ಹೆಣೆಯುವ ಜೇಡಗಳ ಆಯುಷ್ಯ ತುಂಬಾ ಕಡಿಮೆ. ಹೆಚ್ಚೆಂದರೆ ಒಂದು ಋತುವಿನಷ್ಟು ಮಾತ್ರ. ತತ್ತಿಗಳು ಒಡೆದು ಮರಿಯಾಗುವ ಮುಂಚೆಯೇ ತಾಯಿ ಸತ್ತಿರುತ್ತದೆ. ಇನ್ನಿತರ ಜೇಡಗಳಿಗೆಲ್ಲ ಹೆಚ್ಚು ಆಯುಷ್ಯ. ಮನೆಯ ಮೂಲೆ-ಮೂಲೆಗಳಲ್ಲಿ ಸಂದಿ-ಸಂದಿಗಳಲ್ಲಿ ಬಲೆ ಹೆಣೆಯುವ ಜೇಡಗಳು ಸುಮಾರು ಐದು ವರ್ಷಗಳವರೆಗೆ ಬದುಕಿರಬಲ್ಲವು. 'ತರಂತುಲಾ' ಜಾತಿಯ ಜೇಡ ೨೫ ವರ್ಷಗಳಷ್ಟು ಬದುಕುತ್ತವೆ!

ಜೇಡನ ಬಗೆಗೆ ಇನ್ನೂ ಕೆಲವು ವಿಷಯಗಳನ್ನು ತಿಳಿದುಕೊಳ್ಳಲೇಬೇಕು. ಅದು ಹೊಸದಾಗಿ ಕಣ್ಣು ತೆರೆದ ಮರಿಗಳನ್ನು ಬೆನ್ನಿನ ಮೇಲೆ ಕೂಡಿಸಿಕೊಂಡು ಹರಿದಾಡುತ್ತದೆ. ಅರಣ್ಯಗಳಲ್ಲಿ ವಾಸಿಸುವ ಕೆಲವು ರಾಕ್ಷಸ ಜೇಡಗಳು ವಿಷಕರವಾಗಿವೆ. ಅವುಗಳ ಕಾಲುಗಳು ಆರೇಳು ಇಂಚುಗಳಷ್ಟು ಉದ್ದವಾಗಿರುತ್ತವೆ. ಆ ಜೇಡಗಳ ಬಲೆಯು ಕ್ಯಾನ್‌ವಾಸಿನಷ್ಟು ಗಟ್ಟಿಯಾಗಿರುತ್ತದೆ. ಆ ಬಲೆಯಲ್ಲಿ ಕುಳಿತು ಅವು ಸಣ್ಣ ಸಣ್ಣ ಪಕ್ಷಿಗಳನ್ನು ಹಿಡಿದು ತಿನ್ನುತ್ತವೆ.

ಎಲ್ಲ ಜೇಡಗಳೂ ಬಲೆಗಳ ಮೂಲಕವೇ ಬೇಟೆ ಹಿಡಿಯುವುದಿಲ್ಲ. ಬಣ್ಣ ಬದಲಾಯಿಸಿಕೊಂಡು, ಕಾಣದಂತೆ ಕುಳಿತು, ಬೇಟೆಯಾಡಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತವೆ. ಕೆಲವು ಜೇಡಗಳು ಜಿರಲೆಗಳನ್ನು ಕೂಡ ತಿನ್ನುತ್ತವೆ. ಉಪದ್ರವಕಾರಕ ಕೀಟಗಳನ್ನು ಜೇಡಗಳು ತಿನ್ನುವುದರಿಂದ ಮಾನವನಿಗೆ ಈ ಜೇಡಗಳು ಉಪಕಾರಿಯಾಗಿವೆ. ಅಕಸ್ಮಾತ್ತಾಗಿ ಜೇಡ ಇರದಿದ್ದರೆ ಹನ್ನೆರಡು ಗಜಗಳಷ್ಟು ದಪ್ಪವಾದ ಕೀಟಗಳ ಪದರು ಭೂಮಿಯ ಒಂದಿಂಚೂ ಜಾಗ ಬಿಡದೆ ತುಂಬಿರುತ್ತಿತ್ತು, ಮಾನವನಿಗಾಗಲಿ ಪ್ರಾಣಿಗಳಿಗಾಗಲಿ ತಿನ್ನಲಿಕ್ಕೆ ಏನೂ ಇರುತ್ತಿರಲಿಲ್ಲ ಎಂದು ವಿಜ್ಞಾನಿಗಳು ಹೇಳುತ್ತಾರೆ. ಜೇಡವು ಮಾನವನಿಗೆ ಉಪಕಾರಿಯಲ್ಲದೆ ಮತ್ತೇನು?

• *ಶಂಕರಗೌಡ ವೈ. ಪಾಟೀಲ*

ಹೇನುನಾಶಕ ಹಣಿಗೆ

ಇಸ್ರೇಲ್‌ನಲ್ಲಿ ವಿದ್ಯುಚ್ಚಾಲಿತ ಹಣಿಗೆಯೊಂದನ್ನು ತಯಾರಿಸಲಾಗಿದೆ. ಇದನ್ನು ಉಪಯೋಗಿಸುವುದರಿಂದ ತಲೆಯಲ್ಲಿರುವ ಹೇನುಗಳು ನಾಶವಾಗುತ್ತವೆ. ಈ ಹಣಿಗೆಯಲ್ಲಿ ಅತಿ ಚಿಕ್ಕ ಇಲೆಕ್ಟ್ರಾನಿಕ್ ಯಂತ್ರವನ್ನು ಅಳವಡಿಸಲಾಗಿದ್ದು ಹಣಿಗೆಯು ತಲೆಗೂದಲನ್ನು ಮುಟ್ಟಿದಕೂಡಲೆ ಸೌಮ್ಯವಾದ ವಿದ್ಯುತ್ತು ಪ್ರವಹಿಸತೊಡಗುತ್ತದೆ. ಅದು ಹೇನುಗಳನ್ನು ಸಂಪೂರ್ಣವಾಗಿ ನಾಶಗೊಳಿಸುತ್ತದೆ.

- ವೆಂಕಟೇಶ ಗಂಗಾವತಿ

ಹಾವಿನ ಚರ್ಮದ ಕಳ್ಳ ಸಾಗಾಟ

ಪ್ರಕೃತಿಯ ಪ್ರತಿಯೊಂದು ಅಂಶದಲ್ಲೂ ದೈವಾಂಶವನ್ನು ಕಾಣುವ ನಾವು ಗಿಡ, ಮರ, ಪಕ್ಷಿ, ಪ್ರಾಣಿ ಮತ್ತು ಕಲ್ಲನ್ನು ಪೂಜಿಸುತ್ತೇವೆ. ಅದೇ ಸಮಯದಲ್ಲಿ ನಮ್ಮ ಕಣ್ಣಿಗೆ ಬೀಳುವ ಅನೇಕ ವಸ್ತುಗಳನ್ನು ಹಾಳು ಮಾಡುವ ಇಲ್ಲವೆ ಲಾಭದಾಸೆಯಿಂದ ಮಾರಿಕೊಳ್ಳುವ ಪ್ರವೃತ್ತಿಯೂ ನಮ್ಮಲ್ಲಿದೆ. ಇದಕ್ಕೆ ಹಾವಿನ ಚರ್ಮವೂ ಹೊರತಲ್ಲ.

ಭಾರತದಲ್ಲಿ ವನ್ಯ ಪ್ರಾಣಿಗಳ ಸಂರಕ್ಷಣೆಗಾಗಿಯೇ ಪ್ರತ್ಯೇಕ ಇಲಾಖೆಯಿದೆ. ಅಲ್ಲದೆ ಅನೇಕ ಖಾಸಗಿ ಸಂಘ-ಸಂಸ್ಥೆಗಳು, ಮಹನೀಯರು ಮತ್ತು ಮಹಿಳೆಯರು ಮೂಕ ಪ್ರಾಣಿಗಳ ರಕ್ಷಣೆಗಾಗಿ ತಮ್ಮ ಕೈಲಾದುದನ್ನು ಮಾಡುತ್ತಿದ್ದಾರೆ. ಆದರೆ ಇವರೆಲ್ಲರ ಕಣ್ಣಿಗೆ ಮಣ್ಣೆರಚಿ ಸಸ್ಯಗಳ, ಪ್ರಾಣಿಗಳ ಕಳ್ಳ ಸಾಗಾಟ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಪ್ರಾಣಿ ದಯಾ ಸಂಸ್ಥೆಗಳು ಸಾಕಷ್ಟು ಸಲ ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದರೂ ಕಳ್ಳ ವ್ಯಾಪಾರ ನಡೆಯುತ್ತಲೇ ಇದೆ. ಸರ್ಕಾರ ಅನೇಕ ಕಾನೂನುಗಳನ್ನು ಮಾಡಿದ್ದರೂ ಪ್ರಯೋಜನವಾಗಿಲ್ಲ.

ಕಳ್ಳ ಸಾಗಾಟವಾಗುವ ವಸ್ತುಗಳಲ್ಲಿ ಹಾವಿನ ಚರ್ಮವೂ ಒಂದು. ಲಕ್ಷಾಂತರ ರೂಪಾಯಿಗಳಷ್ಟು ಬೆಲೆಬಾಳುವ ಹಾವಿನ ಚರ್ಮ ದಿನನಿತ್ಯ ಕೈ ಬದಲಾಗುತ್ತಿರುತ್ತದೆ. ವಿದೇಶಗಳಲ್ಲಿ ಹಾವಿನ ಚರ್ಮಕ್ಕೆ ಅತ್ಯಧಿಕ ಬೇಡಿಕೆ. ಅಲಂಕಾರಿಕ ವಸ್ತುಗಳನ್ನು ಮತ್ತು ಮಹಿಳೆಯರ ಪರ್ಸನ್ನು ತಯಾರಿಸಲು ಹಾವಿನ ಚರ್ಮವನ್ನು ಸುಲಿಯುತ್ತಾರೆ. ಉಷ್ಣ ದೇಶವಾದ ಭಾರತದಲ್ಲಿ ಹಾವುಗಳು ಅಧಿಕ. ವಿದೇಶಗಳಿಂದ ಹಾವಿನ ಚರ್ಮಕ್ಕೆ ತೀವ್ರವಾದ ಬೇಡಿಕೆ. ಹೀಗಾಗಿ ಹಾವು ಹಿಡಿಯುವವರಿಂದ ಮೊದಲ್ಗೊಂಡು ಚರ್ಮವನ್ನು ವಿದೇಶಕ್ಕೆ ಸಾಗಿಸುವವರೆಗೆ ಎಲ್ಲರಿಗೂ ಹಣದ ಹೊಳೆ. ಹೀಗಾಗಿ ಭಾರತದಲ್ಲಿ ಎಷ್ಟೋ ಜಾತಿಯ ಹಾವುಗಳು ನಿರ್ವಂಶವಾಗುತ್ತಿವೆ. ಹಾವುಗಳನ್ನು ಹಿಡಿಯುವುದು ಶಿಕ್ಷಾರ್ಹ ಅಪರಾಧ. ಆದರೆ ರಾಜ್ಯ ಸರ್ಕಾರಗಳಿಂದ ಸೂಕ್ತ ಲೈಸೆನ್ಸ್ ಪಡೆದಲ್ಲಿ ಹಾಗೆ ಮಾಡುವುದು ಅಪರಾಧವೆನ್ನಿಸುವುದಿಲ್ಲ. ಕೇವಲ ಹದಿನಾಲ್ಕು ಜಾತಿಯ ಹಿಡಿಯಲು ಮಾತ್ರ ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕೆಂದು ವನ್ಯ ಸಂರಕ್ಷಣೆಯ ಕಾನೂನು ಹೇಳುತ್ತದೆ. ತಮಿಳುನಾಡು ಸರ್ಕಾರವೊಂದೇ ನೂರಾರು ಲೈಸೆನ್ಸ್‌ಗಳನ್ನು ನೀಡುತ್ತಿದ್ದು ಸುಮಾರು ೨೦,೦೦೦ ವಿವಿಧ ಜಾತಿಯ ಹಾವುಗಳನ್ನು ಹಿಡಿಯಲಾಗುತ್ತಿದೆ. ಲೈಸೆನ್ಸ್ ಪಡೆದವರು ಸರ್ಕಾರಕ್ಕೆ ಸೂಕ್ತ ರಾಯಲ್ಟಿ ನೀಡಬೇಕಾಗುತ್ತದೆ. ಈ ರಾಜಸ್ವದ ಆಸೆಯಿಂದ ಸರ್ಕಾರ ಲೈಸೆನ ನೀಡುವುದನ್ನು ಧಾರಾಳಗೊಳಿಸಿದೆಯೆಂದು ವನ್ಯ ಪ್ರಾಣಿಪ್ರಿಯರ ಅನಿಸಿಕೆ. ಹಾವಿನ ಚರ್ಮಕ್ಕೆ ಹೊರದೇಶಗಳಿಂದ ಭಾರೀ ಬೇಡಿಕೆ ಇರುವುದೇ ಈ ಅವ್ಯವಹಾರಕ್ಕೆ ಕಾರಣವಾಗಿದೆ.

ಇದರಲ್ಲಿ ಹಾವು ಹಿಡಿಯುವವನು ಪ್ರತಿ ಹಾವಿಗೆ ನಲವತ್ತು ಅ ರೂಪಾಯಿಗಳನ್ನು ಪಡೆಯುತ್ತಾನೆ. ಹಾವು ಹಿಡಿದ ವ್ಯಕ್ತಿಯೇ

ಜ್ಞಾನನಿಧಿ

ಚರ್ಮವನ್ನು ಅದರ ಶರೀರದಿಂದ ಬೇರ್ಪಡಿಸಬೇಕಾಗುತ್ತದೆ. ಉತ್ತರ ಭಾರತದಲ್ಲಿ ಚರ್ಮವನ್ನು ದೇಹದಿಂದ ಬೇರ್ಪಡಿಸುವಾಗ ತಲೆಯ ಭಾಗದ ಚರ್ಮಕ್ಕೆ ಅಷ್ಟು ಪ್ರಾಮುಖ್ಯತೆ ಕೊಡುವುದಿಲ್ಲ. ಆದರೆ ದಕ್ಷಿಣ ಭಾರತದಲ್ಲಿ ಹಾವಿನ ತಲೆಯ ಭಾಗದ ಚರ್ಮವನ್ನು ಸೂಕ್ಷ್ಮ ಬಿಡಿಸುವುದರಿಂದ ಇಲ್ಲಿಯ ಹಾವಿನ ಚರ್ಮಕ್ಕೆ ಬೆಲೆ ಬಹಳ. ಚರ ಸುಲಿಯುವವನಿಗೆ ಅದಕ್ಕಾಗಿ ಪ್ರತ್ಯೇಕ ಹಣ ದೊರೆಯುತ್ತದೆ. ಅಲ್ಲದೆ ಜಾತಿಯನ್ನು ಅವಲಂಬಿಸಿ ಹಣದ ಮೊತ್ತ ಹೆಚ್ಚು ಕಡಿಮೆಯಾಗುತ್ತದೆ. ಹೆಬ್ಬಾವಿನ ಚರ್ಮಕ್ಕೆ ಉಳಿದೆಲ್ಲ ಹಾವಿನ ಚರ್ಮಕ್ಕಿಂತಲೂ ಹೆಚ್ಚಿನ ಬೇಡಿಕೆ ಮತ್ತು ಹೆಚ್ಚಿನ ಬೆಲೆ.

ಚರ್ಮ ಬಿಡಿಸುವವರು ಹಾವನ್ನು ಅಂಗಾತವಾಗಿ ಮರದ ಹಲಗೆಗೆ ಪಿನ್ನುಗ ಬಂಧಿಸಿ, ಹರಿತವಾದ ಚಾಕುವಿನಿಂದ ತಲೆಯ ಭಾಗದಿಂದ ಬಾಲದ ನವಿರಾಗಿ ಸೀಳುತ್ತಾರೆ. ನಂತರ ಚರ್ಮವನ್ನು ದೇಹದಿಂದ ಸುಲಿದು ಬೇರ ಈ ರೀತಿ ಸುಲಿದ ಚರ್ಮಕ್ಕೆ ಉಪ್ಪಿನ ದ್ರಾವಣದಿಂದ ತಾತ್ಕಾಲಿಕ ರಕ ನಂತರ ಈ ಚರ್ಮವನ್ನು ಹದ ಮಾಡುವವನಿಗೆ ಒಪ್ಪಿಸುತ್ತಾರೆ ಪಾಲನ್ನು ಸುಲಿಗೆ ಮಾಡುತ್ತಾನೆ. ಹದ ಮಾಡಿದ ಚರ್ಮವನ್ನು ಸುಣ್ಣದ ನೀರಿನಲ್ಲಿ ಇಟ್ಟಿರುತ್ತಾರೆ. ನಂತರ ಚರ್ಮಕ್ಕೆ ಅಂಟಿಕೊಂ ಅಷ್ಟಿಷ್ಟು ಮಾಂಸವನ್ನು ಸುಲಭವಾಗಿ ತೆಗೆಯಲು ಸಾಧ್ಯವಾಗುತ್ತದೆ. ಇ ಚರ್ಮವನ್ನು ರಾಸಾಯನಿಕ ದ್ರಾವಣವೊಂದರಲ್ಲಿ ಐದು ದಿವಸಗಳ ಕಾಲ ಇಟ್ಟಿರುತ್ತಾರೆ. ಇದಾದ ಮೇಲೆ ಅದನ್ನು ಬಿಸಿಲಿನಲ್ಲಿ ಒಣಗಿಸಿ, ನವಿರಾಗ ತೈಲವೊಂದನ್ನು ಲೇಪಿಸುತ್ತಾರೆ. ಇಷ್ಟಾದ ಬಳಿಕ ಕೊನೆಯದಾಗಿ ಚರ್ಮಕ ಮಾಡಿ ಬೇರೆ ಬೇರೆ ಬಣ್ಣಗಳನ್ನು ಹಚ್ಚುತ್ತಾರೆ. ಈಗ ಅದು ಮಾರು ಇಂತಹ ಒಂದು ಚರ್ಮದ ಬೆಲೆ ಮೀಟರ್ ಒಂದಕ್ಕೆ ಐನೂರು ರೂಪಾಯಿವರೆ ಇರುತ್ತದೆ. ಪ್ರತಿ ಹಂತದಲ್ಲೂ ಹಣ ಹೊಳೆಯಂತೆ ಹರಿಯುವುದರಿಂದ ಹ ಚರ್ಮದ ಕಳ್ಳ ವ್ಯಾಪಾರ ಸಾಕಷ್ಟು ವರ್ಷಗಳಿಂದ ನಡೆಯುತ್ತಲೇ ಇದ ಸಂದರ್ಭಗಳಲ್ಲಿಯಂತೆ ಇಲ್ಲೂ ಕಾನೂನು ಕುರುಡಾಗಿರುವುದು

ವ್ಯವಹಾರ ಅಬಾಧಿತವಾಗಿ ನಡೆಯಲು ಸಹಕಾರಿಯಾಗಿದೆ.

-ಜೆ. ಅನಂತನಾರಾಯಣ ಸ್ವಾಮಿ

ಮೊದಲ ಬಸ್

ಭಾರತದಲ್ಲಿ ಮೊದಲ ಬಸ್ ಎಲ್ಲಿ ಸಂಚರಿಸಿತು ಗೊತ್ತೆ? ಮುಂಬಯಿಯಲ್ಲಿ-ಜುಲೈ ೧೫, ೧೯೨೬ರಂದು. ಗಂಟೆಗೆ ೩೫ ಮೈಲು ವೇಗದಿಂದ ಓಡುವ ಅದು ೨೪ ಪ್ರಯಾಣಿಕರನ್ನು ತುಂಬಿಸಿಕೊಳ್ಳುತ್ತಿತ್ತು.

ಅದೇ ಮುಂಬಯಿಯಲ್ಲಿ ೧೯೩೭ರ ಅಕ್ಟೋಬರ್ ೮ರಂದು ಡಬಲ್ ಡೆಕ್ಕರ್ ಬಸ್ ಸಂಚಾರ ಪ್ರಾರಂಭವಾಯಿತು. ಹೀಗೆ ಬಸ್ಸಿಗೆ ಸಂಬಂಧಿಸಿದಹಾಗೆ ಎರಡು ಪ್ರಮಥಮಗಳನ್ನು ಸಾಧಿಸುವ ಮೂಲಕ ಮುಂಬಯಿ ಕೀರ್ತಿಭಾಜನವಾಯಿತು. ಆದರೆ ದಿಲ್ಲಿಯಲ್ಲಿರುವಷ್ಟು ಬಸ್ಸುಗಳು ದೇಶದಲ್ಲಿ ಮತ್ತೆಲ್ಲೂ ಇಲ್ಲ. ಅಲ್ಲಿ ದಿನನಿತ್ಯ ಹದಿನೈದುಸಾವಿರ ಬಸ್ಸುಗಳು ಸಂಚರಿಸುತ್ತವೆ.

✿ -ರೂಪ ಎಚ್.ಕೆ.

'ವಿಷ ಸಸ್ಯಗಳು'

ಪ್ರಾಣಿಗಳಿಗೆ ಜೀವನಾಧಾರವಾದದ್ದು ಸಸ್ಯ ಸಂಕುಲ. ಇಂತಹ ಸಸ್ಯಗಳಲ್ಲೂ ವಿಷ ಸಸ್ಯಗಳಿವೆ. ಅದಕ್ಕೋಸ್ಕರವೇ 'ನಾವು ಕಾಣುವ ಎಲ್ಲಾ ಗಿಡಗಳನ್ನು ತಿಳಿಯದೆ ಮುಟ್ಟಬಾರದು' ಎಂದು ನಮ್ಮ ಹಿರಿಯರು ಹೇಳುವುದು.

'ಹೆಮಲಾಕ್' ಎನ್ನುವದೊಂದು ವಿಷ ಸಸ್ಯ. ಈ ಗಿಡದ ಹೂವುಗಳ ಬಣ್ಣ ಬಿಳಿ. ಹೂಗಳು ಸುಗಂಧದ ಬದಲು ದುರ್ಗಂಧವನ್ನು ಬೀರುತ್ತಿರುತ್ತವೆ. ಪ್ರಾಚೀನಕಾಲದಲ್ಲಿ ಗ್ರೀಕರು ಈ ಗಿಡದ ಬೇರು ಮತ್ತು ಬೀಜಗಳಿಂದ ಕೊನೆಐನ್ **(Coniine)** ಎನ್ನುವ ವಿಷಸಾರವನ್ನು ತಯಾರಿಸುತ್ತಿದ್ದರು. ಅದನ್ನು ಕುಡಿದ ಸ್ವಲ್ಪ ಹೊತ್ತಿನಲ್ಲೇ ಕಾಲುಗಳಿಂದ ಹಿಡಿದು ಹೃದಯದವರೆಗಿನ ಎಲ್ಲಾ ಭಾಗಗಳು ನಿಶ್ಚೇತನಗೊಂಡು ಮರಣದಂಡನೆ ವಿಧಿಸಲ್ಪಟ್ಟಾತ ಸಾಯುತ್ತಿದ್ದ.

ಸುಮಾರು ೨,೫೦೦ ವರ್ಷಗಳ ಹಿಂದೆ ಗ್ರೀಸ್ ದೇಶದ ಅಥೆನ್ಸ್‌ನಲ್ಲಿ ಸಾಕ್ರಟಿಸ್ ಎಂಬ ತತ್ವಜ್ಞಾನಿಗಾದದ್ದೂ ಅದೇ. ಯುವಕರನ್ನು ಆತ ತಪ್ಪುದಾರಿಗೆ ಎಳೆಯುತ್ತಿದ್ದಾನೆಂದು ಗ್ರೀಸ್ ದೇಶದ ಅಧಿಕಾರಿಗಳು ಆತನ ಮೇಲೆ ಆರೋಪ ಹೊರಿಸಿದರು. ನಂತರ ಆ ಮಹಾ ತತ್ವಜ್ಞಾನಿಗೆ ಮರಣ ದಂಡನೆಯನ್ನು ವಿಧಿಸಲಾಯಿತು.

ವಿಷದಿಂದ ತಯಾರಿಸಿದ ಒಂದು ಬಟ್ಟಲು ಕಷಾಯವನ್ನು ಅವನಿಗೆ ಕುಡಿಸಲಾಯಿತು. ಕುಡಿದ ಬಳಿಕ ಆತನ ದೇಹ ತಣ್ಣಗಾಗಿ ಆತ ಮೃತನಾದ.

ಉಮ್ಮತ್ತಿಯ ಗಿಡವೂ ವಿಷಯುಕ್ತವಾದದ್ದು. ಅದರ ಯಾವುದೇ ಭಾಗದ ಕಷಾಯವನ್ನು ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ಸಾವು ಬರುವುದು ಖಂಡಿತ. ಕಡಿಮೆ ಪ್ರಮಾಣದಲ್ಲಿ ಸೇವಿಸಿದರೆ ಬಾಯಾರಿಕೆ, ದೃಷ್ಟಿದೋಷ, ಅತಿ ನಿದ್ದೆ ಮತ್ತು ಸೆಳವು ಬರುತ್ತದೆ.

ಅಂದರೆ ಈ ಗಿಡದ ಯಾವುದೇ ಭಾಗ ಮನುಷ್ಯನಿಗಾಗಲಿ ಸಾಕುಪ್ರಾಣಿಗಾಗಲಿ ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ.

ಗುಲಗಂಜಿಯು ಮಕ್ಕಳ ಆಟದ ವಸ್ತುವಾದರೂ ಕಪ್ಪು ಚುಕ್ಕೆಯ ಗುಲಗಂಜಿ ವಿಷಯುಕ್ತ.

'ಮೆಡೊಸ್ಯಾಫ್ರನ್' ಎನ್ನುವ ಗಿಡದ ಬೀಜಗಳಿಂದ ಕೊಲ್ಚಿಸಿನ್ ಎಂಬ ವಿಷಪದಾರ್ಥವನ್ನು ತೆಗೆಯುತ್ತಾರೆ. ಸಂಧಿವಾತ ಬಂದವರಿಗೆ ಕೊಟ್ಟರೆ ಅತಿ ಸಣ್ಣ ಪ್ರಮಾಣದಲ್ಲಿ ಈ ವಿಷ ಸಂಧಿವಾತವನ್ನು ತಹಬಂದಿಗೆ ತರುತ್ತದೆ. ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ಸಾವು ಶತಃಸಿದ್ಧ.

ಥಾರ್ನ್ ಆ್ಯಪಲ್, ನೈಟ್‌ಷೆ ೞಡ್, ಮಾಂಕ್‌ಸೂಡ್, ಚೆರ್ರಿಲಾರೆಲ್ ಎನ್ನುವ ವಿಷ ಸಸ್ಯಗಳು ಬಹಳ ಅಪಾಯಕಾರಿ.

ಗಸಗಸೆಯ ಬೀಜ ಒಂದು ಆಹಾರ ಪದಾರ್ಥ. ಆದರೆ ಅದರ ಕಾಯಿಯನ್ನು ಗೀರಿ ತೆಗೆದ ಅಫೀಮು ಚಟಕಾರಕ. ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ವಿಷ.

ಎಕ್ಕೆಗಿಡ ಒಂದು ವಿಷಯುಕ್ತವಾದ ಸಸ್ಯ. ಅದರ ಹಾಲು ವಿಷಕಾರವಾದದ್ದು. ಅಣಬೆಗಳು ಆಹಾರವಸ್ತುಗಳಾದರೂ ಪರಿಚಿತವಲ್ಲದ ಅಣಬೆಗಳನ್ನು ಬಳಸಬಾರದು. ಕಾರಣ ಅಣಬೆಗಳಲ್ಲೂ ಕೆಲವು ಜಾತಿಯವು ವಿಷಯುಕ್ತವಾಗಿವೆ.

✿ ಸಂಗ್ರಹ:ಗಣೇಶ

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧) ಪಾರಿಪಂಥಿಕ
(ಅ) ದಾರಿಬಡಿಯುವ ದರೋಡೆಗಾರ
(ಆ) ದಾರಿತಪ್ಪಿದ
(ಇ) ಸುತ್ತುಬಳಸದ
(ಈ) ಗುರಿ ತಲುಪಿದ

೨) ಪಾರಮಿತ
(ಅ) ಶ್ರೇಷ್ಠ
(ಆ) ಪರಮಾವಧಿ
(ಇ) ದಾಟಿಹೋದ
(ಈ) ಅಂದಾಜಿನ

೩) ಪರವಾದಿ
(ಅ) ಕಥೆ ಹೇಳುವವ
(ಆ) ವಿರುದ್ಧ ವಾದಿಸುವವ
(ಇ) ಅಲಕ್ಷ್ಯ ಮಾಡುವವ
(ಈ) ಸೋತವ

೪) ಪದರ
(ಅ) ಯಾವಾಗಲೂ
(ಆ) ಗೌರವ
(ಇ) ಮನೆ
(ಈ) ಸುಲಭ

೫) ಪರಿವೇಷ
(ಅ) ಸೋಗು
(ಆ) ಪರಿಣಾಮ
(ಇ) ಪಶ್ಚಾತ್ತಾಪ
(ಈ) ಸುತ್ತುವರಿಯುವಿಕೆ

೬) ಪರಿಸ್ತರಣ
(ಅ) ಸುತ್ತಲೂ ಹರಡಿಸುವುದು
(ಆ) ನೆನೆದುಕೊಳ್ಳುವುದು
(ಇ) ಬಳಸುವುದು
(ಈ) ದಾಟುವಿಕೆ

೭) ತೊಡಬೆ
(ಅ) ಹಿಡಿತ
(ಆ) ಹೂಡುವಿಕೆ
(ಇ) ಗೊಂಚಲು
(ಈ) ಅಜ್ಜಿ

೮) ತೆತ್ತಿಗ
(ಅ) ಸಾಮಂತ
(ಆ) ಸಂಬಂಧಿಕ
(ಇ) ಸಾಲಗಾರ
(ಈ) ಒಂದು ಹಕ್ಕಿ

೯) ಸರಕುಮಾಡು
(ಅ) ಲಕ್ಷಿಸು
(ಆ) ಮಾಡು
(ಇ) ಚಕ್ರ ತಿರುಗಿಸು
(ಈ) ಹಣ ಕೂಡಿಹಾಕು

೧೦) ಸೋಪಸ್ಕರ
(ಅ) ಸುಲಭವಾದ
(ಆ) ಅವಶ್ಯವಾದ ಸರಕುಗಳೊಡನೆ
(ಇ) ಗೆಳೆತನಕ್ಕೆ ಪೋಷಕ
(ಈ) ಉಪಚಾರ

೧೧) ಸುಷಿರ
(ಅ) ಚೆಂದವಾದ ತಲೆ
(ಆ) ಪ್ರೇಮ
(ಇ) ತೂತುಳ್ಳ ವಾದ್ಯ
(ಈ) ಸೌಂದರ್ಯ

೧೨) ಭುಕ್ತಶೇಷ
(ಅ) ಕೊನೆಯವರೆಗೆ ಸುಖಪಟ್ಟವ
(ಆ) ಗರುಡ
(ಇ) ದುಃಖಿ
(ಈ) ಎಂಜಲನ್ನ

'ಶಬ್ದಭಾಂಡಾರ'ದ ಸರಿಯಾದ ಅರ್ಥಗಳು

೧. ಪಾರಿಪಂಥಿಕ

(ಅ) ದಾರಿಬಡಿಯುವ ಕಳ್ಳ, ದಾರಿಹೋಕರನ್ನು ಸುಲಿಗೆಮಾಡುವ ದರೋಡೆಗಾರ

(ಸಂ. ಪರಿ =ವಿರುದ್ಧ, ಪಂಥಾ =ದಾರಿ)

೨. ಪಾರಮಿತ

(ಇ) ದಾಟಿಹೋದ, ಪಾರಂಗತ, ಯಾವುದಾದರೂ ವಿಷಯದಲ್ಲಿ ಸಂಪೂರ್ಣ ತಿಳಿವಳಿಕೆಯುಳ್ಳ ಉದಾ- ಪಾರಮಿತ ಅಂದರೆ ತಿಳಿವಳಿಕೆಯ ದಡ ಕಂಡ, ಅಂದರೆ ಪೂರ್ಣಜ್ಞಾನವುಳ್ಳ (ಸಂ)

೩. ಪರವಾದಿ

(ಆ) ವಿರುದ್ಧ ವಾದಮಾಡುವವ, ಎದುರು ವಾದಿ, ಪ್ರತಿವಾದಿ, ವಾದದಲ್ಲಿ ಎದುರಾಳಿ. ಉದಾ- ಪರವಾದಿಗಳನ್ನು ಜಯಿಸಿದರು.

(ಸಂ. ಪರ =ಶತ್ರು, ವಾದಿ =ವಾದಮಾಡುವವ)

೪. ಸದರ

(ಈ) ಸುಲಭ, ಸರಳ, ಹಗುರ, ಲಘು: ಪರಿಚಿತವಾಗಿರುವಿಕೆ, ಗೆಳೆತನ. ಉದಾ- ಹೇಳುವುದು ಸದರ, ಮಾಡುವುದು ಕಷ್ಟ; ಇವನನ್ನು ಸದರವಾಗಿ ತಿಳಿಯಬೇಡ. (?)

೫. ಪರಿವೇಷ

(ಈ) ಸುತ್ತುವರಿಯುವಿಕೆ, ಸುತ್ತಮುತ್ತಲಿನದು; ತಲೆಗೆ ಸುತ್ತುವ ಮಾಲೆ; ಸೂರ್ಯ-ಚಂದ್ರರನ್ನು ಬಳಸಿದ ಪ್ರಭಾವಲಯ. ಉದಾ- ಮನೆಯ ಪರಿವೇಷ ಚೆನ್ನಾಗಿದೆ.

(ಸಂ. ಪರಿ =ಸುತ್ತಲೂ, ವಿಷ್ =ಹೋಗು)

೬. ಪರಿಸ್ತರಣ

(ಅ) ಸುತ್ತಲೂ ಹರಡಿಸುವುದು, ಸುತ್ತಲೂ ಚೆಲ್ಲುವುದು. ಉದಾ- ಹುಲ್ಲಿನ ಪರಿಸ್ತರಣ ಮಾಡಿಕೊಂಡು ಕುಳಿತ.

(ಸಂ. ಪರಿ =ಸುತ್ತಲೂ, ಸ್ತರ =ಹಬ್ಬಿಸು)

೭. ತೊಡಬೆ

(ಇ) ಗೊಂಚಲು, ಗುಚ್ಛ, ಮಂಜರಿ; ರಾಶಿ ಸಮೂಹ. ಉದಾ- ಹೂವಿನ ತೊಡಬೆ; ಕಷ್ಟಗಳು ತೊಡಬೆ ತೊಡಬೆಯಾಗಿ ಬರುತ್ತವೆ. (ಕನ್ನಡ)

೮. ತೆತ್ತಿಗ

(ಆ) ಗಾಢ ಸಂಬಂಧವುಳ್ಳ, ಸಂಬಂಧಿಕ, ಬಾಂಧವ, ಹತ್ತಿರವಾಗಿ ಬಂಧಿಸಲ್ಪಟ್ಟವ; ಆಳು, ಗೆಳೆಯ, ಉದಾ-ನಿನ್ನ ತೆತ್ತಿಗನೆಂದು ನನ್ನನ್ನು ಬಗೆ.

(ಕನ್ನಡ. ತೆತ್ತು =ಹತ್ತಿರ ತಾ, ಬಂಧಿಸು)

೯. ಸರಕುಮಾಡು

(ಅ) ಲಕ್ಷಿಸು, ಗೌರವಿಸು, ಗಮನಕೊಡು. ಉದಾ- ಇವನೇನು ಯಾರನ್ನೂ ಸರಕು ಮಾಡುವವನಲ್ಲ ಅಂದರೆ ಯಾರನ್ನೂ ಲಕ್ಷಿಸುವವನಲ್ಲ. (ಕನ್ನಡ)

೧೦. ಸೋಪಸ್ಕರ

(ಆ) ಅವಶ್ಯವಾದ ಸರಕುಗಳೊಡನೆ. ಉದಾ- ಸೋಪಸ್ಕರವಾಗಿ ಪೂಜೆಗೆ ಬಂದ.

(ಸಂ. ಸ =ಸಹಿತ, ಉಪಸ್ಕರ =ಉಪಕರಣ)

೧೧. ಸುಷಿರ

(ಇ) ತೂತುಗಳುಳ್ಳ ಊದುವ ವಾದ್ಯ (ಕೊಳಲು, ಸನಾಯಿ ಇತ್ಯಾದಿ. ಸಂ.)

೧೨. ಭುಕ್ತಶೇಷ

(ಈ) ಎಂಜಲನ್ನ, ಊಟಮಾಡಿದಮೇಲೆ ಉಳಿದ ಅಂಶ. ಉದಾ-ಭುಕ್ತಶೇಷಕ್ಕಾಗಿ ಬಾಯ್ಬಿಡುವನೀತ. (ಸಂ. ಭುಕ್ತ=ಉಂಡ, ಶೇಷ =ಉಳಿದದ್ದು.)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಯನ್ನು ತಿಳಿಯಿರಿ.

೬-೮	ಸರಿಯಿದ್ದರೆ	ಸಾಧಾರಣ
೯-೧೦	,, ...	ಉತ್ತಮ
೧೧-೧೨	,, ...	ಅತ್ಯುತ್ತಮ

ಹೀಗೊಂದು ನೆನಪು

✷ ನಾಟಂಪಳ್ಳಿ ರಾಮಸ್ವಾಮಿ

ಹಲವು ವರ್ಷಗಳ ಹಿಂದೆ ನಡೆದದ್ದು. ಒಂದು ದಿನ ಸಾಯಂಕಾಲ ಬೇಲೂರಿನ ಚೆನ್ನಕೇಶವ ದೇವಾಲಯದ ಪ್ರಾಕಾರದಲ್ಲಿ ನಾನು ಅಮ್ಮನ ಜೊತೆ ಕುಳಿತಿದ್ದೆ. ಪಡುವಣದಲ್ಲಿ ಸೂರ್ಯ ಅಸ್ತಮಿಸುತ್ತಿದ್ದ. ಜಕ್ಕಣನ ಕೆತ್ತನೆಗಳನ್ನು ಒಳಗೊಂಡ ದೇವಾಲಯ ತನ್ನ ಉದ್ದನೆಯ ನೆರಳನ್ನು ಚಾಚಿತ್ತು. ಪ್ರಶಾಂತ ವಾತಾವರಣ. 'ನಾನು ಚಿಕ್ಕವನಿದ್ದಾಗ ನೀನು ಇದೇ ಪ್ರಾಕಾರದಲ್ಲಿ ಹೇಳುತ್ತಿದ್ದುದು ನೆನಪಿದೆಯೇ?' ಎಂದು ಅಮ್ಮನನ್ನು ಕೇಳಿದೆ. 'ಇಲ್ಲ. ಏನದು? ನೀನೇ ಹೇಳು' ಎಂದಳು ಅಮ್ಮ. ಹಾಗಾದರೆ ಕೇಳು. ರಾಜ ಬಿಟ್ಟಿದೇವ ಆಳುತ್ತಿದ್ದ ಕಾಲ. ಅವನಿಗೆ ಒಬ್ಬಳೇ ಮಗಳು. ವಯಸ್ಸಿಗೆ ಬಂದಳು. ಜೊತೆಗೆ ಮನೋವ್ಯಾಧಿಗೆ ತುತ್ತಾದಳು.



ರಾಜರಾಣಿಯರಿಬ್ಬರೂ ಔಷಧೋಪಚಾರ ಮಾಡಿದರು. ಗುಣಕಾಣಲಿಲ್ಲ. ಅವರಿಬ್ಬರಿಗೂ ಅತೀವ ದುಗುಡ. ಸದಾ ಮಗಳದೇ ಚಿಂತೆ. ರಾತ್ರಿಯಂತೂ ನಿದ್ರೆಯೇ ಇಲ್ಲ. ಕರ್ಮಧರ್ಮ ಸಂಯೋಗದಿಂದ ಅದೇ ಕಾಲಕ್ಕೆ ರಾಮಾನುಜಾಚಾರ್ಯರು ರಾಜ್ಯಕ್ಕೆ ಆಗಮಿಸಿದರು. ರಾಜ ಅವರನ್ನು ಸ್ವಾಗತಿಸಿ ತನ್ನ ಕಷ್ಟವನ್ನು ಹೇಳಿಕೊಂಡ. ಶ್ರೀ ರಾಮಾನುಜರು ತಮ್ಮ ದೈವಬಲದಿಂದ ರಾಜಕುಮಾರಿಯ ಮನದಲ್ಲಿದ್ದ ಬ್ರಹ್ಮರಾಕ್ಷಸನನ್ನು ಹೊಡೆದೋಡಿಸಿದರು. ಮಗಳು ಚೇತರಿಸಿಕೊಂಡು ಮೊದಲಿನಂತಾದಳು. ಇದರಿಂದ ಸಂತುಷ್ಟನಾದ ಬಿಟ್ಟದೇವ ಶ್ರೀ ರಾಮಾನುಜರಿಗೆ ಶರಣಾಗತನಾಗಿ ಅವರನ್ನು ಶ್ರದ್ಧೆ ಭಕ್ತಿಗಳಿಂದ ಉಪಚರಿಸಿದ. ಅವರ ಶಿಷ್ಯತ್ವವನ್ನು ಸ್ವೀಕರಿಸಿ ವಿಷ್ಣುವರ್ಧನನೆಂಬ ಹೆಸರಿನಿಂದ ಪ್ರಸಿದ್ಧನಾದ'.

ವಿಷ್ಣುವರ್ಧನ ಶ್ರದ್ಧೆ, ಭಕ್ತಿಗಳಿಲ್ಲ, ನನ್ನ ಶ್ರದ್ಧೆ ಭಕ್ತಿಗಳಿಲ್ಲ! ಆದರೆ ಕಥೆ ಜ್ಞಾಪಕಕ್ಕೆ ಬಂದಾಗಲೆಲ್ಲ ಪುಟ್ಟಿ ನೆನಪಾಗದೆ ಇರುವುದಿಲ್ಲ.

ನನ್ನ ಮರಿಗೆ ಯಾಕೆ ಹೀಗಾಯಿತು? ಆಕೆಯ ಬಗೆಗೆ ನಾನೆಷ್ಟು ಆಸೆಗಳನ್ನಿರಿಸಿಕೊಂಡಿದ್ದೆ! ಆದರೆ ಆಕೆ ಮೊಗ್ಗಿನಲ್ಲೆ ಬಾಡಿದಳು. ಹೂವಾಗಿ ಅರಳಲಿಲ್ಲ. ನನ್ನ ಅಮ್ಮನಿಗೂ ಪುಟ್ಟಿಗೂ ೬೯ ವರ್ಷಗಳ ವ್ಯತ್ಯಾಸ. ಅಮ್ಮ ನಮ್ಮನ್ನು ಅಗಲಿ ಎಷ್ಟೋ ವರ್ಷವಾಯಿತು. ಮರಳಿ ಬಾರದ ದಾರಿಯಲ್ಲಿ ಪುಟ್ಟಿ ಹೋಗಿಯೂ ಎಷ್ಟೋ ವರ್ಷಗಳಾದವು.

ಹೌದು. ಕುಣಕುಣದು ಓಡಿ ಬಂದು ಅಪ್ಪಿಕೊಳ್ಳುತ್ತಿದ್ದ ನನ್ನ ಪುಟ್ಟಿ ಮರಳಿ ಬರಲೇ ಇಲ್ಲ. ಉಯ್ಯಾಲೆಯಲ್ಲಿ ತೂಗಾಟವಾಗುತ್ತಿದ್ದ ಪುಟ್ಟಿ ಮರಳಿ ಬರಲೇ ಇಲ್ಲ. ಜಾರುಬಂಡೆಯನ್ನು ಏರುತ್ತಿಳಿಯುತ್ತಾ ಮನಸ್ಸಿಗೆ ಹಬ್ಬವನ್ನುಂಟು ಮಾಡುತ್ತಿದ್ದ ಪುಟ್ಟಿ ಮರಳಿ ಬರಲೇ ಇಲ್ಲ.

ಒಂದು ಸಂಜೆ ಮಳೆ ಬಂದು ನಿಂತಿತ್ತು. ಸಾಯಂಕಾಲದ ಹೊಂಬಿಸಿಲಿನಲ್ಲಿ ಆಕೆ ಕಾಮನಬಿಲ್ಲನ್ನು ನೋಡಿ ಕುಣಿದಾಡುತ್ತಿದ್ದಳು. 'ಆ ಕಾಮನಬಿಲ್ಲನ್ನು ನನಗೆ ತಂದುಕೊಡು' ಎಂದಾಕೆ ಪೀಡಿಸುತ್ತಾಳೆ. 'ಆಗಲಿ' ಎನ್ನುತ್ತೇನೆ. ಎಂಥ ಮುಗ್ಧ ಪ್ರಶ್ನೆ! ಅನಂತರ ಕಾಗದದ ದೋಣಿಗಳನ್ನು ಮಾಡಿಕೊಟ್ಟರೆ ನನ್ನ ಜೊತೆಯಲ್ಲಿ ಆ ದೋಣಿಗಳನ್ನು ತೇಲಿಬಿಟ್ಟು ಏನೋ ಸಾಧಿಸಿದವಳಂತೆ ನನ್ನತ್ತ ನೋಡಿ ನಗುತ್ತಾಳೆ. ಆ ಪುಟ್ಟಿ ಮತ್ತೆ ಬರಲೇ ಇಲ್ಲ.



ನಮ್ಮ ಅಡ್ಮೀಷನ್ನಿಗ್ ಇದೇ ಒಳ್ಳೇ ಕಾಲೇಜ್! ಯಾಕಂದ್ರೆ ಇಲ್ಲಿ ಪರೀಕ್ಷೆಯಲ್ಲಿ ಕಾಪಿಗೆ ತುಂಬಾ ಸಹಕಾರ ಇದೆಯಂತೆ!

ಒಂದು ದಿನ ಮಧ್ಯಾಹ್ನ, ಕಾರ್ತಿಕಮಾಸದ ಸಮಯ. ಆನೆಹಬ್ಬದ ಹಿಂದಿನ ದಿನ. ಮಣ್ಣಿನಲ್ಲಿ ಆನೆಗಳನ್ನು ಮಾಡುತ್ತಿದ್ದೆವು. ಪುಟ್ಟಿಯ ಅಮ್ಮ ಪುಟ್ಟಿಯ ಅಜ್ಜಿಯಾದ ನನ್ನ ಅಮ್ಮ ನಾನು ಎಲ್ಲರೂ ಸೇರಿ ಮಣ್ಣು ಕಲೆಸಿದೆವು. 'ನಿಜವಾದ ಆನೆ ಮಾಡುತ್ತೀಯಾ ಅಪ್ಪಾ?' ಪುಟ್ಟಿಯ ಪ್ರಶ್ನೆ. 'ಅಲ್ಲವೆ ಪುಟ್ಟಿ? ಇದಕ್ಕೆ ಜೀವ ಇರುವುದಿಲ್ಲ' ನಾನು ಉತ್ತರಿಸುತ್ತೇನೆ. ಪುಟ್ಟಿಯದು ಮತ್ತೆ ಅದೇ ಪ್ರಶ್ನೆ. ಏನೋ ಸಂದೇಹ. ಪುಟ್ಟಿ ನನ್ನ ಬೆನ್ನ ಮೇಲೆ ಕುಳಿತು ಕತ್ತನ್ನು ತನ್ನ ಪುಟ್ಟ ಕೈಯಲ್ಲಿ ಬಳಸಿದ್ದಾಳೆ. ತೂಗಾಡುತ್ತಾಳೆ. ನಾನು ಅವಳನ್ನು ಕೆಳಗಿಳಿಸಲು ಪ್ರಯತ್ನಿಸುತ್ತೇನೆ. ನನ್ನ ಕೈಯೆಲ್ಲ ಕೆಸರಾಗಿದೆ. ಹೀಗಾಗಿ ಅದು ಸಾಧ್ಯವಿಲ್ಲ ಎನ್ನುವುದು ಅವಳಿಗೆ ಚೆನ್ನಾಗಿ ಗೊತ್ತು. ಪ್ರಯತ್ನಿಸಿದಾಗಲೆಲ್ಲಾ ಕಿಲಕಿಲ ನಗುತ್ತಾಳೆ. ತನ್ನ ಮುಖವನ್ನು ನನ್ನ ಮುಖದ ಹತ್ತಿರ ಬಗ್ಗಿಸಿ ತೊದಲು ಮತ್ತದೇ ಪ್ರಶ್ನೆ ಕೇಳುತ್ತಾಳೆ. ಎಷ್ಟು ಸಲ ಹೇಳಿದರೂ ಸಮಾಧಾನವಿಲ್ಲ. ಆ ಪುಟ್ಟಿ ಮುಖ, ಪುಟ್ಟ ಕಣ್ಣುಗಳು, ಮೃದುವಾದ ಪುಟ್ಟ ಕೈಗಳು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಆ ಪುಟ್ಟಿ ಮತ್ತೆ ಬರಲೇ ಇಲ್ಲ.

ಇನ್ನೊಂದು ನೆನಪು. ಮರಿಗೆ ಮೂರು ವರ್ಷ ವಯಸ್ಸು ಇರಬಹುದು. ಒಂದು ಸಾಯಂಕಾಲ ತಿಳಿ ನೀಲಿ ಫ್ರಾಕ್ ಹಾಕಿತ್ತು. ತಲೆಗೂದಲು ಕಟ್ ಮಾಡಿ ಕೇಪಿನ್ ಹಾಕಿದ್ದಳು ಅವರ ಅಮ್ಮ. ಚುಚ್ಚುವುದಿಲ್ಲವೆಂದು ಕೈಗೆ ಪ್ಲಾಸ್ಟಿಕ್ ಬಳೆಗಳು. ಕಾಲಿಗೆ ಹೂಗಳ ಕ್ಯಾನ್‌ವಾಸ್ ಶೂಸ್, ಬಿಳಿ ಸಾಕ್ಸ್. ಇವನ್ನೆಲ್ಲ ನಾನೇ ಪ್ರೀತಿಯಿಂದ ಹಾಕುತ್ತಿದ್ದೆ.

ನಾನವಳನ್ನು ಬಟಾಣಿಯೆಂದು ಕರೆಯುತ್ತಿದ್ದೆ. ಏಕೆಂದರೆ ಹಸಿರು ಬಟಾಣಿ ನನಗೆ ತುಂಬಾ ಇಷ್ಟ. ಅದಕ್ಕೆಂದೇ ನಾನು ಮರಿಯನ್ನು ಕಚ್ಚಿ ತಿಂದು ಬಿಡುತ್ತೇನೆಂದು ಛೇಡಿಸುತ್ತಿದ್ದೆ. ಆಗ ಮರಿ ನನ್ನವಳ ಹತ್ತಿರ ಅದನ್ನು ಹೇಳಿ ಭಯಪಡುತ್ತಿದ್ದಳು. ನನ್ನವಳು ನನಗೆ ಮುನಿಸುತೋರಿಸುತ್ತಿದ್ದಳು. ಆಗ ನನಗೆ ಖುಷಿಯಾಗಿ ಪುಟ್ಟಿಯನ್ನು ಹಿಡಿದು ಮುದ್ದಾಡುತ್ತಿದ್ದೆ. ಅದಕ್ಕೆ ನಗು. ಅದೆಂತಹ ಪ್ರೀತಿ. ಎಂತಹ ಸಂತೋಷ, ಎಂತಹ ಆನಂದ!

ರಾತ್ರಿ ನನ್ನ ಪಕ್ಕದಲ್ಲೆ ಮಲಗಬೇಕು. ನಾನು ಕಥೆ ಹೇಳಬೇಕು. ಗೋವಿನ ಕಥೆ ಎಂದರೆ ಅದಕ್ಕೆ ತುಂಬಾ ಇಷ್ಟ. 'ಅಮ್ಮ ನೀನು ಹೊರಟು ಹೋದರೆ ನಾನು ಯಾರ ಬಳಿ ಹೋಗಲಿ? ಯಾರ ಮೊಲೆಯ ಹಾಲು ಕುಡಿಯಲಿ?' ಕರು ಅಮ್ಮನನ್ನು ಕೇಳುವ ಪ್ರಶ್ನೆ. ಕರುಣಾಜನಕವಾದ ದೃಶ್ಯ. ಪುಟ್ಟಿಯ ಕಣ್ಣಲ್ಲಿ ನೀರು ತುಂಬುತ್ತಿತ್ತು. ಅದೇ ಕಿಂದರಜೋಗಿಯ ಪದ್ಯ ಹೇಳಿದಾಗ ನಗು, ಕುಣಿತ. ಇಷ್ಟೆಲ್ಲಾ ಆದ ಮೇಲೆ 'ರಾಮಾಯಣದ ಕಥೆ ಹೇಳು 'ಎಂಬ ಅಮ್ಮನ ಉವಾಚ. 'ಚಕ್ರವರ್ತಿ ದಶರಥನಿಗೆ ನಾಲ್ಕು ಜನ ಮಕ್ಕಳು. ಮೊದಲನೆಯವನ ಹೆಸರು ರಾಮ. ಎರಡನೆಯವ ಲಕ್ಷ್ಮಣ, ಮೂರನೆಯವ ಭರತ. ನಾಲ್ಕನೆಯವನ ಹೆಸರು.... 'ಎಂದು ಹೇಳುತ್ತಿರುವಾಗಲೆ ಪುಟ್ಟಿ ಕಣ್ಣುಮುಚ್ಚಿ ನಿದ್ರಾಲೋಕದಲ್ಲಿರುತ್ತಿದ್ದಳು. ಅವಳ ಕಾಲನ್ನು ಬಿಡಿಸಿ, ತೆಳುವಾದ ಹೊದಿಕೆ ಹೊದಿಸಿ, ಸೊಳ್ಳೆ ಕಚ್ಚದ ಹಾಗೆ ನೋಡಿ, ಮೆದುವಾಗಿ ಒಂದು ಮುತ್ತನ್ನು ಕೊಟ್ಟು, ನಾನು ಟೇಪ್ ಹಾಕುತ್ತಿದ್ದೆ. ಕೆ.ಎಲ್. ಸೈಗಲ್‌ರವರ 'ಸೋ ಜಾ ರಾಜಕುಮಾರಿ' ಹಾಡು ಕೇಳಿಬರುತ್ತಿತ್ತು. ನನ್ನ ಮರಿಯೇ ನನಗೆ ರಾಜಕುಮಾರಿ. ಆಹಾ, ಎಂಥಾ ಮೋಡಿ ಆ ಹಾಡಿನಲ್ಲಿ! ಮತ್ತೊಂದು ಮಕ್ಕಳಿಗೆ 'ಕಹಾನಿ ಗಾಕರ್ ಸುನತಾ ಹೂಂ' ಎನ್ನುವ ಹಾಡು. ಆ ಹಾಡುಗಳನ್ನು ಕೇಳಿದಾಗಲೆಲ್ಲಾ ಪುಟ್ಟಿ ನನ್ನ ಮನಸ್ಸಿನ ಕಣ್ಣುಗಳ ಮುಂದೆಯೇ ಬರುತ್ತಾಳೆ. ಆ ಮರಿ ಮತ್ತೆ ನನ್ನ ಹತ್ತಿರ ಬರಲೇ ಇಲ್ಲ.

ಇದಾಗಿ ವರ್ಷಗಳೇ ಉರುಳಿವೆ. ನನ್ನ ಭಾರ್ಯೆಯೂ ನನ್ನನ್ನು ಅಗಲಿ ಎಷ್ಟೋ ಕಾಲವಾಯಿತು. ಈಗ ನಾನು ವೃದ್ಧನಾಗಿದ್ದೇನೆ. ವರ್ಷಾಋತುವಿನ ಒಂದು ದಿನಸಾಯಂಕಾಲದ ಮಳೆ ಬಂದು ನಿಂತಿದೆ. ಆಕಾಶ ತಿಳಿಯಾಗಿದ್ದು ಪುಟ್ಟ ಹಕ್ಕಿಗಳು ಗುಂಪುಗುಂಪಾಗಿ ಹಾರಾಡುತ್ತಿವೆ. ಪುಟ್ಟ ಮಕ್ಕಳು ಮಳೆಯ ನೀರಿನಲ್ಲಿ ಕಾಗದದ ದೋಣಿಗಳನ್ನು ಬಿಡುತ್ತಾ ಇವೆ. ಪುಟ್ಟಪ್ಪನವರ ಸಾಲುಗಳು ನನ್ನ ಮನಸ್ಸಿಗೆ ಬರುತ್ತಾ ಇವೆ.

ಕೋಲನ್ನೂರಿ ನಿಂತಿದ್ದ ನಾನು ತಿಳಿ ಸಂಜೆ ಬಾನಿನೆಡೆ ನಿಟ್ಟಿಸಿ ನೋಡುತ್ತಾ ನಿಂತೆ. ನೀಲಿ ಫ್ರಾಕ್, ರಿಬ್ಬನಿನ ಎರಡು ಜಡೆ, ಹೂವಿನ ಶೂಸ್, ಕರಿಯ ಬಳೆ ಹಾಕಿರುವ ಮುಗ್ಧ ಮುದ್ದು ಮುಖದ ನನ್ನ ಪುಟ್ಟಿ 'ಅಪ್ಪಾ' ಎಂದು ಕರೆದಂತಾಯಿತು. ಎಲ್ಲೋ ದೂರದಿಂದ ಸೈಗಲ್‌ರ 'ಸೋಜಾ ರಾಜಕುಮಾರಿ' ತರಂಗ ತರಂಗವಾಗಿ ತೇಲಿಬರುತ್ತಿತ್ತು. ನನ್ನ ಕಣ್ಣುಗಳು ತುಂಬಿಬಂದಿದ್ದವು.

ಐನ್‌ಸ್ಟೈನ್‌ರ ನಿಯಮದ ಪ್ರಕಾರ ಒಂದು ಕಿಲೋತೂಕದ ಯಾವುದೇ ವಸ್ತುವನ್ನಾದರೂ ಶಕ್ತಿಯಾಗಿ ಪರಿವರ್ತಿಸಿದರೆ ೫೧.೮೧ ಕೋಟಿ ಯುನಿಟ್ಟುಗಳಷ್ಟು ವಿದ್ಯುತ್ತನ್ನು ಉತ್ಪಾದಿಸಬಹುದು. ಹಾಗೆಯೆ ಒಂದು ಗ್ರಾಮ್ ದ್ರವ್ಯರಾಶಿಯನ್ನು ಶಕ್ತಿಯನ್ನಾಗಿಸಿದರೆ ನೂರುವ್ಯಾಟ್ ಸಾಮರ್ಥ್ಯದ ಹತ್ತು ಬಲ್ಬುಗಳನ್ನು ೨೮೫೦ ವರ್ಷಗಳ ವರೆಗೆ ಸತತವಾಗಿ ಉರಿಸಬಹುದು.

✤ ಕೆ. ಗಣೇಶ

ತಕ್ಕಡಿಯಲ್ಲಿ ವೇದಗಳ ಮಾರಾಟ

ಬಹಳ ಹಿಂದಿನ ಕಥೆ. ಕುರುಕ್ಷೇತ್ರದಲ್ಲಿ ಉಷಸ್ತಿ ಚಾಕ್ರಾಯಣರೆಂಬ ಋಷಿಗಳು ವಾಸವಾಗಿದ್ದರು. ಫಾಲ್ಗುಣ ಮಾಸ. ಹೊಲದಲ್ಲಿ ಜೋಳ, ಗೋದಿ, ಕಡಲೆ, ಅಲಸಂದಿಗಳು ಭರದಿಂದ ಬೆಳೆದಿದ್ದವು. ಇದ್ದಕ್ಕಿದ್ದಂತೆ ಬಿರುಗಾಳಿ ಬೀಸಲು ಪ್ರಾರಂಭಿಸಿತು. ಕಾರ್ಮೋಡಗಳು ಕವಿದವು. ಸ್ವಲ್ಪ ಸಮಯದಲ್ಲೆ ಆಲಿಕಲ್ಲಿನ ಮಳೆಯಾಗಿ ಬೆಳೆಯೆಲ್ಲ ಹಾಳಾಯಿತು. ಆಶ್ರಮದ ಧಾನ್ಯಸಂಗ್ರಹ ತೀರುತ್ತಾ ಬಂತು. ಬರ ಬರುತ್ತ ಆಶ್ರಮದಲ್ಲಿ ಅನ್ನದ ಅಭಾವ ಎಷ್ಟಾಯಿತೆಂದರೆ ಪ್ರಾಣವನ್ನು ರಕ್ಷಿಸಿಕೊಳ್ಳಲು ಮಾವುತನೊಬ್ಬನ ಎಂಜಲನ್ನೇ ತಿನ್ನುವಷ್ಟು ದುರ್ಧರ ಪ್ರಸಂಗ ಉಷಸ್ತಿ ಚಾಕ್ರಾಯಣರಿಗೆ ಬಂತು. ಈಗವರು ಅನ್ನವನ್ನು ಹುಡುಕಿಕೊಂಡು ಹೋಗಲೇಬೇಕಾಯಿತು. ಹೀಗೆಯೆ ಅವರು ಅನ್ನದ ನಿರೀಕ್ಷೆಯಲ್ಲಿ ಸಂಚರಿಸುತ್ತಾ ಹೊರಟಾಗ ಯಜ್ಞ ನಡೆಯುತ್ತಿದ್ದಲ್ಲಿಗೆ ಬಂದರು. ರಾಜನೊಬ್ಬ ಯಜ್ಞದ ಯಾಜಮಾನ್ಯವನ್ನು ವಹಿಸಿಕೊಂಡಿದ್ದ. ಋಷಿಮುನಿಗಳು ವೇದಮಂತ್ರಗಳನ್ನು ತಪ್ಪಾಗಿ ಉಚ್ಚರಿಸುತ್ತಾ ಯಜ್ಞ ನಡೆಸುತ್ತಿದ್ದರು. ಅಕಾಲದಲ್ಲಿ ಆಲಿಕಲ್ಲಿನ ವೃಷ್ಟಿ ಏಕಾಯಿತೆಂಬುದು ಚಾಕ್ರಾಯಣರಿಗೆ ಕೂಡಲೆ ಗಮನಕ್ಕೆ ಬಂದು, ವೇದಮಂತ್ರಗಳನ್ನು ತಪ್ಪಾಗಿ ಉಚ್ಚರಿಸುತ್ತಿದ್ದುದಕ್ಕಾಗಿ ಋಷಿಮುನಿಗಳನ್ನು ತರಾಟೆಗೆ ತೆಗೆದುಕೊಂಡರು. ಸರಿಯಾದ ಉಚ್ಚಾರವನ್ನೂ ಅವರಿಗೆ ಹೇಳಿಕೊಟ್ಟರು. ಯಜ್ಞ ಸಾಂಗವಾಗಿ ನೆರವೇರಿತು.

ವೇದ ಮಂತ್ರಗಳನ್ನು ತಪ್ಪಾಗಿ ಉಚ್ಚರಿಸಿದರೆ ಕೃಷಿಗೆ ಹಾನಿಯೂ ಸರಿಯಾಗಿ ಉಚ್ಚರಿಸಿದರೆ ಲಾಭವೂ ಆಗುವುದೆಂಬುದೇ ಮೇಲಿನ ಉಪನಿಷತ್ ಕಥೆಯ ತಾತ್ಪರ್ಯ.


ವೇದಗಳನ್ನು ತಪ್ಪಾಗಿ ಉಚ್ಚರಿಸುವುದೇ ಇಷ್ಟೆಲ್ಲ ಅನಾಹುತಕ್ಕೆ ಕಾರಣವಾಗುವುದಾದರೆ ವೇದಗಳನ್ನೇ ತಕ್ಕಡಿಯಲ್ಲಿಟ್ಟು ಮಾರಿದರೆ ಇನ್ನೆಂತಹ ಅವಾಂತರಗಳಾಗಬಹುದೆಂಬುದೇ ಈಗ ನನ್ನ ಮುಂದಿರುವ ಪ್ರಶ್ನೆ.

ಇಂಥದೊಂದು ಘಟನೆ ಯಾವ ನಗರದಲ್ಲಿ ನಡೆಯಿತೆಂಬುದನ್ನು ಹೇಳಲು ಸಂಕೋಚವೂ ಆಗುತ್ತದೆ, ಲಜ್ಜೆಯೂ ಎನಿಸುತ್ತದೆ. ಆದರೆ ಇಷ್ಟು ಮಾತ್ರ ಹೇಳಬಲ್ಲೆ, ಭಾರತದ ಎರಡು ಪ್ರಸಿದ್ಧ ನದಿಗಳು ಕೂಡುವಲ್ಲಿ ಈ ನಗರವಿದ್ದು ಪ್ರಾಚೀನ ಕಾಲದಲ್ಲಿ ಇದು ಋಷಿಮುನಿಗಳ ತಾಣವಾಗಿತ್ತು. ಇಲ್ಲಿನ ಆಶ್ರಮಗಳಲ್ಲಿ ಆಗ ಸದಾ ವೇದಾಧ್ಯಯನ ನಡೆಯುತ್ತಿತ್ತು. ವಿದ್ಯಾರ್ಥಿಗಳು ಶಾಸ್ತ್ರಾಭ್ಯಾಸದಲ್ಲಿ ನಿರತರಾಗಿರುತ್ತಿದ್ದರು. ಇಂದಿಗೂ ಈ ನಗರ ತೀರ್ಥಕ್ಷೇತ್ರವೆಂದು ಪರಿಗಣಿಸಲ್ಪಡುತ್ತಿದೆ. ರಾಜಕೀಯವಾಗಿಯೂ ಈ ನಗರಕ್ಕೆ ತನ್ನದೇ ಆದ ಮಹತ್ವವಿದೆ. ಅನೇಕ ಮಹತ್ವದ ನಿರ್ಣಯಗಳು ಈ ಪುಣ್ಯ ನಗರದಲ್ಲಿಯೆ ಕೈಗೊಳ್ಳಲ್ಪಟ್ಟಿವೆ. ವೇದಾಧ್ಯಯನವನ್ನೇ ಜೀವನದ ಪರಮಗುರಿಯಾಗಿ ಭಾವಿಸಿದ್ದ ಋಷಿಗಳು ವಾಸಿಸುತ್ತಿದ್ದ ಈ ನಗರದಲ್ಲಿಯೆ ಮೇಲೆ ಹೇಳಿದ ಘಟನೆ ನಡೆದದ್ದು.

ಒಂದು ದಿನ ಮುಂಜಾನೆ ಚಹಾ ಮಾಡಬೇಕೆಂದರೆ ಸಕ್ಕರೆಯಿತ್ತು, ಪುಡಿಯಿತ್ತು, ಆದರೆ ಒಲೆ ಹೊತ್ತಿಸಲು ಇದ್ದಿಲು ಇರಲಿಲ್ಲ, ಒಂದು ಚೀಲವನ್ನು ತೆಗೆದುಕೊಂಡು ಒಳ್ಳೆ ದರ್ಜೆಯ ಇದ್ದಿಲು ಸಿಗುವಲ್ಲಿಗೆ ಹೋದೆ. ಅಂಗಡಿಯಾತ ಇದ್ದಿಲನ್ನು ತೂಗುತ್ತಿದ್ದಾಗ ಬದಿಯಲ್ಲೆ ಇದ್ದ ಕಾಗದದ ರಾಶಿಯತ್ತ ನನ್ನ ಗಮನ ಹೋಯಿತು. ಆ ರಾಶಿಯಲ್ಲೊಂದು ಹಳೆಯ ಪುಸ್ತಕ. ಕುತೂಹಲದಿಂದ ಅದನ್ನು ತೆಗೆ

-ಡಾ. ಜಯಶಂಕರ ತ್ರಿಪಾಠಿ

ಪ್ರಸ್ತುತಪಡಿಸಿದವರು: 'ಎಂ. ದೀಪಾ'



ದುಕೊಂಡು ನೋಡಿದಾಗ ದುಃಖ-ಸಂತೋಷಗಳೆ ರಡೂ ಉಮ್ಮಳಿಸಿ ಬಂದವು. ಯಾಸ್ಕನ ನಿರುಕ್ತ ಅದಾಗಿತ್ತು. "ಈ ಪುಸ್ತಕ ನಿನಗೆಲ್ಲಿ ಸಿಕ್ಕಿತೋ" ಎಂದು ಅಂಗಡಿಯವನನ್ನು ಕೇಳಿದಾಗ "ಹೀಗೆಯೆ ರದ್ದಿ ಯಲ್ಲಿ ತಂದಿದ್ದೆ ರಾಯರೆ, ಬೇಕಾದರೆ ನೀವೆ ಈ ಪುಸ್ತಕವನ್ನು ಇಟ್ಟುಕೊಳ್ಳಿ" ಎಂದಾತ ಉತ್ತರ ಕೊಟ್ಟ.

ಪುಸ್ತಕವನ್ನು ತೆಗೆದುಕೊಂಡು ಹೊರಟಾಗ, "ರಾಯರೆ, ರೂಪಾಯಿಗೆ ಕಿಲೋದಂತೆ ಅದನ್ನು "ಕೊಂಡಿದ್ದೇನೆ." ಅಂದ. "ಹಾಗಾದರೆ ಹಣ ಬೇಕೇನು? ಎಷ್ಟು ಕೊಡಬೇಕು?" ಎಂದು ನಾನು ಕೇಳಿದೆ. ಅವನು ಪುಸ್ತಕವನ್ನು ನನ್ನಿಂದ ಇಸಿದು ಕೊಂಡು ಇದ್ದಿಲನ್ನು ತೂಗುವ ತಕ್ಕಡಿಯಲ್ಲಿಟ್ಟು ತೂಗಿ "ಎಂಟಾಣೆ ಕೊಡಿ ರಾಯರೆ," ಅಂದ.

"ಅಂ! ಎಂಟಾಣೆಯೆ? ಯಾಸ್ಕನ ಪುಸ್ತಕಕ್ಕೆ ಬರಿ ಎಂಟಾಣೆಯೆ? ಈ ಪುಸ್ತಕ ಎಷ್ಟು ಮಹತ್ವದ್ದು ಎನ್ನುವುದೇನಾದರೂ ನಿನಗೆ ಗೊತ್ತೆ?" ಅಂದೆ.

"ಇರಬಹುದು ರಾಯರೆ. ನಾನು ಕೊಂಡದ್ದು ರೂಪಾಯಿಗೆ ಕಿಲೋದಂತೆಯೆ. ಇಂತಹ ಇನ್ನು ಎಷ್ಟೋ ಪುಸ್ತಕಗಳಿದ್ದವು. ಅವುಗಳನ್ನೆಲ್ಲಾ ಪುಡಿಕೆ ಕಟ್ಟಿ ಕೊಟ್ಟುಬಿಟ್ಟೆ. ಈ ಪುಸ್ತಕದ ಹಾಳೆಗಳನ್ನು ಪುಡಿಕೆ ಕಟ್ಟಲು ಪ್ರಾರಂಭಿಸಿದ್ದೆ; ಅಷ್ಟರಲ್ಲಿ ನೀವು ಅದನ್ನು ಕೇಳಿದಿರಿ" ಅಂದ ಅಂಗಡಿಕಾರ.

ಹಳೆಗಾಲದ ಮೂರ್ತಿಗಳೋ ಹಸ್ತಪ್ರತಿಗಳೋ ದುರ್ಲಭ ಪುಸ್ತಕಗಳೋ ಕೈಗೆ ಸಿಕ್ಕಾಗ ಹೆಚ್ಚಿನ ಬೆಲೆಗೆ ಮಾರಿ ಲಾಭ ಮಾಡಿಕೊಳ್ಳುವ ಯುನಿವರ್ಸಿಟಿ ಪ್ರೊಫೆಸರರಿಗಿಂತಲೂ ಆ ಅಂಗಡಿಕಾರ ಅಂದು ಹೆಚ್ಚು ಪ್ರಾಮಾಣಿಕನಾಗಿ ಕಂಡು ಬಂದ.

ಮನೆಗೆ ಬಂದವನೆ ಚಹಾ ಕುಡಿದು ಆ ಪುಸ್ತಕದ ಪುಟಗಳನ್ನು ತಿರುವಲು ಪ್ರಾರಂಭಿಸಿದೆ. ಡಬಲ್ ಡೆಮ್ಮಿ ಸೈಜಿನ ಪುಸ್ತಕ. ಮೊದಲ ೯೮ ಪುಟಗಳನ್ನು ಈಗಾಗಲೆ ಪುಡಿಕೆ ಕಟ್ಟಲಾಗಿದೆ. ೪೭೦ರ ಮುಂದಿನ ಪುಟಗಳೂ ಇಲ್ಲ. ಎರಡನೆಯ ಅಧ್ಯಾಯದಿಂದ ಪುಸ್ತಕ ಶುರುವಾಗಿ ಹತ್ತನೆಯ ಅಧ್ಯಾಯದೊಂದಿಗೆ ಕೊನೆಗೊಳ್ಳುತ್ತದೆ. ಮೂಲಪಾಠದ ಕೆಲ ವೈದಿಕ ಛಂದಸ್ಸುಗಳಿಗೂ ಹಿಂದೀ ಅರ್ಥವಿವರಣೆಗೂ ಅಲ್ಲಲ್ಲಿ ಮಾರ್ಕ್ ಹಾಕಿರುವುದರಿಂದ ಈ ಮೊದಲು ಪುಸ್ತಕವನ್ನು ಯಾರೋ ವಿದ್ವಾಂಸರು ಓದಿರಬೇಕು. ಪುಸ್ತಕದಲ್ಲೆ ಒಂದು ನವಿಲುಗರಿ, ತಾಡವಾಲೆಯ ತುಣುಕು ಹಾಗೂ ಮೂರು ಕಾಗದಗಳು. ಆ ಪೈಕಿ ಒಂದರ ಮೇಲೆ ವೈದಿಕ ಋಚೆಗಳನ್ನು ಬರೆಯಲಾಗಿದೆ. ಇದಲ್ಲದೆ ಪುಸ್ತಕದ ಮಧ್ಯದಲ್ಲೆ ಯೂನಿವರ್ಸಿಟಿ ಪ್ರೊಫೆಸರರೊಬ್ಬರ ಲೆಟರ್ ಹೆಡ್. ಈ ಪ್ರಾಧ್ಯಾಪಕರೇ ಮುಂದೆ ಆ ವಿಶ್ವವಿದ್ಯಾಲಯದ ಕುಲಪತಿಗಳೂ ಆದರೆನ್ನುವುದು ನೆನಪಿಗೆ ಬಂತು. ಆ ಪುಸ್ತಕವನ್ನೋದಿದ ವಿದ್ವಾಂಸರ ಸುಕೃತವೇ ಎನ್ನಿ, ಕೊನೆಗೂ ವೇದಗಳ ಬಗ್ಗೆ ಗೌರವವಿರಿಸಿಕೊಂಡ, ಅಷ್ಟಿಷ್ಟು ಶಾಲೆ ಕಲಿತ ನನ್ನಂಥವನ ಕೈಗೆ ಆ ಪುಸ್ತಕ ಬಂತು. ಪುಸ್ತಕವನ್ನು ತಿರುವಿಹಾಕುತ್ತಿದ್ದಹಾಗೆ ಈ ಋಚಸ್ಸು ಕಣ್ಣಿಗೆ ಬಿತ್ತು.

ಇಮಂ ಮೇ ಗಂಗೇ ಯಮುನೇ ಸರಸ್ವತಿಂ ಸ್ತೋಮ ಸಚತಾ ಪರುಷ್ಣ್ಯಾ

ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ!! (೧೦/೭೫/೫)

ಅರ್ಥಾತ್, "ಹೇ ಗಂಗೆ, ಯಮುನೆ, ಸರಸ್ವತಿ, ಸತಲಜ, ಇರಾವತಿ, ನನ್ನ ಋಚಾಗಾನವನ್ನು ಕೇಳಿ. ಅಸಿಕ್ನಿಯೊಂದಿಗೆ ಮರುದ್ವೃಧಾ (ಮಳೆಗಾಲದಲ್ಲಿ ವೃದ್ಧಿಸುವ) ಹಾಗೂ ವಿತಸ್ತಾ, ಸುಷೋಮೆಯರೊಂದಿಗೆ ಹೇ ವಿಪಾಶ, ನೀವೂ ಋಚಾಹ್ವಾನವನ್ನು ಕೇಳಿ."

ಋಷಿಗಳು ನದಿಗಳ ದರ್ಶನ ಮಾತ್ರದಿಂದ ಎಷ್ಟು ಪ್ರಸನ್ನರಾಗಿದ್ದಾರೆನ್ನುವುದನ್ನು ಈ ಋಚಸ್ಸು ಎತ್ತಿ ತೋರಿಸುತ್ತದೆ. ಆದರೆ ಮತ್ತೊಮ್ಮೆ ಆ ಋಚಸ್ಸನ್ನೇ ಓದಿದಾಗ ನಾನು ಪುಸ್ತಕಕೊಂಡ ಸಂದರ್ಭದಲ್ಲಿ ಬೇರೆಯೆ ಆದ ಅರ್ಥ ಧ್ವನಿತವಾದಂತೆ ಎನಿಸಿತು. 'ಹೇ ಗಂಗೆ, ಯಮುನೆ, ಸರಸ್ವತಿಗಳಂತಹ ಮಹಿಮಾನ್ವಿತ ನದಿಗಳೆ, ನಾನು (ಗ್ರಂಥ) ನಿಮ್ಮ ತಟದ ಮೇಲೆ ಉಪಾಸನೆ ಮಾಡುತ್ತಿದ್ದ ಋಷಿವಾಣಿಯ ಸಂಹಿತೆಯೇ ಆಗಿದ್ದೇನೆ. ಅಸಿಕ್ನಿ, ವಿತಸ್ತಾ, ಮರುಧ್ವ ಹಾಗೂ ಇತರ ನದಿಗಳೆ, ಇನ್ನೊಮ್ಮೆ ಕೇಳಿ. ನಾನು ಋಷಿವಾಣಿಯ ಸಂಹಿತೆಯೆ ಆಗಿದ್ದೇನೆ. ಋಷಿವಾಣಿ ಭಾರತೀಯರಲ್ಲಿ ಎಂತೆಂತಹ ಭಾವನೆಗಳನ್ನು ಉತ್ಪ್ರೇರಿಸುವವೆಂಬುದು ನಿಮಗೆ ಗೊತ್ತೇ ಇದೆ. ಆದರೆ ನಾನಿಂದು ನಿಮ್ಮ ತಟದ ಮೇಲೆಯೆ ಸ್ಥಿತವಾದ ನಗರದಲ್ಲಿ ಇದ್ದಿಲಿನ ತಕ್ಕಡಿಯಲ್ಲಿ ಮಾರಲ್ಪಡುತ್ತಿದ್ದೇನೆ."


ಭಾರತದ ವಿಶ್ವವಿದ್ಯಾಲಯಗಳ ಪೌರಸ್ತ್ಯ ವಿಭಾಗಗಳಲ್ಲಿ ಅಧ್ಯಾಪನ ವೃತ್ತಿಯನ್ನು ಕೈಗೊಂಡವರಿಗೆ ವೇದ ಗ್ರಂಥಗಳು ಬರಿ ಜೀವನಯಾಪನೆಯ ಮಾರ್ಗವಾಗಿರುವಾಗ ಅವರು ವೇದವಾಣಿಯನ್ನು ಸರಿಯಾದ ರೂಪದಲ್ಲಿ ಗ್ರಹಿಸುತ್ತಾರೆಂದು ಭಾವಿಸುವುದಾದರೂ ಹೇಗೆ? ಅವರಿಗೂ ಮಹತ್ವವಾದದ್ದು ವೇದಗಳ ಹಸ್ತಪ್ರತಿಯೇ ಹೊರತು ವೇದವಾಣಿಯಲ್ಲ ಮತ್ತು ವೇದವಾಣಿಯನ್ನು ತಕ್ಕಡಿಯಲ್ಲಿಟ್ಟು ತೂಗುವುದೂ ಒಂದೇ ಅಂಗೈ ಮೇಲೆ ಹಿಮಾಲಯವನ್ನಿಟ್ಟುಕೊಳ್ಳಲು ಯತ್ನಿಸುವುದೂ ಒಂದೇ.

ವೇದ ಗ್ರಂಥಗಳನ್ನು ಇದ್ದಿಲಿನ ದರದಲ್ಲಿ ಏಕೆ ಮಾರಲಾಗುತ್ತಿದೆ ಎಂಬುದಕ್ಕೆ ಉತ್ತರವನ್ನು ಇತಿಹಾಸವೇ ಹೇಳುವುದು. ಆದರೆ ಹಾಗಾಗುವುದಕ್ಕೆ ಮೊದಲು ಇತಿಹಾಸದೊಂದಿಗೆ ಸರಿಯಾದ ಸಂಪರ್ಕವಾದರೂ ನಮಗೆ ಬರಬೇಕಲ್ಲ? ಇತಿಹಾಸದ ಹೆಸರಿನಲ್ಲಿ ನಾವು ಏನನ್ನು ಓದುತ್ತಿದ್ದೇವೆ? ಇತಿಹಾಸವೆಂದರೆ ನಾವು ಏನೆಂದು ತಿಳಿದುಕೊಂಡಿದ್ದೇವೆ ಅಥವಾ ತಿಳಿದುಕೊಳ್ಳುವ ಬಗೆಗೆ ಜಿಜ್ಞಾಸೆಯಿದೆ ಎಂಬುದನ್ನು ಯೋಚಿಸುವಾಗ ಒಂದು ಪ್ರಸಂಗ

ನೆನಪಾಗುತ್ತದೆ. ವೈದಿಕ ಸಾಹಿತ್ಯದಲ್ಲಿ 'ಬ್ರಹ್ಮ' ಶಬ್ದ ಮೇಲಿಂದ ಮೇಲೆ ಬರುತ್ತದೆ. ಸಂಶೋಧನಾ ವಿದ್ಯಾರ್ಥಿಯೊಬ್ಬ 'ಸ್ತುತಿ', 'ಪ್ರಶಂಸೆ', ಎಂದು ಅದಕ್ಕೆ ಅರ್ಥ ಬರೆದಿದ್ದನಲ್ಲದೆ ತಾನು ಬರೆದದ್ದು ಸರಿಯೆಂದು ಸಮರ್ಥಿಸಲು ಬಂಗಾಲಿ ವಿದ್ವಾಂಸನ ಗ್ರಂಥವನ್ನೂ ಉದಾಹರಿಸಿದ್ದ. ವೈದಿಕ ಸಾಹಿತ್ಯದ ಬಗ್ಗೆ ಅಷ್ಟಿಷ್ಟು ಗೊತ್ತಿರುವವರು ಗ್ರಹಿಸಿದ ಹಾಗೆ ನಾನೂ 'ಬ್ರಹ್ಮ'ದ ಅರ್ಥ 'ಸ್ವಯಂಭೂ' ಹಾಗೂ 'ವಿರಾಟ' ಎಂದೇ ತಿಳಿದುಕೊಂಡಿದ್ದೆ. ಆತ ಹಾಗೆ ಬರೆದದ್ದನ್ನು ನೋಡಿ ಆಶ್ಚರ್ಯವಾಗಿ ಆತನ ಸಂಶೋಧನೆಗೆ ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತಿದ್ದ ಪ್ರೊಫೆಸರರನ್ನು ಭೇಟಿಯಾದೆ. ಅವರೂ 'ಬ್ರಹ್ಮ'ನ ಅರ್ಥವನ್ನು 'ಪ್ರಶಂಸೆ', 'ಸ್ತುತಿ' ಎಂದೇ ಹೇಳಿದಾಗ, "ಹಾಗಾದರೆ ಆ ಅರ್ಥ ಬರಲು ಯಾವ ಧಾತುವಿನ ವ್ಯುತ್ಪತ್ತಿಯನ್ನು ಅವಲಂಬಿಸುತ್ತೀರಿ?" ಎಂದು ಕೇಳಿದೆ. ಅವರು ತಕ್ಷಣ ಮ್ಯಾಕ್‌ಡೋನಾಲ್ಡ್‌ರ ರೀಡರ್ ತೆಗೆದು ಆತ ಬರೆದ ವ್ಯಾಖ್ಯೆಯನ್ನೋದಿ ತಾವು ಹೇಳಿದ್ದು ಸರಿಯೆಂದು ಸಮರ್ಥಿಸಿಕೊಂಡರು.

"ವೈದಿಕ ಶಬ್ದಕ್ಕೆ ಮ್ಯಾಕ್‌ಡೋನಾಲ್ಡರ ಅರ್ಥವನ್ನೇ ಏಕೆ ಅವಲಂಬಿಸುತ್ತೀರಿ? ಆ ಬಗ್ಗೆ ಸಾಯಣರು ಏನು ಹೇಳಿದ್ದಾರೆಂಬುದನ್ನಿಷ್ಟು ಹೇಳಿರಲ್ಲ?" ಎಂದು ಕೇಳಿದಾಗ ಅವರ ಹಣೆಯ ಮೇಲೆ ಚಿಂತೆಯ ಗೆರೆಗಳು ಮೂಡಿದವು. ಒಂದು ಕ್ಷಣ ಯೋಚಿಸಿ, ಕೆಳಗೆ ಬಂದ ಕನ್ನಡಕವನ್ನು ಮೇಲೇರಿಸಿಕೊಳ್ಳುತ್ತಾ ಹೇಳಿದರು. "ನೀವು ಹೇಳುವುದು ಸರಿ. ಸಾಯಣರು ಬರೆದಿದ್ದನ್ನು ನಾನು ಓದಲಿಲ್ಲ."

"ನೀವು ಸದ್ಯದಲ್ಲೇ ನಿವೃತ್ತರಾಗಲಿದ್ದೀರಿ. ಇಷ್ಟು ವರ್ಷಗಳಲ್ಲಿ ಸಾಯಣರನ್ನು ಓದಬೇಕೆಂದು



ಹಣ ತಗೊಂಡಿದಾರೆ ನಮ್ಮೆಜಮಾನ್ರು ನಿಜ. ಆದರೆ ಅದನ್ನು ಸ್ವಂತಕ್ಕೆ ಉಪಯೋಗಿಸಿಕೊಂಡಿಲ್ಲ. ತಿರುಪತಿ ಪುಟಪರ್ತಿ ಹುಂಡಿಗೆ ಹಾಕಿದಾರೆ.

ಒಮ್ಮೆಯೂ ನಿಮಗೆ ಅನಿಸಲಿಲ್ಲವೆ? ಈ ದೇಶದ ಸಂಸ್ಕೃತದ ಪ್ರೊಫೆಸರರು ವೇದಗಳನ್ನು ವ್ಯಾಖ್ಯಾನಿಸುವಾಗ ಸಾಯಣರನ್ನು ಅವಲಂಬಿಸದೆ ಮ್ಯಾಕ್‌ಡೋನಾಲ್ಡರನ್ನು ಅವಲಂಬಿಸುತ್ತಾರೆನ್ನುವುದು ಆಶ್ಚರ್ಯಕರವಾಗಿ ಕಾಣುವುದಿಲ್ಲವೆ?" ಎಂದು ನಾನು ಸ್ವಲ್ಪ ಚಿಂತಾತುರನಾಗಿಯೇ ಕೇಳಿದೆ. ಅವರು ಪ್ರಶ್ನೆಗೆ ಉತ್ತರಿಸಲೇ ಇಲ್ಲ. ನಮ್ಮ ವಿಶ್ವವಿದ್ಯಾಲಯಗಳ ಸಂಸ್ಕೃತ ವಿಭಾಗವು ಈ ದೇಶದ 'ಇತಿಹಾಸ, ಪರಂಪರೆಗಳೊಂದಿಗೆ ತನ್ನ ಕೊಂಡಿಯನ್ನೇ ಕಳಚಿಕೊಂಡಿರುವಾಗ ಅವರಾದರೂ ಏನು ಮಾಡಬಲ್ಲರು? ಹಾಗೆ ನೋಡಿದರೆ, ಯುರೋಪಿಯನ್ ವಿದ್ವಾಂಸರು ನಮ್ಮ ಪ್ರಾಚೀನ ಸಾಹಿತ್ಯ ಹಾಗೂ ಸಮಾಜದ ಬಗೆಗೆ ಹೇಳಿದ್ದನ್ನೇ ರಿಹರ್ಸಲ್ ಹಾಗೂ ಪ್ರಚಾರ ಮಾಡಲು ನಾವು ಸಂಸ್ಕೃತ ವಿಭಾಗಗಳನ್ನು ಸ್ಥಾಪಿಸಿದ ಹಾಗೆ ಕಾಣುತ್ತದೆ!

ವೇದಗಳನ್ನಿಂದು ಇದ್ದಿಲಿನ ಬೆಲೆಗೆ ಮಾರಲಾಗುತ್ತಿದ್ದರೆ, ದೂರಾನ್ವಯವಾದರೂ ಸರಿ, ಅದಕ್ಕೆ ಕಾರಣ ನಾವು ಸಂಸ್ಕೃತ ಕಲಿಸುವವರು ಎಂದೇ ಹೇಳಬೇಕು. ಇದನ್ನು ಹೇಳುವಾಗ 'ಅಭಿಜ್ಞಾನ ಶಾಕುಂತಲ'ದ ಪ್ರಸಂಗವೊಂದು ನೆನಪಿಗೆ ಬರುತ್ತದೆ. ವನಗಳಲ್ಲಿ ವಾಸಿಸುತ್ತಿದ್ದ ಋಷಿಗಳು ಆಗ ಕ್ವಚಿತ್ತಾಗಿಯೆ ನಗರಕ್ಕೆ ಬರುತ್ತಿದ್ದರು. ಹೀಗೊಮ್ಮೆ ಕಣ್ವರಿಂದ ಸಂದೇಶ ತೆಗೆದುಕೊಂಡು ಋಷಿಗಳು ಬರುತ್ತಿದ್ದಾರೆನ್ನುವುದನ್ನು ಕೇಳಿ ದುಷ್ಯಂತನಿಗೆ ಆಶ್ಚರ್ಯದೊಡನೆ ಚಿಂತೆಯೂ ಆಗುತ್ತದೆ. ಆತ ದ್ವಾರಪಾಲಕನನ್ನು ಕೇಳುತ್ತಾನೆ.

ಅಹೋಸ್ವಿತ್ ಪ್ರಸವೋ ಮಮಾಪಚರಿತೈರ್ವಿಷ್ಟಂಭಿತೋ ವೀರುಧಾ

ಮಿತ್ಯಾರೂಢ ಬಹುಪ್ರತರ್ಕಮಪರಿಚ್ಛೇದಾಕುಲಂ ಮೇ ಮನಃ

ಅರ್ಥಾತ್ "ತಪೋವನದ ತರುಲತೆಗಳು ಹೂಬಿಡುವುದನ್ನೂ ಹಣ್ಣುಗಳನ್ನು ಬಿಡುವುದನ್ನೂ ನಿಲ್ಲಿಸಿದವೇನು? ಅದನ್ನು ಹೇಳಲಿಕ್ಕಾಗಿಯೇ ಋಷಿಗಳು ಇಲ್ಲಿಯವರೆಗೆ ಬರಬೇಕಾಯಿತೇನು? ತಾನೇನಾದರೂ ತಪ್ಪುಮಾಡಿದ್ದರಿಂದ ಗಿಡಗಳು ಫಲಕೊಡುವುದನ್ನು ನಿಲ್ಲಿಸಿದವೇ? ಎಂಬ ಆತಂಕ ಅವನಿಗೆ. ರಾಜನು ಮಾಡುವ ತಪ್ಪು ತಪೋವನಗಳನ್ನು ಪ್ರಭಾವಿತಗೊಳಿಸಬಾರದು ನಿಜ. ಆದರೆ ಪ್ರಾಚೀನ ಕಾಲದಲ್ಲಿ ಋಷಿಗಳು ತಮ್ಮ ತಪಸ್ಸಿನ ಆರನೆಯ ಒಂದಂಶದಷ್ಟು ಭಾಗವನ್ನು ಅರಸನಿಗೆ ಧಾರೆಯೆರೆದು ಕೊಡುತ್ತಿದ್ದರು. (ತಪಃಷಡ್ಭಾಗಮಕ್ಷಯ್ಯಂ ದದತ್ಯಾರಣ್ಯಕಾಹಿನಃ) ಪ್ರತಿಯಾಗಿ ರಾಜ ಅವರ ರಕ್ಷಣೆಯ ಭಾರವನ್ನು ಹೊತ್ತುಕೊಳ್ಳುತ್ತಿದ್ದ.

ಇಬ್ಬರೂ ಅನ್ಯೋನ್ಯಾಶ್ರಿತರಾಗಿದ್ದರು. ವಾಸ್ತವವಾಗಿ ಭಾರತೀಯ ಸಂಸ್ಕೃತಿಯ ಸ್ವರೂಪವೇ ಇದಾಗಿತ್ತು. ಇದೇ ಪ್ರಕಾರ ವೇದಗಳ ಬಗೆಗಿನ ಗೌರವವೂ ಅದನ್ನೋದಿಸುವವರೂ ಅನ್ಯೋನ್ಯಾಶ್ರಿತರಾಗಿದ್ದಾರೆ.

ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಕಲಿಸುವವರಿಗೆ ತಾವು ಕಲಿಸುವ ವಿಷಯದ ಬಗ್ಗೆ ಎಷ್ಟು ನಿಷ್ಠೆಯಿದೆ ಎನ್ನುವುದು ಉಳಿದೆಲ್ಲರಿಗಿಂತ ಅವರಿಗೇ ಚೆನ್ನಾಗಿ ಗೊತ್ತಿರುವುದರಿಂದ ನಾನು ಆ ಕುರಿತು ಹೇಳಹೋಗುವುದಿಲ್ಲ. ಆದರೆ ರದ್ದಿಯಾಗಿ ಕೊಂಡುಕೊಂಡ ಈ ವೇದಗ್ರಂಥ ಯಾವುದೊ ಪ್ರೊಫೆಸರನದೋ ಅಥವಾ ಅವನ 'ಶಿಷ್ಯೋತ್ತಮ'ನದೋ ಆಗಿರುವಲ್ಲಿ ಸಂಶಯವಿಲ್ಲ.

ರದ್ದಿ ಅಂಗಡಿಯಲ್ಲಿ ವೇದಗ್ರಂಥಗಳನ್ನು ಮಾರುವ ಈ ಸಂಸ್ಕೃತ ಪ್ರಾಧ್ಯಾಪಕರು ಯುರೋಪಿನ ಪೌರಸ್ತ್ಯ ವಿಭಾಗದವರು ತಯಾರಿಸಿದ ರೀಡರುಗಳನ್ನು ಓದಿಯೇ ನೌಕರಿಯನ್ನು ಗಿಟ್ಟಿಸಿಕೊಂಡಿದ್ದಾರೆ. ಆದರೆ ಅವರ ಪೂರ್ವಜರು ಬೇರೆಯೇ ತರನಾದ ಜನರಾಗಿದ್ದರು. ವೇದಗಳನ್ನು ರಕ್ಷಿಸಲು ಯಾವ ಶ್ರಮವನ್ನೂ ಅವರು ಉಳಿಸುತ್ತಿರಲಿಲ್ಲ.

ಈಗ ಪಠ್ಯಕ್ರಮದ ಹೊರತು ಬೇರೇನೂ ಕಾಣದ ಕವಲುದಾರಿಯಲ್ಲಿ ಈ ಯುನಿವರ್ಸಿಟಿ ಪ್ರೊಫೆಸರರು ನಿಂತಿದ್ದಾರೆ. ಪಠ್ಯಕ್ರಮದ ಹೊರಗೆ ಅವರ ಬುದ್ಧಿಯೇ ಓಡುವುದಿಲ್ಲ. ಅವರ ಪಠ್ಯಕ್ರಮದಲ್ಲೇನಿದೆಯೋ, ಮ್ಯಾಕ್‌ಡೋನಾಲ್ಡ್ ರೀಡರಿನಲ್ಲೇನಿದೆಯೋ ಅದೇ ಅವರ ಪಾಲಿಗೆ ವೇದ; ಅದಕ್ಕೆ ಹೊರತಾದುದೆಲ್ಲ ಮಣ್ಣು, ಇದ್ದಿಲು. ಆದ್ದರಿಂದಲೆ ವೇದಗ್ರಂಥಗಳನ್ನಿಂದು ತಕ್ಕಡಿಯಲ್ಲಿ ತೂಗಿ ಮಾರಲಾಗುತ್ತಿದೆ!

●

ಹಾಳು ಕೋಳಿಯ ಕೂಗಿಗೆ....

ಈ ಪಿಶಾಚ ನಗರಿಯ ಜನ
ತಂತಮ್ಮ ಲೋಕಗಳಲ್ಲಿ ಮುಳುಗಿ
ಒತ್ತೆ ಇಟ್ಟ ಹಗಲ ಮರೆಸುವ
ಇರುಳ ಕೊನೆಯ ಗಳಿಗೆಗಳಲ್ಲಿ
ಈ ಹಾಳುಕೋಳಿಯ ಕೂಗು!

ಕೆಲವರ ನಿದ್ದೆ ಕೆಡಿಸಿ, ಮತ್ತೆ
ಕೆಲವರ ಹಸಿವು ಹೆಚ್ಚಿಸಿ
ತಟ್ಟೆಯೊಳಗೋ ನಿನ್ನೆ
ಸೇರಿದ್ದ ಹೊಟ್ಟೆಯೊಳಗೋ, ಉಳಿದದ್ದು
ಎದ್ದು ಬಂದುಬಿಟ್ಟಿತು!



ಕೂಗಿಗೆ ಬೆಳಕು ಹುಟ್ಟುವುದು;ಮುದಿಭ್ರಮೆ
ಅಖಂಡಗಳೆಲ್ಲಾ ತುಂಡು ತುಂಡಾಗಿ
ಕೆಂಟುಕಿಯ ಬಾಣಲೆಯಲ್ಲಿ
ಹುರಿದ ಕರಿದ ಪ್ಯಾಕೆಟ್ಟಿನೊಳಗಿಟ್ಟ
ತಳವಿಲ್ಲದ ಆಸೆಬಟ್ಟಲ ಗರಿ ಗರಿ ಕನಸು.

ಗವಿಯೊಳಗಿನ ಗಂಗಾಧರನ
ನೆತ್ತಿಯ ಮೇಲೆ ಕುಳಿತಿದ್ದ ಕಲ್ಲು ಕೋಳಿ
ಇದು ಕಲಿಯುಗ!
ಕೂಗೇಬಿಟ್ಟಿಯಲ್ಲ, ನಿನ್ನ ಮನೆ ಹಾಳಾಗ!

ಪರೀಕ್ಷಜ್ಞ ಹೇಳಿದ್ದ ಗುಡ್ಡ ಗವಿಯನ್ನ
ಗಿರಣಿ ಧರಣಿಯನ್ನೆಲ್ಲಾ ನುಂಗಿ ನಿಂತುಬಿಟ್ಟ ಕುಕ್ಕುಟ
ಸಕ್ಕರೆ ನಿದ್ದೆಯೊಳಗೆ, ಸ್ಮೃತಿ ಇಲ್ಲದ ಗಳಿಗೆಗಳೊಳಗೆ ನಿನ್ನಕಾಟ
ನಿನ್ನ ಕಲ್ಲುಕೊರಳು ಕೂಗಿದರು
ಕೊನೆಗೂ ಕಲಿಯಲಿಲ್ಲ ನಾವು ನಮ್ಮ ಪಾಠ

ಡಿ.ವಿ. ಪ್ರಹ್ಲಾದ್

ಅಚ್ಚಳಿಯದ ಪುಟಗಳು

ಪ್ರಕ್ಷುಬ್ಧ ಕಾಶ್ಮೀರ

[ಕಾಶ್ಮೀರದ ರಾಜ್ಯಪಾಲರಾಗಿ ಎರಡು ಅವಧಿಯಲ್ಲಿ ಸೇವೆ ಸಲ್ಲಿಸಿರುವ ಶ್ರೀ ಜಗಮೋಹನರ **"My Frozen Turbulence in Kasmir"**ಎಂಬ ಗ್ರಂಥದ ಅನುವಾದ ಕೃತಿ: ರಾಷ್ಟ್ರೋತ್ಥಾನ ಸಾಹಿತ್ಯ 'ಕೇಶವ ಶಿಲ್ಪ',ಕೆಂಪೇಗೌಡನಗರ ಬೆಂಗಳೂರು-೫೬೦ ೦೧೯. ಬೆಲೆ: ರೂ. ೭೦, ೧೯೯೪]

೧೯೮೩ರ ವಿಧಾನಸಭಾ ಚುನಾವಣೆಯ ಸಮಯದಲ್ಲೇ ವಾತಾವರಣ ವಿಷಪೂರಿತವಾಗಿತ್ತು. ಶ್ರೀನಗರದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಚುನಾವಣಾ ಸಭೆಯ ಮಧ್ಯದಲ್ಲಿ ಬೆತ್ತಲೆ ಜನರನ್ನು ನುಗ್ಗಿಸಿ ಗಲಭೆ ಮಾಡಲಾಗಿತ್ತು. ೧೯೮೪ರ ಜನವರಿ ೧೫ ರಂದು ನಡೆದ ಪೊಲೀಸ್ ಗೋಲಿಬಾರಿನಲ್ಲಿ ನಾಲ್ವರು ಕಾಂಗ್ರೆಸ್ಸಿಗರು ಸತ್ತರು.

ಕಾಶ್ಮೀರದ ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಉಂಟಾದ ಎಲ್ಲಾ ಏಳುಬೀಳುಗಳ ಪರಿಣಾಮವೇ ಇಂದಿನ ಗಂಭೀರ ಪರಿಸ್ಥಿತಿ. ಚರಿತ್ರೆಯ ಹಲವು ಗಾಯಗಳು ಇನ್ನೂ ಹಸಿಯಾಗಿವೆ. ೧೯೪೭ರ ಐತಿಹಾಸಿಕ ತಿರುವಿನಲ್ಲಿ ಆ ಎಲ್ಲಾ ಗಾಯಗಳನ್ನು ಮಾಯಿಸುವ ಉತ್ತಮ ಚಿಕಿತ್ಸೆಯ, ಶ್ರೇಷ್ಠ ಚಿಂತನೆಯ ಅಗತ್ಯವಿತ್ತು. ದುರದೃಷ್ಟವಶಾತ್ ಅದು ಲಭ್ಯವಾಗಲಿಲ್ಲ.

೧೯೮೮ರ ಗಾಂಧೀ ಜಯಂತಿಯಂದು ಶ್ರೀನಗರ ಉಚ್ಚ ನ್ಯಾಯಾಲಯದ ಆವರಣದಲ್ಲಿ ಮಹಾತ್ಮಗಾಂಧಿಯವರ ಪ್ರತಿಮೆಯ ಅನಾವರಣದ ವ್ಯವಸ್ಥೆಯಾಗಿತ್ತು. ಭಾರತದ ಸರ್ವೋಚ್ಚ ನ್ಯಾಯಾಧೀಶ ಶ್ರೀ ಆರ್.ಎಸ್. ಪಾಠಕ್ ಸಮಾರಂಭದ ಉದ್ಘಾಟನೆ ಮಾಡುವವರಿದ್ದರು. ಕೆಲವು ಮುಸ್ಲಿಂ ವಕೀಲರು ಪ್ರತಿಮೆಯ ಸ್ಥಾಪನೆಯನ್ನು ವಿರೋಧಿಸಿ ಸಮಾರಂಭದಲ್ಲಿ ಗಲಭೆ ಎಬ್ಬಿಸುವುದಾಗಿ ಬೆದರಿಕೆ ಹಾಕಿದ್ದರಿಂದ ಹೆದರಿದ ಮುಖ್ಯಮಂತ್ರಿಗಳು ಸಮಾರಂಭವನ್ನೇ ರದ್ದುಪಡಿಸಿದರು.

೩೭೦ ವಿಧಿಯಿಂದಾಗಿ ರಕ್ಷಣೆ, ವಿದೇಶ ವ್ಯವಹಾರ ಮತ್ತು ಸಂಪರ್ಕದ ವಿಷಯದಲ್ಲಿ ಭಾರತದ ಸಂಸತ್ತು ರಚಿಸುವ ಕಾನೂನುಗಳು ಜಮ್ಮು ಕಾಶ್ಮೀರಕ್ಕೆ ಅನ್ವಯಿಸುತ್ತವೆ. 'ಕೇಂದ್ರ ಪಟ್ಟಿ' ಮತ್ತು ಸಾಮಾನ್ಯ ಪಟ್ಟಿಗಳಲ್ಲಿರುವ ವಿಷಯಗಳ ಬಗ್ಗೆ ಸಂಸತ್ತು ನಿರ್ಣಯಿಸುವ ಕಾನೂನುಗಳು ಜಮ್ಮು-ಕಾಶ್ಮೀರಕ್ಕೆ ಅನ್ವಯಿಸಬೇಕಾದರೆ ಅದಕ್ಕೆ ಆ ರಾಜ್ಯ ಸರಕಾರದ ಒಪ್ಪಿಗೆಬೇಕು. ಈ ವಿಷಯಗಳಲ್ಲಿ ಸಂಸತ್ತಿನ ಪರಮಾಧಿಕಾರವು ಬೇರೆ ರಾಜ್ಯಗಳಿಗೆ ಪೂರ್ಣವಾಗಿ ಅನ್ವಯಿಸಿದರೂ ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ!

ಇಂದು ನಡೆಯುತ್ತಿರುವ ಕಟು ಹಾಗೂ ದುಃಖದಾಯಕ ಸಂಗತಿಗಳನ್ನು ಇದ್ದಂತೆ ಗುರುತಿಸುವುದಲ್ಲದೆ, ಅದಕ್ಕನುಗುಣವಾದ ಪರಿಹಾರೋಪಾಯಗಳನ್ನು ಹುಡುಕಿ, ಅಳವಡಿಸಲು ನಾವೀಗ ಸಿದ್ಧರಾಗಬೇಕಾದ ಅಗತ್ಯ ತುಂಬಾ ಇದೆ.

✷ ''ಪುಸ್ತಕ ಪ್ರಿಯ"

ಸ್ನೇಹಸಿಂಧು

ಸ್ನೇಹ ಸಿಂಧು: ಡಾ. ಚಿ.ನಾ. ಮಂಗಳಾರವರ ಆತ್ಮಚರಿತ್ರೆ, ಮೊದಲ ಆವೃತ್ತಿ: ೧೯೯೬, ಪುಟ ಸಂಖ್ಯೆ: ೭೯, ಬೆಲೆ: ರೂ. ೧೨೦, ಪ್ರ: ಸ್ಕ್ಯಾನ್ ಪ್ರಿಂಟ್, ಬಸವನಗುಡಿ, ಬೆಂಗಳೂರು-೫೬೦ ೦೦೪.

''ಮೇಡಂ, ನನ್ನ ಕ್ಷಮಿಸಿ. ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆ".

ನಾನು ಅಂದು ಬಂದೀಖಾನೆಯ ವ್ಯವಸ್ಥೆ ನೋಡಲು ಹೋಗಿದ್ದೆ. ನನ್ನ ಜೊತೆ ಬಂದವರು ಒಳಗೆ ಬೇರೆಯವರ ಜೊತೆ ಮಾತನಾಡುತ್ತಿದ್ದರು. ನಾನು ಮಹಿಳಾ ಕೈದಿಗಳನ್ನು ನೋಡಿಕೊಂಡು ಬರುತ್ತಿದ್ದೆ. ನನ್ನ ಎರಡೂ ಪಕ್ಕದಲ್ಲಿ ನನ್ನ ರಕ್ಷಣೆಗೆಂದು ಇಬ್ಬರು ಪೋಲೀಸರು. ಅವರ ಮಧ್ಯೆ ನಡೆಯುವುದು ನನಗೆ ಬಹಳ ಕಷ್ಟವಾಗುತ್ತಿತ್ತು. ಅವರು ಬರುವುದು ಬೇಡವೆಂದರೂ ಕೇಳುತ್ತಿರಲಿಲ್ಲ. ಕೈದಿಗಳನ್ನು ನೋಡಲು ಹೋಗುವಾಗ ಜೊತೆಗೆ ಇರಲೇಬೇಕೆಂದು ಬರುತ್ತಿದ್ದರು. ಮಹಿಳಾ ಕೈದಿಗಳಿದ್ದ ಕಡೆಯಿಂದ ನಾನು ಹೊರಕ್ಕೆ ಒಂದೆರಡು ಅಡಿ ಬಂದಿರಬೇಕು, ಜೈಲಿನ ಒಳಗೆ ತರಕಾರಿ ತೋಟ ಬೆಳಸುತ್ತಾರೆ ಕೈದಿಗಳು. ಅವರನ್ನು ಆಗ

ಡಾ. ಕೆ. ಶಿವರಾಮಕಾರಂತರ 'ಅಳಿದುಳಿದ ನೆನಪುಗಳು'

ಪ್ರಕಟಣೆ: ೧೯೯೫, ಬೆಲೆ ರೂ. ೩೦
ಪ್ರಕಾಶಕರು:
ಎಸ್.ಬಿ.ಎಸ್. ಪಬ್ಲಿಷರ್ಸ್- ಡಿಸ್ಟ್ರಿಬ್ಯೂಟರ್ಸ್,
ರೇಲ್ವೆ ಪ್ಯಾರಲಲ್ ರೋಡ,
ಕುಮಾರ ಪಾರ್ಕ್ ಈಸ್ಟ್,
ಬೆಂಗಳೂರು-೫೬೦ ೦೦೧.

ರೈಲನ್ನು ನುಗ್ಗುವ ಭರದಲ್ಲಿ ನನ್ನ ಪರ್ಸು ಮಾಯವಾಗಿತ್ತು. ಕಿಸೆ ಬರಿದಾದ ಪ್ರಸಂಗ ಯಾರಿಂದಲೇ ಬಂದಿರಲಿ, ಯಾವಾಗಲೇ ಬಂದಿರಲಿ, ಆಚೀಚಿನ ಎಲ್ಲರೂ ಹೊಸಬರಾಗಿರುವಾಗ, ನಮ್ಮ ತಬ್ಬಲಿತನದ ಅರಿವು ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಉಂಟುಮಾಡೀತು.

ಈ ತೆರನ ಅನುಭವ ವಿದೇಶಗಳಲ್ಲೂ ಆಗಬಹುದು. ನಾನೂ ಒಮ್ಮೆ ನನ್ನ ಅಜಾಗ್ರತೆಯಿಂದ ಅಂಥ ಪರಿಣಾಮ ಅನುಭವಿಸಿದೆ. ಸ್ವಿಜರ್‌ಲೆಂಡಿನ ಜ್ಯೂರಿಚ್ ನಗರದಲ್ಲಿ ಒಂದು ಹೊಟೇಲನ್ನು ಸೇರಿದ ಹೊತ್ತಿನಲ್ಲಿ ನಾನು ನನ್ನಲ್ಲಿದ್ದ ಹಣವನ್ನು ಸಂಚಾರಿ ಟಿಕೇಟುಗಳನ್ನು, ವಿದೇಶಿ ನೋಟುಗಳನ್ನು ಕಳೆದುಕೊಂಡ ಅನುಭವವಾಯಿತು. ಆಗ ನನ್ನ ಗಾಬರಿ ಹೇಳತೀರದು. ಸಂಜೆ ಐದು ಗಂಟೆಯ ತರುವಾಯ ಜ್ಯೂರಿಚ್ಚಿನ ಒಂದು ಬ್ಯಾಂಕಿನ ಬಾಗಿಲಿಗೆ ಹೋದೆ. ಸಮಯ ಸಂದರೂ ಅಲ್ಲಿದ್ದ ವ್ಯಕ್ತಿ ಬಾಗಿಲು ತೆರೆದ. ಅವನಿಗೆ ನಾನು ಪರದೇಶಿ ಎಂಬುದು ನೋಡಿದೊಡನೆ ತಿಳಿಯಿತು. ಆತ 'ಏನಾಗಬೇಕು?' ಎಂದು ಕೇಳಿದ. ನನ್ನ ಸ್ಥಿತಿಯನ್ನು ತಿಳಿಸಿದೆ.

'ಯಾಕೆ ಗಾಬರಿ? ನಿಮ್ಮ ಹಣ, ಪರ್ಸು ಎಲ್ಲವೂ ಸಿಗುತ್ತದೆ. ಅವಸರ ಬೇಡ' ಎಂದ.

ಎರಡನೇ ದಿನವೋ ಏನೋ. ಹಣ ಕಳೆದದ್ದು ತಿಳಿವಿಗೆ ಬಂದ ಹೊಟೇಲಿಗೆ ನಾನು ತಿರುಗಿ ಹೋದೆ. ಅಲ್ಲಿನ ಒಬ್ಬಳು ಕೆಲಸಗಾರ್ತಿ ನಾನು ಯಾಲ್ಲೆಲ್ಲ ಹೋಗಿದ್ದೆ ಎಂದು ವಿಚಾರಿಸಿದಳು. ಅಂಥಲ್ಲೆಲ್ಲೋ ನಾನು ಮರೆತು ಬಿಟ್ಟ ಪರ್ಸನ್ನು ತರಿಸಿಕೊಂಡು ನನಗೆ ಒಪ್ಪಿಸಿದಳು.

ಇನ್ನೊಮ್ಮೆ ಅದೇ ದೇಶದಲ್ಲಿ ನನ್ನ ಕೆಮೆರಾದ ಒಂದು ಉಪಕರಣ ಕಳೆದುಕೊಂಡೆ. ಒಂದು ದಿನದ ತರುವಾಯ 'ಕಳೆದುಹೋದ ವಸ್ತು ಸಂಗ್ರಹಾಲಯ'ವನ್ನು ಸೇರಿ ನನ್ನ ಕೆಮೆರಾದ ಈ ಒಂದು ಉಪಕರಣ ಕಳೆದಿದೆ ಎಂದೆ. ಆತ ಅಲ್ಲೇ ಹುಡುಕಿ ಇದೇನು? ಎಂದು ತೆಗೆದು ನನಗೆ ತೋರಿಸಿದ.

ಹೌದು ಎಂದೆ. ಯಾರಿಗೆ ಎಲ್ಲಿ ಏನೇ ಸಿಗಲಿ, ಅದನ್ನು ಅದೇ ದಿನವಲ್ಲವಾದರೆ ಮರುದಿನದ ಒಳಗೆ ನಗರದ ಕಳೆದ ಸೊತ್ತಿನ ಕಚೇರಿಗೆ ಹೋಗಿ ಒಪ್ಪಿಸುತ್ತಾರೆ. ಕೇಳಿದರೆ ಅದನ್ನು ಗುರುತಿಸಿದವರಿಗೆ ಆ ವಸ್ತುವನ್ನು ಒಪ್ಪಿಸುತ್ತಾರೆ.

ಆಗ ನಾನೇ ನನ್ನನ್ನು ಕೇಳುವಂತಾಯಿತು. ಋಷಿಪುಂಗವರಿದ್ದ ನಮ್ಮ ಭಾರತ ನೀತಿವಂತವೋ-- ಪಾಶ್ಚಾತ್ಯ ಸ್ವಿಜರ್‌ಲ್ಯಾಂಡ್ ನೀತಿವಂತವೋ ಎಂದು. ಕೇಳಿದರೆ ನಾನು ತಲೆ ತಗ್ಗಿಸಿ ಉತ್ತರ ಹೇಳಬೇಕಾದೀತು.

ಸಂಗ್ರಹ: ಇಂದಿರಾ ಹಾಲಂಬಿ, ಆತ್ರಾಡಿ.

ಹೊರಗೆ ಕರೆದುಕೊಂಡು ಹೋಗಿ ಒಳಗೆ ಕರೆದುಕೊಂಡು ಬರುತ್ತಿದ್ದರು. ನಾನು ಅವರನ್ನೇ ನೋಡುತ್ತ ಒಂದು ನಿಮಿಷ ನಿಂತೆ. ಇದ್ದಕ್ಕಿದ್ದ ಹಾಗೆ ಅವರಲ್ಲಿ ಒಬ್ಬ ಗುಂಪಿನಿಂದ ಸರಕ್ಕೆಂದು ನನ್ನ ಕಡೆ ನುಗ್ಗಿಬಂದು ಕ್ಷಣಾರ್ಧದಲ್ಲಿ ನನ್ನ ಕಾಲಮೇಲೆ ಬಿದ್ದುಬಿಟ್ಟ. ಏನಾಗುತ್ತಿದೆ ಎಂದು ತಿಳಿಯುವ ಮೊದಲೇ ನನ್ನ ಪಕ್ಕದಲ್ಲಿದ್ದ ಪೊಲೀಸಿನವರು, ಉಳಿದ ಕೈದಿಗಳ ಜೊತೆಯಲ್ಲಿದ್ದ ಪೊಲೀಸಿನವರು ಸರಕ್ಕನೆ ಅವನ ಮೇಲೆ ಬಿದ್ದು ಅವನನ್ನು ಹಿಡಿದು ಮೇಲೆಕ್ಕೆತ್ತಿದರು. ಅವರ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತ ಆತ, "ಬಿಡಿ ಬಿಡಿ, ನಾನು ಅವರನ್ನು ಏನೂ ಮಾಡೋಲ್ಲ. ಅವರು ನಮ್ಮ ಮೇಡಂ. ನಾನವರ ಕಾಲು ಮುಟ್ಟಬೇಕು. ಬಿಡಿ, ಬಿಡಿ", ಎಂದು ಗಳಗಳ ಅತ್ತುಬಿಟ್ಟ. ಪೊಲೀಸರೂ ಅಚ್ಚರಿಗೊಂಡರು. ಆದರೆ ಅವನನ್ನು ಬಿಡಲಿಲ್ಲ ಮಾತ್ರ. "ಮೇಡಂ, ನನ್ನ ಕ್ಷಮಿಸಿ. ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆ," ಎಂದು ಅಳುತ್ತಲೇ ಹೇಳಿದ. ಎರಡು ನಿಮಿಷವಾದ ಮೇಲೆ ಪೊಲೀಸರು ಅವನನ್ನು ಕರೆದುಕೊಂಡು ಹೋದರು. ಯಾವುದೋ ಸಹಕಾರಿ ಬ್ಯಾಂಕಿನಲ್ಲಿ ಕೆಲಸಕ್ಕಿದ್ದು ಹಣದ ದುರುಪಯೋಗದ ಕೇಸಿನಲ್ಲಿ ಜೈಲು ಸೇರಿದ್ದನಂತೆ. ಆ ದೃಶ್ಯವನ್ನು ಮಾತ್ರ ನಾನೆಂದಿಗೂ ಮರೆಯಲಾರೆ.

ಸಂಗ್ರಹ: ಟಿ.ಆರ್. ವೆಂಕಟೇಶ ಮೂರ್ತಿ

ಅಲಂಕಾರದ ಹಿಂದಿರುವ ಹಿಂಸಾಚಾರ

ಇಂದಿನ ದಿನಗಳಲ್ಲಿ ಎಲ್ಲರೂ- ವಿಶೇಷವಾಗಿ ನಾರಿಯರು- ಅತಿ ಎನಿಸುವಷ್ಟು ಅಲಂಕಾರ ಪ್ರಿಯರಾಗುತ್ತಿದ್ದಾರೆ. ಆದಕ್ಕಾಗಿ ಹತ್ತುಹಲವು ಬಗೆಯ ಸೋಪು, ಶಾಂಪು, ತೈಲ, ಸ್ನೋ, ಕ್ರೀಂ, ಪೌಡರು, ಲಿಪ್‌ಸ್ಟಿಕ್, ನೇಲ್ ಪಾಲೀಷ್, ಐ ಷಾಡೋ, ರೋಜ್, ಸೆಂಟ್ ಮೊದಲಾದ ಪ್ರಸಾಧನಗಳನ್ನೂ, ರೇಷ್ಮೆ ಉಣ್ಣೆ ತುಪ್ಪಳ, ಚರ್ಮ ಇತ್ಯಾದಿಗಳಿಂದಾದ ಉಡುಪು - ತೊಡುವುಗಳನ್ನೂ ಹೆಚ್ಚು ಹೆಚ್ಚಾಗಿ ಬಳಸುತ್ತಿದ್ದಾರೆ. ಆದರೆ ಇಂತಹ ಶೃಂಗಾರ ಪ್ರಸಾಧನಗಳ ತಯಾರಿಕೆಯ ಹಿಂದೆ ಕ್ರೌರ್ಯ, ಸಂಕಟ, ಸಾವು-ನೋವುಗಳ ವಿಕಟಾಟ್ಟಹಾಸವಿದೆ ಎಂಬುದಾಗಲಿ, ತಾವು ಪರೋಕ್ಷವಾಗಿ ಜೀವಹಿಂಸೆಯನ್ನು ಪ್ರೋತ್ಸಾಹಿಸುತ್ತಿದ್ದೇವೆ ಎಂಬುದಾಗಲಿ ಅವರಿಗೆ ತಿಳಿಯುತ್ತಿಲ್ಲ.

ನಾರಿಯರು ಸಾಮಾನ್ಯವಾಗಿ ಬಳಸುವ ಪೌಡರು, ಲಿಪ್‌ಸ್ಟಿಕ್, ನೇಲ್ ಪಾಲೀಷ್ ಮೊದಲಾದವುಗಳನ್ನು ಬಳಸುವವರಿಗೆ ಅಪಾಯರಹಿತವೇ ಎಂಬುದನ್ನು ತಿಳಿದುಕೊಳ್ಳಲು ಅವನ್ನು ಕೊಳವೆಗಳ ಮೂಲಕ ಇಲಿಬುಗಳ ಗಂಟಲೊಳಗೆ ನೂಕಿ ಅವುಗಳ ವರ್ತನೆಯನ್ನು ಗಮನಿಸಲಾಗುತ್ತದೆ. ಇಂತಹ ಪ್ರಯೋಗಗಳ ಪರಿಣಾಮವಾಗಿ ತೀವ್ರವಾದ ನೋವು, ಸಂಕಟಗಳನ್ನು ಅನುಭವಿಸುವ ಇಲಿಲುಗಳು ಅನೇಕ ವೇಳೆ ಸತ್ತು ಹೋಗುತ್ತವೆ.

ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಸಲಾಗುವ ಪುನುಗು ಎಂಬ ವಸ್ತುವನ್ನು ಪಡೆಯಲು ಪುನುಗಿನ ಬೆಕ್ಕನ್ನು ಸಣ್ಣ ಪಂಜರದೊಳಗೆ ಕೂಡಿಹಾಕಿ ಅದನ್ನು ಹೊಡೆದು, ಬಡಿದು, ಚುಚ್ಚಿ ಬೆದರಿಸುವ ಮೂಲಕ ಅದು ಪುನುಗನ್ನು ಸ್ರವಿಸುವಂತೆ ಮಾಡಲಾಗುತ್ತದೆ. ಈ ಕ್ರಮವು ಪುನುಗಿನ ಬೆಕ್ಕು ಸಾಯುವವರೆಗೂ ಮುಂದುವರಿಯುತ್ತದೆ.

ಕಸ್ತೂರಿ ಎಂಬ ಪರಿಮಳದ್ರವ್ಯವನ್ನು ಪಡೆಯಲು ಕಸ್ತೂರಿ ಮೃಗವನ್ನು ಮೋಸದಿಂದ ಹಿಡಿದು ಅದರ ದೇಹವನ್ನು ಛೇದಿಸಿ ಕಸ್ತೂರಿ ದೊರೆತರೆ ಸಂಗ್ರಹಿಸಿಕೊಂಡು ಗಾಯಗೊಂಡ ಜೀವಿಯನ್ನು ಎಸೆದುಬಿಡಲಾಗುತ್ತದೆ. ನಂತರ ಆ ಜೀವಿ ನರಳಿ ನರಳಿ ಸಾಯುತ್ತದೆ.

ಶಾಂಪುಗಳು ಜನರಿಗೆ ನಿರಪಾಯಕಾರಿಯೆ ಎಂಬುದನ್ನು ಗೊತ್ತುಪಡಿಸಿಕೊಳ್ಳಲು ಮೊಲಗಳ ಕಣ್ಣುಗುಡ್ಡೆಗಳನ್ನು ಮೀಟಿ ತೆಗೆದು ಅವುಗಳ ಕುಳಿಗಳಲ್ಲಿ ಸಾಂದ್ರವಾದ ಶಾಂಪುವನ್ನು ಸುರಿದು ಗಮನಿಸಲಾಗುತ್ತದೆ. ಆಗ ಮೊಲಗಳು ಅತೀವ ನೋವಿನಿಂದ ಒದ್ದಾಡುತ್ತವೆ. ಅನೇಕ ವೇಳೆ ವೇದನೆಯನ್ನು ಸಹಿಸಲಾರದ ಅವು ಸಾಯುವುದೂ ಉಂಟು.

ವಿಶೇಷ ಬಗೆಯ ಪಾದರಕ್ಷೆ, ಬೆಲ್ಟು, ವೈಖರಿಚೀಲ ಮೊದಲಾದುವುಗಳ ತಯಾರಿಕೆಯಲ್ಲಿ ಬಳಸುವ ಮೊಸಳೆಗಳ ಚರ್ಮವನ್ನು ಪಡೆಯುವ ವಿಧಾನ ನಿಜಕ್ಕೂ ಭೀಕರವಾದದ್ದು. ಮೊದಲು ಮೊಸಳೆಗೆ ಉರುಳು ಬಿಗಿದು ಗಂಟೆಗಟ್ಟಲೆ ಸಂಕಟಪಡಿಸಿ ಸುಸ್ತುಗೊಳಿಸಲಾಗುತ್ತದೆ. ಅನಂತರ ಅದರ ಕುತ್ತಿಗೆಯ ಬಳಿ ಇರಿದು ಅದು ಜೀವಂತವಿರುವಾಗಲೇ ಚರ್ಮವನ್ನು ಸುಲಿದುಕೊಂಡು ರಕ್ತ ಬಸಿಯುವ ದೇಹವನ್ನು ಜಲಚರಗಳಿಗೆ ಆಹಾರವಾಗಿ ಎಸೆಯಲಾಗುತ್ತದೆ. ಇದೇ ರೀತಿ ಹಾವು, ಹಲ್ಲಿ ಹಾಗೂ ಉಡಗಳ ಚರ್ಮಗಳನ್ನೂ ಸುಲಿದುಕೊಂಡು ಅವುಗಳ ಚರ್ಮರಹಿತ ದೇಹವನ್ನು ಬಿಸುಡಲಾಗುತ್ತದೆ.

ತುಪ್ಪಳಯುಕ್ತ ಉಡುಪುಗಳು, ವಿಶಿಷ್ಟ ರೀತಿಯ ಪಾದ

✡ (ಸಾಧಾರ)

ಕೆ. ವೆಂಕಣ್ಣಾಚಾರ್

ರಕ್ಷೆ, ಟೋಪಿ, ಬೆಲ್ಟು, ಕೋಟು ಮೊದಲಾದುವುಗಳ ತಯಾರಿಕೆಯಲ್ಲಿ ಉಪಯೋಗಿಸುವ ಚರ್ಮವನ್ನು ಹಸು, ಎಮ್ಮೆ, ಕುರಿ, ಮೇಕೆ, ಮೊಲ, ನಾಯಿ ಮೊದಲಾದ ಪ್ರಾಣಿಗಳ ದೇಹದಿಂದ ಅವುಗಳು ಜೀವದಿಂದಿರುವಾಗಲೇ ಸುಲಿದುಕೊಳ್ಳಲಾಗುತ್ತದೆ.

ಕೆಲವರು ಠೀವಿಯಿಂದ ಧರಿಸಿ ಮೆರೆಯುವ ಕಾರಾಕುಲ್ ಎಂಬ ಚರ್ಮದ ಟೋಪಿಯಂತೂ ಜೀವಹಿಂಸೆಯ ಪ್ರತಿರೂಪವೆಂದೇ ತಿಳಿಯಲಾಗುತ್ತದೆ. ಗರ್ಭಧರಿಸಿರುವ ಕಾರಾಕುಲ್ ಜಾತಿಯ ಕುರಿಯನ್ನು ಪದೇ ಪದೇ ಕಬ್ಬಿಣದ ಸಲಾಕೆಯಿಂದ ಹೊಡೆದು ಅದು ಕಂದು ಮರಿಯನ್ನು ಹಾಕುವಂತೆ ಹಿಂಸಿಸಲಾಗುತ್ತದೆ. ಅದು ಹಾಕಿದ ಕಂದು ಮರಿಯ ಗುಂಗುರುಕೂದಲಿನ ನುಣುಪಾದ ಚರ್ಮದಿಂದ ಕಾರಾಕುಲ್ ಟೋಪಿಯನ್ನು ತಯಾರಿಸಲಾಗುತ್ತದೆ.

ಶೃಂಗಾರ ಪ್ರಸಾಧನಗಳ ತಯಾರಿಕೆಯಲ್ಲಿ ಬಳಸುವ ಈಸ್ಟ್ರೋಜನ್ ಎಂಬ ಹಾರ್ಮೋನನ್ನು ಗರ್ಭಸ್ಥ ಕುದುರೆಯ ಮೂತ್ರದಿಂದ ಪ್ರತ್ಯೇಕಿಸಲಾಗುತ್ತದೆ. ಈ ವಸ್ತುವನ್ನು ನಿರಂತರವಾಗಿ ಪಡೆಯಲು ಕೆಲವು ಹೆಣ್ಣು ಕುದುರೆಗಳನ್ನು ಸದಾ ಗರ್ಭಧರಿಸುವಂತೆ ಮಾಡಿ ಅವು ಯಾವಾಗಲೂ ಸೆರೆವಾಸವನ್ನು ಅನುಭವಿಸುವಂತೆ ಮಾಡಲಾಗುತ್ತದೆ. ಅವುಗಳಿಗೆ ಹುಟ್ಟುವ ಮರಿಗಳನ್ನೂ ಪ್ರಯೋಗಗಳಿಗೆ ಬಳಸಲಾಗುತ್ತದೆ.

ಮುಖಕ್ಷೌರದ ನಂತರ ಲೇಪಿಸಿಕೊಳ್ಳುವ ಆಫ್ಟರ್ ಶೇವ್ ಲೋಷನ್ ಬಳಸುವವರಿಗೆ ಉರಿತವನ್ನುಂಟುಮಾಡುವುದೆ ಎಂಬುದನ್ನು ತಿಳಿಯಲು ಗಿನಿಪಿಗ್‌ಗಳೆಂಬ ಪ್ರಯೋಗ ಪಶುಗಳ ರೋಮ ಹಾಗೂ ಚರ್ಮದ ಮೇಲ್ಪದರವನ್ನು ಅಂಟುಪಟ್ಟಿಯ ಸಹಾಯದಿಂದ ಕಿತ್ತಿ ಅದರ ಮೇಲೆ ಲೋಷನ್ನನ್ನು ಬಳಿದು ಅಲ್ಲಿ ರಾಸಾಯನಿಕದಿಂದ ಗಾಯಗಳಾಗುತ್ತವೆಯೇ ಎಂಬುವನ್ನು ಗಮನಿಸಲಾಗುತ್ತದೆ.

ಮಿರುಗುವ ಬಣ್ಣದ ಸುಕೋಮಲ ಸ್ಪರ್ಶದ ರೇಷ್ಮೆಯ ಉತ್ಪಾದನೆಯೂ ಅಪಾರ ಜೀವಹಿಂಸೆಯ ಪರಿಣಾಮವಾಗಿಯೇ ಆಗುತ್ತದೆ. ಒಂದು ಕಿಲೋ ರೇಷ್ಮೆ ನೂಲಾಗಲು ಇಪ್ಪತ್ತು ಸಹಸ್ರ ಮತ್ತು ಒಂದು ಸೀರೆಯಾಗಲು ಐವತ್ತು ಸಹಸ್ರ ರೇಷ್ಮೆ ಹುಳುಗಳು ಬಿಸಿ ನೀರಿನಲ್ಲಿ ಬೆಂದು ಸಾಯುತ್ತವೆ.

ಅಲಂಕಾರಕ್ಕಾಗಿ ಧರಿಸುವ ನಿಜವಾದ ಮುತ್ತುಗಳ ಹಿನ್ನೆಲೆಯಲ್ಲೂ ಜೀವಹಾನಿಯಿದೆ. ಜಲಾಶಯಗಳಲ್ಲಿ ಬದುಕುವ ಮುತ್ತಿನ ಚಿಪ್ಪಿನ ಮೃದ್ವಂಗಿಗಳ ಚಿಪ್ಪನ್ನು ಚಿಮ್ಮಟದಿಂದ ಬಿಡಿಸಿ ಅದರೊಳಗೆ ಮರಳ ಕಾಳೊಂದನ್ನು ತೂರಿಸಿದಾಗ ಅಪಾರ ನೋವಿಗೆ ತುತ್ತಾಗುವ ಮೃದ್ವಂಗಿಯು ಅದರ ಸುತ್ತ ತನ್ನ ದೇಹರಸವನ್ನು ಸುರಿಸುತ್ತದೆ. ಅದು ಗಟ್ಟಿಯಾಗಿ ಮುತ್ತಾದಾಗ ಚಿಪ್ಪನ್ನು ಬಿಡಿಸಿ ಮುತ್ತನ್ನು ತೆಗೆದಾಗ ನಿರಪರಾಧಿ ಮೃದ್ವಂಗಿ ಸಾಯುತ್ತದೆ.

ಆನೆಯ ದಂತದ ಬಳೆ, ಗುಂಡಿ, ಮಣಿಗಳ ಹಿಂದೆಯೂ ಪ್ರಾಣಹಿಂಸೆಯಿದೆ. ಅಕ್ರಮವಾಗಿ ದಂತವನ್ನು ಪಡೆಯಲು ಲಾಭಬಡುಕರು ಆನೆಗಳಿಗೆ ವಿಷವಿಟ್ಟು, ಮುಳ್ಳು ಹರಡಿ, ಗುಂಡುಹಾಕಿ ಆನೆಗಳನ್ನು ಉರುಳಿಸಿ ಬದುಕಿರುವಂತೆಯೇ ಅವುಗಳ ದಂತವನ್ನು ಕಿತ್ತುಕೊಳ್ಳಲಾಗುತ್ತದೆ. ಅವು ಮರಣಾಂತಿಕ ನೋವು ಅನುಭವಿಸುತ್ತ ಸಾಯುವಂತೆ ಮಾಡಲಾಗುತ್ತದೆ.

ಅಲಂಕಾರಪ್ರಿಯರು ತಮ್ಮ ತಲೆಗೂದಲು, ಹುಬ್ಬು, ಕಣ್ಣು ರೆಪ್ಪೆ, ಕೆನ್ನೆ ಮೊದಲಾದುವನ್ನು ಸಿಂಗರಿಸಿಕೊಳ್ಳಲು ಬಳಸುವ ಮೃದು ಕೂದಲಿನ ಬ್ರಷ್‌ಗಳನ್ನು ಅಳಿಲುಗಳ ರೋಮಗಳಿಂದ ತಯಾರಿಸಲಾಗುತ್ತದೆ. ಇದಕ್ಕಾಗಿ ಅಳಿಲುಗಳ ದೇಹದಿಂದ ರೋಮಗಳನ್ನು ಕಿತ್ತಿ ತೆಗೆಯಲಾಗುತ್ತದೆ. ಅಳಿಲುಗಳ ಆಕ್ರಂದನ ಅರಣ್ಯರೋದನವಾಗುತ್ತದೆ.

ಇಷ್ಟೆಲ್ಲ ಹಿಂಸಾಚಾರದಿಂದ ತಯಾರಾಗುವ, ಸಂಕಟ, ವೇದನೆ, ಸಾವು-ನೋವುಗಳನ್ನು ಕಣಕಣದಲ್ಲೂ ತುಂಬಿಕೊಂಡಿರುವ ದೀರ್ಘಾವಧಿಯಲ್ಲಿ ದೈಹಿಕ, ಮಾನಸಿಕ ಹಾಗೂ ನೈತಿಕವಾಗಿ ಬಾಧಿಸುವ ಶೃಂಗಾರ ಪ್ರಸಾಧನಗಳನ್ನು ಯಾರೂ ಬಳಸಬಾರದು. ಇದಕ್ಕೆ ಬದಲಾಗಿ ಕೆಲವು ಕಂಪನಿಗಳು ಸಸ್ಯಜನ್ಯ ಪದಾರ್ಥಗಳಿಂದ ಅಹಿಂಸಾತ್ಮಕವಾಗಿ ತಯಾರಿಸುವ ನಿರಪಾಯಕಾರಿ ಅಲಂಕಾರ ವಸ್ತುಗಳನ್ನು ಬೇಕೆನಿಸಿದರೆ ಬಳಸಬೇಕು. ಹೀಗೆ ಮಾಡುವ ಮೂಲಕ ಮಾತು ಬಾರದ ಜೀವಜಂತುಗಳ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ತಪ್ಪಿಸಬಹುದು.

ಮುಗಿಯದ ಮುಗಿಲು

ಅಪಾರ ಜಲರಾಶಿಯ ಆಗರವೆನಿಸಿದ ಸಾಗರಕ್ಕೆ ಸರಿಸಾಟಿಯೆಂಬುದು ಸಾಗರವೇ ಹೊರತು ಬೇರೊಂದಿಲ್ಲ. ಅದೆಷ್ಟೇ ಹರವಾಗಿರಲಿ, ಅದರ ಆಚೆ-ಈಚೆಯ ಗೆರೆಗಳನ್ನು ಗುರುತಿಸಲು ಬರುವಂತಹದು. ಅದರಂತೆ ಆಕಾಶಕ್ಕೆ ಸಮಾನವಾದುದು ಆಕಾಶವೇ ವಿನಾ ಇನ್ನೊಂದಿಲ್ಲ. ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ ಎಂಬ ಅನನ್ವಯ ಅಲಂಕಾರದ ಉದಾಹರಣೆಯಲ್ಲಿ ಇವೆರಡೂ ಅಂಶಗಳು ಅಡಕವಾಗಿವೆ. ಸಾಗರಕ್ಕೂ ಆಗಸಕ್ಕೂ ಒಂದು ವ್ಯತ್ಯಾಸ. ಅದೆಂದರೆ ಆಕಾಶಕ್ಕೆ ಮೇರೆ ಎಂಬುದಿಲ್ಲ. ಕನ್ನಡ ಪದ ಮುಗಿಲು ಇದನ್ನೆ ಮಾರ್ದನಿಸುವಂತಿದೆ. ಮುಗಿಯುವುದೆಂಬುದು ಅದಕ್ಕಿಲ್ಲವೆಂದೇ ಅದು ಮುಗಿಲು. ಇದರ ಅಂಗಳದಲ್ಲಿ ಹರಡಿಕೊಳ್ಳುವ ಮೋಡ ಕೂಡ ಮುಗಿಲು ಪದದಿಂದ ನಿರ್ದೇಶಿತ.

ಧೋಧೋ ಎಂದು ಮಳೆ ಸುರಿಸುವುದು ಮೇಘ ಸಮೂಹವಾದರೂ ಅಂಥ ಸಂದರ್ಭದಲ್ಲಿ 'ಮುಗಿಲು ಹರಿದು ಬತ್ತು' ಎಂದು ವರ್ಣಿಸುವ ವಾಡಿಕೆ. ಆಕಾಶಾತ್ ಪತಿತಂ ತೋಯ ಸಾಗರಂ ಪ್ರತಿಗಚ್ಛತೀ (ಆಗಸದಿಂದ ಬಿದ್ದ ನೀರು ಸಾಗರದತ್ತ ಹರಿಯುವುದು) ಎಂಬ ಉಕ್ತಿಯಲ್ಲಿ ನೀರು ಬಿದ್ದುದು ಆಕಾಶದಿಂದ ಎನ್ನಲಾಗಿದೆ ವಿನಾ ಮೇಘದಿಂದಲ್ಲ.

ವಿಶ್ವ ನಿರ್ಮಾಣದ ಹಿಂದಣ ತತ್ವವನ್ನು ಉಪನಿಷತ್ತು ನೇತಿ-ನೇತಿ (ಇದಲ್ಲ, ಇದಲ್ಲ) ಎಂದು ಅರುಹುತ್ತದೆ. ಅಂತಹದರಿಂದ ಸೃಷ್ಟಿಯಾದ ಪಂಚಮಹಾಭೂತಗಳಲ್ಲಿ ಒಂದಾದ ಆಕಾಶವೂ ಹತ್ತು ಹಲವು ಇಲ್ಲಗಳ ಸಮಾವೇಶದಂತಿದೆ. ಮೇಲೆ ಹೇಳಿದಂತೆ ಅದಕ್ಕೆ ಕೊನೆ ಮೊದಲಿಲ್ಲ. ಇದಕ್ಕೆ ಇನ್ನಾವುದರ ಆಸರೆ ಇಲ್ಲ. ಭೂಮಾರ್ಗ, ಜಲಮಾರ್ಗಗಳಿಗೆ ಆಧಾರವಿದ್ದರೆ ಇದರಲ್ಲಿನ ದಾರಿಗೆ ಯಾವುದೇ ಆಧಾರವಿಲ್ಲ. ಬೃಹದಾಕಾರದ ಚಪ್ಪರದಂತೆ ಕಂಗೊಳಿಸಿದರೂ ಇಂಥ ಛಾವಣಿಗೆ ಆಧಾರ ಸ್ತಂಭಗಳಿಲ್ಲ. ನೆಲದಲ್ಲಿ, ಜಲದಲ್ಲಿ ಏರು ಇಳುವುಗಳು ಇರುತ್ತಿದ್ದರೆ ಈ ಗಗನದಲ್ಲಿ ತಗ್ಗು ದಿನ್ನೆಗಳೆಂಬವು ಇಲ್ಲ. ಹಾಗೆಯೆ ಸಾಮಾನ್ಯ ನೋಟಕ್ಕೆ ಇದು ನೀಲವರ್ಣದ್ದಾಗಿ ಕಂಡರೂ ಅಂತಹ ಬಣ್ಣ ಇದರದಲ್ಲ. ಅದು ಸಾಗರದಿಂದ ಪ್ರತಿಫಲಿತವಾದುದು. ಅದೇ ತಿಳಿನೀಲ ಮುಗಿಲು. ಬಿಳಿಯ ಮೋಡ ಹರಡಿಕೊಂಡ ಸಮಯ ಬೆಳ್ಳಗಾಗಿಯೂ, ಕಾರ್ಮೋಡಗಳು ಕವಿದಾಗ ಕಪ್ಪಾಗಿಯೂ ಸೂರ್ಯೋದಯ-ಸೂರ್ಯಾಸ್ತಗಳ ಕಾಲಕ್ಕೆ ಹೊಂಬಣ್ಣದ್ದಾಗಿಯೂ ಕಾಣುವುದಿಲ್ಲವೇ? ಸ್ಫಟಿಕದಂತಹ ಪಾರದರ್ಶಕದ ಬದಿಗೆ ಕೆಂಪು ದಾಸವಾಳವನ್ನು ಇರಿಸಿದಷ್ಟು ಹೊತ್ತು ಅದು ಕೆಂಪಾಗಿ ಕಾಣುತ್ತದೆ. ಹೂವನ್ನು ದೂರಕ್ಕೆ ಸರಿಸಿದೊಡನೆ ತನ್ನ ಮೂಲಸ್ಥಿತಿಗೆ ತಿರುಗುತ್ತದೆ. ಹಾಗೆಯೆ ಆಕಾಶವು ಅನ್ಯರ ಬಣ್ಣವನ್ನು ತನ್ನದೆನ್ನುವಂತೆ ತೋರ್ಪಡಿಸುತ್ತದೆ.

ಗಂಧವನ್ನು ಹೊತ್ತೊಯ್ಯುವ ವಾಯುವಿಗೆ ಅದರ ಲೇಪದ ಲವಲೇಶವಿಲ್ಲದಿರುವಂತೆ ಆಕಾಶಕ್ಕೂ ಯಾವುದರ ಸೋಂಕೂ ಇಲ್ಲ. ಬಣ್ಣ, ನೆರಳು, ನೀರು ಇಂಥವುಗಳು ಅದಕ್ಕೆ ಅಂಟಿಕೊಳ್ಳಲಾರವು. ಅದರ ಎತ್ತರ-ಬಿತ್ತರ ಅಳೆದವರಾರು? ಹಿಮಾಲಯದ ಉತ್ತುಂಗ ಶೃಂಗವನ್ನು ಶರ್ಪಾ ತೇನಸಿಂಗ ಮೊದಲುಗೊಂಡು ಹಲವು ಸಾಹಸಿಗಳು ತಲುಪಿದಂತೆ ಆಕಾಶದ ಮೇಲಂಚನ್ನು ಮುಟ್ಟಿದವರಾರು? ಇಂತಿದ್ದರೂ ಅದರ ತುದಿ ಕೈಗೆ ನಿಲುಕುವಂತಹದೆನ್ನುವ ಪರಿ ನಮ್ಮ ದೈನಂದಿನ ಮಾತಿನ ಲಹರಿ. ಪಂದ್ಯಾಟದಲ್ಲಿ ಜಯಶಾಲಿಗಳಾದ ಕ್ರೀಡಾಪಟುಗಳ, ಬೆಂಬಲಿಗರ ಅಮಿತೋತ್ಸಾಹವನ್ನು ಬಣ್ಣಿಸುವಾಗ ಮುಗಿಲು ಮೂರೇ ಬೆರಳು ಎನ್ನುವ ರೂಢಿ. ಅವರ ಜಯ-ಜಯಕಾರದ-ಹರ್ಷೋದ್ಗಾರದ ಧ್ವನಿ ಮುಗಿಲು ಮುಟ್ಟುವಂತಹದು ಎನ್ನಲಾಗುತ್ತದೆ.

ವಸತಿ ಸಮಸ್ಯೆ ಪರಿಹಾರಕ್ಕೆಂದು ತಲೆಯೆತ್ತಿ ನಿಲ್ಲುವ ಅತ್ಯುನ್ನತ ಬಹುಮಹಡಿ ಕಟ್ಟಡಗಳು ಗಗನಚುಂಬಿಗಳೆಂದು ಖ್ಯಾತಿಯನ್ನು ಪಡೆಯುತ್ತವೆ. ಮಳೆಗಾಗಿ ಕಾತರದಿಂದ ಕಾಯುವ ಕೃಷಿಕನ ನೋಟ

ಹರಿವುದು ಮುಗಿಲಿನತ್ತ. ಕಷ್ಟದಲ್ಲಿಸಿಲುಕಿಕೊಂಡವನು ದೇವರಲ್ಲಿ ಮೊರೆ ಇಡುವಾಗ ಆಕಾಶದತ್ತ ಕೈ ತೋರುತ್ತಾನೆ. ಭಾರಿ ಜವಾಬ್ದಾರಿ ಕೆಲಸ ಎದುರಾದಾಗ ತನ್ನ ಮೈಮೇಲೆ ಮುಗಿಲೇ ಕಡಿದುಕೊಂಡು ಬಿದ್ದಿದೆ ಎಂದು ಗೋಳಿಡುತ್ತಾನೆ. ಅಸಾಧ್ಯ ಕಾರ್ಯಕ್ಕೆ ಕೈ ಹಾಕಿದವನನ್ನು ಮುಗಿಲಿಗೆ ಹಗ್ಗಹಾಕಿ ಎಳೆಯುತ್ತಿದ್ದಾನೆ ಎಂದು ಬಣ್ಣಿಸಲಾಗುತ್ತದೆ.

ವಿಶ್ವ ನಿರ್ಮಾತೃವಾದ ಪರಮಾತ್ಮನು ಪರಂಜ್ಯೋತಿ ಸ್ವರೂಪನು. ಆತನ ಬೆಳಕಿನ ಬಯಲು ಈ ಆಕಾಶ. ಇಲ್ಲಿ ನೆಲೆಸಿದ ಅಗಣಿತ ತಾರಾಗಣಗಳೆಲ್ಲ ಸ್ವಯಂಪ್ರಕಾಶವುಳ್ಳವುಗಳು. ನಮಗೆ ಅತ್ಯಂತ ಸಮೀಪವರ್ತಿಯಾದ ಸೂರ್ಯನಿಗೆ ಸ್ವಯಂಪ್ರಭೆ. ಈ ಎಲ್ಲ ಖಗೋಲಗಳು ಸುವ್ಯವಸ್ಥಿತವಾಗಿ ಸ್ವಕ್ಷೇತ್ರದಲ್ಲಿ ನೆಲೆಸುವಂತಾಗಲು ಈ ನಭೋಮಂಡಲವು ಅದೆಷ್ಟು ವಿಶಾಲವಾಗಿರಬೇಡ! ಆಕಾಶವೆಂಬ ಪದವೇ ಸೂಚಿಸುವಂತೆ ಅದು ಬೆಳಕಿನ ಬೀಡು. ಅದಕ್ಕೂ ಅಂಧಕಾರಕ್ಕೂ ಅದೆಂತಹ ನಂಟು ಇರಲು ಸಾಧ್ಯ? ನಾವು ಇರುಳಿನಲ್ಲಿ ಅನುಭವಿಸುವ ಕತ್ತಲೆಯು ಸೂರ್ಯನ ಕಿರಣಗಳ ವ್ಯಾಪ್ತಿಗೆ ಹೊರತಾದ ಭೂಪ್ರದೇಶಕ್ಕೆ ಸೀಮಿತವಾದುದೆ ಹೊರತು ಆಕಾಶಕ್ಕೆ ಅದರ ಸೋಂಕು ಎನಿತೂ ಇಲ್ಲ.

ಒಂದೊಂದು ಮಹಾಭೂತಕ್ಕೆ ಒಂದೊಂದು ವಿಶಿಷ್ಟ ಗುಣ. ತೇಜಸ್ಸಿಗೆ ರೂಪ, ಜಲಕ್ಕೆ ರಸ, ಪೃಥ್ವಿಗೆ ಗಂಧ, ವಾಯುವಿಗೆ ಸ್ಪರ್ಶ ಹೇಗೋ ಹಾಗೆಯೆ ಆಕಾಶಕ್ಕೆ ಶಬ್ದ. 'ಶಬ್ದಗುಣಮಾಕಾಶಂ'ಎಂಬುದು ವೈಶೇಷಿಕರ ವ್ಯಾಖ್ಯೆ. ಇದನ್ನೇ 'ಅನುಸರಿಸಿ'ಶ್ರುತಿ ವಿಷಯಗುಣಾಮಾಸ್ಥಿತಾ ವ್ಯಾಪ್ಯ ವಿಶ್ವಂ ಎಂದು ಕಾಳಿದಾಸ ಅರುಹುವಂತೆ ವಿಶ್ವವನ್ನೆಲ್ಲ ವ್ಯಾಪಿಸಿ ನಿಂತಿರುವ ಈ ಆಕಾಶವು ಕರ್ಣೇಂದ್ರಿಯವು ಪರಿಗ್ರಹಿಸುವ ಶಬ್ದವನ್ನೇ ತನ್ನ ವಿಶಿಷ್ಟ ಗುಣವೆಂದು ಪಡೆದುಕೊಂಡಿದೆ. ನಮ್ಮ ಭಾರತೀಯ ರೇಡಿಯೋ ಪ್ರಸರಣ ಮಾಧ್ಯಮ 'ಆಕಾಶವಾಣಿ'ಎಂಬ ಹೆಸರನ್ನು ಇರಿಸಿಕೊಂಡುದು ಅದೆಷ್ಟು ಅರ್ಥಪೂರ್ಣ!

ಈಶ್ವರನಂತೆಯೇ ಎಲ್ಲೆಡೆ ಹರಡಿಕೊಂಡು ನಿಲ್ಲುವ ಭರದಲ್ಲಿ ಈ ಆಕಾಶರಾಯ ಒಂದು ಪುಟ್ಟ ಪಾತ್ರೆಯನ್ನೂ ಬಿಟ್ಟಪ್ಪನಲ್ಲ. ಅದರಲ್ಲಿ ಸೇರಿಕೊಂಡು ಘಟಾಕಾಶ ಎನಿಸುತ್ತಾನೆ. ನಾವು ವಾಸಿಸುವ ಮುನ್ನವೆ ಮನೆಯೊಳಕ್ಕೆ ನುಸುಳಿ ಮಠಾಕಾಶನೆಂದು ಮೆರೆಯುತ್ತಾನೆ. ಹಾಗೆಯೆ ಕಿವಿ, ಹೊಟ್ಟೆ, ಹೃದಯಗಳನ್ನು ಪ್ರವೇಶಿಸಿ, ಕರ್ಣಾಕಾಶ, ಜಠರಾಕಾಶ, ಹೃದಯಾಕಾಶ ಎಂಬ ಅಭಿದಾನಕ್ಕೆ ಪಾತ್ರನಾಗುತ್ತಾನೆ. ಗೋಡೆ ಕುಸಿಯುವುದೇ ತಡ, ಒಳಗಣ ಆಕಾಶ, ಬಾಹ್ಯಾಕಾಶದೊಂದಿಗೆ ಒಂದಾಗುತ್ತದೆ. ಎಂದೆಂದೂ ತಾನಿದ್ದುದು ಒಂದೇ ಎಂದು ಸಾರುತ್ತದೆ.

ವಂಧ್ಯಾಪುತ್ರ (ಬಂಜೆಯ ಮಗ), ಶಶ ಶೃಂಗ (ಮೊಲದಕೋಡು) ಎಂಬ ಸಂಪೂರ್ಣ ಅಸತ್ಯದ ಉದಾಹರಣೆಗಳ ಸರಣಿಗೆ ಸೇರಿದ ಇನ್ನೊಂದು ಪದವೆಂದರೆ ಖಪುಷ್ಪ ಅರ್ಥಾತ್ ಗಗನ ಕುಸುಮ. ಹೂ ಅರಳಲು ಆಕಾಶವೇನು ಗಿಡಮರವೆ, ಬಳ್ಳಿಯೆ? ಆದರೂ ಇಂಥ ಪದಪ್ರಯೋಗ. ಅಸಾಧ್ಯವೆನಿಸಿದ ಕಾರ್ಯಕ್ಕೆ ಕೈಹಾಕಿ ನಿರಾಸೆಗೊಂಡವನ ಗೋಳಾಟ 'ಗಗನ ಕುಸುಮ'ವನ್ನು ಅರಸಿದಂತೆಯೆ ಸರಿ ತಾನೆ?

ಭೂಮಾರ್ಗ-ಜಲಮಾರ್ಗಗಳ ಸಂಚಾರಕ್ಕೆ ಅನೇಕ ಅಡ್ಡಿ ಆತಂಕಗಳು. ಆಕಾಶಮಾರ್ಗ ಹಾಗಲ್ಲ. ಯುದ್ಧ ಕಾಲವನ್ನು ಹೊರತುಪಡಿಸಿ ಇಲ್ಲಿನದು ಮುಕ್ತ ಸಂಚಾರ. ಗುಬ್ಬಿ, ಗರುಡ, ವಿಮಾನ, ಮಕ್ಕಳ ಬಲೂನು, ಗಾಳಿಪಟ, ನೆರೆಹಾವಳಿಯ ಉಪದ್ರವವನ್ನು ಅಂತರಿಕ್ಷದಿಂದ ವೀಕ್ಷಿಸುವ ಹೆಲಿಕಾಪ್ಟರ್ ಹೀಗೆ ಎಲ್ಲದಕ್ಕೂ ಹಾರಾಟ ನಡೆಸಲು ಅನಿರ್ಬಂಧ ಅವಕಾಶವನ್ನು ಒದಗಿಸುವ ಆಕಾಶದ ಔದಾರ್ಯ ತಲೆದೂಗುವಂತಹದು. ಪದೇ ಪದೇ ಹಾರಿಸಲಾಗುವ ಉಪಗ್ರಹಗಳ ಉಪಟಳದಿಂದಾಗಿ ಮುಂದೊಂದು ದಿನ ಈ ಆಗಸವು ಕಸದ ಗುಂಡಿಯಾಗದಿದ್ದರೆ ಸಾಕು!

ಆಕಾಶ ತತ್ತ್ವ ತುಂಬ ರಹಸ್ಯಮಯ. ಅದರ ನಿಗೂಢವನ್ನು ಅರಿಯಲೆಂದು ಕನಕದಾಸರಂತಹವರು ದೇವರಲ್ಲಿ ಮೊರೆಯಿಡುತ್ತಾರೆ. ಬಯಲು ಆಲಯದೊಳಗೊ ಆಲಯವು ಬಯಲೊಳಗೊ? ಬಯಲು-ಆಲಯಗಳೆರಡು ನಿನ್ನೊಳಗೊ? ಹರಿಯೇ! ಎಂದು. ಇಂತು ಮುಗಿಲಿನ ಮಹಿಮೆಯು ಮುಗಿಯದಂತಹದು ಎಂದರೆ ಅತಿಶಯೋಕ್ತಿಯೆನಿಸಲಾರದು.

ಶ್ರೀನಿವಾಸ ತೋಫಖಾನೆ

ಗರ್ಭಸ್ಥ ಶಿಶು ಆಲೋಚಿಸುತ್ತದೆಯೇ

ಗರ್ಭಿಣಿಯು ನಡೆದಾಡುವಾಗ ಹೊಟ್ಟೆಯಲ್ಲಿರುವ ಮಗುವಿಗೆ ಉಯ್ಯಾಲೆ ಆಡಿದಂತಿರುತ್ತದೆ. ತಾಯಿ ಚೆನ್ನಾಗಿ ಬಿಸಿಯಾದ ನೀರಿನಲ್ಲಿ ಸ್ನಾನ ಮಾಡುತ್ತಿದ್ದರೆ ಒಳಗಿರುವ ಮಗುವಿಗೆ ಮೈ ಬಿಸಿಯಾಗಿ ಮುಖ ಕಿವುಚುತ್ತದೆ. ತನ್ನನ್ನು ಹೊರುತ್ತಿರುವ ತಾಯಿ ಯಾವ ಕಾರಣಕ್ಕಾದರೂ ಅಳುತ್ತಿದ್ದರೆ ಮಗುವಿನ ಶರೀರ, ಮಿದುಳು (!) ನೋವಿಗೆ ಗುರಿಯಾಗುತ್ತದೆ. ತಾಯಿ ಒಳ್ಳೆಯ ಪುಸ್ತಕ ಓದಿದರೂ, ಇಂಪಾದ ಸಂಗೀತ ಕೇಳಿದರೂ ಹೊಟ್ಟೆಯೊಳಗಿನ ಮಗು ಆಹ್ಲಾದವನ್ನು ಅನುಭವಿಸುತ್ತದೆ.

ಅನೇಕ ಪರಿಶೋಧನೆಗಳ ಮೂಲಕ ಶಿಶುವು ಗರ್ಭದಲ್ಲಿ ಇದ್ದಾಗಲೇ ಆಲೋಚಿಸುತ್ತದೆ ಎಂಬ ತಥ್ಯವನ್ನು ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಶಿಶುವು ಜನಿಸಿದ ಕೂಡಲೇ ತಾಯಿಯ ಕಂಠಸ್ವರವಿರುವ ಕ್ಯಾಸೆಟ್‌ನ್ನು ಕೇಳಿಸಿದರೆ ಆಹ್ಲಾದವನ್ನು ಸೂಚಿಸುತ್ತಾ ಸ್ಪಂದಿಸುತ್ತದೆಯಂತೆ. ಅಪರಿಚಿತರ ಧ್ವನಿ ಕೇಳಿದಾಗ ವಿಮುಖತೆಯಿಂದ ತಲೆ ತಿರುವಿಕೊಳ್ಳುತ್ತದೆಯಂತೆ. ಒಂಭತ್ತು ತಿಂಗಳ ಕಾಲ ಗರ್ಭದಲ್ಲಿ ಬೆಚ್ಚನೆಯ ಸುಖವನ್ನು ಅನುಭವಿಸಿದ ಶಿಶು ಆ ಸುಖವನ್ನೇ ನಿರಂತರವಾಗಿ ಬಯಸುತ್ತದೆ. ಗರ್ಭದಲ್ಲಿರುವಾಗ ತನ್ನ ಆಹಾರವನ್ನು, ಪ್ರಾಣವಾಯುವನ್ನು ತಾಯಿಯಿಂದ ಸ್ವೀಕರಿಸುತ್ತದೆ. ಗರ್ಭಕೋಶ ಸ್ನಾಯುಗಳು ಶಿಶುವಿನ ಚರ್ಮವನ್ನು ತಾಕಿ ಆಹ್ಲಾದಕರವಾದ ಒತ್ತಡವನ್ನು ಉಂಟುಮಾಡಿ ಸುಖವನ್ನುಂಟುಮಾಡುತ್ತವೆ. ತಾಯಿ ನಡೆಯುತ್ತಿರುವಾಗ ಗರ್ಭಚೀಲ ಉಯ್ಯಾಲೆಯಂತೆ ತೂಗುತ್ತಾ ಉಲ್ಲಾಸವನ್ನುಂಟು ಮಾಡುತ್ತದೆ.

ಶಿಶುವು ಹೆಚ್ಚಿನ ಕಾಲ ಗರ್ಭದಲ್ಲಿರುವುದು ತಾಯಿಗೂ, ಮಗುವಿಗೂ ಶ್ರೇಯಸ್ಕರವಲ್ಲ. ಆದ್ದರಿಂದ ಪ್ರಕೃತಿ ಸಮಯ ಬದ್ಧವಾಗಿ ಪ್ರಸವ ಜರುಗುವ ವಿಧಾನವನ್ನು ರೂಪಿಸಿದೆ. ಆದ್ದರಿಂದಲೇ ತಾಯಿ ಅಸಂಕಲ್ಪಿತವಾಗಿಯೇ ಪಿಂಡವನ್ನು ಹೊರಗೆ ಕಳುಹಿಸುವ ಪ್ರಯತ್ನ ಮಾಡುತ್ತದೆ. ಪಿಂಡವು ಸ್ವಾರ್ಥದಿಂದ ತಾಯಿಯ ಪ್ರಯತ್ನಕ್ಕೆ ಅಡ್ಡಿಪಡಿಸುತ್ತದೆ. ಈ ಸಂಘರ್ಷಣೆ ತಾಯಿಗೆ ಪ್ರಸವ ವೇದನೆಯಾಗಿ ಬಹಿರ್ಗತವಾಗುತ್ತದೆ. ತಾಯಿ ಉಂಟುಮಾಡುವ ಒತ್ತಡ ಹಸುಗೂಸಿಗೆ ಬಾಧೆಯನ್ನುಂಟು ಮಾಡುತ್ತದೆ. ಆದ್ದರಿಂದಲೇ ಮಕ್ಕಳು ಮುಖವನ್ನು ಗಂಟು ಹಾಕಿಕೊಂಡು ನೋವನ್ನು ವ್ಯಕ್ತಪಡಿಸುತ್ತಾ ಹುಟ್ಟುತ್ತವೆ. ಹುಟ್ಟಿದ ಕೂಡಲೇ ಬದಲಾದ ಪರಿಸ್ಥಿತಿಯ ಪ್ರಭಾವವನ್ನು ಸಹಿಸಲಾಗದೇ ಅಳುತ್ತವೆ. ಆಗಾಗಲೇ ತಾವು ಭದ್ರತೆಯನ್ನು ಕಳೆದುಕೊಂಡಿದ್ದೇವೆಂದು ಅನಿಶ್ಚಿತ ವಾತಾವರಣದಲ್ಲಿ ಸುಖ-ಶಾಂತಿಗಳು ಲಭಿಸವೆಂದು ತಿಳಿದುಕೊಂಡ ಕಂದಮ್ಮಗಳು ಅವುಗಳಿಗಾಗಿ ಪರಿತಪಿಸುತ್ತವೆ.

ಪ್ರಕೃತಿಯು ಎಲ್ಲ ಜೀವರಾಶಿಗೂ ಹುಟ್ಟಿದ ಕೂಡಲೇ ತಮ್ಮ ಅವಶ್ಯಕತೆಗಳನ್ನು ಗುರುತಿಸಿ ಅವನ್ನು ಪಡೆಯುವ, ಹೊಂದುವ ಸಾಮರ್ಥ್ಯವನ್ನು ಉಂಟುಮಾಡಿದೆ. ಆದ್ದರಿಂದಲೇ ಕರು ಹಸುವಿನ ಹತ್ತಿರ ತನ್ನಷ್ಟಕ್ಕೆ ತಾನೇ ಹೋಗಿ ಹಾಲು ಕುಡಿಯುತ್ತದೆ. ಕೋಳಿ ಮರಿ ತಾಯಿಯೊಂದಿಗೆ ಸೇರಿ ಆಹಾರದ ಅನ್ವೇಷಣೆ ಮಾಡುತ್ತದೆ. ಮರಿ ಮೀನು ಸ್ವತಃ ಆಹಾರವನ್ನು ಸ್ವೀಕರಿಸುತ್ತದೆ. ಹಸುಗೂಸುಗಳು ಅತ್ತು ತಮ್ಮ ಅವಶ್ಯಕತೆಗಳನ್ನು ತಿಳಿಸುತ್ತವೆ.

ತಾಯಿಯ ಗರ್ಭದಿಂದ ಹೊರಬರುವ ಸಮಯದಲ್ಲಿ ಮಕ್ಕಳು ತಮಗೆ ಎರಡು ದಿನಕ್ಕೆ ಸಾಕಾಗುವಷ್ಟು ಆಹಾರವನ್ನು ದೇಹದಲ್ಲಿ ಸೇರಿಸಿಕೊಂಡು ಜನಿಸುತ್ತವೆ. ತಾಯಿಗೂ ಸಹ ಎರಡು ದಿನದವರೆಗೂ ಹಾಲು ಕೊಡುವ ಸಾಮರ್ಥ್ಯ ಇರುವುದಿಲ್ಲ. ಪ್ರಕೃತಿ ಇತ್ತ ತಾಯಿಗೂ, ಅತ್ತ ಮಗುವಿಗೂ ತೊಂದರೆ ಆಗದ ರೀತಿ ಇಂತಹ ಏರ್ಪಾಟು ಮಾಡಿದೆ. ಆದ್ದರಿಂದ ಆಗತಾನೇ ಹುಟ್ಟಿದ ಮಗು ಹಾಲು ಕುಡಿಯುತ್ತಿಲ್ಲವೆಂದೂ, ತಾಯಿಗೆ ಹಾಲು ಬಿದ್ದಿಲ್ಲವೆಂದೂ ಗಾಬರಿಯಾಗುವ ಅವಶ್ಯಕತೆ ಇಲ್ಲ. ಮಾನವಶಿಶುವನ್ನು ಬಿಟ್ಟು ಉಳಿದ ಜೀವರಾಶಿಗಳೆಲ್ಲಾ 'ಸ್ವಯಂಕೃಷಿ'ಯಿಂದ ತಮ್ಮ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತವೆ. ಅವುಗಳ ಸಾಮರ್ಥ್ಯಗಳನ್ನೂ ಬುದ್ಧಿಶಕ್ತಿಯನ್ನೂ ಆಹಾರ ಸಂಪಾದನೆಗೆ, ಪ್ರಾಣ ರಕ್ಷಣೆಗೆ ಪರಿಮಿತಗೊಳಿಸಿ ಮಾನವ ಸಂತತಿಗೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು, ಬುದ್ಧಿಶಕ್ತಿಯನ್ನು ಅಪಾರವಾಗಿ ವೃದ್ಧಿಸಿಕೊಳ್ಳುವ ಅವಕಾಶವನ್ನು ಪ್ರಕೃತಿಯು ಕಲ್ಪಿಸಿದೆ.

ಹುಟ್ಟುವುದಕ್ಕೆ ಸುಮಾರು ಮೂರು ತಿಂಗಳ ಮೊದಲೇ ಶಿಶುವು ಆಲೋಚಿಸುವ ಶಕ್ತಿಯನ್ನು ಹೊಂದಿರುತ್ತದೆ. ತಾಯಿಯ ಲಾಲನೆ-ಪಾಲನೆಗಳಿಗೆ ತಕ್ಕ ರೀತಿಯಲ್ಲಿ ಸ್ಪಂದಿಸುವುದನ್ನು ಕಲಿತುಕೊಳ್ಳುತ್ತದೆ. ತಾಯಿಯ ಧ್ವನಿಯನ್ನು

ಗುರುತಿಸುತ್ತದೆ. ತಮ್ಮ ಇಷ್ಟಾನಿಷ್ಟಗಳನ್ನು ತಿಳಿಯಪಡಿಸುತ್ತದೆ. ಉದಾ: ಶ್ರಾವ್ಯವಾದ ಹಾಡುಗಳನ್ನು ಕೇಳಿದರೆ ಹಾಯಾಗಿ ನಿದ್ದೆ ಹೋಗುತ್ತದೆ. ಭೀಕರವಾದ ಶಬ್ದಗಳನ್ನು ಕೇಳಿದಾಗ ಕಾಲು-ಕೈಗಳ ಕದಲಿಕೆಯಿಂದ ತಮ್ಮ ಭಯ ವ್ಯಕ್ತಪಡಿಸುತ್ತದೆ. ಸೂಕ್ಷ್ಮವಾಗಿ ಗರ್ಭಸ್ಥ ಶಿಶುವಿನ ವರ್ತನೆಯನ್ನು ಪರಿಶೀಲಿಸುವ ತಾಯಿ, ಪಿಂಡದ ಮನೋಭಾವನೆಯನ್ನು ಗ್ರಹಿಸುತ್ತಾಳೆ. ಗರ್ಭಸ್ಥ ಶಿಶುವು ದೊಡ್ಡವರು ಮಾತನಾಡುವ ಮಾತುಗಳನ್ನು ಕೇಳುತ್ತದೆ ಎಂಬುದನ್ನು ನಮ್ಮ ಪುರಾಣ ಕತೆಗಳು ತಿಳಿಸುತ್ತವೆ. ಉದಾ: ಪ್ರಹ್ಲಾದನು ತಾಯಿಯ ಗರ್ಭದಲ್ಲಿದ್ದಾಗ ನಾರದಮುನಿ ಅವನ ತಾಯಿಗೆ ಹೇಳಿದ ಅಂಶಗಳನ್ನು ಶ್ರದ್ಧೆಯಿಂದ ಕೇಳಿ ತನ್ನ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಂಡ ಎಂದು ಹೇಳುತ್ತಾರೆ. ಹಾಗೆಯೇ ಅಭಿಮನ್ಯು ಸಹ ತಾಯಿಯ ಗರ್ಭದಲ್ಲಿದ್ದಾಗ ಕೃಷ್ಣನು ತಾಯಿಗೆ ವಿವರಿಸಿದ ಯುದ್ಧ ವ್ಯೂಹವನ್ನು ಕೇಳಿಸಿಕೊಂಡು ಮಹಾಭಾರತ ಯುದ್ಧದ 'ಚಕ್ರವ್ಯೂಹ"ವನ್ನು ಭೇದಿಸಿದನೆಂದು ಹೇಳುತ್ತಾರೆ. ಆದ್ದರಿಂದ ಗರ್ಭಸ್ಥ ಶಿಶು ಆಲೋಚಿಸುತ್ತಾ ಇತರರು ಹೇಳುವ ಮಾತುಗಳನ್ನು ಅವಗಾಹನ ಮಾಡಿಕೊಳ್ಳಬಲ್ಲದು.

ತಾಯಿ, ಪಿಂಡ ಗರ್ಭದಲ್ಲಿ ಭೌತಿಕವಾಗಿ ಕಲೆತು ಇರುವುದೇ ಅಲ್ಲದೇ ಮಾನಸಿಕ ಅನುಬಂಧ ಸಹ ಇದೆಯನ್ನುವ ವಿಷಯವನ್ನು ಇತ್ತೀಚೆಗೆ ಅನೇಕ ಪರಿಶೋಧನೆಗಳಲ್ಲಿ ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಗರ್ಭದಲ್ಲಿರುವ ಆಂತರಂಗಿಕ ಒತ್ತಡವು ಪಿಂಡಕ್ಕೆ ಭದ್ರತೆ, ಸ್ಥಿರತೆ ಉಂಟು ಮಾಡುತ್ತದೆ. ಗರ್ಭದಲ್ಲಿರುವ ಹಸುಗೂಸಿಗೆ ತಾಯಿಯ ಹೃದಯ ಸ್ಪಂದನವೂ ಜೋಗುಳದ ಹಾಡಿನಂತೆ ಕೇಳಿಸುತ್ತದೆ. ಗರ್ಭಚೀಲ ಉಯ್ಯಾಲೆಯಂತಿದ್ದು, ನಿಧಾನವಾಗಿ ತೂಗುತ್ತಿರುತ್ತದೆ. ಜನಿಸಿದ ಕೂಡಲೇ ಮಕ್ಕಳಿಗೆ ಈ ಅನುಭೂತಿಗಳೆಲ್ಲ ಒಂದೇ ಬಾರಿಗೆ ದೂರವಾಗುತ್ತವೆ. ಹೊಸ ವಾತಾವರಣದಲ್ಲಿ ಎದುರಾಗುವ ವ್ಯತಿರಿಕ್ತ ಪರಿಸ್ಥಿತಿಗಳೊಂದಿಗೆ ಮೊದಲಿನ ಅನುಭೂತಿಗಳು ಮಾಯವಾಗುವುದರಿಂದ ಆಗಲೇ ಹುಟ್ಟಿದ ಶಿಶುವು ಒಮ್ಮೆಲೆ ಭ್ರಾಂತಿ ಹೊಂದುತ್ತದೆ. ಮೊದಲಿನ ಪರಿಸ್ಥಿತಿ ಬೇಕೆಂದು ಬಯಸುತ್ತದೆ. ಪ್ರತ್ಯಾಮ್ನಾಯ ಪದ್ಧತಿಗಳ ಮೂಲಕ ಗರ್ಭದಲ್ಲಿದ್ದಂತಹ ಪರಿಸ್ಥಿತಿಗಳನ್ನು ಒದಗಿಸಬೇಕಾಗುತ್ತದೆ. ಅಂತಹ ಪರಿಸ್ಥಿತಿಗಳನ್ನು ಒದಗಿಸದಿದ್ದರೆ ಮಕ್ಕಳಲ್ಲಿ ವಿಭ್ರಾಂತಿ ಭಯಾಂದೋಲನ ಉಂಟಾಗುತ್ತದೆ. ಹೀಗಾಗಿ ಮಕ್ಕಳು ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಾರೆ. ಆ ಮಟ್ಟದಲ್ಲಿ ಉಂಟಾದ ಮಾನಸಿಕ ಒತ್ತಡದ ಪ್ರಭಾವ ಜೀವನ ಪರ್ಯಂತ ಕಾಣಿಸುತ್ತಿರುತ್ತದೆ. ಹಸುಗೂಸನ್ನು ತಬ್ಬಿಕೊಳ್ಳುವುದು, ಬೆನ್ನು ಸವರುವುದು ಮುಂತಾದ ಕ್ರಿಯೆಗಳಿಂದ ತಾಯಿ, ಮಗುವಿನ ಮಾನಸಿಕ ಬಾಂಧವ್ಯ ವೃದ್ಧಿಗೊಳ್ಳುತ್ತದೆ. ನಮ್ಮ ಆಪ್ಯಾಯತೆಯನ್ನು ಸ್ಪರ್ಶದ ಮೂಲಕ ತಿಳಿಯಪಡಿಸಬಹುದು.

ಆಗತಾನೆ ಹುಟ್ಟಿದ ಮಕ್ಕಳಿಗೆ ಪ್ರಪ್ರಥಮವಾಗಿ ತಾಯಿಯ ಸ್ಪರ್ಶ ಬಹಳ ಅವಶ್ಯವಾದದ್ದು. ಹಿರಿಯರ ಆದರ, ಪ್ರೀತಿ, ವಾತ್ಸಲ್ಯಗಳಿಗೆ ಮಕ್ಕಳು ತಕ್ಕಂತೆ ಸ್ಪಂದಿಸುತ್ತಾರೆ. ಚಿಕ್ಕಂದಿನಲ್ಲಿ ಆದರ-ಪ್ರೀತಿ ಎಷ್ಟು ಹೆಚ್ಚು ಸಿಕ್ಕುತ್ತದೋ ಅಷ್ಟು ಸುಲಭವಾಗಿ ತಮ್ಮ ಪ್ರೀತಿ ವಾತ್ಸಲ್ಯವನ್ನು ಇತರರಿಗೆ ಹಂಚಿಕೊಡುವ ಸ್ವಭಾವವನ್ನು ಹೊಂದುತ್ತಾರೆ. ಚಿಕ್ಕಂದಿನಲ್ಲಿ ಪ್ರೀತಿ ತಕ್ಕ ಪ್ರಮಾಣದಲ್ಲಿ ಲಭಿಸದಿದ್ದರ ದೊಡ್ಡವರಾದ ನಂತರ ಈ ಲೋಪ ವ್ಯಕ್ತಿತ್ವ ಲೋಪವಾಗಿ ಸ್ಥಿರಪಡುತ್ತದೆ. ಇತರರೊಂದಿಗೆ ತಕ್ಕ ವಿಧದಲ್ಲಿ ಕೊಡ ತೆಗೆದುಕೊಳ್ಳುವ ಧೋರಣೆಯಲ್ಲಿ ವ್ಯವಹರಿಸಲಾರದೆ ಹೋಗುತ್ತಾರೆ. ಆದ್ದರಿಂದಲೇ ಸಂಪ್ರದಾಯಸಿದ್ಧವಾಗಿ ನಮ್ಮ ಕುಟುಂಬಗಳಲ್ಲಿ ಹಸುಗೂಸುಗಳ ಲಾಲನೆ, ಪಾಲನೆ ಶ್ರದ್ಧೆಯಿಂದ ಮಾಡುವ ಸಂಸ್ಕೃತಿ ಇದೆ. ಕ್ಷಿಪ್ರವಾಗಿ ಬರುತ್ತಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ವೈಜ್ಞಾನಿಕ ಬದಲಾವಣೆಗಳು ಪುರಾತನ ಸಂಪ್ರದಾಯಗಳಿಂದ ನಮ್ಮನ್ನು ದೂರ ಮಾಡುತ್ತಿವೆ.

ಮನುಷ್ಯ ಸಂಘಜೀವಿ. ಯಾರೊಂದಿಗೆ ಇದ್ದರೆ ಅವರ ನಡೆ-ನುಡಿ, ಆಚಾರ-ವಿಚಾರ ಕಲೆತುಕೊಳ್ಳುತ್ತಾನೆ. ಪರಿಸರವನ್ನು ತನಗೆ ತಕ್ಕಂತೆ ಉಪಯೋಗಿಸಿಕೊಂಡು ಬೆರೆಯುತ್ತಾನೆ. ಉತ್ತರಪ್ರದೇಶದಲ್ಲಿ ತೋಳಗಳ ಜೊತೆಗೆ ಬೆಳೆದ ಹುಡುಗನನ್ನು ತಂದು ನಮ್ಮ ಸಮಾಜದಲ್ಲಿ ಬೆಳೆಸಲು ಪ್ರಯತ್ನಿಸಿ ಸೋತಿದ್ದಾರೆ. ಕೊನೆಗೆ ಆ ಹುಡುಗ ತೋಳಗಳಂತೆ ನಾಲ್ಕು ಕಾಲುಗಳಿಂದ ನಡೆಯುವುದು, ಮಾಂಸ ತಿನ್ನುವುದು ನಾಲಿಗೆಯಿಂದ ನೀರು ಕುಡಿಯುವುದನ್ನು ಕೊನೆಗೂ ಬಿಡಲಿಲ್ಲ. ಈ ಪರಿಸರಕ್ಕೆ ಹೊಂದಲು ಆಗದೆ ೧೯೮೫ರಲ್ಲಿ ಸತ್ತು ಹೋದ.

ಹುಟ್ಟಿನೊಂದಿಗೆ ಬಂದ ಆಲೋಚನಾ ಶಕ್ತಿ ಎಂದು ಸಮಸ್ಯೆ ಪರಿಹಾರ ಶಕ್ತಿಯಾಗಿ ರೂಪುಗೊಳ್ಳುತ್ತದೆ ಎಂಬ ವಿಷಯ ತಿಳಿಯಲು ಅನೇಕ ಪರಿಶೋಧನೆಗಳನ್ನು ನಡೆಸಲಾಗಿದೆ. ವಿಜ್ಞಾನಿಗಳು ಎರಡು ಮೇಜುಗಳನ್ನು ಒಂದು ಮೀಟರ್ ಅಂತರದಲ್ಲಿ ಇರಿಸಿ, ಅವುಗಳ ಮಧ್ಯೆ ಖಾಲಿ ಸ್ಥಳವನ್ನು ಗಾಜಿನಿಂದ ಸೇತುವೆಯಾಗಿ ನಿರ್ಮಿಸಿದರು. ಎಂಟು ತಿಂಗಳ ಮಗುವನ್ನು ಒಂದು ಮೇಜಿನ ಮೇಲೆ

ಇರಿಸಿ ಮತ್ತೊಂದು ಮೇಜಿನ ತುದಿಯಲ್ಲಿ ತಾಯಿಯನ್ನು ನಿಲ್ಲಿಸಿದರು. ತಾಯಿ ಗೊಂಬೆಗಳನ್ನು ತೋರಿಸುತ್ತಾ ಪ್ರೀತಿಯಿಂದ "ಬಾ"ಎಂದು ಕರೆದಾಗ ಮಗು ಉತ್ಸಾಹದಿಂದ ಗಾಜಿನ ಸೇತುವೆ ದಾಟಿ ತಾಯಿಯ ಹತ್ತಿರ ಸೇರಿತು. ಇದೇ ಪ್ರಯೋಗವನ್ನು ಹನ್ನೊಂದು ತಿಂಗಳ ಮಗುವಿನೊಂದಿಗೆ ಮಾಡಿದಾಗ ತಾಯಿ ಎಷ್ಟೇ ಪ್ರೇರೇಪಿಸಿದರೂ ಮಗು ಗಾಜನ್ನು ದಾಟಿ ತಾಯಿಯ ಹತ್ತಿರ ಬರಲು ನಿರಾಕರಿಸಿತು. ಮೊದಲು ಮೇಜಿನ ಕೊನೆಗೆ ಬಂದ ಕೂಡಲೇ ಮೇಜುಗಳ ನಡುವೆ ಇದ್ದ ದೂರ ಅಗಾಧವಾಗಿದ್ದಂತೆ ಕಾಣಿಸಿತು. ಆಗ ಕೆಳಕ್ಕೆ ಬೀಳುತ್ತೇನೆಂಬ ಭಯ, ತಾಯಿಯ ಪ್ರೀತಿ, ಗೊಂಬೆಗಳ ಮೇಲಿನ ವ್ಯಾಮೋಹ ಎರಡನ್ನೂ ಗಮನಿಸಿ ಮಗು ನಿರ್ಣಯಕ್ಕೆ ಬಂದಿತು.

ತಾನು ಆಪತ್ತಿಗೆ ಒಳಗಾಗದಂತೆ ಇರಬೇಕೆಂಬ ಗಾಢವಾದ ವಾಂಛೆ ಸಮಸ್ಯಾ ಪರಿಹಾರ ಶಕ್ತಿಯಾಗಿ ರೂಪುಗೊಳ್ಳುತ್ತದೆ. ಎಂಟು ತಿಂಗಳ ವಯಸ್ಸಿನಲ್ಲಿ ಇರುವ ಮಕ್ಕಳು ತಾಯಂದಿರ ಸಮಸ್ಯಾ ಪರಿಷ್ಕಾರ ಶಕ್ತಿಯ ಮೇಲೆ ನಂಬಿಕೆಯಿಂದ ತಮ್ಮ ಸ್ವಂತ ನಿರ್ಣಯಕ್ಕೆ ಹಾಕಿ ವ್ಯವಹರಿಸುತ್ತವೆ. ಹನ್ನೊಂದು ತಿಂಗಳು ಬರುವಷ್ಟರಲ್ಲಿ ತಮ್ಮ ಸುಭದ್ರತೆಯನ್ನು ತಾವೇ ನೋಡಿಕೊಳ್ಳಬೇಕೆಂಬ ವಾಂಛೆಯಿಂದ ತಾಯಿಯ ಪ್ರೀತಿಯನ್ನು, ಗೊಂಬೆಗಳ ಆಸೆಯನ್ನು ಲೆಕ್ಕಿಸದೆ ವ್ಯವಹರಿಸುತ್ತವೆ. ಹನ್ನೊಂದು ತಿಂಗಳು ಆದ ಕೂಡಲೇ ಒಂದೇ ಸಾರಿಗೆ ಈ ಸ್ವಯಂ ನಿರ್ಣಯ ಶಕ್ತಿ ಮಕ್ಕಳಿಗೆ ಆಕಾಶದಿಂದ ಜಾರಿ ಬೀಳುವದಿಲ್ಲ. ಹುಟ್ಟುವುದಕ್ಕೆ ಮುಂಚಿನಿಂದಲೇ ಆಲೋಚಿಸುತ್ತಾ, ಕ್ರಮೇಣವಾಗಿ ಅನುಭವಗಳನ್ನು ಸಂಪಾದಿಸುತ್ತಾ ತಮ್ಮ ಸಮಸ್ಯಾ ಪರಿಹಾರ ಶಕ್ತಿಯನ್ನು ಹಂತಹಂತವಾಗಿ ವೃದ್ಧಿಪಡಿಸಿಕೊಳ್ಳುತ್ತವೆ. ಸಮಸ್ಯಾ ಪರಿಷ್ಕಾರ ಶಕ್ತಿಯು ವಿಷಯ ನಿರ್ಣಯ ಶಕ್ತಿಯನ್ನು ಸ್ಥಿರೀಕರಿಸುತ್ತದೆ. ಆದ್ದರಿಂದಲೇ ಮಕ್ಕಳ ಪ್ರವರ್ತನೆಯಲ್ಲಿ ವಿಶಿಷ್ಟವಾದ ಬದಲಾವಣೆ ಕಾಣಿಸುತ್ತದೆ.

ಬಹಳ ಜನ ಮಕ್ಕಳು ಹುಟ್ಟಿದ ಕೂಡಲೇ ತಾಯಿ–ಮಗುವನ್ನು ದೂರ ಮಾಡುತ್ತಾರೆ. ಹಾಗೆ ಬೇರೆ ಮಾಡಿದ ಸಂದರ್ಭಗಳಲ್ಲಿ ಮಗು ಒಂದೇ ಬಾರಿಗೆ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಮಾನಸಿಕ ಕ್ಷೋಭೆಗೆ ಗುರಿಯಾಗುತ್ತವೆ. ಆದ್ದರಿಂದ ಪ್ರಸವಿಸಿದ ಕೂಡಲೇ ಹೊಕ್ಕಳು ಬಳ್ಳಿಯನ್ನು ಕತ್ತರಿಸುವುದಕ್ಕಿಂತ ಮೊದಲೇ ತಾಯಿಯ ಹೊಟ್ಟೆಯ ಮೇಲೆ ಮಗುವನ್ನು ಇರಿಸಿ ತಾಯಿಯು ಪ್ರೀತಿಯಿಂದ ನೇವರಿಸಿದರೆ ಹಸುಗೂಸಿಗೆ ಮಾನಸಿಕ ಸ್ಥಿರತೆ ಉಂಟಾಗುತ್ತದೆ. ಮೊದಲ ಕ್ಷಣಗಳಲ್ಲಿ ಮಾನಸಿಕ ಸುಸ್ಥಿರತೆ ಎಷ್ಟು ಹೆಚ್ಚಾಗಿದೆಯೋ ಅಷ್ಟು ಸರಾಗವಾಗಿ ಜೀವನವನ್ನು ಸಾಗಿಸಬಹುದೆಂದು ಮಾನಸ ತಜ್ಞರು ಹೇಳುತ್ತಿದ್ದಾರೆ.

ಗರ್ಭಕೋಶದ ಸ್ನಾಯುಗಳು ಶಿಶುವಿನ ಶರೀರದ ಮೇಲೆ ಉಂಟುಮಾಡಿದ ಒತ್ತಡವನ್ನು ಹುಟ್ಟಿದ ಕೂಡಲೇ ತಾಯಿಯ ಕೈಗಳಿಂದ ಮಾಡಿದರೆ ಹಸುಗೂಸಿನಲ್ಲಿ ರಕ್ಷಿತ ಭಾವನೆ ಮೂಡುತ್ತದೆ. ಕತ್ತರಿಸಿದ ನಂತರ ತಾಯಿಯ ಶರೀರ ಸ್ಪರ್ಶದ ಅವಶ್ಯಕತೆ ಹಸುಗೂಸಿಗೆ ಬಹಳ ಇರುತ್ತದೆ. ಹಸುಗೂಸುಗಳಿಗೆ ಏನು ತಿಳಿಯುತ್ತೆ ಬಿಡು ಎಂದು ಅದರ ಮಾನಸಿಕ ಕ್ಷೋಭೆಯನ್ನು ಲಕ್ಷಿಸದೆ ದೊಡ್ಡವರ ಅವಶ್ಯಕತೆಗಳಿಗೆ ತಕ್ಕಂತೆ ತಾಯಿ–ಮಗುವನ್ನು ಬೇರ್ಪಡಿಸುವ ಸಂಸ್ಕೃತಿಯನ್ನು ತ್ಯಜಿಸಬೇಕು. ೯ ತಿಂಗಳು ಕಷ್ಟಪಟ್ಟು ಗರ್ಭದಲ್ಲಿ ಬೆಳೆಸಿದ ಶಿಶುವನ್ನು ಹುಟ್ಟಿದ ಕೂಡಲೇ ತಾಯಿ ಪ್ರೀತಿಯಿಂದ ಬೆನ್ನು ಸವರಬೇಕೆಂದು, ಹೊಟ್ಟೆಯ ಮೇಲೆ ಹಾಕಿಕೊಂಡು ಲಾಲಿಸಬೇಕೆಂದು ಬಹಳ ಜನರಿಗೆ ತಿಳಿಯದು.

ಕೋತಿಗಳ ಪ್ರವರ್ತನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಪರಿಶೋಧಕರು ಕೆಲವು ವಿಚಿತ್ರ ದೃಶ್ಯಗಳನ್ನು ನೋಡಿದ್ದಾರೆ. ಕೋತಿಯು ಪ್ರಸವಿಸುತ್ತಿದ್ದರೆ ತಾಯಿ ಗರ್ಭದಿಂದ ಅರ್ಧ ಹೊರಬಂದ ಕೋತಿ ಮರಿ ತನ್ನ ಕೈಗಳಿಂದ ತಾಯಿಯ ಕಾಲುಗಳನ್ನು ಹಿಡಿದುಕೊಂಡು ತಾಯಿಯ ಪ್ರಯತ್ನಕ್ಕೆ ಸಹಕರಿಸುತ್ತಾ ಉತ್ಸಾಹದಿಂದ ಹೊರಕ್ಕೆ ಬಂದಿತಂತೆ! ಕೋಳಿ ಮರಿ ತಂತಾನೆ ಮೊಟ್ಟೆಯನ್ನು ಸೀಳಿಕೊಂಡು ಹೊರಬರುತ್ತದೆ. ಬೀಜದಲ್ಲಿನ ಜೀವಶಕ್ತಿಗೆ ಅನುಕೂಲಕರ ಪರಿಸ್ಥಿತಿಗಳು ಲಭಿಸಿದಾಗ ಮೇಲಿನ ಹೊಟ್ಟನ್ನು ಸೀಳಿಕೊಂಡು ಮೊಳಕೆ ಹೊರಬರುತ್ತದೆ.

ಪ್ರಸವ ಸಮಯದಲ್ಲಿ ಪಿಂಡ ಅನುಭವಿಸುವ ನೋವು ಹಸುಗೂಸಿನ ಮನಸ್ಸಿನಲ್ಲಿ ಜ್ಞಾಪಕವಾಗಿರುತ್ತದೆ. ಆ ವಿಚಾರ ಜೀವನ ಪರ್ಯಂತ ಭಯಾಂದೋಳನಗಳಿಗೆ ಕಾರಣವಾಗುತ್ತದೆ. ಆ ನೋವನ್ನು ಕಡಿಮೆ ಮಾಡಲಿಕ್ಕೆ ಕೆಲವು ಪರಿಶೋಧನೆಗಳಲ್ಲಿ ಉಗುರು ಬೆಚ್ಚಗಿನ ನೀರಿನ ತೊಟ್ಟಿಯಲ್ಲಿ ಗರ್ಭಿಣಿಯನ್ನು ಕುಳ್ಳಿರಿಸಿ ಹೆರಿಗೆ ಮಾಡಿಸಿದರು. ಅಂತಹ ಸಂದರ್ಭಗಳಲ್ಲಿ ಹೊರಗಿನ ವಾತಾವರಣ ಸಹ ಗರ್ಭದಲ್ಲಿನ ವಾತಾವರಣದಂತೆ ಇರುವುದರಿಂದ ಪಿಂಡವು ತಾಯಿಯ ಪ್ರಯತ್ನವನ್ನು ವಿರೋಧಿಸಲಿಲ್ಲವಂತೆ! ಹಾಗೆಯೆ ಗರ್ಭಸ್ಥ ಶಿಶುವಿಗೆ ಆಸೆ ತೋರಿಸಿ, ಭದ್ರತೆ ತೋರಿಸಿ ಹೆರಿಗೆ ಮಾಡಿಸುವ ಪದ್ಧತಿಗಳು ಅನೇಕ ಕಡೆ ಈಗ ಜಾರಿಯಲ್ಲಿವೆಯಂತೆ.

[ಆಧಾರ] ಪಿ.ಎಚ್. ಸ್ವಾಮಿ


ಮರ ಹೇಳಿದ ಕಥೆ

ಪಕ್ಕ ಬೆಳೆದಿದ್ರೆ ಒಂದಿಷ್ಟು ಪೂಜೆ ಪುನಸ್ಕಾರ ಮಾಡಿಸಿಕೊಳ್ತಿತ್ತು. ಕೆಲಸಕ್ಕೆ ಬಾರದ ಮರ. ಇದು ಹೂವೂ ಬಿಡೋದಲ್ಲ, ಕಾಯೀನೂ ಬಿಡೋದಲ್ಲ, ಎಂದು ಆತ ವೀರಾವೇಶದಿಂದ ಕೈಯಲ್ಲಿದ್ದ ಕೊಡಲಿಯಿಂದ ನನ್ನನ್ನು ತುಂಡರಿಸಿದ. ಅದರಿಂದ ನಾನು ಸಾಯಲಿಲ್ಲ. ಸಾಯದಿರುವ ನನ್ನ ಬೇರುಗಳಿನ್ನೂ ಭೂಮಿಯೊಳಗಿವೆ. ದೇಹ ಕಳಚಿಕೊಂಡ ಮನಸ್ಸಿನಂತೆ ಅರ್ಥವಾಗದ ಅನುಭಾವಸ್ಥಿತಿ ನನ್ನದು. ನಮಗೆ ಹೃದಯ, ಮನಸ್ಸು ಸರ್ವಸ್ವವೆಲ್ಲವೂ ಬೇರುಗಳೇ. ಬೇರುಗಳೇ ನಮಗಾಧಾರ. ಆಹಾರದೊಂದಿಗೆ ಎಲ್ಲ ಸಂವೇದನೆಗಳ ಸರಬರಾಜು ಮಾಡುವವು ಬೇರುಗಳೇ. ಗಾಯಗೊಂಡು ಸತ್ತವನಿಗಾದ ಸ್ಥಿತಿ ನನಗೂ ಆಯಿತು. ಸಾವಿನ ಪೂರ್ವದಲ್ಲಿ ಗಾಯಗಳಿಂದ ರಕ್ತ ಸ್ರವಿಸಿದಂತೆ ನನ್ನಲ್ಲೂ ರಕ್ತಸ್ರವಿಸಿತು.

ಮನುಷ್ಯ ಎಷ್ಟೊಂದು ಸಂಕುಚಿತ ಬುದ್ಧಿಯವನೂಂತ! ಕೇವಲ ಮರದ ಮೇಲಿನ ಎಲೆಗಳನ್ನು ನೋಡಿ ಇದು ನನ್ನದು, ಇದು ಬೇರೆಯವರದೆಂದು ವರ್ಗೀಕರಿಸುತ್ತಾನೆ!

ಬಹಳ ದಿನಗಳವರೆಗೆ ನನ್ನ ಬೇರುಗಳಲ್ಲಿ ಶಕ್ತಿಯೇ ಇರಲಿಲ್ಲ. ಮನುಷ್ಯರ ಬಗೆಗಿನ ಭಯದಿಂದಾಗಿ ಶಕ್ತಿ ಸಂಚಯಕ್ಕೆ ತೊಂದರೆಯಾಗಿದ್ದಿರಬಹುದು. ನಾನು ಮತ್ತೆ ಮೊಳಕೆ ಚಾಚಿದೆ. ಈ ನಡುವೆ ಹೊರಗಡೆ ಏನು ನಡೆಯಿತೋ, ಏನು ಬಿಟ್ಟಿತೋ ನನಗೊಂದೂ ತಿಳಿಯಲಿಲ್ಲ. ಚಿಗುರಿದ ಕ್ಷಣದಿಂದ ಮನುಷ್ಯನ ಭಯ ಕಾಡತೊಡಗಿತು. ನಮ್ಮಲ್ಲಿರೋ ವಿಚಿತ್ರ ಶಕ್ತಿ ಎಂದರೆ ಸಾಯುವ ಕ್ಷಣದಿಂದ ಬದುಕು ಆರಂಭಿಸುವುದು. ನಾವು ಅಷ್ಟು ಸುಲಭವಾಗಿ ಸಾಯುವ ಪೈಕಿ ಅಲ್ಲ. ಒಂದು ರೀತಿ ನಮಗೆ ನಾಚಿಕೆ ಇಲ್ಲವೆಂದರೂ ಸರಿಯೇ. ಸಾಯುವ ಅದೃಷ್ಟ ಮನುಷ್ಯರಿಗಿರುವಂತೆ ನಮಗಿಲ್ಲ. ಯಾವುದು ಏನಾದರೂ ನಾನು ಮತ್ತೆ ಬೆಳೆಯತೊಡಗಿದೆ. ಎಂದಿಗಿಂತ ಬೇರುಗಳು ಸದೃಢಗೊಂಡವು. ಈ ಸಲ ಮೊದಲಿಗಿಂತ ಹೆಚ್ಚು ಕೊಂಬೆರೆಂಬೆಗಳು ಮೂಡಿದವು. ಈಗೀಗ ಮಸೀದಿ ಆವರಣದಲ್ಲಿ ವಾತಾವರಣ ಪ್ರಶಾಂತವಾಗಿರುವುದು. ಇದಕ್ಕೂ ಮೊದಲಿನಂತೆ ಇತರ ವಿಷಯಗಳಿಗೆ ತಲೆತುರಿಸಿಕೊಳ್ಳದಷ್ಟು ಪುರುಸೊತ್ತು ಸಿಕ್ಕಿತು. ನನ್ನ ಪಾಡಿಗೆ ನಾನು ಬೆಳೆಯುತ್ತ ಬಂದೆ. ಮಸೀದಿ ಗೋಡೆಗಳಿಗಿಂತ ಹೆಚ್ಚು ಎತ್ತರ ಬೆಳೆದೆ. ನನ್ನ ನೆರಳು ಮಸೀದಿ ಆವರಣದ ತುಂಬ ಚೆಲ್ಲುತ್ತಿತ್ತು. ಇಮಾಮ ಸಾಹೇಬರು ಬಿಡುವು ಸಿಕ್ಕಾಗಲೆಲ್ಲ ನನ್ನ ನೆರಳಿನಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು.



ಮನೆಯಲ್ಲಿ ಕರೆಂಟ್ ಡಿಮ್ಮಿದ್ರೂ ನಮಗೆ ತೊಂದ್ರೆಆಗಲ್ಲ.... ಅಲ್ವೇನೋ... ರತ್ನಾಕರ...?

ನನ್ನ ನೆರಳಿನಲ್ಲಿ ಕೂತಿರುತ್ತಿದ್ದ ಇಮಾಮ ಸಾಹೇಬರ ಅಕ್ಕಪಕ್ಕದಲ್ಲಿ ಕೆಲವು ಮಂದಿ ಕೂತು, ಅದು ಇದು ಮಾತಾಡಿಕೊಳ್ಳುತ್ತಿದ್ದರು. ಅವರಲ್ಲಿ ಕೆಲವರು, “ಈ ದರಿದ್ರ ಮರವನ್ನು ಕಡಿಸದೆ ಯಾಕೆ ಬಿಟ್ಟಿದ್ದೀರಿ? ಇದನ್ನು ಯಾವನಾದ್ರು ಕಾಫಿರ್ ನೆಟ್ಟಿದ್ದಿರೂ ಇರಬಹುದು” ಎಂದು ಹೇಳುತ್ತಿದ್ದರು.

“ಅವರಿಗೆ ಇಂಥದೊಂದು ಮರ ನೆಡೋಕೆ ಬೇರೆ ಎಲ್ಲೂ ಸ್ಥಳ ಸಿಗಲಿಲ್ಲವೇನೋ! ನೆಡೋದ್ರಲ್ಲಿ ತಪ್ಪೇನಿದೆ? ಇನ್ನಾದರೂ ಇಂಥ ವಿಷಯಗಳ ಬಗ್ಗೆ ಮಾತಾಡೋದ್ನ ನಿಲ್ಲಿಸಿ. ಇದರಿಂದ ನಮಗಾಗಿರೋ ತೊಂದರೆಯಾದ್ರೂ ಏನು? ಈ ಮರ

ಇರೋದ್ರಿಂದ ನಮ್ಗೆ ತಂಪಾದ ಗಾಳಿ, ನೆರಳು ಸಿಕ್ತಿದೆ" ಎಂದು ಇಮಾಮ ಸಮಾಧಾನ ಹೇಳುತ್ತಿದ್ದರು. ಅವರ ಇಂಥ ಮಾತುಗಳಿಂದ ನನಗೆ ಸಾಕಷ್ಟು ಧೈರ್ಯ ಸಿಗುತ್ತಿತ್ತು.

ಒಂದು ದಿನ ಇದ್ದಕ್ಕಿದ್ದಂತೆ ಮಳೆ ಸುರಿಯತೊಡಗಿತು. ಗಾಳಿ ಕೂಡ ವೇಗವಾಗಿ ಬೀಸತೊಡಗಿತು. ನನ್ನ ಮೇಲಿದ್ದ ಗೂಡೊಂದು ಇದ್ದಕ್ಕಿದ್ದಂತೆ ಗಾಳಿ ಪಾಲಾಯಿತು. ಅದಕ್ಕೆ ಏನಾದರೂ ಸಹಾಯ ಮಾಡಬೇಕೆಂದು ಯೋಚಿಸಿದೆ. ನನ್ನ ಕೊಂಬೆಯೊಂದರ ಸಹಾಯಹಸ್ತ ಚಾಚಿ ಆ ಗೂಡನ್ನು ಮಸೀದಿ ಗೋಡೆಯೊಂದರ ಮೇಲೆ ಎಸೆದೆ. ಅದೃಷ್ಟಬಲದಿಂದ ಅದು ಆ ಗೋಡೆಯ ಮೇಲೆ ಸುರಕ್ಷಿತವಾಗಿ ಉಳಿಯಿತು. ಹಕ್ಕಿಮರಿಗಳು ಭಯದಿಂದ ಕಂಗಾಲಾಗಿ ಕಿಚಕಿಚ ಎಂದು ಅರಚತೊಡಗಿದವು. ನನ್ನ ಪ್ರಯತ್ನದಿಂದ ಅವುಗಳಿಗೆ ರಕ್ಷಣೆ ಹಾಗೂ ಆಸರೆ ಎರಡೂ ಸಿಕ್ಕವು. ಸಮಯಕ್ಕೆ ಸರಿಯಾಗಿ ರಕ್ಷಣೆ ಕಲ್ಪಿಸದಿದ್ದಲ್ಲಿ ಅವುಗಳ ದೃಷ್ಟಿಯಲ್ಲಿ ನಾನು ರಾಕ್ಷಸನಾಗಿರುತ್ತಿದ್ದೆ. ದಿನದಿಂದ ದಿನಕ್ಕೆ ನನ್ನ ಮೇಲೆ ಆಶ್ರಯ ಪಡೆಯುವ ಪಕ್ಷಿಗಳ ಸಂಖ್ಯೆ ಹೆಚ್ಚಿತು. ನನಗೆ ಮೊದಲಿನ ಒಂಟಿತನ ಈಗ ಇಲ್ಲದಾಯಿತು. ನನ್ನ ಮೇಲಿದ್ದ ಅಪಾರ ಸಂಖ್ಯೆಯ ಪಕ್ಷಿಗಳು ಮನುಷ್ಯರಂತೆ ಮಾತಾಡಿಕೊಳ್ಳುವುದು, ಪರಸ್ಪರ ಜಗಳವಾಡುವುದು, ಗಾಯಗೊಳ್ಳುವುದು ಸರ್ವೇಸಾಮಾನ್ಯವಾಯಿತು. "ಒಂದೇ ಮರದ ಮೇಲೆ ವಾಸ ಮಾಡ್ತಾ ಇರೋ ನಿಮಗೆ ನೆಮ್ದಿಯಿಂದ ಇರೋಕೆ ಯಾಕೆ ಸಾಧ್ಯ ಆಗ್ತಿಲ್ಲ? ಅನೇಕ ಜಾತಿಯವರಾಗಿದ್ರೂ ಮುಖ್ಯವಾಗಿ ನೀವೆಲ್ರೂ ಪಕ್ಷಿ ಜಾತಿಗೆ ಸೇರಿದವರೆಂಬುದನ್ನು ಮರೆಯದಿರಿ" ಎಂದು ನಾನು ಅವರೆಲ್ಲರಿಗೆ ಬುದ್ಧಿ ಹೇಳಲು ಪ್ರಯತ್ನಿಸುತ್ತಿದ್ದೆ. ಜೀವಿಗಳ ನಶ್ವರತೆ ಬಗ್ಗೆ ಮಾತಾಡುವಾಗ ನಾನು ಥೇಟ್ ವೇದಾಂತಿಯಂತೆಯೇ ವರ್ತಿಸುತ್ತಿದ್ದೆ.

ಸಾಕಷ್ಟು ಎತ್ತರ ಬೆಳೆದುಬಿಟ್ಟಿದ್ದ ನನಗೆ ದೂರದಲ್ಲಿರುವ ಹೆಣ್ಣುದೇವತೆಯ ದೇವಸ್ಥಾನವೇ ಮೊದಲಾದ ಸ್ಥಳಗಳನ್ನು ಸುಲಭವಾಗಿ ನೋಡಲಿಕ್ಕೆ ಸಾಧ್ಯವಾಯಿತು. ಮನುಷ್ಯರ ಬಗೆಗಿನ ಭಯ ಕ್ರಮೇಣ ಕಡಿಮೆಯಾಯಿತು. ನನ್ನ ಸಮಕ್ಷಮದಲ್ಲಿ ನಡೆದಾಡುವ ಮನುಷ್ಯರನ್ನು ಸುಲಭವಾಗಿ ಗುರುತಿಸಬಲ್ಲವನಾದೆ. ಕೆಲವರು ನನ್ನನ್ನು ಕಂಡಾಕ್ಷಣ ನಮಸ್ಕರಿಸುತ್ತಿದ್ದುದು ವಿಚಿತ್ರವೆನಿಸಿತು. ಬಹುಶಃ ಅವರೆಲ್ಲ ಹಿಂದುಗಳಾಗಿರಬಹುದು. ಅವರು ನನಗೆ ಕೊಡತೊಡಗಿದ ಗೌರವ ಅರ್ಥವಾಗಲಿಲ್ಲ. ನನ್ನ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸಂನ್ಯಾಸಿಗಳಿಬ್ಬರು ಆಡುತ್ತಿದ್ದ ಮಾತುಗಳು ವಿಚಿತ್ರವಾಗಿದ್ದವು. ನನ್ನ ಮೇಲೆ ದೇವತೆಗಳು ವಾಸಮಾಡುತ್ತಿರುವರಂತೆ. ದೇವತೆಗಳೆಂದರೆ ಯಾರೋ ಏನೋ ನನಗೊಂದೂ ತಿಳಿಯದು. ನನ್ನ ಮೇಲಿರುವ ಪಕ್ಷಿಗಳನ್ನೇ ಇವರು ದೇವತೆಗಳೆಂದು ಭ್ರಮಿಸಿರಬಹುದೆಂಬ ಅನುಮಾನ ಕಾಡತೊಡಗಿತು.

ಮನುಷ್ಯರಲ್ಲಿ ಕೆಲವರು ನೋಡಲಿಕ್ಕೆ ಮನುಷ್ಯರಂತೆಯೇ ಗೋಚರಿಸುತ್ತಾರೆ. ಅವರು ಒಳಗೊಳಗೆ ಮನುಷ್ಯರಾಗಿರುವುದಿಲ್ಲ. ಮನುಷ್ಯರಂತೆ ವರ್ತಿಸುವುದೇ ಇಲ್ಲ. ಅಂಥ ಮನಸ್ಸಿನ ಕೆಲವರು ನನ್ನನ್ನು ಮಸೀದಿ ಮರ ಎಂದು ಕರೆಯಲಾರಂಭಿಸಿದರು. ಇನ್ನೂ ಕೆಲವರು ಪ್ರತಿ ಶನಿವಾರ ನನ್ನ ಸುತ್ತ ಪ್ರದಕ್ಷಿಣೆ ಹಾಕಲಾರಂಭಿಸಿದರು. ನನ್ನ ಬುಡಕ್ಕೆ ಹಾಲು ಸುರಿಯಲಾರಂಭಿಸಿದರು. ಇದೊಂದೂ ನನಗೆ ಅರ್ಥವಾಗದೆ ಕಂಗಾಲಾದೆ. ಮೂಕಪ್ರೇಕ್ಷಕನಂತೆ ತೆಪ್ಪಗಿದ್ದುಬಿಟ್ಟೆ.

ಒಂದು ದಿನ ಪೂಜಾರಿಯೊಬ್ಬ ಬಂದು ನನ್ನ ಕೆಳಗೆ ಕೂತುಕೊಂಡು ಈ ಮರದಲ್ಲಿ ಸಾಕ್ಷಾತ್ ಬ್ರಹ್ಮದೇವನೇ ವಾಸ ಮಾಡ್ತಿದಾನೆ ಎಂದು ತನ್ನ ಸಹಚರರಿಗೆ ಪ್ರಚಾರ ಮಾಡಿದ. ಈ ಬ್ರಹ್ಮ ಬಂದು ನನ್ನಲ್ಲಿ ವಾಸಮಾಡುತ್ತಿರುವುದೆಂದರೇನು!! ನನಗೊಂದೂ ಅರ್ಥವಾಗಲಿಲ್ಲ. ಕ್ರಮೇಣ ಜನ ತಂಡೋಪತಂಡವಾಗಿ ಬಂದು ನನಗೆ ಪೂಜೆ-ಪುನಸ್ಕಾರ ಸಲ್ಲಿಸತೊಡಗಿದರು. ಏನೇನೋ ಬೇಡಿಕೊಳ್ಳುತ್ತ ಹೂವು ಮೊದಲಾದ ವಸ್ತುಗಳನ್ನು ನನ್ನ ಬುಡಕ್ಕೆ ಪೇರಿಸತೊಡಗಿದರು. ಇದರಿಂದ ಪೂಜಾರಿಗೆ ಮತ್ತು ಆತನ ಶಿಷ್ಯರಿಗೆ ಸಾಕಷ್ಟು ಸಂಪಾದನೆ ಆಗತೊಡಗಿತು.

ಯಾವುದೇ ಮಹಿಮೆಯಾಗಲಿ ಪವಾಡವಾಗಲಿ ನನ್ನಲ್ಲಿ ಎಳ್ಳಷ್ಟು ಇಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತು. ಯಕಶ್ಚಿತ್ ಮರವಾದ ನನಗೆ ಮನುಷ್ಯರ ಬೇಡಿಕೆಗಳನ್ನು ಈಡೇರಿಸುವ ಶಕ್ತಿ ಎಲ್ಲಿಯದು? ದಿನಗಳೆದಂತೆ ನನ್ನ ಬೊಡ್ಡೆಯ ಸುತ್ತ ಗದ್ದಲ

* ಮೂಲ: ಸೌಮೀ ಗಂಗೂಲಿ
ಕನ್ನಡಕ್ಕೆ: ಎಚ್.ಆರ್. ಸುರೇಶ
ಕೃಪೆ: ಸ್ಟೇಟ್ಸ್‌ಮನ್

ಭೀತಿಯೆಂಬ ಭೂತವೆ ನಿನಗದೆಷ್ಟು ರೂಪ?

ಬೇಸಿಗೆಯ ದಿನದೊಂದು ಸಂಜೆ. ಪರೀಕ್ಷೆಗಳೆಲ್ಲ ಮುಗಿದಿದ್ದವು. ಹರಟೆ ಸೆಷನ್‌ಗಾಗಿ ಗೆಳೆಯರಾದ ಸುನೀಲ್, ಸುಶೀಲ್, ಗೆಳತಿಯರಾದ ರಾಖಿ, ಸೋಮಾ ರೂಪಾ, ಅಮೃತಾ ಮತ್ತು ನಾನು ನಮ್ಮ ಮನೆಯಲ್ಲಿ ಸೇರಿದ್ದೆವು. ರಾಜಕೀಯ, ಇತ್ತೀಚೆಗೆ ಬಿಡುಗಡೆಗೊಂಡ ಪುಸ್ತಕ, ಸಿನೇಮಾ, ಹಾಡುಗಳ ಧ್ವನಿಸುರುಳಿಗಳನ್ನೂ ಮೊದಲುಗೊಂಡು ಗೆಳೆಯರು, ಗೆಳತಿಯರು, ನಗೆ ಚಟಾಕಿಗಳು, ಪೋಷಾಕುಗಳು ಹೀಗೆ ಹಿರಿಯರ ದೃಷ್ಟಿಯಲ್ಲಿ ಸುಟ್ಟು ಸುಡುಗಾಡು ಎಂದು ಕರೆಸಿಕೊಳ್ಳುವ ಎಲ್ಲ ವಿಷಯಗಳೂ ನಮ್ಮ ಹರಟೆಯಲ್ಲಿ ಬಂದವು.

ಹರಟೆ ಜೋರಾಗಿ ಸಾಗಿದ್ದಾಗಲೆ ಜೊಂಡಿಗ (ಜಿರಲೆ) ಮಹಾಶಯ ತಲೆ ತೂರಿಸಿಬಿಟ್ಟ. ಕ್ಷಣಾರ್ಧದಲ್ಲಿ ಹರಟೆಗೆ ಭಂಗವಾದುದಷ್ಟೇ ಅಲ್ಲ, ಇಡೀ ದೃಶ್ಯಕ್ಕೆ ವರ್ಣನಾತೀತವಾದ ಹೆದರಿಕೆಯ ಛಾಯೆ ಮುಸುಕಿತು. ಅಲ್ಲಿಯವರೆಗೆ ಏರುಧ್ವನಿಯಿಂದ ಮಾತಾಡುತ್ತಿದ್ದವರ ಧ್ವನಿ ಹೆದರಿಕೆಯಿಂದಾಗಿ ಉಡುಗಿಹೋಯಿತು.

ಕೂಗಾಟ-ಚೀರಾಟಗಳು ಆರಂಭವಾಗಿ ಪರಿಸ್ಥಿತಿ ಗೋಳಿನ ಹಂತಕ್ಕೂ ತಲುಪಿತು. ಮೊದಲೇ ನಮ್ಮೆಲ್ಲರಿಗಿಂತ ಹೆಚ್ಚು ತರಲೆ ಸ್ವಭಾವದವಳಾದ ಸೋಮಾ ಪುಸ್ತಕಗಳ ಶೆಲ್ಫಿನ ಮೇಲೆ ಜಿಗಿದಳು. ಅಲ್ಲಿಯವರೆಗೆ ಗಾಢ ನಿದ್ರೆಯಲ್ಲಿದ್ದ ಮತ್ತೊಬ್ಬ ಜಿರಲೆರಾಯ ನಿದ್ರಾಭಂಗಕ್ಕೀಡಾಗಿ ಚಲಿಸತೊಡಗಿದ. ತನ್ನೆರಡೂ ಮೀಸೆಗಳನ್ನು ಅತ್ತಿತ್ತ ಆಡಿಸುತ್ತಾ ಹೊರಟ ಜಿರಲೆ ತನ್ನೆಡೆಗೇ ಧಾವಿಸುತ್ತಿದೆ ಎಂದುಕೊಂಡ ಸೋಮಾ ಕಿಟಾರನೆ ಕಿರುಚಿದಳು. ಪುಸ್ತಕದ ಶೆಲ್ಫ್‌ನಿಂದ ಟಣ್ಣನೆ ನೆಗೆದು ಸಿಡಿಲಿನಂಥ ಸ್ವರವೊಂದನ್ನು ಹೊರಡಿಸಿದಳು.

ಮೇಲಿನ ಈ ಘಟನೆ ಉತ್ಪ್ರೇಕ್ಷೆಯಿಂದ ಕೂಡಿದ್ದೆಂದು ಅನ್ನಿಸಿದರೂ ವಾಸ್ತವಿಕವಾದದ್ದು. ಈ ರೀತಿಯ ಅಸಾಧಾರಣ ಹೆದರಿಕೆಯನ್ನು ಭೀತಿ (ಫೋಬಿಯಾ) ಎಂದು ಕರೆಯಲಾಗುತ್ತದೆ. ಫೋಬಿಯಾ ಎಂಬ ಈ ಶಬ್ದ ಗ್ರೀಕ್‌ನ ಫೋಬಸ್ ಎಂಬ ಶಬ್ದದಿಂದ ಬಂದಿದ್ದು ಹೆದರಿಕೆ ಎಂಬ ಅರ್ಥವನ್ನು ಸೂಚಿಸುತ್ತದೆ.

ಹಲ್ಲಿ, ಬೆಕ್ಕು, ನಾಯಿ, ಸಂಖ್ಯೆ ೧೩, ಸಿಡಿಲು ಅಥವಾ ಮಿಂಚು, ಬಣ್ಣ ಹೀಗೆ ಯಾವಾವುದಕ್ಕೋ ಅತಾರ್ಕಿಕ ರೀತಿಯಲ್ಲಿ ವಿಪರೀತವಾಗಿ ದಿಗಿಲುಗೊಳ್ಳುವ ಜನ ಇದ್ದಾರೆ. ಇಂತಹ ಅತಾರ್ಕಿಕ ದಿಗಿಲನ್ನು ಮನಃಶಾಸ್ತ್ರದಲ್ಲಿ 'ಭೀತಿ'ಎಂದು ಕರೆಯಲಾಗುತ್ತದೆ.

ಸರ್ವಸಾಧಾರಣವಾಗಿ ಭೀತಿಯನ್ನು ಬಂಧಿತತೆಯ ಭೀತಿ (ಕ್ಲಾಸ್ಟ್ರೋಫೋಬಿಯಾ) ಬಯಲು ಜಾಗೆಯ ಭೀತಿ (ಅಗೋರಾ ಫೋಬಿಯಾ) ಎತ್ತರ ಭೀತಿ (ಅಕ್ರೋಫೋಬಿಯಾ), ಜಲಭೀತಿ (ಹೈಡ್ರೋ

ಫೋಬಿಯಾ) ಮತ್ತು ಅಪರಿಚಿತತೆ (ವಿಲಕ್ಷಣ)ಯ ಭೀತಿ (ಝುನೋಫೋಬಿಯಾ) ಎಂದು ಐದು ವಿಧಗಳಲ್ಲಿ ವಿಂಗಡಿಸಲಾಗುತ್ತದೆ.

ಬಂಧಿತತೆಯ ಭೀತಿಗೆ ತುತ್ತಾದವರು ಸಿನೇಮಾ ಮಂದಿರಕ್ಕಾಗಲಿ, ಜನದಟ್ಟಣೆಯಿರುವ ಸ್ಥಳಕ್ಕಾಗಲಿ ಹೋದಾಗ ಭೌತಿಕವಾಗಿ ಅಲ್ಲಿ ಸಿಕ್ಕಿಹಾಕಿಕೊಂಡಂತಹ ಅನುಭವಕ್ಕೆ ತುತ್ತಾಗುತ್ತಾರೆ.

ಬಯಲು ಜಾಗೆಯ ಭೀತಿಯು ಸ್ಥಳದ ಬಗೆಗಿನ ಹೆದರಿಕೆಯಾಗಿದ್ದು ಬಂಧಿತತೆಯ ಹೆದರಿಕೆಗೆ ವಿರುದ್ಧವಾದದ್ದಾಗಿದೆ. ವಿಶಾಲವಾದ ಸ್ಥಳವನ್ನು ಕಂಡಾಗ ಹೆದರಿಕೊಳ್ಳುವಂತಹ ಅಸಾಧಾರಣ ಭಯಗ್ರಸ್ತ ಸ್ಥಿತಿ ಇದನ್ನು ಆವರಿಸಿಕೊಂಡವರದ್ದಾಗಿರುತ್ತವೆ. ಈ ಹೆದರಿಕೆಯಿಂದ ನರಳುವವರು ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣಗಳಂಥ ವಿಶಾಲವಾದ ಸ್ಥಳಗಳಿಗೆ ಭೇಟಿ ನೀಡಲೂ ಹೆದರಿಕೊಳ್ಳುತ್ತಾರೆ. ಆದಷ್ಟೂ ಮನೆಯ ಒಳಗೇ ಇರಲು ಬಯಸುವ ಜನ ಇವರು.

ಎತ್ತರ ಭೀತಿಯಿಂದ ನರಳುವವರು ಏಣಿ ಅಥವಾ ಮರಗಳನ್ನು ಹತ್ತಲೂ ಹೆದರುತ್ತಾರೆ. ಕುರ್ಚಿ ಮೇಜುಗಳ ಮೇಲೆ ನಿಲ್ಲಲೂ ಇವರಿಗೆ ಹೆದರಿಕೆ. ಇಂಥವರು ಮನೆಯ ಮೇಲ್ಛಾವಣಿಯನ್ನು ಏರುವುದಿರಲಿ, ಎತ್ತರವಾದ ಕಟ್ಟಡಗಳ



ವನ್ನು ಕಳೆದುಕೊಳ್ಳುವುದು, ಕೈಗಳು ಬೆವರುವುದು, ಹೃದಯದ ಬಡಿತ ಹೆಚ್ಚುವುದು ಮತ್ತು ಗಂಟಲು ಒಣಗುವುದು ಆರಂಭವಾಗುತ್ತದೆ.

ವ್ಯಕ್ತಿಗಳಲ್ಲಿ ಈ ಭೀತಿ ಏಕೆ, ಹೇಗೆ ಕಾಣಿಸಿಕೊಳ್ಳುತ್ತದೆ? ಎಂಬ ಪ್ರಶ್ನೆ ಕುರಿತು ಡಾ. ದೇವ್ ಹೇಳುತ್ತಾರೆ: "ಭೀತಿಯ ಬೆಳವಣಿಗೆಗೆ ಅನೇಕ ಕಾರಣಗಳಿವೆ. ಆದರೆ ಇದು ಪ್ರಮುಖವಾಗಿ ವಂಶವಾಹಿಗಳಿಂದ ಬರುತ್ತದೆ. ಯಾವುದೋ ಒಂದು ನಿರ್ದಿಷ್ಟ ವಿಷಯಕ್ಕೆ ವ್ಯಕ್ತಿಯೊಬ್ಬ ಭಯ ಭೀತನಾಗುತ್ತಿದ್ದಾನೆಂದರೆ ಅದೇ ವಿಷಯಕ್ಕೆ ಹೆದರುವ ವ್ಯಕ್ತಿಗಳನ್ನು ಆತ ತನ್ನ ಕುಟುಂಬದಲ್ಲಿ ಹೊಂದಿರುತ್ತಾನೆ."

ಮಕ್ಕಳಲ್ಲಿ ಭೀತಿಯ ಕುಡಿಯನ್ನು ಅಂಕುರಿಸುವಲ್ಲಿ ಪೋಷಕರ ಪಾತ್ರವೂ ಇರುತ್ತದೆ. ಮೇಲಿನ ಉದಾಹರಣೆಗಳಲ್ಲಿ ಮಕ್ಕಳನ್ನು-ಅದರಲ್ಲೂ ವಿಶೇಷವಾಗಿ ಗಂಡು ಮಕ್ಕಳನ್ನು-ಕಟು ಶಿಸ್ತಿನ ವಾತಾವರಣದಲ್ಲಿ ಬೆಳೆಸಿದ್ದು ಎದ್ದುಕಾಣುವ ಸಂಗತಿಯಾಗಿದೆ. ಇದು ಇಮ್ರಾನ್‌ನಲ್ಲಿ ಹಿಂಜರಿಕೆಯ ಭಾವನೆಗಳನ್ನು ಮೂಡಿಸಿರಬೇಕು. ಮೇಲಿಂದ ಮೇಲೆ ಬದಲಾಗುವ ಪರಿಸರವೂ ಪರಿಣಾಮ ಬೀರಿರಬೇಕು. ಇದನ್ನು ಆತನ ಪೋಷಕರೇ ಒಪ್ಪಿಕೊಳ್ಳುತ್ತಾರೆ.

ಅಂಧ ವಿಶ್ವಾಸಗಳು ಮತ್ತು ದಂತ ಕಥೆಗಳೂ ಭೀತಿಗೆ ಪೋಷಕವಾಗಿವೆ. ಇದಕ್ಕೆ ಸರಳ ಉದಾಹರಣೆಯೆಂದರೆ ಸಂಖ್ಯೆ ೧೩ ರ ಬಗೆಗಿನ ಹೆದರಿಕೆ.

ಹಾಗಾದರೆ ಈ ಭೀತಿಗೆ ಪರಿಹಾರವೇ ಇಲ್ಲವೆ? ಈ ಪ್ರಶ್ನೆಗೆ ನಸುನಗುತ್ತಲೇ ಉತ್ತರಿಸುವ ಡಾ. ದೇವ್, "ಬಯಲು ಜಾಗೆಯ ಭೀತಿಯು ಸಾಮಾನ್ಯವಾಗಿ ವರುಷಗಳ ವರೆಗೆ ಮುಂದುವರಿಯುತ್ತದೆ. ಆದರೆ ಇದನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಬಹುದು" ಎಂದು ಹೇಳುತ್ತಾರೆ.

ನಿಶ್ಚಿತ ಭೀತಿ ಬಾಲ್ಯದಲ್ಲಿ ಅಥವಾ ಇಪ್ಪತ್ತರ ಹರೆಯದಲ್ಲಿ ಆರಂಭವಾಗುತ್ತದೆ. ನಿಶ್ಚಿತ ಘಟನೆಗಳು ಈ ರೀತಿಯ ಭೀತಿಯನ್ನು ತೀವ್ರಗೊಳಿಸುತ್ತವೆ. ಹಾಗಾಗಿ ಈ ಭೀತಿಯನ್ನು ಗುಣಪಡಿಸುವುದು ಬಹುತೇಕವಾಗಿ ಅಸಾಧ್ಯವೇ ಸರಿ. ಹೀಗಿದ್ದೂ ವ್ಯಕ್ತಿಗಳು ದೊಡ್ಡವರಾಗತೊಡಗಿದಂತೆ ಈ ಭೀತಿ ಮರೆಯಾಗಬಹುದು.

ಸಾಮಾಜಿಕ ಭೀತಿ ವ್ಯಾಕುಲತೆಗೆ ಮತ್ತು ಖಿನ್ನತೆಗೆ ಎಡೆಮಾಡಿಕೊಡುತ್ತದಷ್ಟೇ ಅಲ್ಲ, ಕೆಲವೊಮ್ಮೆ ಭೀತಿಯ ತೀವ್ರತೆಗೆ ತುತ್ತಾದ ವ್ಯಕ್ತಿ ಆತ್ಮಹತ್ಯೆಯ ಪ್ರಯತ್ನವನ್ನೂ ಮಾಡಬಹುದು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಭೀತಿ ಹದಿಹರೆಯದವರನ್ನೂ ತೊಂದರೆಗೆ ಈಡುಮಾಡಬಹುದು. ಇದನ್ನು ನಿಯಂತ್ರಣಕ್ಕೆ ತರಬಹುದಾದರೂ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿಲ್ಲ.

ಭೀತಿಯ ಪರಿಣಾಮವನ್ನು ತಗ್ಗಿಸುವುದಕ್ಕೆ ಕೆಲವು ಉಪಶಮನಕಾರಿ ಔಷಧಗಳು ಲಭ್ಯವಿರುವವಾದರೂ ಬರಿ ಮಾತ್ರೆಗಳಿಂದ ಭೀತಿಯ ಭಾವನೆಯನ್ನು ಸಂಪೂರ್ಣವಾಗಿ ದೂರಗೊಳಿಸಲಾಗದು.

ಇದಕ್ಕೆಲ್ಲ ಇರುವ ಒಂದೇ ಪರಿಹಾರವೆಂದರೆ ಭೀತಿಗೊಳಗಾದ ಮಕ್ಕಳಲ್ಲಿ ರಕ್ಷಿತ ಮನೋಭಾವವನ್ನು ಮತ್ತು ಆತ್ಮವಿಶ್ವಾಸವನ್ನು ತುಂಬಲು ಯತ್ನಿಸುವುದು. ಪರೀಕ್ಷಾ ಭೀತಿಯನ್ನು ಹೋಗಲಾಡಿಸಲು ಸಂಬಂಧಿತ ವಿಷಯಗಳನ್ನು ಹೊರೆ ಎನ್ನಿಸದಿರುವ ರೀತಿಯಲ್ಲಿ ಮಕ್ಕಳಿಗೆ ಬೋಧಿಸುವ ವ್ಯವಸ್ಥೆಯನ್ನು ಕಲ್ಪಿಸಬೇಕು. ಜಲ ಭೀತಿಯನ್ನು ಕಳೆಯಲು ಆರಂಭಿಕ ಹಂತದಲ್ಲಿಯೇ ಇದರ ಸೂಚನೆಗಳನ್ನು ಕಂಡುಕೊಂಡು ಈಜು ತರಗತಿಗಳಿಗೆ ಸೇರಿಸಬೇಕು. ಕೀಳರಿಮೆಯನ್ನು ಅಳಿಸಲು ಪ್ರಯತ್ನಿಸಬೇಕು. ಸಾಹಸಗಳಲ್ಲಿ ತೊಡಗಲು ಪ್ರೋತ್ಸಾಹಿಸಬೇಕು ಮತ್ತು ಕ್ರಿಯಾಲೋಪಗಳು ಸಂಭವಿಸಿದಲ್ಲಿ ಅವುಗಳನ್ನು ತಿದ್ದಬೇಕು.

೨೦ನೇ ಶತಮಾನದ ಅಂತ್ಯದ ವರ್ಷಗಳು ನಿಸ್ಸಂಶಯವಾಗಿಯೂ ಅತ್ಯಂತ ಸಂಕೀರ್ಣವಾದವಾಗಿವೆ. ಆಧುನಿಕರಾದ ಪ್ರತಿಯೊಬ್ಬರೂ ಸಮಗ್ರತೆಯ ಕೊಂಡಿಕಳಚಿಕೊಂಡಂತೆ ಸಮಸ್ಯೆಗಳ ಗೂಡೇ ಆಗಿದ್ದಾರೆ.

ಇಷ್ಟೆಲ್ಲ ಹೇಳಿದ ಮೇಲೆ ಪ್ರಸ್ತಾಪಿಸಲೇಬೇಕಾದ ಒಂದು ವಿಷಯ ಇದ್ದೇ ಇದೆ. ಆಕಸ್ಮಾತ್ ಭೀತಿಯಿಂದ ಮುಕ್ತವಾದ ಜಗತ್ತು ನಿರ್ಮಾಣವಾದರೆ ಆ ಜಗತ್ತು ಮನುಷ್ಯರಿಂದ ಕೂಡಿರುವುದಿಲ್ಲ; ಬದಲಾಗಿ ಮಾನವಯಂತ್ರಗಳಿಂದ ಕೂಡಿದ್ದಾಗಿರುತ್ತದೆ. ಅಲ್ಲವೇ ಮತ್ತೆ?

ಶ್ರೀರಂಗರ ಸ್ಮರಣೆ

✱ ಎಚ್.ಎಸ್. ನೆಗಳೂರ

ಧಾರವಾಡದ ಕರ್ನಾಟಕ ಕಾಲೇಜಿಗೆ ಸಂಸ್ಕೃತ ಪ್ರಾಧ್ಯಾಪಕರೆಂದು ಬರುವ ವೇಳೆಗಾಗಲೇ ಆದ್ಯರಂಗಾಚಾರ್ಯರು, ಪ್ರೊ. ಆರ್.ವಿ. ಜಹಗೀರದಾರರಾಗಿದ್ದರು. ಅವರು ಬಂದಂದಿನಿಂದ ಕಾಲೇಜಿನಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಲಭಿಸಲು ಪ್ರಾರಂಭವಾಯಿತು. ಅಲ್ಲಿಯವರೆಗೆ ಕಾಲೇಜಿನ ಸ್ನೇಹ ಸಮ್ಮೇಳನಗಳಲ್ಲಿ ಸ್ವಾಗತಗೀತೆ ಕನ್ನಡದ್ದಾಗಿರುತ್ತಿರಲಿಲ್ಲ! ಸಂಸ್ಕೃತದ ಪ್ರಾಧ್ಯಾಪಕರೆಂದು ಸೇರಿದರೂ ಕನ್ನಡದ ಕಟ್ಟಾಭಿಮಾನಿಗಳು ಅವರು. ಕರ್ನಾಟಕದಲ್ಲಿ-ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ, ಸಾಹಿತ್ಯ ಸಂಸ್ಕೃತಿಗಳಿಗೆ ನೀರೆರೆದು ಕನ್ನಡವು ವಿಜೃಂಭಿಸುವಂತೆ ಮಾಡಿದ ಮಹಾ ವ್ಯಕ್ತಿ ಅವರು. ಹಲವಾರು ನಾಟಕಗಳನ್ನು ಬರೆದು ಕನ್ನಡ ನಾಟಕ ವಾಙ್ಮಯಕ್ಕೆ ತಮ್ಮನ್ನು ಅರ್ಪಿಸಿಕೊಂಡು ಪ್ರಸಿದ್ಧಿಯನ್ನು ಪಡೆದರು.

ಅವರ "ಉದರ ವೈರಾಗ್ಯ"ವೆಂಬ ನಾಟಕದಲ್ಲಿ ಮನೋಹರನ ಪಾತ್ರ ವಹಿಸಿ ಅವರ ನಾಟ್ಯವೃಂದದಲ್ಲಿ ನಾನೂ ಅವರ ಮೆಚ್ಚುಗೆಗೆ ಪಾತ್ರನಾಗಿದ್ದೆ.


ಅವರೊಬ್ಬ ಶ್ರೇಷ್ಠ ಮೇಧಾವಿ. ಮಾತುಗಾರಿಕೆಯಲ್ಲಿ ಅಪ್ರತಿಹತರು. ವಿಷಯ ಪರಿಣತಿಯೊಂದಿಗೆ ಹಾಸ್ಯದ ಚುಟುಕುಗಳು ಶ್ರೋತೃವೃಂದವನ್ನು ನಗೆಯ ಪ್ರವಾಹದಲ್ಲಿ ಮುಳುಗಿಸುತ್ತಿದ್ದವು.

ಒಂದು ಸಲ ಧಾರವಾಡದ ನಗರಸಭೆಯ ಅಟ್ಟದ ಮೇಲೆ "ಸಾಹಿತ್ಯದಲ್ಲಿ ಹಾಸ್ಯ"ಎನ್ನುವ ವಿಷಯದ ಮೇಲೆ ಕೆಲವರು ಮಾತಾಡುವವರಿದ್ದರು. ಅದರಲ್ಲಿ ಜಹಗೀರದಾರರೂ ಒಬ್ಬರು. ಸಾಹಿತ್ಯದಲ್ಲಿ ಪರಿಣತಿಯಿಲ್ಲದವರು ಮಾಡುವ ಹಾಸ್ಯದ ಒಂದು ಮಾದರಿಯನ್ನು ತೋರಿಸುತ್ತ ಅವರು ಹೀಗೆಂದರು: "ಫೋಟೋಗ್ರಾಫರ್ ಫೋಟೋ ತೆಗೆಯುತ್ತಾನೆ. ಮುಂದೆ ಅದನ್ನು ತೊಳೆದು ಸಿದ್ಧಗೊಳಿಸಿದಾಗ ಒಬ್ಬರ ಹೆಂಡತಿ ಮತ್ತೊಬ್ಬರ ತೊಡೆಯ ಮೇಲೆ," ಎಂದು ಹಾಸ್ಯ ಚಟಾಕಿ ಹಾರಿಸಿದಾಗ ಚಪ್ಪಾಳೆಗಳ ಸುರಿಮಳೆಯೊಂದಿಗೆ ನಗೆಯ ತರಂಗಗಳು ನರ್ತಿಸಿದವು.

ಒಂದು ಪ್ರಸಂಗದಲ್ಲಿ ಪ್ರೊ. ಬಿ.ಎಂ. ಶ್ರೀಕಂಠಯ್ಯನವರು ಅದೇ ಸಭಾಂಗಣದಲ್ಲಿ ಇಂಗ್ಲೀಷಿನಲ್ಲಿ ಭಾಷಣ ಮಾಡುವ ಏರ್ಪಾಡಾಗಿತ್ತು. ಸಭಿಕರಿಗೆ ಅವರ ಪರಿಚಯ ಮಾಡಿಕೊಡುವ ಹೊಣೆ ಪ್ರೊ. ಜಹಗೀರದಾರರಿಗೇ ಇತ್ತು.

ಅವರ ಪರಿಚಯವನ್ನು ಅವರು ಕನ್ನಡದಲ್ಲಿ ಪ್ರಾರಂಭಿಸಿದಾಗ ಸಭಿಕರಿಗೆ ಆಶ್ಚರ್ಯವಾಯಿತು. ಆದರೆ ಪರಿಚಯದ ಕಡೆಯ ವಾಕ್ಯವನ್ನು, **"Now I request Prof B.T. Shrikantaiah to deliver his speech"** ಎಂದು ಇಂಗ್ಲೀಷಿನಲ್ಲಿ ಮುಗಿಸಿದಾಗ ಎಲ್ಲರೂ ನಕ್ಕರಲ್ಲದೆ ಪ್ರೊ. ಬಿ.ಎಂ. ಶ್ರೀಕಂಠಯ್ಯನವರೂ ಇವರ ಹಾಸ್ಯ ಪ್ರವೃತ್ತಿಯನ್ನು ಕಂಡು ನಕ್ಕು ತಲೆದೂಗಿದರು!

ಪ್ರೊ. ಜಹಗೀರದಾರರೊಡನೆ ನಾನು ಹೆಚ್ಚಿನ ಸಾಮೀಪ್ಯವನ್ನು ಹೊಂದಲು ಕಾರಣವೆಂದರೆ ಅವರ ಪ್ರಪ್ರಥಮವಾಗಿ ಸಾರ್ವಜನಿಕವಾಗಿ ಪ್ರದರ್ಶಿಸಲ್ಪಟ್ಟ "ಉದರ ವೈರಾಗ್ಯ"ದಲ್ಲಿ ಭಾಗವಹಿಸಿದ್ದಕ್ಕಾಗಿ. ನಾನಾಗ ಜೂನಿಯರ್ ಬಿ.ಎ. ಕ್ಲಾಸಿನಲ್ಲಿದ್ದೆ. ನಾನು ಮನೋಹರನ ಪಾತ್ರವಹಿಸಿದ್ದೆ. ನನ್ನ ಮಾತಾಡುವ ಶೈಲಿ, ನಾಟಕೀಯ ಹಾವಭಾವಗಳು ಪ್ರೊಫೆಸರರನ್ನು ಆಕರ್ಷಿಸಿದ್ದವು. ಇಡೀ ನಾಟಕ ನನಗೆ ಬಾಯಿಪಾಠ ಆಗಿತ್ತು. ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ವತಿಯಿಂದ ಧಾರವಾಡದಲ್ಲಿಯ ವಿಜಯ ಟಾಕೀಜ ನಾಟ್ಯಗೃಹದಲ್ಲಿ ಆ ನಾಟಕವನ್ನು ಪ್ರದರ್ಶಿಸಲಾಯಿತು. "ಶ್ರೀ ನೆಗಳೂರ ಅವರು ರಂಗಭೂಮಿಯ ಮೇಲೆ ಇದ್ದಾಗ **Prompt** ಮಾಡುವ ಅವಶ್ಯಕತೆಯೇ ಇಲ್ಲ," ಎಂದವರು ಉಳಿದವರೊಡನೆ ಹೇಳಿದ್ದು ನನಗೆ ತಿಳಿದುಬಂದಿತ್ತು. ಆದರೆ ದುರ್ದೈವವಶಾತ್ ಅಂದು ನಾಟಕ ನಡೆದಾಗ ನನ್ನ ಪಾತ್ರದ ಒಂದು ಮಾತು ಮರೆತುಹೋಯಿತು. ಹಿಂದಿನ ಯಾವುದೋ ಒಂದು ಸಂದರ್ಭದ ಮಾತನ್ನು ಪುನರುಚ್ಚರಿಸಿದೆ. ಆಗ ಪ್ರೊ. ಜಹಗೀರದಾರರು ಕೆಲವರೊಡನೆ ನಾಟ್ಯಗೃಹದ ಹೊರಗೆ ನಿಂತು ಮಾತಾಡುತ್ತಿದ್ದು, ನಾನು ತಪ್ಪಿದ್ದನ್ನು ನೆನೆಸಿಕೊಂಡು, "ಆತು, ನನ್ನ ನಾಟಕ ಮತ್ತೆ ಮೊದಲಿನಿಂದ ಪ್ರಾರಂಭ ಆದಂತಾಯಿತು", ಎಂದು ನಗೆಯಾಡಿದ್ದರೆಂದು ಅವರೊಡನೆ ಇದ್ದ ಒಬ್ಬರು ನನಗೆ ನಂತರ ತಿಳಿಸಿದರು. ಆದರೆ ಕ್ಷಣಾರ್ಧದಲ್ಲಿ ಮರೆತದ್ದನ್ನು ನೆನೆಸಿಕೊಂಡು ಸಂದರ್ಭಕ್ಕೆ ಅನುಗುಣವಾಗುವಂತೆ ತಿದ್ದಿ ಮಾತಾಡಿದ್ದನ್ನು ಕಂಡು ಪ್ರೊಫೆಸರರು ಸಂತೋಷಪಟ್ಟರು.



ನಾಟಕದಲ್ಲಿ ಮಾಧವ ಒಂದು ಹಾಡು ಹೇಳುವ ಸಂದರ್ಭವಿತ್ತು. ಮನೋಹರನ ಪಾತ್ರಕ್ಕೂ ಒಂದಾದರೂ ಹಾಡು ಇರಲಿ ಎಂದು ಕೆಲವರು ಸೂಚಿಸಿದ್ದಕ್ಕೆ ಸಮ್ಮತಿಸಿ ಪ್ರೊಫೆಸರರು ನನಗೂ ಒಂದು ಹಾಡು ಹಾಡುವಂತೆ ವ್ಯವಸ್ಥೆ ಮಾಡಿದರು. ನನ್ನ ಧ್ವನಿ ಮಧುರವಾಗಿದ್ದರೂ ತಾಳಶ್ರುತಿಗಳ ಅರಿವು ಇಲ್ಲದ್ದರಿಂದ ನಾನು ಹಿಂಜರಿಯುತ್ತಿದ್ದೆ. ತಬಲಾ ಬಾರಿಸುತ್ತಿದ್ದ ಚಿಮ್ಮಲಗಿ ಮಾಸ್ತರರು, ''ನೀವು ಕಾಳಜೀ ಮಾಡಬೇಡಿರಿ. ನಾನು ಕೂಡಿಸಿಗೋತೇನಿ," ಎಂದು ಹುರಿದುಂಬಿಸಿದರು. ''ಅಪರಾಧಿ ನಾನಲ್ಲ, ಅಪರಾಧ ಎನಗಿಲ್ಲ" ಎಂಬ ಪುರಂದರದಾಸರ ಹಾಡನ್ನು ಹಾಡಿದೆ. ಅಂದಿನಿಂದ ಪ್ರೊಫೆಸರ್ ಜಹಗೀರದಾರರ ಬಗ್ಗೆ ನನ್ನಲ್ಲಿದ್ದ ಶ್ರದ್ಧೆ-ವಿಶ್ವಾಸಗಳು ಬೆಳೆಯುತ್ತಲೇ ನಡೆದವು.

ಅವರ ಸುತ್ತ ಬೆಳೆದುನಿಂತ ನಾಟ್ಯ ಸಂಘದ ನಟವರ್ಗದವರು, ಇನ್ನಿತರ ಅವರ ಅಭಿಮಾನಿಗಳು ಪ್ರತಿದಿನ ಅವರ ಮನೆಯಲ್ಲಿ ಕೂಡುವುದು ವಾಡಿಕೆಯಾಗಿತ್ತು. ಆಗ ಅವರು ಇನ್ನೂ ಮದುವೆಯಾಗಿದ್ದಿಲ್ಲ. ಆದ್ದರಿಂದ ಅವರ ಮನೆಯ ತುಂಬೆಲ್ಲ ಓಡಾಡುವವರು ನಟವರ್ಗದವರೇ! ನಾಟ್ಯ ಸಂಘದಲ್ಲಿ ಇಷ್ಟೊತ್ತಿಗೆ ಹುರುಪಿನ ಅನೇಕಾನೇಕ ನಟರು ಸಮಾವೇಶವಾದ್ದರಿಂದ ಜಹಗೀರದಾರರ ಇನ್ನಿತರ ನಾಟಕಗಳಲ್ಲಿ ಯಾವುದೇ ಪಾತ್ರಧಾರಿಯಾಗಿ ರಂಗಭೂಮಿಯ ಮೇಲೆ ಮುಂದೆ ನಾನು ಬರಲಿಲ್ಲ.

ಒಮ್ಮೆ ಶ್ರೀ ಟಿ.ಪಿ. ಕೈಲಾಸಂ ಧಾರವಾಡಕ್ಕೆ ಬಂದಾಗ ಪ್ರೊ. ಜಹಗೀರದಾರರಲ್ಲಿಯೇ ಉಳಿದಿದ್ದರು. ಪ್ರೊ. ಜಹಗೀರದಾರರ ಮನೆಯನ್ನು ದಾಟಿಯೆ ನಾನು ಕಾಲೇಜಿಗೆ ಹೋಗಬೇಕಾಗಿತ್ತು. ಶ್ರೇಷ್ಠ ನಾಟಕಕಾರರೆಂದು ಆಗಲೆ ಹೆಸರು ಮಾಡಿಕೊಂಡ ಕೈಲಾಸಂ ಅವರನ್ನು ಕಾಣುವ ಸಂದರ್ಭವನ್ನು ಕಳೆದುಕೊಳ್ಳಬಾರದೆಂದು ಒಳಹೊಕ್ಕೆ. ಅನೇಕರು ಆಗಲೇ ಅಲ್ಲಿಗೆ ಬಂದಿದ್ದು ತಮ್ಮ ತಮ್ಮ ಕಾರ್ಯ ಮುಗಿಸಿದೊಡನೆ ಹೊರಬಿದ್ದರು. ಅವರೊಡನೆ ನಾನೂ ಎದ್ದೆ. ಆಗ ಪ್ರೊ. ಜಹಗೀರಗಾರು, ನೀವು ಶ್ರೀ ಕೈಲಾಸಂ ಅವರೊಡನೆ ಮಾತಾಡುತ್ತ ಕುಳಿತಿರಿ; ನಾನು ಒಂದು ಪೀರಿಯಡ್ ಮುಗಿಸಿಕೊಂಡು ಬರತೇನಿ," ಎಂದಾಗ ನಾನು, ''ನನಗೂ ಪಿರೀಯಡ್ ಅದೆ" ಅಂದೆ, ಅದಕ್ಕೆ ಶ್ರೀ ಕೈಲಾಸಂ **"I shall give you more than what you are going to get there in on period,"** ಅಂದರು. ಮರುಮಾತಾಡದೆ ಅವರ ಅರ್ಥಗರ್ಭಿತ, ಹಾಸ್ಯಮಯ, ವಿದ್ವತ್ಪೂರ್ಣ ಮಾತು ಕೇಳುತ್ತ ಕುಳಿತೆ. ಅವರ ಹಾಸ್ಯ ಚಟಾಕಿಗಳ ಒಂದೆರಡು ಮಾತುಗಳನ್ನು ಇಲ್ಲಿ ಉಲ್ಲೇಖಿಸಿದರೆ ಅಸಂಗತವೆನಿಸಲಿಕ್ಕಿಲ್ಲ. ಕೈಲಾಸಂ ಇಂಗ್ಲಂಡಿನಲ್ಲಿದ್ದಾಗ ಅವರ ಗೆಳೆಯನೊಬ್ಬ ಚೇಷ್ಟೆಗಾಗಿ **"How do you do Typical Ass (T.P. Kailas)"** ಎಂದನಂತೆ. ಅವನ ಹೆಸರು **Mr. Doglas.** ಅದಕ್ಕೆ ಉತ್ತರವಾಗಿ ಕೈಲಾಸಂ, **"I am alright How doyou dodoglass?"** ಅಂದರಂತೆ. ಅಂದಿನಿಂದ ಆ ಗೆಳೆಯ ಇವರನ್ನು ಯೋಗ್ಯ ರೀತಿಯಿಂದಲೇ ಸಂಬೋಧಿಸತೊಡಗಿದನಂತೆ. ಹೀಗೆಯೇ ಅವರ ಮಾತುಗಾರಿಕೆಯನ್ನು ಕೇಳುತ್ತ ಕುಳಿತಾಗ ಹೀಗೆ ಅಂದರು. ''ನಾನು ಇಂಗ್ಲಂಡದಲ್ಲಿದ್ದಾಗ ಪೇಯಿಂಗ್ ಗೆಸ್ಟ್ ಆಗಿ ಒಂದು ಮನೆಯಲ್ಲಿದ್ದೆ. ಮನೆಯ ಒಡತಿಗೆ ಒಂದು ಚಿಕ್ಕ ಮಗು ಇತ್ತು. ಅದು ನನ್ನೊಡನೆ ಸಲುಗೆಯಿಂದ ಒಂದು ಸಲ **"Why are you so black"** ಎಂದು ಕೇಳಿತು. ಅದಕ್ಕೆ ನಾನು ಉತ್ತರ ಕೊಟ್ಟದ್ದು ಏನು ಎಂಬುದು ಗೊತ್ತೆ? **"When I was born my mother dipped me in a tub full of ink."** ಈ ಮಾತನ್ನು ಮಗುವಿನ ತಾಯಿ ಕೇಳಿ ನಗುತ್ತ ಹೊರಗೆ ಬಂದು **"What nonsence do you tell my little son?"** ಎಂದಳಂತೆ. ಅದಕ್ಕೆ ಕೈಲಾಸಂ

ಅವರು "Just a joke with the little Child, madam", ಅಂದರಂತೆ.

ಹೀಗೆಯೇ ಇನ್ನೂ ಏನೇನು ಹೇಳುತ್ತಿದ್ದರೋ ಅಷ್ಟ ರಲ್ಲಿ ಪ್ರೊ. ಜಹಗೀರದಾರರು ಬಂದರು. ಕ್ರಮೇಣ ಹವ್ಯಾಸಿ ನಾಟಕ ಮಂಡಳಿಯ ಆಡಳಿತವು ಪ್ರೊಫೆಸರರ ಮಿತ್ರರಾದ ಶ್ರೀ ಧೀರೇಂದ್ರರಾವ್ ಗುಂಜೀಕರರ ಕೈಗೆ ಹೋಯಿತು. ಹುಬ್ಬಳ್ಳಿಯಲ್ಲಿ ಅವರದೊಂದು ನಾಟಕ ಪ್ರದರ್ಶಿಸುವ ಸಿದ್ಧತೆ ಮಾಡಲಾಯಿತು. ಮಲ್ಲಿಕಾರ್ಜುನ ಥಿಯೇಟರಿನಲ್ಲಿ ನಾಟಕ, ಸಾಕಷ್ಟು ಪ್ರಚಾರದ ಅಭಾವದಿಂದಲೋ ಏನೋ ಪ್ರೇಕ್ಷಕರಲ್ಲಿ ಕೇವಲ ೩೦-೪೦ರಷ್ಟು ಜನರಿದ್ದರು. ಅಂದು ಪ್ರೊಫೆಸರರು ತಮ್ಮ ಕಾಲೇಜಿನ ಕೆಲಸ ಮುಗಿಸಿಕೊಂಡು ೪ ಗಂಟೆಗೆ ಹುಬ್ಬಳ್ಳಿಗೆ ಹೋಗುವವರಿದ್ದರು. ಉಳಿದ ನಾಟಕವರ್ಗದವರು ಮೊದಲೇ ಹೋಗಿದ್ದರು. ಶ್ರೀರಂಗರು ತಮ್ಮೊಡನೆ ಬರಬೇಕೆಂದು ನನಗೆ ಹೇಳಿದ್ದರು. ಅದರಂತೆ ಟ್ರೇನಿನಲ್ಲಿ ನಾನು ಅವರೊಡನೆ ಹೋದೆ. ನಾಟಕ ಸರಿಯಾದ ವೇಳೆಗೆ ಪ್ರಾರಂಭವಾಗಿ ಮುಗಿಯಿತು. ಸಮಾರೋಪ ಭಾಷಣ ಮಾಡುವದು ನನ್ನ ಪಾಲಿಗೆ ಬಂದಿತು. ನಾಲ್ಕೈದು ನಿಮಿಷಗಳಲ್ಲಿ ಭಾಷಣ ಮುಗಿಸಿದೆ. ಮುಂದೆ ಒಂದು ದಿನ ನಾನು ಕಾಲೇಜಿನ ಮೊಗಸಾಲೆಯಲ್ಲಿ ನಿಂತಾಗ ಪ್ರೊಫೆಸರರು ಬಂದು, ಹುಬ್ಬಳ್ಳಿಯಲ್ಲಿ ನಡೆದ ನಾಟಕದ ಬಗ್ಗೆ ಮೂರುನಾಲ್ಕು ಪ್ರಶ್ನೆ ಹಾಕಿದರು. ನನಗೆ ತೋಚಿದಂತೆ ಉತ್ತರಿಸಿದೆ. "ನಿಮಗೆ ನಾಟಕ ಅರ್ಥವಾಗಿದೆ. ಸುಮ್ಮನೆ ನಿಮ್ಮ ವಿರುದ್ಧ ನನಗೆ ಕೆಲವರು ಹೇಳಿದ್ದನ್ನು ಕೇಳಿ ನಿಮಗೆ ಪ್ರಶ್ನೆ ಹಾಕಿದೆ," ಎಂದು ಸಮಾಧಾನ ವ್ಯಕ್ತಪಡಿಸಿದರು. ಅಂದಿನಿಂದ ಅವರಲ್ಲಿ ನನ್ನ ಬಗ್ಗೆ ಅಭಿಮಾನ ಬೆಳೆಯುತ್ತಲೇ ಹೋಯಿತು.

ರಾಣೆಬೆನ್ನೂರಿನಲ್ಲಿ ಅವರದೊಂದು ನಾಟಕ ಪ್ರದರ್ಶಿಸಲ್ಪಡುವುದಿತ್ತು. ಅದರಲ್ಲಿ ಸ್ವತಃ ಪ್ರೊಫೆಸರರು ಪಾತ್ರವಹಿಸಿದ್ದರು. ಆ ಊರಿನ ಪ್ರೇಕ್ಷಕರೆಂದರೆ ಹೆಚ್ಚಾಗಿ ವ್ಯವಹಾರಸ್ಥರು, ವ್ಯಾಪಾರಿಗಳು, ಶಿಕ್ಷಕರು ಮುಂತಾದವರು. ಅವರೆಲ್ಲ ಊಟ ಮುಗಿಸಿಕೊಂಡು ರಾತ್ರಿ ೧೧ಗಂಟೆಯ ನಂತರ ನಾಟಕಕ್ಕೆ ಬಂದು, ನಾಟ್ಯಗೃಹದಲ್ಲಿ ಅಡ್ಡವಾಗಿ ಮಲಗಿ ಎಲೆ ಅಡಿಕೆ ತಂಬಾಕು ತಿನ್ನುತ್ತ ನಾಟಕವನ್ನು ನೋಡುವ ರೂಢಿಯಂತೆ! ಅರ್ಧ ನಾಟಕ ಮುಗಿದ ನಂತರ ಒಬ್ಬರು ಪ್ರೊಫೆಸರ್ ಜಹಗೀರದಾರರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತ, ಅವರು ಶ್ರೇಷ್ಠ ನಾಟಕಕರ್ತರೆನ್ನುವುದನ್ನು ಪ್ರಸ್ತಾಪಿಸಿದಾಗ ರಂಗಭೂಮಿಯ ಮೇಲೆ ಒಬ್ಬರು ಬಂದು, "ಪ್ರೊಫೆಸರರು ಅನೇಕ ನಾಟಕಗಳನ್ನು ಬರೆದಿದ್ದಾರೆ. ಇವರು ಇಂಗ್ಲೆಂಡಿಗೆ ಹೋಗಿದ್ದರು" ಎಂದರು. ಅದಕ್ಕೆ ಪ್ರೇಕ್ಷಕನಾಗಿ ಕುಳಿತವರಲ್ಲೊಬ್ಬ", ಅರೆರೆ! ಇಷ್ಟು ಬರೀಲಿಕ್ಕೆ ಅಷ್ಟು ದೂರ ಯಾಕೆ ಹೋದೆ!" ಎಂದು ಕೂಗಿದನಂತೆ. ಈ ವಿಷಯವನ್ನು ಜಹಗೀರದಾರರು ಸ್ವತಃ ನನ್ನ ಮುಂದೆ ಹೇಳಿ ನಕ್ಕಿದ್ದರು.


ಧಾರವಾಡದಲ್ಲಿಯ ಟೆಂಗಿನಕಾಯಿ ಅವರ ಹತ್ತಿರಣಿಯ ದೊಡ್ಡ ಹಾಲಿನಲ್ಲಿ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ವತಿಯಿಂದ ಪ್ರೊಫೆಸರರ ಒಂದು ನಾಟಕವನ್ನು ಪ್ರಸ್ತುತಪಡಿಸುವ ಏರ್ಪಾಡಾಗಿತ್ತು. ಒಳಗೆ ರಂಗಭೂಮಿಯ ಒಂದು ಪಕ್ಕದಲ್ಲಿ ಪ್ರೊಫೆಸರರು ನಿಂತಿದ್ದರು. ನಾನು ಎಂ.ಎ. ಕ್ಲಾಸಿನಲ್ಲಿದ್ದೆ.ಪರೀಕ್ಷೆಯಲ್ಲಿ ಹೆನ್ರಿಕ್ ಇಬ್ಸನ್ನನ ಬಗ್ಗೆ ಪ್ರಶ್ನೆ ಬರುವುದು ಖಾತ್ರಿ ಇತ್ತು. ನಾನು ಒಳಗೆ ಹೋಗಿ ಅವರಿಗೆ 'ಡಾಲ್ಸ್ ಹೌಸ್'ಎಂಬ ನಾಟಕದ ಬಗ್ಗೆ ಪ್ರಶ್ನಿಸಿದೆ. ಅವರು ಎಷ್ಟು ನಿಶಿತಮತಿಗಳಾಗಿದ್ದರೆಂದರೆ ೨೦ ನಿಮಿಷಗಳವರೆಗೆ ಇಬ್ಸನ್ನರ ಆ ನಾಟಕದ ಬಗ್ಗೆ, ಅದರ ಪಾತ್ರಗಳ ಬಗ್ಗೆ, ನಾಟಕದ ಕಥಾವಸ್ತು, ಅದರಲ್ಲಿಯ ಮಾರ್ಮಿಕತೆ ಇತ್ಯಾದಿಗಳ ಬಗ್ಗೆ ವಿವರಣೆಯೊಂದಿಗೆ ನಿರರ್ಗಳವಾಗಿ ಮಾತಾಡಿದರು.

ಪ್ರೊಫೆಸರರು ಇಂಗ್ಲಂಡಿನಲ್ಲಿದ್ದಾಗ ಶೇಕ್ಸಪಿಯರನ ಒಂದು ನಾಟಕವನ್ನು ಪ್ರದರ್ಶಿಸಲಾಗುತ್ತಿತ್ತಂತೆ. ಅದರಲ್ಲಿಯ ಒಂದು ವಾಕ್ಯ ಮತ್ತು ಅದರಲ್ಲಿಯ ಒಂದು ಶಬ್ದವನ್ನು ಪಾತ್ರಧಾರಿ ಎಷ್ಟೊಂದು ಮಾರ್ಮಿಕವಾಗಿ ಉಚ್ಚರಿಸುತ್ತಿದ್ದನೆಂದರೆ, ಪ್ರೊ. ಜಹಗೀರದಾರರು ಅದೊಂದೇ ವಾಕ್ಯ ಕೇಳುವುದಕ್ಕಾಗಿ ಹದಿನೇಳು ಸಲ ಆ ನಾಟಕದ ಟಿಕೇಟು ಕೊಂಡಿದ್ದರಲ್ಲದೆ, ಆ ವಾಕ್ಯ ಬರುವವರೆಗೆ ಹೊರಗೆ ಕಾಯ್ದುನಿಂತು ಅದು ಬರುವ ಎರಡು ನಿಮಿಷ ಮೊದಲು ಒಳಗೆ ಹೋಗಿ, ಆ ವಾಕ್ಯ ಆ ಶಬ್ದ ಉಚ್ಚರಿಸುವುದನ್ನು ಕೇಳಿ ಆನಂದಪಟ್ಟು ಹೊರಗೆಬಂದುಬಿಡುತ್ತಿದ್ದರಂತೆ. ಅದರಂತೆ ಕನ್ನಡದಲ್ಲಿಯೂ ನಟವರ್ಗದವರು ಇಂಥ ಪರಿಣತಿಯನ್ನು ಹೊಂದಿರಬೇಕೆಂಬುದೇ ಅವರ ಮನೀಷೆಯಾಗಿತ್ತು. ಈ ವಿಷಯವನ್ನು ಸ್ವತಃ ಪ್ರೊ. ಜಹಗೀರದಾರರು ತಮ್ಮ ನಾಟಕಗಳ ಬಗ್ಗೆ ಮಾತಾಡುವಾಗ ಹೇಳಿದ್ದರು.

ಸುಮಾರು ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಜಹಗೀರದಾರರು ಧಾರವಾಡದಲ್ಲಿ ಸಾಹಿತ್ಯ ಚಟುವಟಿಕೆಗಳಿಗೆ ಅಷ್ಟೇ ಏಕೆ, ಸಮಗ್ರ ಕರ್ನಾಟಕದಲ್ಲಿ ಕೇಂದ್ರಬಿಂದುವೆನಿಸಿ ಕಾರ್ಯಪ್ರವೃತ್ತರಾಗಿದ್ದರು. ಕರ್ನಾಟಕ ಏಕೀಕರಣಕ್ಕಾಗಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗಾ

ಗಲಿ ಅವರು ವಹಿಸಿದ್ದ ಶ್ರಮ ಅವಿಸ್ಮರಣೀಯ. ಸಮಗ್ರ ಸಾಹಿತ್ಯಕ ಚಟುವಟಿಕೆಗಳಿಗೆ ಕರ್ನಾಟಕ ವಿದ್ಯಾವರ್ಧಕ ಸಂಘ ಕೇಂದ್ರವೆನಿಸಿತ್ತು. ಸರಕಾರಕ್ಕೆ ಸೂಕ್ತ ಪತ್ರ ಬರೆಯುವದಾಗಲಿ, ಬಂದ ಪತ್ರಗಳ ಇತ್ಯರ್ಥಕ್ಕಾಗಿ ಆಗಿನ ಕನ್ನಡದ ಮುಂದಾಳುಗಳೊಡನೆ ಚರ್ಚಿಸಿ ಮುಂದಿನ ಕಾರ್ಯವನ್ನು ರೂಪಿಸುವುದಕ್ಕಾಗಲಿ ಜಹಗೀರದಾರರೇ ಮುಖ್ಯ ಸೂತ್ರಧಾರರಾಗಿ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿದ್ದರು. ಸಂಜೆಯ ಮುಂದೆ ಗಣ್ಯರು ಸಂಘದಲ್ಲಿ ಸೇರಿ ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸುವ ಪರಿಪಾಠವಿತ್ತು. ಇದರಿಂದ ಅನೇಕರಿಗೆ ತಾವು ಕರ್ನಾಟಕಕ್ಕೆ, ಕನ್ನಡಕ್ಕೆ ತಮ್ಮ ಕೊಡುಗೆಯನ್ನು ನೀಡುವ ಪ್ರಸಂಗ ಬಂದೊದಗಿದೆ ಎಂಬ ಭಾವನೆ ಬಾರದಿರುತ್ತಿರಲಿಲ್ಲ. ವೇಳೆಗೆ ಸರಿಯಾಗಿ ಬಂದು, ರಾತ್ರಿ ೯ ರವರೆಗೆ ಚರ್ಚೆಯಲ್ಲಿ ಭಾಗವಹಿಸುತ್ತಿದ್ದ ಅವರಿಗೆ ವೇಳೆಗತಿಸಿದ್ದೇ ತಿಳಿಯುತ್ತಿರಲಿಲ್ಲವಂತೆ. ಒಂದು ಸಲ ದಿ. ಅಂದಾನೆಪ್ಪ ದೊಡ್ಡಮೇಟಿಯವರು "ಜಹಗೀರದಾರರೆ, ನಮಗೆಲ್ಲ ಕರ್ನಾಟಕದ ಅಭಿವೃದ್ಧಿಗಾಗಿ, ಏಕೀಕರಣಕ್ಕಾಗಿ, ವಿಶ್ವವಿದ್ಯಾಲಯದ ಸ್ಥಾಪನೆಗಾಗಿ, ವೇಳೆಯ ಸದ್ವಿನಿಯೋಗವಾಗುವಂತೆ ನೀವು ಮಾಡಿದಿರಿ. ನಮಗೂ ಮನಸ್ಸಿನಲ್ಲಿ, ದೇಹದಲ್ಲಿ ಒಂದು ತರಹದ ಹುರುಪು ತುಂಬಿಬಿಟ್ಟದೆ. ಆದರೆ ಫಕ್ಕನೆ ಕರ್ನಾಟಕ ಏಕೀಕರಣ ಮತ್ತು ವಿಶ್ವವಿದ್ಯಾಲಯದ ಸ್ಥಾಪನೆ ಆಗಿಬಿಟ್ಟರೆ ಮುಂದೆ ನಮಗೆ ಯಾವ ಗತಿ?" ಎಂದು ನಗುತ್ತ ಕೇಳಿದ್ದಕ್ಕೆ ನೆರೆದವರೆಲ್ಲ ಘೊಳ್ಳನೆ ನಕ್ಕುಬಿಟ್ಟರಂತೆ.

ತಮ್ಮ ಹೆಸರನ್ನು ಅವರೇಕೆ ಬದಲಿಸಿಕೊಂಡರೆನ್ನುವದು ಇಂದಿನ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಜಹಗೀರದಾರರನ್ನು ಕರ್ನಾಟಕ ಕಾಲೇಜಿನಿಂದ ಮುಂಬೈಗೆ ವರ್ಗಾಯಿಸಿದಾಗ ಅವರು ಅದನ್ನು ಪ್ರತಿಭಟಿಸಿದರು. ಕನ್ನಡನಾಡಿನ ಚಟುವಟಿಕೆಗಳಲ್ಲಿ ಅವರು ಹಾಸುಹೊಕ್ಕಾಗಿ ಸಿಲುಕಿಕೊಂಡಿರಲು ಈ ತರಹದ ವರ್ಗಾವಣೆಗೆ ಸಮ್ಮತಿಸಲಿಲ್ಲ. ಮುಂಬೈಗೆ ಹೋಗುವುದಿಲ್ಲೆಂದು ಹಟಹಿಡಿದರು. ಆದರೆ ಸರಕಾರಿ ನೌಕರರಾಗಿ ಅವರು ಅನುಸರಿಸಿದ ಮಾರ್ಗ ಬಹುಜನರಿಗೆ ಸರಿಯೆನಿಸಲಿಲ್ಲ. ಅವರನ್ನು ಒಳಗೊಳಗೇ ದ್ವೇಷಿಸುತ್ತಿದ್ದ ಕೆಲವರು ಇವರ ಮುಖಸ್ತುತಿ ಮಾಡುವಂತೆ, "ನೀವು ಹಟಬಿಡಬೇಡಿರಿ", ಎಂದು ಹೇಳುತ್ತ, ಅತ್ತ ಸರಕಾರಕ್ಕೆ ಇವರ ವಿರುದ್ಧ ಎಚ್ಚರಿಕೆ ನೀಡುತ್ತಿದ್ದರೆಂಬ ಒಂದು ವದಂತಿ ಆ ಕಾಲದಲ್ಲಿ ಇತ್ತು ಎನ್ನುವುದನ್ನು ಅವರೇ ನನಗೆ ಮಿಂಚಿನ ಬಳ್ಳಿಯ ಕಾರ್ಯಾಲಯದಲ್ಲಿ ಹೇಳಿದರು.



ಸರಕಾರವು ಒಂದು ರೀತಿಯಲ್ಲಿ ಪೇಚಿನಲ್ಲಿ ಸಿಲುಕಿಕೊಂಡಂತೆ ಭಾಸವಾಗಹತ್ತಿತು. ಒಂದು ವೇಳೆ ಇವರನ್ನು ಕೆಲಸದಿಂದ ತೆಗೆದುಹಾಕಿದರೆ ಇಡೀ ಕರ್ನಾಟಕದ ತುಂಬ ದಂಗೆ ಏಳಬಹುದೇನೋ ಎಂಬ ಅಳುಕು ಸರಕಾರಕ್ಕೆ ಇತ್ತು! ಜಹಗೀರದಾರರು ಪುನಃ ಪುನಃ ರಾಜೀನಾಮೆಯನ್ನಿತ್ತು ಅದನ್ನು ಸ್ವೀಕರಿಸಬೇಕೆಂದು ಸರಕಾರಕ್ಕೆ ಸವಾಲಿತ್ತರು. ಮುಂಬೈ ಸರಕಾರದಲ್ಲಿ ಸ್ವಾತಂತ್ರ್ಯಾನಂತರ ಮೊಟ್ಟಮೊದಲು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿ ದಿ. ಬಿ.ಜಿ. ಖೇರರು ಶಿಕ್ಷಣ ಖಾತೆಯನ್ನು ತಮ್ಮಕಡೆಗೇ ಇಟ್ಟುಕೊಂಡಿದ್ದರು. ಆಗಿನ ಶಿಕ್ಷಣ ಖಾತೆಯ ಕಾರ್ಯದರ್ಶಿ ಮುಖ್ಯಮಂತ್ರಿಗೆ **"Is Government so weak as to be threatened by an individual by refusing to accept transfer?"** ಎಂದು ಕೇಳಿದ್ದಕ್ಕೆ ಖೇರ್ ಅವರು ಜಹಗೀರದಾರರ ರಾಜೀನಾಮೆಯನ್ನು ಸ್ವೀಕರಿಸುವಂತೆ ಆಜ್ಞೆ ಮಾಡಿಬಿಟ್ಟರು. ಇದರಿಂದ ಇಡೀ ಕರ್ನಾಟಕದ ತುಂಬ ಒಂದು ತರಹದ ಕುತೂಹಲಕರ ಆಂದೋಲನವೇ ಏಳಬಹುದೆಂಬ ಕೆಲವರ ತರ್ಕ ಸುಳ್ಳಾಯಿತು. ಕಲಿಸುವುಗರಲ್ಲಿ ಇವರು ಸಾಕಷ್ಟು ಪರಿಶ್ರಮವನ್ನು ವಹಿಸುತ್ತಿಲ್ಲವೆಂದೆನ್ನುತ್ತಿದ್ದ ಅನೇಕರಿಗೆ ಇವರು ಕೆಲಸ ಕಳೆದುಕೊಂಡಿದ್ದು ಸಮಾಧಾನವನ್ನೇ ತಂದಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅಂದಿನಿಂದ ತಮ್ಮ ಹೆಸರನ್ನು ಕೂಡ

ನೆನಪಿಸಿಕೊಳ್ಳದಂತೆ ಶ್ರೀ ಆದ್ಯರಂಗಾಚಾರ್ಯರೆಂದು ಬದಲಿಸಿಕೊಂಡು ಶ್ರೀರಂಗ ಎಂಬ ಹೆಸರಿನಲ್ಲಿ ನಾಟಕಗಳನ್ನು ರಚಿಸಿ ಒಂದು ತರಹದ ಪುನರ್ಜನ್ಮವನ್ನೇ ಪಡೆದಂತೆ ಅವರು ಭಾವಿಸಿದರು. ಮೊದಲಿನ ಹೆಸರನ್ನು ಮನಃಪೂರ್ವಕವಾಗಿ ತಿರಸ್ಕರಿಸಿಬಿಟ್ಟರು!!

ಇಂಥ ಒಬ್ಬ ಮೇಧಾವಿ ಕನ್ನಡಿಗ ಅಸಹಾಯ ಪರಿಸ್ಥಿತಿಯಲ್ಲಿ ಉಳಿಯಬಾರದೆಂದು, ಅವರ ಅಮೋಘ ವಿದ್ವತ್ತಿಗೆ ಯೋಗ್ಯ ಪುರಸ್ಕಾರ ದೊರೆಕಲೇಬೇಕೆಂದು ಸರಕಾರದಲ್ಲಿ ಪ್ರತಿಷ್ಠಿತ ಸ್ಥಾನದಲ್ಲಿದ್ದ ಕೆಲವು ಸಹೃದಯಿಗಳು ಅವರಿಗೆ ಆಕಾಶವಾಣಿಯಲ್ಲಿ ಕೆಲಸಕೊಡಿಸುವಂತೆ ಸಹಾಯ ಮಾಡಿದರು.

ಶ್ರೀ ಆದ್ಯರಂಗಾಚಾರ್ಯರು ಕೆಲವು ಸಲ ವಿಕ್ಷಿಪ್ತವಾಗಿಯೂ ನಡೆದುಕೊಳ್ಳುತ್ತಿದ್ದರು. ಯಾರಾದರೂ ಮನೆಗೆ ಬಂದರೆ ಎರಡು ಕಪ್ಪ ಚಹಾ ಇವರ ಮುಂದೆ ತಂದು ಇಟ್ಟಾಗ ತಾವು ಒಂದು ಕಪ್ಪ ತೆಗೆದುಕೊಂಡು ಇನ್ನೊಂದನ್ನು ನೀವು ತೆಗೆದುಕೊಳ್ಳಿರೆಂದು ಹೇಳುತ್ತಿದ್ದಿಲ್ಲವಂತೆ. ಆ ವ್ಯಕ್ತಿ ತನಗೆ ಹೇಳದ ಹೊರತು ತೆಗೆದುಕೊಳ್ಳಬಾರದೆಂದು ಹಾಗೆಯೇ ಕುಳಿತರೆ ಪ್ರೊಫೆಸರರು ತಮ್ಮ ಕಪ್ಪ ಮುಗಿಸಿದ ಮೇಲೆ ಎರಡನೆಯದನ್ನೂ ತೆಗೆದುಕೊಂಡು ಕುಡಿದುಬಿಡುತ್ತಿದ್ದರಂತೆ. ಎರಡು ಕಪ್ಪ ಎದುರಿಗೆ ಇರುವಾಗ ಮತ್ತೊಂದನ್ನು ತೆಗೆದುಕೊಳ್ಳಲು ತಾನೇಕೆ ಹೇಳಬೇಕೆಂಬ ವಿಕ್ಷಿಪ್ತತೆ ಅವರಲ್ಲಿ ಇತ್ತಂತೆ. ಆದರೆ ಮುಂದೆ ಅದು ಕಡಿಮೆಯಾಯಿತು.

ಒಂದು ಚಿಕ್ಕ ಸಂಸ್ಥಾನಿಕರ ಪುತ್ರ ಮೆಟ್ರಿಕ್ ಪರೀಕ್ಷೆಗೆ ಕುಳಿತಿದ್ದ. ಇವರು ಆ ಪರೀಕ್ಷೆಯ ಮುಖ್ಯ ತಪಾಸಿಗರು. ವಿದ್ಯಾರ್ಥಿಯನ್ನು ಪಾಸು ಮಾಡಿಸಬೇಕೆಂದು ಸಂಸ್ಥಾನಿಕರ ಕಾರಭಾರಿ ಇವರಿಗೆ ಸಂಭಾವನೆಯನ್ನಿತ್ತು ಕೆಲಸ ಕೈಗೂಡುವಂತೆ ಮಾಡಲು ಇವರ ಕಡೆಗೆ ಬಂದಿದ್ದನಂತೆ. ಅದನ್ನಾತ ಹೇಳಿದಾಗ ಪ್ರೊಫೆಸರ್ ಜಹಗೀರದಾರರು ಒಂದು ಕಾಗದ ತೆಗೆದುಕೊಂಡು ಏನೋ ಬರೆಯತೊಡಗಿದರಂತೆ. ಆಗ ಕಾರಭಾರಿ, "ನೀವು ಯಾವುದೋ ಕಾರ್ಯದಲ್ಲಿ ಆಸಕ್ತರಾದಂತಿದೆ. ಮೊದಲು ನನ್ನ ಕೆಲಸ ಮುಗಿಸಿ ಆ ಮೇಲೆ ಅದನ್ನು ಕೈಗೆತ್ತಿಕೊಳ್ಳಿರಿ," ಸೂಚಿಸಿದನಂತೆ. ಅದಕ್ಕೆ ಪ್ರೊಫೆಸರರು, "ನಿಮ್ಮ ಕೆಲಸವನ್ನೇ, ಮಾಡುತ್ತಿದ್ದೇನೆ," ಎಂದರು. "ನಾನೆಷ್ಟು ಕೊಡಬೇಕೆಂಬುದನ್ನು ಹೇಳಿಬಿಡಿ," ಎಂದು ಕಾರಭಾರಿ ಕೇಳಿದಾಗ ಪ್ರೊಫೆಸರರು, "ನಿಮ್ಮ ವಿದ್ಯಾರ್ಥಿಯನ್ನು ನಾನು ಪಾಸು ಮಾಡಿದರೆ ಕೆಲಸ ಕಳೆದುಕೊಳ್ಳುತ್ತೇನೆ. ಆದ್ದರಿಂದ ಕೆಲಸದಲ್ಲಿ ಮುಂದೆ ಎಷ್ಟು ವರ್ಷ ಉಳಿದು ಎಷ್ಟು ಗಳಿಸಬಹುದೆಂಬುದನ್ನು ಲೆಕ್ಕಹಾಕುತ್ತಿದ್ದೇನೆ. ಅಷ್ಟನ್ನು ಕೊಟ್ಟರೆ ಸಾಕು, ಕೆಲಸಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ," ಎಂದರು. ಕಾರಭಾರಿ ಮರುಮಾತಾಡದೆ ಅಲ್ಲಿಂದ ಹೊರಟುಹೋದನಂತೆ. ಈ ವಿಷಯವನ್ನು ಪ್ರೊ. ಜಹಗೀರದಾರರು ಸ್ವತಃ ನನ್ನ ಮುಂದೆ ಹೇಳಿಕ್ಕಿದ್ದರು.


ಪ್ರೊಫೆಸರರು ನಿಷ್ಠುರವಾದಿಗಳೆಂಬುದು ಅನೇಕರಿಗೆ ಗೊತ್ತೇ ಇದೆ. ಆಗಿನ ಮೆಟ್ರಿಕ್ ಪರೀಕ್ಷೆ ಕರ್ನಾಟಕ ಕಾಲೇಜಿನಲ್ಲಿ ಮಾತ್ರ ನಡೆಯುತ್ತಿತ್ತು. ಒಂದು ಸಲ ಮುಖ್ಯ ಸಂಚಾಲಕರೆಂದು ಮುಂಬೈ ವಿಶ್ವವಿದ್ಯಾಲಯವು ಇವರನ್ನು ನಿಯಮಿಸಿತ್ತು. ನಾವೆಲ್ಲ ಕೈಕೆಳಗಿನ ಸಹನಿರೀಕ್ಷಕರು. ಪರೀಕ್ಷೆ ನಡೆಯುವುದಕ್ಕಿಂತ ಮುಂಚೆ ಒಂದು ದಿನ ಸಭೆಯನ್ನು ಕರೆದು ಎಲ್ಲ ಸಹನಿರೀಕ್ಷಕರಿಗೂ ಸೂಚನೆಗಳನ್ನು ನೀಡುವ ಪರಿಪಾಠವಿತ್ತು. ಆ ಸಭೆಯಲ್ಲಿ ಪ್ರೊಫೆಸರರು, "ಈ ಸಲ ಸಹನಿರೀಕ್ಷಕರಿಗೆ ಕೂಡಲು ಯಾವುದೇ ಆಸನ, ಕುರ್ಚಿ ಇತ್ಯಾದಿ ಇಟ್ಟಿಲ್ಲ" ಎಂದು ಹೇಳಿದಾಗ ಸಹ ನಿರೀಕ್ಷಕನೊಬ್ಬ, "ಹಾಗಾದರೆ ರಿಪೋರ್ಟ್ ತಯಾರಿಸುವದು ಹೇಗೆ?" "ಬಾಗಿಲು ತೆಗೆದಿದೆ. ಬೇಕಾದವರು ಹೊರಗೆ ಹೋಗಬಹುದು. ಆದರೆ ಕೂಡಲಿಕ್ಕೆ ಆಸನ ಒದಗಿಸುವುದಿಲ್ಲ" ಎಂದು ನಿಷ್ಠುರವಾಗಿ ಹೇಳಿದಾಗ ಸಭೆಯಲ್ಲಿ ಒಂದು ತರದ ಮೌನ ಆವರಿಸಿತ್ತು!! ವರದಿಯ ಮೂರು ಪ್ರತಿಗಳನ್ನು ತಯಾರಿಸುವ ರೂಢಿ ಇತ್ತು. ಅದರ ಬದಲು ಒಂದೇ ವರದಿ ಸಾಕು ಎಂದು ಜಹಗೀರದಾರರು ಆದೇಶಿಸಿದರು. ಮರುದಿನ ಕ್ಲಾರ್ಕ್ ಆಗಿದ್ದ ದಿ. ಮಹಿಷಿಯವರೊಂದಿಗೆ ನಾನು ಮಾತಾಡುತ್ತ "ಪ್ರೊಫೆಸರರು ಅತ್ಯಂತ ಧೈರ್ಯವಾನರು" ಎಂದಾಗ "ಯಾವ ಧೈರ್ಯ" ಎಂದು ಮಹಿಷಿಯವರು ಕೇಳಿದರು. ಪ್ರತಿಸಲ ಮೂರು ಮೂರು ಪ್ರತಿಗಳನ್ನು ಮಾಡುವ ರೂಢಿಯನ್ನು ಬದಲಿಸಿ ಒಂದೇ ಪ್ರತಿ ಸಾಕು, ಎಂದು ಹೇಳಿದ್ದು ಧೈರ್ಯದ ಮಾತು ಅಲ್ಲವೆ?" ಎಂದೆ. "ಮುಂದೆ ಏನಾಯಿತು ಗೊತ್ತೆ? ಮುಂಬೈ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಶ್ರೀ ಡೊಂಗರಕೇರಿಯವರಿಂದ ಮೂರು ಮೂರು ಪ್ರತಿಗಳನ್ನು ಮಾಡಲೇಬೇಕೆಂದು ಟೆಲಿಗ್ರಾಂ ಬಂದದ್ದರಿಂದ ನಿನ್ನೆ ರಾತ್ರಿ ೨ ಗಂಟೆಯವರೆಗೆ ಕುಳಿತು ಎಲ್ಲ ಬಂಡಲುಗಳಿಗೆ ಮೂರು ಮೂರು ಪ್ರತಿಗಳನ್ನು ಮಾಡುವ ಪ್ರಸಂಗ ಬಂತು", ಎಂದು ಅವರು ಹೇಳಿದರು.

ಪ್ರೊಫೆಸರರು ಇನ್ನೂ ಲಗ್ನವಾಗಿರಲಿಲ್ಲ. ಚಂದ್ರಚೂಡ ಮನೆತನದ ಒಬ್ಬ ಕನ್ಯೆಯನ್ನು ತೋರಿಸುವ ಬಗ್ಗೆ ಪತ್ರವ್ಯವಹಾರ ನಡೆದು ನಿರ್ದಿಷ್ಟಪಡಿಸಿದ ದಿನ ಮತ್ತು ವೇಳೆಗೆ

ಪುಣೆಯಿಂದ ಕನ್ಯೆಯನ್ನು ಕರೆದುಕೊಂಡು ಬಂದಾಗ ಯಾವುದೋ ಕೆಲಸದ ನಿಮಿತ್ತ ಪ್ರೊಫೆಸರರು ಹುಬ್ಬಳ್ಳಿಗೆ ಹೋಗಿಬಿಟ್ಟಿದ್ದರು. ಮುಂದೆ ಕನ್ಯೆ ಒಪ್ಪಿಗೆಯಾಗಿ ಲಗ್ನವೂ ಆಯಿತು ಆ ಮಾತು ಬೇರೆ. ಆ ಕನ್ಯೆಯೇ ಇಂದಿನ ಶ್ರೀಮತಿ ಶಾರದಾದೇವಿಯವರು, ಪ್ರೊಫೆಸರ ಜಹಗೀರದಾರರ ಧರ್ಮಪತ್ನಿ. ಬೆಂಗಳೂರಲ್ಲಿ ಇದ್ದಾರೆ.

ಶ್ರೀ ಟಿ. ರಾಘವಾಚಾರ್ಯ, ಟಿ.ಪಿ. ಕೈಲಾಸಂ, ತಾರಾನಾಥ ಮುಂತಾದ ಶ್ರೇಷ್ಠ ಸಾಹಿತಿಗಳು, ನಟರು, ವಿದ್ವನ್ಮಣಿಗಳು ಧಾರವಾಡಕ್ಕೆ ಬರುವಂತೆ ಪ್ರೊ. ಜಹಗೀರದಾರರು ಪ್ರಯತ್ನಿಸಿದ್ದು ಎಲ್ಲರಿಗೂ ಗೊತ್ತೇ ಇದೆ. ಈ ಪ್ರಕಾರ ಸಾಹಿತ್ಯ ಸಂವರ್ಧನೆಗೆ, ಕನ್ನಡದ ಏಳ್ಗೆಗೆ ಅಹರ್ನಿಶಿ ದುಡಿದು ಕೀರ್ತಿಶೇಷರಾದ ಶ್ರೀ ಆದ್ಯ ರಂಗಾಚಾರ್ಯರನ್ನು ಕನ್ನಡಿಗರು ಮರೆಯುತ್ತಿದ್ದಾರೆಯೋ ಹೇಗೆ? ಎಂಬ ಅಳುಕು ಉಂಟಾಗದೆ ಇರದು. ಅವರು ರಚಿಸಿದ ನಾಟಕಗಳ ಪ್ರದರ್ಶನಗಳ ಬಗ್ಗೆ ಇತ್ತೀಚೆಗೆ ಎಲ್ಲಿಯೂ ಕೇಳಿಬರುವುದಿಲ್ಲ. ಸುಮಾರು ಎರಡುಮೂರು ದಶಕಗಳವರೆಗೆ ಕನ್ನಡದ ಕೆಚ್ಚನ್ನು ಹೆಚ್ಚಿಸಿ ಮೆರೆಸಿದ ಕೀರ್ತಿ ಶ್ರೀ ಆದ್ಯರಂಗಾಚಾರ್ಯರದು. ಅವರು ಧಾರವಾಡಕ್ಕೆ ಬಂದಂದಿನಿಂದ ಎಲ್ಲೆಲ್ಲಿಯೂ ಕನ್ನಡದ ಮಾತು, ಕೃತಿ, ನಾಟಕಗಳು ಅತ್ಯದ್ಭುತವಾಗಿ ಬೆಳೆದು ಬೆಳಕನ್ನುಂಟುಮಾಡಿದ್ದವು. ಅದರಿಂದಾಗಿ ಒಂದು ತರಹದ ನವಚೈತನ್ಯ ಕರ್ನಾಟಕದಲ್ಲಿ ತುಂಬಿತುಳುಕುವಂತಾಯಿತು.

ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಏಕೀಕರಣವಾಗುವಂತೆ ಶ್ರಮಿಸಿದ ಅಂಥ ದಿವ್ಯ ಶಕ್ತಿಗೆ ಯೋಗ್ಯ ಸ್ಮಾರಕವನ್ನು ನಿರ್ಮಿಸುವ ಕಾರ್ಯ ಕನ್ನಡಿಗರಿಂದ, ಕರ್ನಾಟಕ ಸರಕಾರದಿಂದ ಇನ್ನೂ ನೆರವೇರಬೇಕಾಗಿದೆ.



ನಿನ್ನ ಮಗ ಮಾತನಾಡುವಾಗ ಅಲ್ಪ-ಸ್ವಲ್ಪ 'ಕನ್ನಡ'ವನ್ನು ಸೇರಿಸಿ ಮಾತನಾಡೋದನ್ನ ನೋಡಿದ್ರೆ ಮುಂದೆ ಈತ 'ಕನ್ನಡ ಚಿತ್ರಗೀತೆ' ಬರೀತಾನೆ ಅನ್ಸತ್ತೆ...!

ಮನುಷ್ಯ ಏನನ್ನು ಮಾಡುವಾಗಲೂ ತನ್ನ ಬುದ್ಧಿವಂತಿಕೆಗೆಯೆ ಕೊನೆಯ ವಿಜಯ ಕಟ್ಟಿಟ್ಟದ್ದು ಎಂಬ ನಂಬುಗೆಯೇ ಅವನಿಗೆ ಪ್ರೇರೇಪಕಶಕ್ತಿಯಾಗಿರುತ್ತದೆ. ಆದರೆ ಹಾಗೆ ಮಾಡುವಾಗ ಅವನ ದೈವವು ಮನುಷ್ಯನ ಎಣಿಕೆಗೆ ಮೀರಿದ ತನ್ನದೇ ಆದ ನಿಯಮವನ್ನು ಹೊಂದಿದೆಯೆಂಬುದನ್ನು ಬಹುಮಟ್ಟಿಗೆ ಕಡೆಗಣಿಸಿಬಿಟ್ಟಿರುತ್ತಾನೆ.

ಕೋಚೀನದ ಅರಸನು, ಜೀವರತ್ನ ಉಂಗುರ ತನ್ನ ಕೈಗೆ ದೊರೆತೊಡನೆಯೆ ತನ್ನ ಕಾರ್ಯಪೂರ್ಣವಾದಂತೆಯೇ ಎಂದು ನಂಬಿದನು. ತಾನು ಮೆಚ್ಚಿದ ಹೆಣ್ಣು ತಕ್ಷಣ ತನ್ನೆದುರು ಬರಬೇಕೆಂದೂ, ಅವಳ ಪತಿ ಹುಚ್ಚನಾಗಬೇಕೆಂದೂ, ಅವ ರಾಜಧಾನಿ ಸುಟ್ಟು ಹೋಗಬೇಕೆಂದೂ ಅವನು ಇಚ್ಛಿಸಿದನು. ಆ ಸಮಯದಲ್ಲಿ ಸ್ವರ್ಣ ಕುಮಾರಿ ನಿಷಧಪುರಿಯ

ದೈವ ಬದಲಿಸಿದ ಬೆಕ್ಕು...

ಸ್ನಾನಗೃಹದಲ್ಲಿ ತನ್ನ ಪತಿಗೆ ಸ್ನಾನ ಮಾಡಿಸುತ್ತಿದ್ದಳು. ಆಕೆಗೆ ಅವನ ಮೈ ತಿಕ್ಕುತ್ತಿರುವಂತೆಯೇ ಏನೋ ಆಗಿ ಯಾವುದೋ ಒಂದು ಅವ್ಯಕ್ತ ಶಕ್ತಿ ಅವಳನ್ನು ಕಟ್ಟಿ ಅಲ್ಲಿಂದಲೇ ಎತ್ತಿ ಹೊತ್ತೊಯ್ದಿತು. ಅವಳ ಹಿಂದೆಯೇ ನಿಷಧಪುರಿಯೆಲ್ಲ ಬೆಂಕಿಗಾಹುತಿಯಾದುದು ಅವಳಿಗೆ ಕಾಣುತ್ತಿತ್ತು. ವಿಚಿತ್ರ ಭಯ ಆಕೆಯನ್ನಾವರಿಸಿತು. ಏನೇ ಆದರೂ ತನ್ನ ಪತಿ ಸುರಕ್ಷಿತವಾಗಿರಲೆಂದು ಕೋಚೀನದ ಅರಸನೆದುರಿನಲ್ಲಿ ಸ್ವರ್ಣಕುಮಾರಿಯು ನಿಂತಿದ್ದಳು.

ಆಗಲೇ ಅವಳಿಗೆ ತನ್ನ ತಪ್ಪಿನ ಅರಿವಾಯಿತು. ತಾನು ವಿಶ್ವಾಸದಿಂದ ತನ್ನ ಪತಿಯಿಂದ ಪಡೆದ ಜೀವರತ್ನ ಉಂಗುರವನ್ನಿತ್ತಿದ್ದ ವೃದ್ಧೆಯು ತನಗೆ ವಿಶ್ವಾಸದ್ರೋಹ ಮಾಡಿದುದು ಈಗವಳಿಗೆ ಸ್ಪಷ್ಟವಿತ್ತು. ತನ್ನ ಅಕೃತ್ಯಕ್ಕಾಗಿ ನಿಷಧರಾಣಿ ತನ್ನನ್ನೇ ಮನವಾರೆ ಶಪಿಸಿಕೊಂಡಳು.

ತಾನು ಬಯಸಿದ ಹೆಣ್ಣು ತನ್ನೆದುರಿನಲ್ಲಿಯೇ ನಿಂತಿರುವಾಗ ಕೋಚೀನದ ಅರಸನ ತಾಳ್ಮೆ ತಪ್ಪಿತು. ಅವನು ಅವಳನ್ನು ಬರಸೆಳೆದು ಅಪ್ಪಿಕೊಳ್ಳಲು ಮುಂದಾದನು. ಆಗ ತನ್ನ ಒಳಗುದಿಯನ್ನು ತಡೆದುಕೊಂಡು ಸ್ವರ್ಣಕುಮಾರಿಯು ಅತ್ಯಂತ ವಿನಯಪೂರ್ವಕವಾಗಿ, "ಮಹಾರಾಜ, ನಾನು ನಿಮ್ಮವಳೇ ಆಗಬೇಕೆಂದು ಬ್ರಹ್ಮಲಿಖಿತವಿರುವಾಗ ಅದನ್ನು ತಪ್ಪಿಸುವ ಎದೆ ಯಾರಿಗಿದೆ? ಏನೋ ಒಂದು ವಿಷಗಳಿಗೆಯಲ್ಲಿ ನಾನು ಬೇರೊಬ್ಬನ ಕೈಹಿಡಿದೆನೆಂಬುದು ನಿಜ. ಆದರೂ ದೈವೇಚ್ಛೆಯ ಮೇರೆಗೆ ನಾನು ನಿಮ್ಮಲ್ಲಿಗೆ ಬಂದಿರುವೆನೆಂದಾಗ ಪರಸಂಗದಿಂದಾದ ಪಾಪವನ್ನು ತೊಳೆದುಕೊಂಡ ನಂತರವೇ ನಿಮ್ಮವಳಾಗಬೇಕೆಂದುಕೊಂಡಿದ್ದೇನೆ. ಅಂತೆಯೇ ಎಂಟು ದಿನಗಳ ಒಂದು ವ್ರತವನ್ನು ನಾನು ಇಂದಿನಿಂದಲೇ ಕೈಕೊಳ್ಳಲಿದ್ದೇನೆ. ಅದಕ್ಕಾಗಿ ನಿತ್ಯವೂ ಗೌರೀ ಪೂಜೆಯಾಗಬೇಕಲ್ಲದೆ ಬಡವರಿಗೆ ಅನ್ನದಾನವೂ ಆಗಬೇಕು. ಇಷ್ಟೊಂದನ್ನು ಮಾಡಗೊಟ್ಟರೆ ಇಂದಿನಿಂದ ಒಂಭತ್ತನೆಯ ದಿನವೇ ನಾನು ನಿಮ್ಮ ರಾಣಿ!" ಎಂದು ನುಡಿದಳು.

ಇಷ್ಟು ದಿನವೇ ದಾರಿ ಕಾದಿರುವಾಗ ಇನ್ನೆಂಟು ದಿನ ತಡೆದರೇನು ತಪ್ಪು? ಎಂದು ಮನದಲ್ಲಿಯೆ ವಿಚಾರಿಸಿ ಕೋಚೀನದ ಅರಸನು ಸ್ವರ್ಣಕುಮಾರಿಯ ಮಾತಿಗೆ ಒಪ್ಪಿದನಲ್ಲದೆ ಮಂತ್ರಿಯನ್ನು ಕರೆದು ಅವಳ ವ್ರತಾಚರಣೆಗೆ ಅವಶ್ಯವಿರುವ ಎಲ್ಲ ಏರ್ಪಾಡುಗಳನ್ನು ಮಾಡಲು ಆಜ್ಞಾಪಿಸಿದನು.

ಇತ್ತ ಅರೆ ನಿಮಿಷದಲ್ಲಿ ವಿಶಾಲವಾಗಿದ್ದ ನಿಷಧಪುರಿ ನಿರ್ನಾಮವಾಗಿ ಹೋಯಿತು. ಆದರೆ ನಿಷಧರಾಜ ಹಾಗೂ ಅವನ ಬೆಕ್ಕು ಮಾತ್ರ ಅದು ಹೇಗೋ ಸುರಕ್ಷಿತ ಪಾರಾದರು. ಬೆಂಕಿಯಿಂದ

ಅವರಿಗೆ ಅಪಾಯವಾಗಿರಲಿಲ್ಲೆಂಬುದು ನಿಜ; ಆದರೆ ಈಗಿನ ನಿಷಧರಾಜ ಮೊದಲಿನ ನಿಷಧರಾಜನಾಗಿರಲಿಲ್ಲ-ಬುದ್ಧಿಭ್ರಮೆಯಿಂದ ಅವನು ಹುಚ್ಚಾಗಿದ್ದ.

ತಾನೊಮ್ಮೆ ಅರಸನಾಗಿದ್ದನೆಂಬುದನ್ನೇ ಮರೆತ ನಿಷಧರಾಜ ಭಿಕ್ಷೆ ಬೇಡುತ್ತ ಊರೂರು ತಿರುಗುತ್ತ ಹೊರಟ. ಬೆಕ್ಕು ಮಾತ್ರ ಅವನ ಬೆನ್ನು ಬಿಡಲಿಲ್ಲ. ಹೀಗೆಯೇ ಅಲೆಯುತ್ತ ಎಂಟನೆಯ ದಿನ ಕೋಚೀನ ನಗರವನ್ನು ತನಗೆ ಅರಿವಿಲ್ಲದಂತೆಯೇ ತಲುಪಿಬಿಟ್ಟ.

ಆ ನಗರದ ಅರಸನೇ ತನ್ನ ಹೆಂಡತಿಯನ್ನು ಅಪಹರಿಸಿರುವನೆಂದು ತಿಳಿಯದ ನಿಷಧರಾಜ ಇತರ ಭಿಕ್ಷುಕರಂತೆಯೇ ತಾನೂ ಭಿಕ್ಷೆಗೆಂದು ಕೋಚೀನ ರಾಜನ ಅರಮನೆಗೆ ಹೋದನು. ಅಲ್ಲಿ ಎಂದಿನಂತೆ ಸ್ವರ್ಣಕುಮಾರಿಯೇ ಮೇಲ್ವಿಚಾರಣೆಗೆಂದು ನಿಂತಿದ್ದಳು. ಸರದಿಯಲ್ಲಿ ಬಂದಾಗ ಭಿಕ್ಷುರೂಪದ ನಿಷಧರಾಜನಿಗೂ ಎಲ್ಲರಿಗೂ ಸಿಗುವಷ್ಟು ಗೌರವವು ಸಿಕ್ಕಿತು. ಆದರೆ ಅವನು ತನ್ನ ಬೆಕ್ಕಿಗಾಗಿಯೂ ಬೇರೆ ಆಹಾರ ಬೇಕೆಂದು ಕೇಳಿದನು. ಅದನ್ನು ಅಧಿಕಾರಿಗಳು ನಿರಾಕರಿಸಿದಾಗ ಅವನು ಹಠ ಹಿಡಿದನು. ಸ್ವಾಭಾವಿಕವಾಗಿಯೇ ಈ ಗದ್ದಲ ಸ್ವರ್ಣಕುಮಾರಿಯ ಲಕ್ಷ್ಯ ಸೆಳೆಯಿತು.

ಈ ಹುಚ್ಚನ ಅವಸ್ಥೆ ನೋಡಿ ಅದೇಕೋ ಅವಳ ಮನಸ್ಸು ಕರಗಿ ನೀರಾಯಿತು. ಅವನ ಬೆಕ್ಕಿಗೂ ಸಾಕಾಗುವಷ್ಟು ಆಹಾರವೀಯಲು ಅಧಿಕಾರಿಗಳಿಗೆ ಹೇಳಿದಳು. ಆದರೆ ಆ ಹುಚ್ಚನೇ ತನ್ನ ಪತಿ ಎಂಬುದು ಮಾತ್ರ ಅವಳಿಗೆ ತಿಳಿಯಲಿಲ್ಲ.

ಕಳೆದೊಂದು ವಾರದಿಂದ ಹುಚ್ಚ ನಿಷಧರಾಜ



ನಿಗೆ ಹೊಟ್ಟೆ ತುಂಬ ಅನ್ನ ಸಿಕ್ಕಿರಲಿಲ್ಲ. ಅಂತೆಯೇ ಅರಮನೆಯ ಹಿಂಬದಿಯಲ್ಲಿ ಗಿಡವೊಂದರ ನೆರಳಿನಲ್ಲಿ ಕುಳಿತು ಅಂದು ಊಟ ಮಾಡಿ ತನ್ನ ಪ್ರೀತಿಯ ಬೆಕ್ಕಿಗೂ ತಿನ್ನಿಸಿದನು. ಮನದಣಿಯೆ ಊಟವಾದ ನಂತರ ಅಲ್ಲಿಯೇ ಒರಗಿ ನಿದ್ರೆಹೋದನು. ಬೆಕ್ಕು ಹತ್ತಿರವೇ ಆಟವಾಡುತ್ತಿತ್ತು.

ನಿಷಧರಾಜನು ಮಲಗಿದ್ದ ಸ್ಥಳದ ಬದಿಯಲ್ಲೇ ಅರಮನೆಯ ಅಡಿಗೆ ಮನೆಯಿತ್ತು. ಅಡಿಗೆ ಮಾಡಿದ ಮುಸುರೆ ಪಾತ್ರೆಗಳನ್ನೆಲ್ಲ ಶುಚಿ ಮಾಡಲೋಸುಗ ಅಲ್ಲಿಯೆ ಹೊರಗಿಡಲಾಗಿತ್ತು.

ಅನೇಕ ಇಲಿಗಳು ಪಾತ್ರೆಗಳಲ್ಲಿ ಉಳಿದ ಅನ್ನಕ್ಕಾಗಿ ಕಚ್ಚಾಡುತ್ತ ಅಲ್ಲಿಯೆ ನೆರೆದಿದ್ದವು. ತುಸು ದೂರದಲ್ಲಿಯೆ ಅವುಗಳಿಗಿಂತ ಸ್ವಲ್ಪ ದೊಡ್ಡದಾದ ಇಲಿಯೊಂದು ನಿಂತಿತ್ತು. ಅದು ಅವೆಲ್ಲವುಗಳಿಗೆ ನಾಯಕ. ಮುಸುರೆಯಲ್ಲಿನ ಸಿಹಿ ತಿಂಡಿಗಳನ್ನು ಇತರ ಇಲಿಗಳು ಅದಕ್ಕೆ ತಂದು ಕೊಡುತ್ತಿದ್ದವು.

ಇಲಿಗಳನ್ನು ಕಂಡೊಡನೆಯೆ ನಿಷಧರಾಜನ ಬೆಕ್ಕು ಹಸಿದ ಹುಲಿಯಂತಾಯಿತು. ಒಮ್ಮೆಲೆ ಅದು ನೆಗೆದು ಇಲಿಗಳ ನಾಯಕನ ಕುತ್ತಿಗೆಗೇ ಬಾಯಿ ಹಾಕಿ ಕಚ್ಚಿತು. ಆಗ ಆ ಇಲಿಯು ತನ್ನ ಮೇಲೆ ಕರುಣೆ ತೋರಲು ಬೆಕ್ಕನ್ನು ಪ್ರಾರ್ಥಿಸಲಾರಂಭಿಸಿತು. ಒಂದು ಕರಾರಿನೊಂದಿಗೆ ಬೆಕ್ಕು ಜೀವದಾನ ಮಾಡಲೊಪ್ಪಿತು.

"ಏನು ಕರಾರು ಹೇಳು: ನನ್ನಿಂದ ಸಾಧ್ಯವಿದ್ದುದೆಲ್ಲವನ್ನೂ ನಾನು ಮಾಡುವೆ." ಇಲಿ ದೈನ್ಯದಿಂದ ನುಡಿಯಿತು:

"ಇಲ್ಲಿ ಕೇಳು. ಈ ಅರಮನೆಯಲ್ಲಿ ಎಲ್ಲೋ ಒಂದೆಡೆಗೆ ನಿಮ್ಮ ಅರಸ ಜೀವರತ್ನವುಳ್ಳ ಉಂಗುರವನ್ನಿಟ್ಟಿದ್ದಾನೆ. ಬಹುಶಃ ಅವನ ಶಯ್ಯಾಗೃಹದಲ್ಲಿ ಅದಿರಬಹುದು. ಏನಾದರೂ ಮಾಡಿ ಅದನ್ನು ನೀನು ನನಗೆ ತಂದೊಪ್ಪಿಸಲೇಬೇಕು. ಅಂದರೆ ಮಾತ್ರ ನಿನಗೆ ಜೀವದಾನ.... ಇಲ್ಲದಿದ್ದರೆ...."

"ಅಯ್ಯೋ" ಎಂದು ನರಳುತ್ತ ಇಲಿ, "ಸಕಲ ಪ್ರಯತ್ನಗಳನ್ನೂ ಮಾಡುವೆ. ಆದರೆ....." ಎಂದು ಸ್ವರ ಎಳೆಯಿತು.

"ಆದರೆ-ಗೀದರೆ ನಡೆಯುವುದಿಲ್ಲ: ಆ ಉಂಗುರ ನನ್ನ ಕೈಸೇರುವವರೆಗೆ ನೀನಿಲ್ಲಿಂದ ಕದಲಲಾರೆ. ನಿನ್ನ ಶಿಷ್ಯರನ್ನು ಬೇಕಾದರೆ ಅದನ್ನು ತರಲು ಕಳಿಸು", ಬೆಕ್ಕು ಗುಡುಗಿತು.

ಒಡನೆಯೆ ಇಲಿಗಳ ನಾಯಕ ತನ್ನ ಶಿಷ್ಯರನ್ನೆಲ್ಲ ಕರೆದು ಜೀವರತ್ನ ಉಂಗುರವನ್ನು ಶೋಧಿಸಿ ತರಲು ಆಜ್ಞೆ ವಿಧಿಸಿತು.

ಇಲಿಗಳು ತಮ್ಮ ನಾಯಕನ ಆಜ್ಞಾನುಸಾರ ಅರಮನೆಯನ್ನು ಹೊಕ್ಕು ಅದರ ಮೂಲೆ ಮೂಲೆಗಳನ್ನು ಶೋಧಿಸಲಾರಂಭಿಸಿದವು. ಎಷ್ಟೋ ಹೊತ್ತಿನ ನಂತರ ಅರಸನ ಶಯ್ಯಾಗೃಹದಲ್ಲಿ ಅವನು ಮಲಗುವ ಮಂಚಕ್ಕೆ ಗಟ್ಟಿಯಾದ ರೇಷ್ಮೆ ದಾರದಿಂದ ಅದನ್ನು ಕಟ್ಟಿ ತೂಗು ಬಿಡಲಾಗಿದ್ದುದು ಕಂಡಿತು. ದಾರದಿಂದ ಅದನ್ನು ಬಿಡಿಸಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ಒಂದು ಇಲಿ ಉಂಗುರವನ್ನು ಗಟ್ಟಿಯಾಗಿ ತನ್ನ ಬಾಯಲ್ಲಿ ಕಚ್ಚಿ ಹಿಡಿಯಿತು. ಉಳಿದ ಇಲಿಗಳು ಒಂದರ ಬಾಲವನ್ನು ಇನ್ನೊಂದರಂತೆ ಬಾಯಿಯಿಂದ ಹಿಡಿದುಕೊಂಡು ಎಲ್ಲ ಶಕ್ತಿಯನ್ನೂ ಒಟ್ಟುಗೂಡಿಸಿ ಎಳೆದವು. ಅದರಿಂದ ದಾರ ಹರಿದು ಉಂಗುರ ದೊರೆಯಿತು. ತನ್ನ ಕೈಗೆ ಉಂಗುರ ಬಂದ ನಂತರ ಅದನ್ನು ಬೆಕ್ಕಿಗೊಪ್ಪಿಸಿ ನಾಯಕ ಇಲಿಯು ಜೀವದಾನ ಪಡೆಯಿತು.

ಅದರಿಂದ ಸಂತಸಗೊಂಡ ಬೆಕ್ಕು ಮುಂಗಾಲಿನಿಂದ ತನ್ನೊಡೆಯನ ಮುಖ ಪರಚಿ ಪರಚಿ ಗಾಢ ನಿದ್ರೆಯಲ್ಲಿದ್ದ ಅವನನ್ನು ಎಬ್ಬಿಸಿತು.

ಹುಚ್ಚ ನಿಷಧರಾಜ ಎಚ್ಚರಗೊಂಡಾಗ ಅವನ ನಂಬಿಗೆಯ ಬೆಕ್ಕು ಜೀವರತ್ನ ಉಂಗುರವನ್ನು ಅವನೆದುರು ಹಿಡಿಯಿತು.

ಉಂಗುರದ ಪ್ರಭಾವದಿಂದಾಗಿ ನಿಷಧರಾಜನ ಹುಚ್ಚೆಲ್ಲ ಮಾಯವಾಗಿ ಸತ್ಯಸ್ಥಿತಿಯ ಅರಿವಾಯಿತು. ಅತ್ಯಂತ ಆನಂದದಿಂದ ಅದನ್ನಪ್ಪಿ ಮುದ್ದಿಸಿದನು. ಕೃತಜ್ಞತೆಯಿಂದ ಅವನ ಹೃದಯ ಭಾರವಾಗಿದ್ದಿತು.

ಜೀವರತ್ನ ಉಂಗುರವನ್ನು ಬೆರಳಲ್ಲಿರಿಸಿಕೊಂಡವನೇ ಅನನ್ಯಭಾವದಿಂದ ಶಿವನನ್ನು ಸ್ತುತಿಸಿ ನಿಷಧಪುರಿಯು ಪುನಃ ನಿರ್ಮಾಣವಾಗಲೆಂದೂ ಅದರ ಮೊದಲಿನ ನಿವಾಸಿಗಳೆಲ್ಲ ಪುನರುಜ್ಜೀವಿತರಾಗಲೆಂದೂ ಪ್ರಾರ್ಥಿಸಿದ.

ನಂತರ ತನ್ನ ಹೆಂಡತಿ ಮರಳಿ ದೊರೆಯಲಿ ಎಂದು ಇಚ್ಛಿಸಿದ. ಅಲ್ಲದೆ, ಕೋಚೀನ ನಗರವೆಲ್ಲ ಅಗ್ನಿಗಾಹುತಿಯಾಗಿ ಅದರ ಅರಸನು ಹುಚ್ಚನಾಗಿ

ಲೆಂದೂ ತನಗೆ ಮೋಸ ಮಾಡಿದ ಮುದುಕಿಯು ತನ್ನೆದುರು ಬಂದು ನಿಲ್ಲಲೆಂದೂ ಅಪೇಕ್ಷಿಸಿದ. ತಕ್ಷಣ ಅವನ ಇಚ್ಛೆಗಳೆಲ್ಲ ಈಡೇರಿದವು.

ಆಮೇಲೆ ನಿಷಧರಾಜನು ತನ್ನ ತಾಯಿ, ಪತ್ನಿ ಹಾಗೂ ಮಂತ್ರಿಗಳೆಲ್ಲರ ಸಭೆ ಸೇರಿಸಿ ತನ್ನ ಅರಮನೆಯಲ್ಲಿಯೇ ಆತಿಥ್ಯ ಹೊಂದಿದನು. ತನ್ನ ಪತ್ನಿಯನ್ನು ಮೋಸಗೊಳಿಸಿ ಕೇಡಿಗೆ ಕಾರಣಳಾದ ವೃದ್ಧೆಯನ್ನು ಹಿಡಿದುತರಿಸಿ ಸಕಲರ ಸಮ್ಮುಖದ ಲ್ಲಿಯೇ ಅವಳಿಗೆ ಶಿಕ್ಷೆ ವಿಧಿಸಿದನು. ಅವಳ ಹೀನ ಅಪರಾಧಕ್ಕೆ ಮುದುಕಿಯನ್ನು ಜೀವಂತ ಸುಡು ವುದೇ ತಕ್ಕ ಶಿಕ್ಷೆ ಎಂದು ಆಜ್ಞಾಪಿಸಿದನು.

******

ಕತೆ ಮುಗಿಯಿತು. ಚಾತುರ್ಯನು ಭೀಮಪು ರಿಯ ಕಿರಿಯ ರಾಜಕುಮಾರಿಯೆಡೆಗೆ ತುಂಟ ನಗೆಯನ್ನು ಬೀರಿ, "ಅನಂತರ ಅವರು ಸುಖವಾಗಿ ಬಾಳಿದರು. ರಾಜಕುಮಾರಿ, ನಿನಗೆ ನಿಷಧರಾಜನಂ ತಹ ಪತಿಯಿರಬೇಕೆಂದಿನಿಸುವುದಿಲ್ಲವೆ?" ಎಂದು ವಿಚಾರಿಸಿದನು. ಆದಕ್ಕೆ ಉತ್ತರವಾಗಿ ಅವಳು ಆಸೆಗಣ್ಣುಗಳಿಂದ ಅವನನ್ನೇ ನೆಟ್ಟನೋಟದಿಂದ ನೋಡಿದಾಗ ನಸುಕಿನ ಸೂರ್ಯಕಿರಣಗಳು ಕಿಟ ಕಿಯಿಂದ ಶಯ್ಯಾಗೃಹವನ್ನು ಪ್ರವೇಶಿಸಿದವು.

"ಏನಿದು ರಾಜಕುಮಾರಿ, ಆಗಲೇ ಬೆಳಗಾಯಿ ತಲ್ಲ!", ಎಂದು ಆಶ್ಚರ್ಯ ವ್ಯಕ್ತಪಡಿಸುತ್ತ "ಇನ್ನು ಪ್ರಾತರ್ವಿಧಿಗಳಿಗೆ ಸಿದ್ಧತೆಯಾಗಲೂ", ಎಂದು ಹೇಳಿದನು. ಕಿರಿಯ ರಾಜಕುಮಾರಿಯು ಕೋಣೆ ಯಿಂದ ಹೊರನಡೆದಳು.

(ಮುಂದಿನ ಸಂಚಿಕೆ ನೋಡಿ)

ನೀನಾರಿಗಾದೆಯೋ ಎಲೆ ಮಾನವ!

ರಾಜಧಾನಿ ದೆಹಲಿಯಲ್ಲಿ ಮಾಂಸಕ್ಕಾಗಿ ಪ್ರತಿದಿನ ೧೨ ಸಾವಿರ ಪ್ರಾಣಿಗಳನ್ನು ಕೊಲ್ಲಲಾಗುತ್ತಿದೆ. ಈ ಕೊಲ್ಲುವ ವಿಧಾನ ಕ್ರೂರವೂ ಒರಟಾದದ್ದೂ ಆಗಿದೆ. ಇದರಿಂದಾಗಿ ಪ್ರಾಣಿಗಳು ಕೂಡಲೇ ಸಾಯದೆ ನರಳಿ ನರಳಿ ಸಾಯುತ್ತವೆ. ಅಲ್ಲಿ ಪ್ರತಿದಿನ ೪ ಸಾವಿರ ಎಮ್ಮೆ-ಕೋಣಗಳು ಹಾಗೂ ೮ ಸಾವಿರ ಆಡು-ಕುರಿಗಳನ್ನು ಕಸಾಯಿಗಾಗಿ ತರಲಾಗುತ್ತಿದೆ.

ದೇಶದಾದ್ಯಂತ ೯ ಕೋಟಿ ಪ್ರಾಣಿಗಳು ಮನುಷ್ಯನಿಗಾಗಿ ದುಡಿಯುತ್ತವೆ. ಹೇರು ಎಳೆಯುವ, ನೀರೆತ್ತುವ ಹಾಗೂ ಹೊಲ ಉಳುವ ಅವುಗಳಿಂದ ಭಾರತಕ್ಕೆ ೬೦ ಲಕ್ಷ ಟನ್ನಿನಷ್ಟು ಪೆಟ್ರೋಲಿಯಂ ಉಳಿತಾಯವಾಗುತ್ತದೆ. ಇಷ್ಟಾದರೂ ಅವುಗಳನ್ನು ಕ್ರೂರವಾಗಿ ನಡೆಸಿಕೊಳ್ಳಬಾರದೆಂಬ ಬುದ್ಧಿ ನಮಗಿನ್ನೂ ಬರಬೇಕಿದೆ.

✤ ಡಿ. ಗುಂಡೂರಾವ್

ಆಳಿದ್ದು ಹೇಗೆ?

ಬ್ರಿಟಿಷರು ಭಾರತವನ್ನು ನಿಷ್ಠುರವಾಗಿ, ದಕ್ಷತೆಯಿಂದ ಆಳುತ್ತಿದ್ದರು ಅನ್ನುವುದು ನಿರ್ವಿವಾದ. ಎಲ್ಲಾ ದರ್ಜೆಯ ಸರ್ಕಾರಿ ನೌಕರರ ಸಂಖ್ಯೆ ಈ ಶತಮಾನದ ಮೊದಲಿನಲ್ಲಿ ಸುಮಾರು ೫೦೦,೦೦೦. ಅವರಲ್ಲಿ ಇಂಗ್ಲಿಷರು ಕೇವಲ ೪೦೦೦. ೧೯೩೧ರಲ್ಲಿ ಭಾರತದಲ್ಲಿದ್ದ ಒಟ್ಟು ಬ್ರಿಟಿಷರು ೧೬೮,೦೦೦. ಸೇನೆಯಲ್ಲಿ ೮೦,೦೦೦; ಬೇರೆ ಬೇರೆ ಉದ್ಯೋಗಗಳಲ್ಲಿ ೨೧,೦೦೦; ೧೨,೦೦೦ ಸಿವಿಲ್ ಅಧಿಕಾರಿಗಳು, ಖಾಸಗಿ ವ್ಯವಹಾರದಲ್ಲಿ ಮಿಕ್ಕವರು. ಪ್ರತಿ ೪೦೦೦ ಭಾರತೀಯರಿಗೆ ಒಬ್ಬ ಇಂಗ್ಲಿಷಿನವನಿದ್ದ. ಈ ಪ್ರಮಾಣ ಯಾವಾಗಲೂ ವ್ಯತ್ಯಾಸವಾಗಲಿಲ್ಲ. ಹಾಗಾದರೂ ಶತಮಾನಗಳ ಕಾಲ ಅವರು ನಮ್ಮನ್ನು ಆಳಿದರು.

ಆಧಾರ: ಖುಷ್‌ವಂತ್ ಸಿಂಗರ 'ಇಂಡಿಯಾ'

✤ ಎಚ್.ಎಸ್.ಎನ್.

ನಿಮ್ಮ ಮಕ್ಕಳ ಪ್ರತಿಭೆ ಅರಳಬೇಕೆ?

* ಕೆ.ಎಚ್. ಸಾವಿತ್ರಿ

"ಮಕ್ಕಳ ಮನಸ್ಸು ಜೇಡಿ ಮಣ್ಣಿನಂತೆ. ಹರಳು ಒಗೆದರೂ ಅಂಟಕೊಳ್ಳುತ್ತದೆ.ವಜ್ರ ಎಸೆದರೂ ತನ್ನದಾಗಿಸಿ ಕೊಳ್ಳುತ್ತದೆ" ಎಂಬುದು ಒಂದು ನಾಣ್ಣುಡಿ.

ನಾವು ಬೆಳೆಸಿದಂತೆ ಮಕ್ಕಳು ಬೆಳೆಯುತ್ತವೆ. ಎಷ್ಟೇ ಸವಲತ್ತುಗಳನ್ನು ಒದಗಿಸಿದರೂ ಮಕ್ಕಳಿಗೆ ಸುತ್ತಲ ಪರಿಸರ ಹಾಗೂ ಸಂಸ್ಕಾರ ಅತಿ ಮುಖ್ಯ.

ಹುಟ್ಟುವಾಗ ಎಲ್ಲಾ ಮಕ್ಕಳು ಒಂದೇ. ಅವು ಬೆಳೆಯುವ ಮನೆಯ ವಾತಾವರಣ, ಸುತ್ತಮುತ್ತಲ ಪರಿಸರ ಅವರ ಬುದ್ಧಿಮತ್ತೆಯನ್ನು ರೂಪಿಸುತ್ತವೆ. ಅಪರೂಪಕ್ಕೊಮ್ಮೆ ಹುಟ್ಟುತ್ತಲೇ ಅಸಾಧಾರಣ ಬುದ್ಧಿವಂತರಾಗಿರುವ ಮಕ್ಕಳಿರಬಹುದು.

ಬಾಲ್ಯದಲ್ಲೇ ಮಕ್ಕಳಲ್ಲಿ ಅಡಕವಾಗಿರುವ ಪ್ರತಿಭೆಯನ್ನು ಗುರುತಿಸಿ, ನೀರೆರೆದು ಪ್ರೋತ್ಸಾಹಿಸುವ ಅಗತ್ಯವಿದೆ. ಇಲ್ಲದಿದ್ದರೆ ಈ ಮಕ್ಕಳು ಸಮಸ್ಯಾತ್ಮಕ ನಡವಳಿಕೆಗಳನ್ನು ಬೆಳೆಸಿಕೊಳ್ಳುವ ಅಪಾಯವಿದೆ.

ಚಿಕ್ಕ ಕುಟುಂಬಗಳೇ ಅಧಿಕವಾಗಿರುವ ಇಂದಿನ ನಾಗರಿಕ ಜಗತ್ತಿನಲ್ಲಿ ಜೀವನ ನಿರ್ವಹಣೆಗೆ ಅಪ್ಪ - ಅಮ್ಮ ಇಬ್ಬರೂ ಹೊರಗೆ ದುಡಿಯಲೇ ಬೇಕಾದ ಅನಿವಾರ್ಯತೆ ಇದೆ. ದುಡಿಯುವ ತಾಯಂದಿರು ತಮ್ಮ ಮಗುವನ್ನು ಬೇಬಿ ಸೆಂಟರ್‌ಗಳಲ್ಲಿ ಬಿಡಲೇಬೇಕಾದ ಪರಿಸ್ಥಿತಿ ಇಂದು ಇದೆ. ಕೆಲವೊಮ್ಮೆ ಹಾಲುಣಿಸುವ ಮಗು ಕೂಡ ಈ ಸೆಂಟರ್‌ನಲ್ಲಿ ಬಾಲ್ಯ ಆರಂಭಿಸಬೇಕಾಗುತ್ತದೆ.

ಬೆಳಗಿನಿಂದ ಸಂಜೆಯವರೆಗೆ ಈ ಸೆಂಟರ್‌ನ ನಾಲ್ಕು ಗೋಡೆಗಳ ಮಧ್ಯೆ ಕೊಳೆಯಬೇಕಾದ ಮಕ್ಕಳ ಪ್ರತಿಭೆಯನ್ನು ಗುರುತಿಸುವುದು ಒತ್ತಟ್ಟಿಗೆ ಇರಲಿ, ಅವು ಸ್ವತಂತ್ರವಾಗಿ ಓಡಾಡಲು ಕಷ್ಟವಾಗುವಂತಹ ಅಡ್ಡಿ ಆತಂಕಗಳ ಪರಿಸರ ಇದಾಗಿರುತ್ತದೆ.

ಒಟ್ಟಿಗೆ ೨೦-೩೦ ಮಕ್ಕಳಿರುವುದರಿಂದ ಸಮಾನ ವಯಸ್ಸಿನ ಮಕ್ಕಳ ಒಡನಾಟ ಮಗುವಿಗೆ ದೊರೆತರೂ ಅವು ಮಾನಸಿಕವಾಗಿ ಏಕಾಂಗಿಯಾಗಿಯೇ ಉಳಿದು ಬಿಡುತ್ತವೆ. ಅಪ್ಪ ಅಮ್ಮನ ಅಕ್ಕರೆಯಲ್ಲಿ ಅರಳಬೇಕಾದ ಈ ಚೈತನ್ಯ

ನಿಮ್ಮ ಮಗು ಯಾವುದೇ ವಿಷಯದ ಬಗ್ಗೆ ಆಸಕ್ತಿ ತೋರಿದರೆ ಅದರ ಉತ್ಸಾಹಕ್ಕೆ ತಣ್ಣೀರು ಎರಚಬೇಡಿ. ಪ್ರೋತ್ಸಾಹ ನೀಡಿ, ಮುಕ್ತವಾಗಿ ಬದುಕುವ ಸ್ವಾತಂತ್ರ್ಯ ಕಲ್ಪಿಸಿ ಕೊಡಿ. ಹೆತ್ತವರು, ಪೋಷಕರು ಮಕ್ಕಳ ಆಸೆ - ಆಕಾಂಕ್ಷೆಗಳಿಗೆ ನೀರೆರೆದು ಬೆಳೆಸಿ ಪೋಷಿಸಿದರೆ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಲ್ಲರು.

ತನಗರಿವಿಲ್ಲದೆ ಅಂತರ್ಮುಖಿಯಾಗುತ್ತದೆ. ಅಪ್ಪ-ಅಮ್ಮನ ಪ್ರೀತಿಯಿಂದ ವಂಚಿತವಾದ ಈ ಪುಟ್ಟ ಕಂದಮ್ಮ ಪ್ರತಿಯೊಂದಕ್ಕೂ ಚಂಡಿ ಹಿಡಿಯುತ್ತದೆ.

ಹಗಲೆಲ್ಲಾ ಕಚೇರಿಯಲ್ಲಿ ದುಡಿದು ಬರುವ ಅಪ್ಪ-ಅಮ್ಮ ಮಗುವಿನ ಬೇಕು-ಬೇಡಗಳನ್ನು ಪೂರೈಸುವ ಸ್ಥಿತಿಯಲ್ಲಿ ಇರುವುದಿಲ್ಲ. ಮಗು ತನ್ನ ಹತಾಶೆಯನ್ನು ಸ್ಥೈರಿಸಲಾರದೆ ಇನ್ನಷ್ಟು ರಂಪ ಮಾಡುತ್ತದೆ. ಹೊಡೆದರೆ ಮೊಂಡು ಹಿಡಿಯುತ್ತದೆ. ಸುಮ್ಮನಿದ್ದರೆ ಇನ್ನಷ್ಟು ರೊಚ್ಚಿಗೆದ್ದಂತೆ ವರ್ತಿಸುತ್ತದೆ. ಇಂತಹ ಮಗು ತಂದೆ-ತಾಯಿಯರಿಗೆ ಸಮಸ್ಯೆಯಾಗುತ್ತದೆ.

ಅತ್ಯಂತ ಮೇಧಾವಿ ಮಕ್ಕಳ ಪರಿಸ್ಥಿತಿ ಇನ್ನಷ್ಟು ಚಿಂತಾಜನಕವಾಗುತ್ತದೆ. ತಮಗಿರುವ ಪ್ರತಿಭೆಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗದೆ ತಹತಹಿಸುತ್ತವೆ. ಈ ಮೇಧಾವಿ ಮಕ್ಕಳ ಗುಣಲಕ್ಷಣವೂ ಎಷ್ಟು ವಿಶಿಷ್ಟವೋ ಅವಕ್ಕೆ ಸೂಕ್ತ ಅವಕಾಶ ದೊರೆಯದಿದ್ದರೆ ಅಷ್ಟೇ ವಿಲಕ್ಷಣ ಸ್ವಭಾವ ತಾಳುತ್ತವೆ.

ಸಮಸ್ಯಾತ್ಮಕ ಮಕ್ಕಳು

ಪ್ರತಿಭಾನ್ವಿತ ಮಕ್ಕಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ದೊರೆಯದೇ ಹೋದಾಗ ತಮ್ಮ ಪ್ರತಿಭೆಯನ್ನು ಅಡ್ಡದಾರಿಗೆ ಬಳಸಿಕೊಳ್ಳುತ್ತವೆ. ಇಂತಹ ಮಕ್ಕಳಿಗೆ ಸಾಮಾನ್ಯ ತರಬೇತಿ ಎಂದೂ ಹಿಡಿಸುವುದಿಲ್ಲ. ಅವುಗಳಿಗೆ ಬುದ್ಧಿಮತ್ತೆಗೆ ಸವಾಲೊಡ್ಡುವ ಪಠ್ಯಗಳು ಬೇಕು. ಇದಕ್ಕೆ ವಿಶೇಷ ತರಬೇತಿ ಪಡೆದಿರುವ ಶಿಕ್ಷಕರ ಅವಶ್ಯಕತೆ ಇದೆ.

ಇಂತಹ ವಿಶೇಷ ಸೌಲಭ್ಯ ದೊರೆಯದೇ ಹೋದಲ್ಲಿ ಚುರುಕಾಗಿರುವ, ಹೇಳಿದ್ದನ್ನು ತಟ್ಟನೆ ಗ್ರಹಿಸುವ ಈ ಪುಟ್ಟ ಮಕ್ಕಳು ಮಂಕಾಗುತ್ತಾರೆ. ಎಲ್ಲದರಲ್ಲೂ ಆಸಕ್ತಿ ಕಳೆದುಕೊಳ್ಳುತ್ತಾರೆ. ಸಾಮಾನ್ಯ ಮಕ್ಕಳಿಗಿಂತ ಅತಿ ಹೆಚ್ಚು ಮಾನಸಿಕ ಸಾಮರ್ಥ್ಯ ಹೊಂದಿರುವ ಈ ಮಕ್ಕಳ ಪ್ರತಿಭೆಯನ್ನು ಗುರುತಿಸದೇ ಹೋದರೆ ಅವರ ಬುದ್ಧಿವಂತಿಕೆ ಹಾಗೂ ಪ್ರತಿಭೆ ಜಡ್ಡುಗಟ್ಟಿ ಎಲ್ಲರನ್ನೂ ಗೋಳು ಹೊಯ್ದುಕೊಳ್ಳುವ ಸಮಸ್ಯಾತ್ಮಕ ಮಕ್ಕಳಾಗಿ ಪರಿವರ್ತನೆಗೊಳ್ಳುತ್ತವೆ.

ಪುಟ್ಟ ಅರುಣನಿಗೆ ಜಗತ್ತಿನ ಪ್ರತಿಯೊಂದು ವಿಷಯದ ಬಗ್ಗೆ ವಿಪರೀತ ಕುತೂಹಲ. ಅತಿ ಎನಿಸುವಷ್ಟು ಚುರುಕು. ಯಾವುದೇ ವಸ್ತು ನೋಡಿದರೂ ನೂರೆಂಟು ಪ್ರಶ್ನೆಗಳು. ಅವನ ಈ ಕುತುಹಲಭರಿತ ಪ್ರಶ್ನೆಗಳಿಗೆ ಉತ್ತರಿಸುವಲ್ಲೇ ಮನೆಯವರಿಗೆ ಸಾಕೋಸಾಕು ಎನಿಸುತ್ತದೆ.

ಇಂತಹ ಅರುಣ ಶಾಲೆಗೆ ಸೇರುತ್ತಿದ್ದಂತೆಯೇ ಇನ್ನಷ್ಟು ಬುದ್ಧಿವಂತನಾಗುತ್ತಾನೆ ಎಂಬ ತಂದೆ-ತಾಯಿಯರ ನಿರೀಕ್ಷೆ ಹುಸಿಯಾಯಿತು. ಒಂದೆರಡು ತಿಂಗಳಲ್ಲಿ ಶಾಲೆಯಲ್ಲಿ 'ದಡ್ಡ' ಎಂಬ ಹಣೆಪಟ್ಟಿ ಹಚ್ಚಲಾಯಿತು. ಓದುವುದರಲ್ಲಾಗಲಿ ಬರೆಯುವುದರಲ್ಲಾಗಲಿ ಅವನಿಗೆ ಕಿಂಚಿತ್ ಆಸಕ್ತಿ ಇಲ್ಲ. ಸದಾ ಚುರುಕಾಗಿ ಮನೆತುಂಬಾ, ಬೀದಿತುಂಬಾ ಓಡಾಡಿಕೊಂಡಿರುತ್ತಿದ್ದ ಅರುಣನ ಪಾಲಿಗೆ ಶಾಲೆಯೇ ಸೆರೆಮನೆ ಎನಿಸತೊಡಗಿತು.

ನಾಲ್ಕೈದು ತಾಸು ಕುಳಿತಲ್ಲೇ ಕೂರುವುದು ಶಿಕ್ಷೆ ಎನಿಸಿತು. ಒಂದು ಕಡೆ ಕುಳಿತುಕೊಳ್ಳಲಾರದೆ ಅರುಣ ಒದ್ದಾಡಲಾರಂಭಿಸಿದ. ಅಕ್ಕಪಕ್ಕದ ಹುಡುಗರೊಡನೆ ಮಾತನಾಡುತ್ತಾ ಶಿಕ್ಷಕಿಯಿಂದ 'ಶಿಕ್ಷೆ' ಪಡೆಯುವುದು ಕಾಯಂ ಆಯಿತು. ಕ್ಲಾಸ್ ಟೀಚರ್ ಲಿಖಿತವಾಗಿಯೇ ಅವನ ತಂದೆ-ತಾಯಿಯ ಬಳಿ ದೂರುವುದು ಸರ್ವೇಸಾಮಾನ್ಯವಾಗತೊಡಗಿತು.

ಮನೆಯಲ್ಲೂ ಅರುಣನ ಉಪಟಳ ಹೆಚ್ಚತೊಡಗಿತು. ಮನೆಯ ಪ್ರತಿಯೊಂದು ವಸ್ತುವನ್ನು ಹಾಳುಗೆಡವುದರಲ್ಲಿ ಅವನಿಗೆ ವಿಶೇಷ ಆಸಕ್ತಿ. ತನ್ನ ಕಾರಿನಿಂದ ಹಿಡಿದು ತಂದೆಯ ಎಲೆಕ್ಟ್ರಿಕ್ ಷೇವಿಂಗ್ ಸೆಟ್‌ವರೆಗೆ, ಅಡಿಗೆ ಮನೆಯ ಡಬ್ಬಿಗಳಿಂದ ಯಾವುದೇ ವಸ್ತುವಿನವರೆಗೆ ಅರುಣ ಹಾವಳಿಯಿಂದ ಏನಾಯ್ತು ಇಲ್ಲ. ಪುಸ್ತಕ ಮುಟ್ಟುವುದೇ ಇಲ್ಲ. ಹೋಂವರ್ಕ್ ಮಾಡುವುದಿಲ್ಲ. ಕೇಳಿದರೆ ತಾರಕಸ್ವರದಲ್ಲಿ ಕಿರುಚುವುದು, ರಾದ್ಧಾಂತ ಮಾಡುವುದು ಮಾಮೂಲು.

ಚುರುಕು ಹುಡುಗ ಹೀಗೆ ದಾರಿ ತಪ್ಪುತ್ತಿರುವುದರಿಂದ ಗಾಬರಿಗೊಂಡ ತಂದೆ-ತಾಯಿಗಳು ಅವರಿವರನ್ನು ಕೇಳಿ ನೋಡಿದರು. ಅವನಿಗೆ ತೀರಾ ಆತ್ಮೀಯರು ಎನಿಸಿಕೊಂಡ ಅಜ್ಜ-ಅಜ್ಜಿಯಿಂದ ಬುದ್ಧಿ ಹೇಳಿಸಿದರು. ಬುದ್ಧಿ ಹೇಳಿದಾಗ ಎಲ್ಲದಕ್ಕೂ ತಲೆ ಆಡಿಸುವ ಅರುಣ ಹತ್ತು ನಿಮಿಷಕ್ಕೆ ತನ್ನ ಹಿಂದಿನ ಚಾಳಿ ಮುಂದುವರಿಸಲು ಪ್ರಾರಂಭಿಸಿದ. ತಂದೆ-ತಾಯಿ ವೈದ್ಯರ ಬಳಿಗೂ ಕರೆದೊಯ್ದರು. ಆದರೂ ಸುಧಾರಣೆ ಕಾಣಲಿಲ್ಲ.

ಒಂದು ದಿನ ಅರುಣನ ಸೋದರ ಮಾವ ಬಂದರು. ಮನಃಶಾಸ್ತ್ರಜ್ಞರೂ ಆದ ಅವರ ಬಳಿ ಅರುಣನ ತಂದೆ-ತಾಯಿ ಮಗನ ವಿಚಿತ್ರ ನಡುವಳಿಕೆಯ ಬಗ್ಗೆ ಹೇಳಿಕೊಂಡು ಅಲವತ್ತುಕೊಂಡರು. ಎಲ್ಲವನ್ನೂ ಸಾವಧಾನ ಚಿತ್ತದಿಂದ ಆಲಿಸಿದ ಅವರು, ಅವನ ಬುದ್ಧಿಮಟ್ಟ ಪರೀಕ್ಷಿಸಲು ಕೆಲವು ಪರೀಕ್ಷೆಗಳನ್ನು ಒಡ್ಡಿದರು. ಈ ಎಲ್ಲಾ ಐ.ಕ್ಯೂ (ಬುದ್ಧಿ

ಮಟ್ಟ) ಪರೀಕ್ಷೆಗಳಲ್ಲೂ ಅರುಣ ಯಶಸ್ವಿಯಾದ.

ಮಾವ ಅರುಣನ ತಂದೆ-ತಾಯಿಗೆ ತಿಳಿಹೇಳಿದರು. ಆತ ಅತ್ಯಂತ ಮೇಧಾವಿ. ಆದರೆ ಅವನ ಪ್ರತಿಭೆ ಸೂಕ್ತ ಮಾರ್ಗದಲ್ಲಿ ಬಳಕೆಯಾಗುತ್ತಿಲ್ಲ. ಅವನ ಬುದ್ಧಿವಂತಿಕೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕೆಲವು ಮಾರ್ಗಗಳನ್ನು ಅವರು ಸೂಚಿಸಿದರು.

ಮಾವ ಹೇಳಿಕೊಟ್ಟ ಮಾರ್ಗವನ್ನು ಅರುಣನ ತಂದೆ-ತಾಯಿಗಳು ಅನುಸರಿಸಲು ಪ್ರಾರಂಭಿಸಿದರು.

ಗಣಿತದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ ಅರುಣನಿಗೆ ಅಕ್ಷರ ಜೋಡಿಸುವುದು, ಮನೆ ಕಟ್ಟುವ ಆಟಿಕೆಗಳನ್ನು ಒಳಗೊಂಡಂತೆ ಲೆಕ್ಕಕ್ಕೆ ಸಂಬಂಧಿಸಿದ ಎಲ್ಲಾ ಆಟಿಕೆಗಳು ಅವರ ಮನೆ ತುಂಬಿದವು. ಇದೇ ವೇಳೆಗೆ ಅವನ ಓದುವ ಹವ್ಯಾಸಕ್ಕೂ ಪ್ರೋತ್ಸಾಹ ದೊರೆಯಿತು.

ಅರುಣನಿಗೆ ಪ್ರಶ್ನೋತ್ತರ ಇರುವ ಪುಸ್ತಕಗಳೆಂದರೆ ಚಾಕೊಲೇಟ್ ಸವಿದಷ್ಟು ಖುಷಿ. ಅವನಿಷ್ಟಪಡುವ ಜನರಲ್ ನಾಲೆಜ್ಡ್ ಹಾಗೂ ಎನ್‌ಸೈಕ್ಲೋಪಿಡಿಯಾ ಅರುಣನ ಕಬೋರ್ಡ್ ತುಂಬಿದವು. ಕ್ರಮೇಣ ಶಾಲೆ ಅವನಿಗೆ ಪ್ರಿಯವಾದ ತಾಣವಾಯಿತು. ಪಠ್ಯಪುಸ್ತಕಗಳು ಇಷ್ಟವಾಗತೊಡಗಿದವು.

ಕ್ರಮೇಣ ಅರುಣ ತನ್ನ ಪೊರೆ ಕಳಚಿ ವ್ಯಾಸಂಗದಲ್ಲಿ ಹೆಸರು ಗಳಿಸಲಾರಂಭಿಸಿದ.

ವಿಜ್ಞಾನ ಅವನ ಅಚ್ಚುಮೆಚ್ಚಿನ ವಿಷಯವಾಯಿತು. ಅವನ ಈ ಇಷ್ಟಕ್ಕೆ ತಂದೆ-ತಾಯಿಯ ಪ್ರೋತ್ಸಾಹ ದೊರೆಯಿತು. ರ್‍ಯಾಂಕ್ ಗಳಿಸುವುದು ಅವನಿಗೆ ನೀರು ಕುಡಿದಷ್ಟು ಸುಲಭ ಎನಿಸತೊಡಗಿತು. ಈಗ ಅರುಣ ಯಶಸ್ವಿ ಪ್ರತಿಭಾನ್ವಿತ ವಿಜ್ಞಾನಿ.

ಅರುಣ ಅದೃಷ್ಟವಂತ. ಸಕಾಲದಲ್ಲಿ ಅವನ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲಾಯಿತು. ಇಂತಹ ಮಕ್ಕಳ ಪ್ರತಿಭೆಯನ್ನು ಸಕಾಲದಲ್ಲಿ ಗುರುತಿಸಿ ಬೆಳಕಿಗೆ ತಾರದಿದ್ದರೆ......?

ವಿಶೇಷ ಪ್ರತಿಭೆ ಇರುವ ಮಕ್ಕಳಿಗೆ ಸೂಕ್ತವಾಗಿ ಅದನ್ನು ಬಳಸಿಕೊಳ್ಳುವ ಅವಕಾಶ ದೊರೆಯದೆ ಹೋದರೆ ಹತಾಶೆಗೊಳ್ಳುತ್ತಾರೆ. ತಮ್ಮ ಪ್ರತಿಭೆಯನ್ನು ಅಡ್ಡಮಾರ್ಗಕ್ಕೆ ಬಳಸಿಕೊಳ್ಳುತ್ತಾರೆ. ಕೆಲವೊಮ್ಮೆ ಸಮಾಜಘಾತುಕ ಕೃತ್ಯಗಳಲ್ಲೂ ತೊಡಗುವ ಅಪಾಯವಿದೆ.

ಅನೇಕ ಕುಖ್ಯಾತ ಅಪರಾಧಿಗಳ ಹಿನ್ನಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವರ ಚಾಣಾಕ್ಷತನ, ಬುದ್ಧಿವಂತಿಕೆ ಗೋಚರವಾಗುತ್ತದೆ. ಚಾರ್ಲ್ಸ್ ಶೋಭರಾಜ್ ಎಸಗಿದ ಕುಕೃತ್ಯಗಳನ್ನು ಗಮನಿಸಿದರೆ ಅವನು ತನ್ನ ಯೋಜನೆಯನ್ನು ಅಚ್ಚುಕಟ್ಟಾಗಿ ರೂಪಿಸುವ ಕೈಚಳಕ ಹೊಂದಿದ್ದ ಹಾಗೂ ಅವನ ಬುದ್ಧಿಮತ್ತೆ ತೀಕ್ಷ್ಣವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಚಾರ್ಲ್ಸ್ ಬಾಲ್ಯದಲ್ಲಿ ಅತಿಬುದ್ಧಿವಂತನಾಗಿದ್ದಿರಬಹುದು. ಆದರೆ ಈ ಬುದ್ಧಿವಂತಿಕೆ ಪ್ರದರ್ಶನಕ್ಕೆ ಸೂಕ್ತ ಮಾರ್ಗದರ್ಶನ ದೊರಕದೆ ಆತ ಕುಖ್ಯಾತ ಅಪರಾಧಿಯಾಗಿ ಪರಿವರ್ತನೆ ಹೊಂದಿದ.

. ಚಾರ್ಲ್ಸ್ ಕುಖ್ಯಾತನಾಗಲು ಅವನ ತಂದೆ-ತಾಯಿ ಅವನನ್ನು ಬಾಲ್ಯದಲ್ಲಿ ನಿರ್ಲಕ್ಷಿಸಿದ್ದೇ ಕಾರಣ ಎಂದು ಅವನ ಚರಿತ್ರೆಕಾರರು ಹೇಳುತ್ತಾರೆ. ಅವನಿಗೆ ಬಾಲ್ಯದಿಂದಲೇ ರಚನಾತ್ಮಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ್ದರೆ ಇಡೀ ದೇಶವೇ ಪ್ರೀತಿಸುವ, ಈ ನಾಡಿನ ಬುದ್ಧಿವಂತ ವ್ಯಕ್ತಿಯಾಗುತ್ತಿದ್ದನೇನೋ!

ಕೆಲವು ಮಂದಿ ಅಪರಾಧಿಗಳು ದೈಹಿಕವಾಗಿ ಕುರೂಪಿಗಳಾಗಿದ್ದರೂ ಮಾನಸಿಕವಾಗಿ ಅತ್ಯಂತ ಚುರುಕು. ಅನೇಕ ಕಳ್ಳಸಾಗಾಣಿಕೆದಾರರ, ಕೊಲೆಗಡುಕರ ಪ್ರತಿಭೆಯನ್ನು ಸಕಾಲದಲ್ಲಿ ಗುರುತಿಸಿದ್ದರೆ ಅವರು ಉತ್ತಮ ವೈದ್ಯರೋ, ಎಂಜನಿಯರ್, ಸಂಗೀತಗಾರರೋ, ಕಲಾವಿದರೋ, ವಿಜ್ಞಾನಿಗಳೋ ಆಗಿರುತ್ತಿದ್ದರು.

ಜೀವನ ನಿರ್ವಹಣೆಗಾಗಿ ಅನೇಕ ಬಡ ಕುಟುಂಬಗಳಲ್ಲಿ ಮಕ್ಕಳನ್ನು ಬಾಲ್ಯದಲ್ಲೇ ದುಡಿಮೆಗೆ ತಳ್ಳುವುದು ಅನಿವಾರ್ಯವಾಗಿರುತ್ತದೆ. ಹೀಗಾಗಿ ಅವರಲ್ಲಿರುವ ಪ್ರತಿಭೆ ಬೆಳಕಿಗೆ ಬರುವುದೇ ಇಲ್ಲ. ನಮ್ಮ ಸಮಾಜ ಈ ಬಾಲಕಾರ್ಮಿಕರನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳುವುದರಿಂದ ಇಂತಹ ಮಕ್ಕಳು ದೊಡ್ಡವರಾದಾಗ ಸಮಾಜದ ಮೇಲೆ ಸೇಡು ತೀರಿಸಿಕೊಳ್ಳುವವರಂತೆ ವರ್ತಿಸಲು ಆರಂಭಿಸುತ್ತಾರೆ. ಬಾಲ್ಯದಲ್ಲಿ ಪ್ರತಿ ಪೈಸೆಗೂ ಪಡಬಾರದ ಮಾನಸಿಕ ಹಿಂಸೆ ಅನುಭವಿಸುವ ಈ ಮಕ್ಕಳು ದೊಡ್ಡವರಾದಾಗ ಸುಲಭವಾಗಿ ಹಣ ಮಾಡುವ ಅಡ್ಡದಾರಿ ಹಿಡಿಯುತ್ತಾರೆ. ಅವರ ಬುದ್ಧಿವಂತಿಕೆ ತಪ್ಪುಮಾರ್ಗಕ್ಕೆ ಬಳಕೆಯಾಗುತ್ತದೆ.

ವಿಶೇಷ ಪ್ರತಿಭೆ ಹಾಗೂ ಬುದ್ಧಿವಂತಿಕೆ ಇರುವ ಮಕ್ಕಳು ಪ್ರೀತಿ ಹಾಗೂ ಕರುಣೆಗೆ ತಲೆಬಾಗುತ್ತಾರೆಯೆ ಹೊರತು ಬೆದರಿಕೆಗೆ ತಲೆಬಾಗುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಇಂತಹ ಮಕ್ಕಳು ಶಾಲೆಯ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುವುದಿಲ್ಲ.

ಪ್ರಖ್ಯಾತ ಲೇಖಕ ಪಾಲ್ ವಿಟ್ಟ ಅವರು ಬರೆದ "ಗಿಫ್ಟೆಡ್ ಚಿಲ್ಡ್ರನ್ -ಗ್ರೇಟೆಸ್ಟ್ ರಿಸೋರ್ಸ್" (೧೯೫೫)

ಪುಸ್ತಕದಲ್ಲಿ ಈ ಬಗ್ಗೆ ಸುದೀರ್ಘ ಮಾಹಿತಿ ಇದೆ.

ವಿಶೇಷ ತರಬೇತಿ

ಇಂತಹ ಮಕ್ಕಳನ್ನು ಸಕಾಲದಲ್ಲಿ ಗುರುತಿಸಬೇಕು. ಶಾಲೆಗಳನ್ನು ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯದ ಪರೀಕ್ಷೆ ನಡೆಯಬೇಕು. ಇಂತಹ ಪರೀಕ್ಷೆ ಮಾಡಲು ಶಿಕ್ಷಕರಿಗೆ ವಿಶೇಷ ತರಬೇತಿ ನೀಡಬೇಕು. ತಂದೆ-ತಾಯಿಗಳು ವಿದ್ಯಾವಂತರಿದ್ದರೆ ಮನೆಯಲ್ಲೂ ಇದನ್ನು ಮಾಡಬಹುದು.

ಪರೀಕ್ಷೆಗಳು ಮಕ್ಕಳ ವಿಶೇಷ ಪ್ರತಿಭೆಯನ್ನು ಪತ್ತೆಹಚ್ಚಲು ಸಹಕಾರಿಯಾಗಿರುತ್ತವೆ. ಉತ್ತಮ ಶಾಲೆಗಳಲ್ಲಿ ಕ್ರೀಡೆಗಳ ಜೊತೆಗೆ ಶಿಲ್ಪಕಲೆ, ಮಾಡೆಲಿಂಗ್, ಸಂಗೀತ, ನೃತ್ಯ ಮುಂತಾದ ಹವ್ಯಾಸಗಳಿಗೆ ಪ್ರೋತ್ಸಾಹವಿರುತ್ತದೆ. ಇಂತಹ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶವಿರುವ ಶಾಲೆಗಳಲ್ಲಿ ಮಗು ತನಗೆ ಇಷ್ಟವೆನಿಸುವ ಹವ್ಯಾಸದಲ್ಲಿ ತೊಡಗುವುದರ ಜೊತೆಗೆ ಮುಕ್ತ ಮನಸ್ಸಿನಿಂದ ಪಾಠ ಪ್ರವಚನದಲ್ಲಿ ತೊಡಗಲು ಸಹಕಾರಿಯಾಗುತ್ತದೆ.

ಪ್ರತಿಭಾನ್ವಿತ ಮಕ್ಕಳು ಸಾಮಾನ್ಯ ಶಿಕ್ಷಕರು ಅಥವಾ ಪಠ್ಯಕ್ರಮಕ್ಕೆ ಸೂಕ್ತರೀತಿಯಲ್ಲಿ ಪ್ರತಿಕ್ರಿಯಿಸುವುದಿಲ್ಲ. ಆದರೆ ನಮ್ಮ ದೇಶದಲ್ಲಿ ಇಂತಹ ವಿಶೇಷ ತರಬೇತಿ ಪಡೆದ ಶಿಕ್ಷಕರು ಬೆರಳೆಣಿಕೆಯಷ್ಟಿದ್ದಾರೆ. ಈ ಶಿಕ್ಷಕರು ಮಾತ್ರ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡಬಲ್ಲರು.

ಈ ಉದ್ದೇಶಕ್ಕೆ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳನ್ನು ಮಾಡಿಯೇ ಶಿಕ್ಷಕರನ್ನು ಆಯ್ಕೆಮಾಡಬೇಕು. ಈ ವೃತ್ತಿಯಲ್ಲಿ ಅವರು ಮುನ್ನಡೆಯಲು ಅವರಿಗೆ ಆಕರ್ಷಕ ಸೌಲಭ್ಯಗಳನ್ನು ನೀಡಬೇಕು.

ವಿವಿಧ ಮಾಹಿತಿಗಳುಳ್ಳ ವಿಭಿನ್ನ, ವಿಶೇಷ ಪಠ್ಯಕ್ರಮವನ್ನು ವ್ಯಾಸಂಗದಲ್ಲಿ ಇಂತಹ ಮಕ್ಕಳಿಗೆ ಅಳವಡಿಸುವುದು ಅವಶ್ಯಕ. ಆದರೆ ಈಗಿರುವ ಪಠ್ಯಕ್ರಮ ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಏಕರೂಪದ್ದಾಗಿದೆ.

ಯಾವುದೇ ವಿಷಯ ಅಥವಾ ಹವ್ಯಾಸ ಐಚ್ಛಿಕವಾಗಿರುತ್ತದೆ ಎಂಬುದಕ್ಕಿಂತ ಅದನ್ನು ವಿದ್ಯಾರ್ಥಿಗಳ ಮನಮುಟ್ಟುವಂತೆ ಪರಿಣಾಮಕಾರಿಯಾಗಿ ಹೇಗೆ ಕಲಿಸಲಾಗುತ್ತದೆ ಎಂಬುದು ಅತಿಮುಖ್ಯ.

ಏಕತಾನತೆ ಹೊಂದಿರುವ ವಿಷಯಗಳು ಇಂತಹ ಪ್ರತಿಭಾನ್ವಿತ ಮಕ್ಕಳಿಗೆ ಬೇಸರ ಎನಿಸಬಹುದು. ತನ್ನ ಮೇಧಾಶಕ್ತಿಗೆ ಇದು ಸೂಕ್ತವಲ್ಲ ಎಂದು ವಿದ್ಯಾರ್ಥಿ ಭಾವಿಸಿ ತನ್ನ ಅಧ್ಯಯನ ಪುಸ್ತಕಗಳನ್ನೇ ದ್ವೇಷಿಸುವಂತಾಗಬಹುದು.

ವಿದೇಶಗಳಲ್ಲಿ ಯಾವುದೇ ರೀತಿಯ ಶಿಕ್ಷಣ ಪಡೆಯಲು ವಯೋಮಿತಿಯ ನಿರ್ಬಂಧವಿಲ್ಲ. ಅವರು ಯಾವಾಗ ಬೇಕಾದರೂ ಪರೀಕ್ಷೆ ತೆಗೆದುಕೊಳ್ಳಬಹುದು.

ಪ್ರತಿಭಾನ್ವಿತ ಮಕ್ಕಳ ಪ್ರತಿಭೆಗೆ ಸಾಣೆ ಹಿಡಿಯಲು ಇಡೀ ಪಠ್ಯಕ್ರಮವನ್ನು ಪುನರ್‌ರಚಿಸಬೇಕು. ಅತ್ಯುತ್ತಮ,

ವಿಶೇಷ ಪ್ರತಿಭೆಯ ಮಕ್ಕಳ ಗುಣಲಕ್ಷಣಗಳು

ಭಾಷೆಗಳಲ್ಲಿ ಪ್ರಾವೀಣ್ಯ. ಚಿಕ್ಕ ವಯಸ್ಸಿನಲ್ಲೇ ಕಥೆಗಳನ್ನು ಹೇಳುವ ಪ್ರವೃತ್ತಿ.

ಪುಸ್ತಕ ಓದುವುದರಲ್ಲಿ ಆಸಕ್ತಿ.

ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಅವಲೋಕಿಸುವುದು. ಕ್ಯಾಲೆಂಡರ್, ಗಣಿತ, ಗಡಿಯಾರ ಮುಂತಾದವುಗಳ ಬಗ್ಗೆ ವಿಶೇಷ ಒಲವು.

ಲಲಿತಕಲೆ, ಪೇಯಿಂಟಿಂಗ್‌ನಲ್ಲಿ ಅಭಿರುಚಿ.

ಪ್ರಕೃತಿ, ಪರಿಸರ ಸೇರಿದಂತೆ ಹತ್ತು ಹಲವು ವಿಷಯಗಳ ಬಗ್ಗೆ ಆಸಕ್ತಿ.

ತನಗೆ ಬೇಕಾದ ವಸ್ತುಗಳನ್ನು ಪಡೆದುಕೊಳ್ಳುವಲ್ಲಿ ಏಕಾಗ್ರತೆ.

ಪ್ರತಿಯೊಂದು ವಿಷಯದಲ್ಲೂ ಸತ್ಯವನ್ನು ತಿಳಿದುಕೊಳ್ಳಲೇಬೇಕೆಂಬ ಹಂಬಲ. ಜಗತ್ತಿನ ಬಗ್ಗೆ ಕುತೂಹಲ.

ಕಣ್ಣಿಗೆ ಗೋಚರಿಸುವ ಎಲ್ಲಾ ವಿಷಯಗಳ ಬಗ್ಗೆ ಪ್ರಶ್ನೆ ಕೇಳುವ ಸ್ವಭಾವ. ಹಾರಿಕೆ ಹಾಗೂ ತಪ್ಪು ಉತ್ತರ ಹೇಳಿದಾಗ ಒಪ್ಪಿಕೊಳ್ಳುವ ಧೋರಣೆ.

ಇಂತಹ ಮಕ್ಕಳಲ್ಲೂ ನಕಾರಾತ್ಮಕ ಗುಣಸ್ವಭಾವಗಳಿರುತ್ತವೆ. ಅವುಗಳು:

ದೈಹಿಕ ಹಾಗೂ ಮಾನಸಿಕವಾಗಿ ಒಂದು ಕಡೆ ಕುಳಿತುಕೊಳ್ಳಲಾಗದ ಮನೋಭಾವ.

ಶಾಲೆಯ ದೈನಂದಿನ ಚಟುವಟಿಕೆಗಳ ಬಗ್ಗೆ ಅನಾಸಕ್ತಿ.

ಮುಕ್ತವಾಗಿ ಮಾತನಾಡುವುದು. ಇಷ್ಟ, ಅನಿಷ್ಟಗಳನ್ನು ಹೇಳಲು, ಟೀಕೆ ಮಾಡಲು ಹಿಂಜರಿಯದಿರುವುದು.

ಹಟಮಾರಿತನ ಹಾಗೂ ಅವಿಧೇಯ ನಡವಳಿಕೆ.

ಪ್ರೀತಿ ಹಾಗೂ ತರ್ಕಬದ್ಧ ಮಾತಿಗೆ ಪ್ರತಿಕ್ರಿಯೆ. ಬೆದರಿಕೆ ಹಾಗೂ ಶಿಕ್ಷೆಗೆ ತಲೆಬಾಗದಿರುವ ಪ್ರವೃತ್ತಿ.

ಕೆಲವೊಮ್ಮೆ ಅತಿಸೂಕ್ಷ್ಮ ಎನಿಸುವಂತಹ ನಡವಳಿಕೆ.

ಮಧ್ಯಮ ಹಾಗೂ ಸಾಮಾನ್ಯ ವಿದ್ಯಾರ್ಥಿಗಳಿಗಾಗಿ ಪಠ್ಯ ಸಿದ್ಧಗೊಳ್ಳಬೇಕು. ಅತ್ಯುತ್ತಮ ಮಾದರಿ ಕ್ಲಿಷ್ಟಕರವಾಗಿದ್ದು, ಮೇಧಾವಿಗಳೇ ಇದನ್ನು ರಚಿಸಿ ಇದು ಬುದ್ಧಿವಂತ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತಿರಬೇಕು.

ಸಾಮಾನ್ಯ ವಿದ್ಯಾರ್ಥಿಗಳು ಮಧ್ಯಮ ಹಾಗೂ ಸಾಮಾನ್ಯ ಗುಣಮಟ್ಟದ ಪಠ್ಯಗಳನ್ನು ಅಭ್ಯಾಸ ಮಾಡುವುದರಿಂದ ಯಾರಿಗೂ ಹೊರೆ ಎನಿಸುವುದಿಲ್ಲ. ಬೋರ್ ಹೊಡೆಸುವುದಿಲ್ಲ. ಎಲ್ಲರೂ ಎಲ್ಲವನ್ನೂ ಓದಬೇಕು ಎಂಬ ಸಿದ್ಧಾಂತದ ಬದಲು ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಪಠ್ಯಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇದರಿಂದ ಲಭ್ಯವಾಗುತ್ತದೆ.

ಇಂತಹ ಹಿನ್ನೆಲೆಯಲ್ಲಿ ಶಿಕ್ಷಣ ಕಾಟಾಚಾರ ಎನಿಸುವ ಬದಲು ಆಸಕ್ತಿಯುತ ಮಾಧ್ಯಮವಾಗಿ ರೂಪುಗೊಳ್ಳುತ್ತದೆ. ಇಂತಹ ಪದ್ಧತಿಯನ್ನು ಅಳವಡಿಸುವುದರಿಂದ ಅನೇಕ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಪರೀಕ್ಷಾ ಪದ್ಧತಿಯಲ್ಲಿ ಭ್ರಷ್ಟಾಚಾರ ಗಣನೀಯವಾಗಿ ಕಡಿಮೆಯಾಗುತ್ತದೆ.

ಪ್ರತಿ ವಿದ್ಯಾರ್ಥಿಯೂ ೬-೭ ವಿಷಯಗಳನ್ನು ಕಲಿಯಲು ಆಸಕ್ತಿವಹಿಸುವುದಿಲ್ಲ. ವಿದ್ಯಾರ್ಥಿಗಳ ಸಾಮರ್ಥ್ಯದ ಪರೀಕ್ಷೆಯ ನಂತರ ವಿದ್ಯಾರ್ಥಿಗಳಿಗೆ ಅವರು ಇಚ್ಛಿಸುವ ಲಲಿತಕಲೆ ಅಥವಾ ವೃತ್ತಿಪರ ಶಿಕ್ಷಣವನ್ನು ಮುಖ್ಯ ವಿಷಯವಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು. ಉನ್ನತ ಶಿಕ್ಷಣಕ್ಕೆ ಹೋಗುವವರಿಗೆ ಅವಕಾಶ ದೊರೆಯಬೇಕು.

ಇಂದಿನ ಅವಶ್ಯಕತೆ ಎಂದರೆ ವೃತ್ತಿಪರ ಶಿಕ್ಷಣ ಕೋರ್ಸ್‌ಗಳನ್ನು ಒಳಗೊಂಡ ಬಹು ಉಪಯೋಗಿ ಶಾಲೆಗಳು.

ಬಡಿಗತನ, ಮಾಡೆಲಿಂಗ್, ಕಸೂತಿ, ಹೊಲಿಗೆ, ಅಡಿಗೆ, ಲಲಿತಕಲೆ, ಸಂಗೀತ..... ಯಾವುದರಲ್ಲಿ ವಿದ್ಯಾರ್ಥಿ ಒಲವು ತೋರಿಸುತ್ತಾನೋ ಅದನ್ನು ಗುರುತಿಸಿ ಅವನಿಗೆ ಪ್ರೋತ್ಸಾಹ ನೀಡಬೇಕು.

ನಿಮ್ಮ ಮಗು ಯಾವುದೇ ವಿಷಯದ ಬಗ್ಗೆ ಆಸಕ್ತಿ ತೋರಿಸಿದರೆ ದಯವಿಟ್ಟು ಅದರ ಉತ್ಸಾಹಕ್ಕೆ ತಣ್ಣೀರು ಎರಚಬೇಡಿ. ಆ ಮಗು ತನ್ನ ಇಷ್ಟ ಬಂದ ವಿಷಯವನ್ನು ಆಯ್ಕೆ ಮಾಡಿಕೊಂಡು ಮುಕ್ತವಾಗಿ ಬದುಕುವ ಸ್ವಾತಂತ್ರ್ಯ ಕಲ್ಪಿಸಿಕೊಡಿ. ಮಕ್ಕಳ ಮನೋಭಾವವನ್ನು ಅರ್ಥ ಮಾಡಿಕೊಂಡು ಅವರ ಬೇಡಿಕೆಯ ಬಗ್ಗೆ ಸಹಾನುಭೂತಿ ಹೊಂದಿರುವ ಪೋಷಕರು ಮಕ್ಕಳ ಆಸೆಗೆ ನೀರೆರೆದು ಬೆಳೆಸಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಾರೆ.

ತಮ್ಮ ಮೋಡಿ ಮಾಡುವ ಕಂಠದಿಂದ ವಿಶ್ವದಾದ್ಯಂತ ಕೋಟ್ಯಾಂತರ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿರುವ ಪ್ರಖ್ಯಾತ ಗಾಯಕ ಕೆ.ಜೆ. ಜೇಸುದಾಸ್ ಬಾಲ್ಯದಲ್ಲಿ ಎಂದೂ ಶಾಲೆಗೆ ಹೋಗಲು, ಪಠ್ಯಗಳನ್ನು ಓದಲು ಆಸಕ್ತಿ ತೋರಿಸಿದವರಲ್ಲ. ಪುಸ್ತಕಗಳನ್ನು ಓದುವುದು ಎಂದೂ ಅವರಿಗೆ ಆಸ್ಥೆಯ ವಿಷಯವಾಗಿರಲಿಲ್ಲ.

ಕೇವಲ ಸಂಗೀತ ಅವರ ಉಸಿರಾಗಿತ್ತು, ಬದುಕಾಗಿತ್ತು. ಊಟ, ತಿಂಡಿ ಮಾಡಲು ಮರೆಯುವಷ್ಟು ಅವರು ಸಂಗೀತ ಪ್ರಪಂಚದಲ್ಲಿ ಮುಳುಗಿರುತ್ತಿದ್ದರು.

ಅವರ ತಂದೆಯೂ ಪ್ರಖ್ಯಾತ ಸಂಗೀತಗಾರ ಹಾಗೂ ಕಲಾವಿದ. ಈ ತಂದೆ ತನ್ನ ಪ್ರತಿಭಾನ್ವಿತ ಮಗನ ಮೇಲೆ ಎಂಜಿನಿಯರ್ ಅಥವಾ ಡಾಕ್ಟರ್ ಆಗು ಎಂಬ ಒತ್ತಡ ಹೇರಲಿಲ್ಲ. ಎಸ್.ಎಸ್.ಎಲ್.ಸಿ. ನಂತರ ಜೇಸುದಾಸ್ ಸಂಗೀತ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಾಗ ಬೆನ್ನು ತಟ್ಟಿ ಪ್ರೋತ್ಸಾಹಿಸಿದರು.

ಅದರ ಪರಿಣಾಮವಾಗಿ ಇಂದು ಜೇಸುದಾಸ್ ಪ್ರಖ್ಯಾತ ಗಾಯಕರಾಗಿ ರೂಪುಗೊಂಡಿದ್ದಾರೆ.

ಖ್ಯಾತ ಪಕ್ಷಿಶಾಸ್ತ್ರಜ್ಞ ಡಾ. ಸಲೀಂ ಅಲಿ ಅವರಿಗೆ ಚಿಕ್ಕಂದಿನಿಂದಲೂ ಪಕ್ಷಿಗಳ ಚಲನವಲನ ವೀಕ್ಷಿಸುವ ಹವ್ಯಾಸ. ಈ ವಿಚಿತ್ರ ಸ್ವಭಾವಕ್ಕೆ ಪೋಷಕರು ಬೆಂಬಲ ಇತ್ತರು. ಇದರಿಂದಾಗಿಯೇ ಈ ರಾಷ್ಟ್ರ ಉತ್ತಮ ಪಕ್ಷಿಶಾಸ್ತ್ರಜ್ಞನನ್ನು ಪಡೆದುಕೊಳ್ಳುವಂತಾಯಿತು.

ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಯಾವುದೇ ವ್ಯಕ್ತಿಯ ಹಿನ್ನೆಲೆಯನ್ನು ಗಮನಿಸಿದಾಗ ಸಾಮಾನ್ಯವಾಗಿ ಪೋಷಕರು ಹಾಗೂ ಆತ್ಮೀಯರ ಬೆಂಬಲ, ಪ್ರೋತ್ಸಾಹ ಅವರಿಗೆ ದೊರೆತಿರುವುದು ವ್ಯಕ್ತವಾಗುತ್ತದೆ.

ನಿಮ್ಮ ಮಗು ವಿಶೇಷ ಕಲೆ ಅಥವಾ ವಿಭಿನ್ನ ವಿಷಯಗಳ ಬಗ್ಗೆ ಆಸಕ್ತಿ ಹೊಂದಿರಬಹುದು. ಇಲ್ಲವೆ ಅಸಾಧಾರಣ ಪ್ರತಿಭೆ ಹೊಂದಿರಬಹುದು. ಅದನ್ನು ಚಿವುಟಬೇಡಿ. ಅವರಿಗೆ ಸಕಾಲದಲ್ಲಿ ಪ್ರೋತ್ಸಾಹ ನೀಡಿ.

ಭವಿಷ್ಯದಲ್ಲಿ ಈ ಪ್ರತಿಭೆಗೆ ನಿಜಕ್ಕೂ ಬೆಲೆ ಬರುತ್ತದೆ.

ಸತ್ಯಘಟನೆ

ಕಾಣದ ಕೈ

-ರಮೇಶಚಂದ್ರ

ತನ್ನ ಪ್ರೀತಿಯ ಅಮ್ಮನಿಗೆ ತೀರಾ ಹುಷಾರಿಲ್ಲ; ಕೂಡಲೇ ಹೊರಟು ಬರತಕ್ಕದ್ದು ಎಂಬ ತಂತಿ ವಾರ್ತೆ ಕೈ ಸೇರಿದ ಒಡನೆಯೇ ಸಾಕೇತರಾಮನ ಜಂಘಾಬಲ ಉಡುಗಿತು. ಎರಡನೆ ಪಾಳಿಯ ಕೆಲಸಕ್ಕೆಂದು ಮಧ್ಯಾಹ್ನ ಮೂರು ಗಂಟೆಗೆ ಮನೆ ಬಿಟ್ಟಾಗ, ಕಾರಖಾನೆಯಲ್ಲಿ ಗೆಳೆಯರ ನಡುವೆ ಉಲ್ಲಾಸದಿಂದ ಕಾಲ ಕಳೆಯುತ್ತಿದ್ದ. ಯಾವುದೇ ಸುಳಿವಿಲ್ಲದೆ ಈಗ ಧುತ್ತೆಂದು ಬಂದ ವಾರ್ತೆ ಆತನನ್ನು ಕಿಂಕರ್ತವ್ಯಮೂಢನನ್ನಾಗಿಸಿತ್ತು. ಗೆಳೆಯರೆಲ್ಲ ಸಾಂತ್ವನ ಹೇಳಿ, ಎಲ್ಲರೂ ಹಣ ಒಟ್ಟುಗೂಡಿಸಿ, ಧೈರ್ಯ ತುಂಬಿ, ರಾಮನ ಕೈಲಿಟ್ಟು, "ದೇವರ ಮೇಲೆ ಭಾರ ಹಾಕಿ ಹೋಗಿ ಬಾ", ಎಂದು ಕಳಿಸಿದಾಗ ರಾತ್ರಿ ಹತ್ತು ಗಂಟೆಯಾಗಿತ್ತು.

ಕಾರಖಾನೆಯಿಂದ ಹೊರಬಂದು ಬಸ್ಸಿಗೆ ಕಾದು ನಿಂತ ರಾಮ. ಬಸ್ಸಿಗಾಗಿ ಕಾಯ್ದೇಕಾಯ್ದ. ಕೊನೆಗೊಂದು ಬಸ್ಸು ಬಂತು. ಮನೆಗೆ ಹೋಗಿ ಬಟ್ಟೆ ಬದಲಿಸಿ ಹೋಗೋಣ ಎಂದುಕೊಂಡಿದ್ದವನು ಮನಸ್ಸು ಬದಲಿಸಬೇಕಾಯಿತು. ಆದಷ್ಟು ಬೇಗ ತನ್ನ ಊರಾದ ವಾರಾಜೆಯನ್ನು ಸೇರುವ ಆತಂಕ ಅವನನ್ನು ಕಾಡುತ್ತಿತ್ತು. ಬಸ್ಸಿನಲ್ಲಿದ್ದ ಇನ್ನೊಬ್ಬ ಮಿತ್ರನ ಸಲಹೆಯಂತೆ ಬಂಗಾರಪೇಟೆಯಲ್ಲಿ ಇಳಿಯುವ ಯೋಚನೆಯನ್ನು ಬಿಟ್ಟು ಸೀದಾ ಕೋಲಾರಕ್ಕೆ ಟಿಕೆಟ್ಟು ತೆಗೆದುಕೊಂಡ. ಬೆಂಗಳೂರಿಂದ ಮಾಲು ಸಾಗಿಸುವ ಲಾರಿಗಳು ಕೋಲಾರ ಹೆದ್ದಾರಿಯಲ್ಲಿ ಸಾಗುವುದರಿಂದ ಅದರಲ್ಲಿ ಹೊರಟರೆ ಬೇಗನೆ ಊರು ಸೇರಬಹುದು ಎಂಬುದೇ ಅವನ ಯೋಚನೆಯಾಗಿತ್ತು. ಇಪ್ಪತ್ತು ವರ್ಷಗಳ ಹಿಂದೆ ಇಂದಿನಷ್ಟು ಬಸ್ಸು, ರೈಲಿನ ಸೌಕರ್ಯಗಳೂ ಇರಲಿಲ್ಲ. ಹೀಗಾಗಿ ಕೋಲಾರದ ಹೆದ್ದಾರಿಯಲ್ಲಿ ಅದೃಷ್ಟ ಪರೀಕ್ಷೆ ನಡೆಸಲು ತೀರ್ಮಾನಿಸಿದ.

ಕೋಲಾರದಲ್ಲಿ ಬಸ್ಸು ಇಳಿದು, ಹತ್ತಿರದ ಹೋಟೆಲಿನಲ್ಲಿ ಪರೋಟತಿಂದು, ಟೀ ಕುಡಿದು ಮೂರು ದಾರಿ ಸೇರುವಲ್ಲಿ ಸೇರಿದಾಗ ಗಂಟೆ ಹನ್ನೊಂದೂವರೆಯಾಗಿತ್ತು. ಆಗಾಗ ಅಮ್ಮನ ಮುಖ ನೆನಪಿಗೆ ಬಂದು ತಲೆ ಧಿಂ ಎನ್ನುತ್ತಿತ್ತು. ಡಿಸೆಂಬರ್ ಮಧ್ಯಭಾಗ. ಕೊರೆಯುವ ಚಳಿ. ಸಣ್ಣಗೆ ತುಂತುರು ಹನಿ. ಇವನ ಮೊರೆಯನ್ನು ಆಲಿಸದೆ ವಾಹನಗಳು ಭರ್ರೆಂದು ಸಾಗಿ ಹೋಗುತ್ತಲೇ ಇವೆ. ಕ್ಷಣವೊಂದು ಯುಗವಾಗಿ ಕಾಲವೇ ಅನಂತವಾಗಿ, ಕರುಣಾಜನಕ ಸ್ಥಿತಿಯಲ್ಲಿ ರಾಮ ನಿಂತು, ಕುಳಿತು ಚಡಪಡಿಸುತ್ತಿದ್ದಾನೆ. ಅವನ ಗೋಳನ್ನು ಕೇಳುವವರು ಯಾರೂ ಅಲ್ಲಿಲ್ಲ. ಕ್ರಮೇಣ ದೂರದಲ್ಲಿ ಕಾಣುತ್ತಿದ್ದ ಅಂಗಡಿ ಮುಂಗಟ್ಟುಗಳ ಬೆಳಕೆಲ್ಲ ನಂದಿ ಹೋಗಿ ಕತ್ತಲಿನ ಭೀಕರತೆಯೊಂದೇ ಆವರಿಸಿತು. ಗಾಳಿ, ಚಳಿ, ಮಳೆಯಿಂದ ರಾಮನ ಜೀವ ತತ್ತರಿಸುತ್ತ ಇದೆ. ಹತ್ತಿರ ಕಾಣುವ ಹಳೆಯ ಕಟ್ಟಡದ ಮರೆಗೆ ಹೋಗೋಣ ಎಂದರೆ ಲಾರಿಗಳು ಕಣ್ಣಿಗೆ ಬೀಳುವುದಿಲ್ಲ. ಹೀಗೆಯೇ ನಡುಗುತ್ತ ನರಳುತ್ತ ಇದ್ದ ರಾಮ. ಕಾಲ ಉರುಳುತ್ತಿದೆ. ಹೀಗೆ ತಪ್ಪು ನಿರ್ಧಾರ ಕೈಗೊಂಡು ಸಂಕಟಕ್ಕೆ ಸಿಲುಕಿಕೊಂಡಿದ್ದಕ್ಕೆ ರಾಮ ತನ್ನನ್ನೆ ಸಾವಿರ ಬಾರಿ ಶಪಿಸಿಕೊಂಡ.

ರಾಮನ ಪುಣ್ಯವೋ ಎಂಬಂತೆ ಲಾರಿಯೊಂದು ಇವನ ಕೋರಿಕೆ ಮನ್ನಿಸಿ ನಿಂತಿತು. ಪೇಟಕಟ್ಟಿ ದಾಡಿ ಬಿಟ್ಟಿದ್ದ ಪಂಜಾಬಿಸಿಂಗ್ ಅದರ ಡ್ರೈವರ್. ಜೊತೆಗೊಬ್ಬ ಕ್ಲೀನರ್. ರಾಮ ಲಾರಿ ಹತ್ತಿಕೊಂಡ. ಕ್ಲೀನರ್‌ಗೆ ಸ್ವಲ್ಪ ತಮಿಳು ಬರುತ್ತಿತ್ತು. ರಾಮನ ಮೊರೆ ಕೇಳಿ, ಡ್ರೈವರ್ ಅವನನ್ನು ವಾರಾಜೆಯ ತನಕ ಕೊಂಡೊಯ್ಯಲು ಒಪ್ಪಿದ. ಇಪ್ಪತ್ತೈದು

ರೂಪಾಯಿ ಕೊಡು ಅಂದ. ರಾಮ ಹಣ ಎಣಿಸಿಕೊಟ್ಟ. ಲಾರಿಯ ತುಂಬಾ ಮದ್ಯಪಾನದ ವಾಸನೆ ಇಡುಗಿತ್ತು. ಕ್ಲೀನರ್‌ನ ಬಳಿ ರಾಮ ತನ್ನ ಕಥೆ ಹೇಳಿಕೊಂಡ. ಲಾರಿ ಹೋಗುತ್ತಿದ್ದ ರಭಸಕ್ಕೆ ರಾಮನ ಎದೆ ಕಂಪಿಸುತ್ತಿತ್ತು. ಕಿರ್ರೆಂದು ಬ್ರೇಕ್ ಹಾಕಿ ಅಡ್ಡ ಬಂದಿದ್ದ ಹಳ್ಳಿಗನೊಬ್ಬನನ್ನು ಅವಾಚ್ಯವಾಗಿ ಬೈದು ಮುಂದೆ ಸಾಗಿದ ಡ್ರೈವರ್. ರಸ್ತೆಬದಿಯ ಟೀ ಅಂಗಡಿಯೊಂದರ ಮುಂದೆ ನಿಂತು ಟೀ ಕುಡಿದರು. ರಾಮನಿಗೂ ಕೊಡಿಸಿದರು. ನಿರ್ಮಾನುಷವಾದ ಬೀದಿಯಲ್ಲಿ ಪಯಣ ಸಾಗಿತು. ಡ್ರೈವರ್ ಪದೇ ಪದೇ ರಾಮನ ಮುಖ ನೋಡ ತೊಡಗಿದ.

ಅವನಿಗೆ ಏನೆನಿಸಿತೋ ಏನೋ, ಕ್ಲೀನರ್‌ನ ಬಳಿ ಹೇಳತೊಡಗಿದ."ರೇ ಕಾಸಿಂ, ಇಸ್ಕೋ ಉತರ್ನೇಕೋ ಬೋಲೋ... ಇಸ್ಕೆ ಊಪರ್ ಸೈತಾನ್ ನಾಚರಹಾಹೈ ಇಸೇ ಹಮಾರೆ ಗಾಡೀಮೆ ರಹನೇ ದಿಯೇತೋ ಹಮ್‌ಮರ್ ಜಾಯೇಂಗೆ." ಲಾರಿ ನಿಂತಿತು. ಕ್ಲೀನರ್ ರಾಮನನ್ನು ಇಳಿ ಎಂದ. ರಾಮನಿಗೆ ದಿಕ್ಕೇ ತೋಚಲಿಲ್ಲ. ಡ್ರೈವರ್ ರಾಮನಿಂದ ಪಡೆದ ಹಣವನ್ನು ಅವನ ಮೇಲೆ ಎಸೆದ..... ರಾಮ, "ನಡುರಸ್ತೆಯಲ್ಲಿ ಇಳಿ ಎಂದರೆ ಹೇಗೆ? ಕೊನೆಯ ಪಕ್ಷ ಮುಂದಿನ ಊರಿನವರೆಗಾದರೂ ಕರೆದೊಯ್ಯಿರಿ"ಎಂದು ಬೇಡಿದ. ಇವನ ಪ್ರಾರ್ಥನೆಗೆ ಅವರು ಕಿವಿಗೊಡಲಿಲ್ಲ. ಬಲವಂತವಾಗಿ



ರಾಮನನ್ನು ಇಳಿಸಿ ಲಾರಿ ಹೊರಟೇ ಹೋಯಿತು. ಭೀಕರ ಕತ್ತಲು, ಕಾಡಿನ ಮಧ್ಯೆ, ರಾಜಮಾರ್ಗದಲ್ಲಿ ರಾಮ ಏಕಾಂಕಿಯಾಗಿ ನಿಂತ. ಅವನ ಶಾಪ ತಟ್ಟದಷ್ಟು ದೂರ ಲಾರಿ ಹೊರಟು ಹೋಗಿತ್ತು.

ತನ್ನ ದುರ್ದೈವವನ್ನು ಹಳಿಯುತ್ತಾ ಮತ್ತೆ ರಾಮ ಹಾದಿ ಕಾಯತೊಡಗಿದ. ಅನೇಕ ವಾಹನ ಗಳ ನಂತರ ಹಳೆಯ ಕಾಲದ ಫೋರ್ಡ್ ಲಾರಿ ಯೊಂದು ನಿಂತಿತು. ರಾಮ ಲಾರಿ ಹತ್ತಿಕೊಂಡ. ಆ ಡ್ರೈವರ್ ಇಳಿವಯಸ್ಸಿನ ಮುದುಕ. ಷಣ್ಮುಖ ನೆಂದು ಹೆಸರು. ರಾಮನ ಕಥೆ ಕೇಳಿದ. ತನ್ನ ವಿಷಯ ಹೇಳಿದ. ನಿನ್ನನ್ನು ಕರೆದೊಯ್ಯುತ್ತೇನೆ. ಆದರೆ ಆತುರ, ಅವಸರ, ಧಾವಂತಕ್ಕೆ ಆಗುವುದಿಲ್ಲ. ನಾನು ನಿಧಾನಸ್ಥ. ನಿಧಾನವಾಗಿಯೇ ಎಲ್ಲ ಕೆಲಸ ಮಾಡುವುದು. ಲಾರಿಯನ್ನು ಸಹ ಕಡಿಮೆ ವೇಗ ದಲ್ಲಿ ನಿಧಾನವಾಗಿ ಓಡಿಸುತ್ತೇನೆ. ನಿನಗೆ ಆಕ್ಷೇಪಣೆ ಇಲ್ಲದಿದ್ದರೆ ಬಾ ಅಂದ. ರಾಮ ಒಪ್ಪಿಕೊಂಡ. ಈ ಲಾರಿ ಮದಗಜಗಮನೆಯಂತೆ ನಿಧಾನವಾಗಿ ಸರಿ ಯತೊಡಗಿತು. ಷಣ್ಮುಖ ಲಾರಿ ನಿಲ್ಲಿಸಿದ. ವೀಳ್ಯ ದೆಲೆ ಡಬ್ಬಿತೆಗೆದ. ಒಂದೊಂದೇ ಎಲೆಗೆ ಸುಣ್ಣ ಹಚ್ಚಿದ. ಕಟುಂ ಎಂದು ಅಡಿಕೆ ಕಡಿದ. ಒಂದೊಂದೇ ಎಲೆಯನ್ನು ದವಡೆಗೆ ಸೇರಿಸಿದ. ರಾಮನಿಗೂ ಕೊಟ್ಟ. ಮತ್ತೆ ರಥಯಾತ್ರೆ ಸಾಗಿತು. ಒಂದೇ ರಾತ್ರಿಯಲ್ಲಿ ರಾಮ ವಿರುದ್ಧ ದಿಕ್ಕಿನ ಇಬ್ಬರು ಮನುಷ್ಯರನ್ನು ಕಂಡ-ವೈಚಿತ್ರ್ಯಕ್ಕೆ ಬೆರಗುಗೊಂಡ.

ಮಂದಗತಿಯ ಪಯಣದಲ್ಲಿ ರಾಮ ತಾನು ಮತ್ತೊಬ್ಬ ಲಾರಿ ಡ್ರೈವರಿಂದ ಅನುಭವಿಸಿದ ಯಾತನೆ ಕುರಿತು ದುಃಖ ತೋಡಿಕೊಂಡ. ಇಂಥ ವೆಲ್ಲಾ ಜೀವನದಲ್ಲಿ ಸಾಧಾರಣ ವಿಷಯಗಳು. ಅದಕ್ಕೆಲ್ಲಾ ಹೆಚ್ಚಿಗೆ ಬೆಲೆ ಕೊಡಬಾರದು ಎಂದ ಷಣ್ಮುಖ ರಾಮನ ವ್ಯಥೆ ಕೇಳಿ, ನಿನಗಾಗಿ ಕೊಂಚ ವೇಗದಲ್ಲಿ ಗಾಡಿ ಓಡಿಸುತ್ತಾ ಇದ್ದೇನೆ. ಬೆಳಗಿನ ಮುಂಚೆ ನಿನ್ನನ್ನು ಊರು ಮುಟ್ಟಿಸುತ್ತೇನೆ. ನಿನ್ನ ಅಮ್ಮ ಗುಣ ಹೊಂದುತ್ತಾಳೆ. ದೇವರು ಒಳ್ಳೆಯ ದನ್ನು ಮಾಡುತ್ತಾನೆ ಎಂದು ಒಳ್ಳೆಯ ಮಾತನಾ ಡಿದ. ನಂತರ ಒಂದೇ ಕೈಯಲ್ಲಿ ಚಕ್ರ ಹಿಡಿದು ಇನ್ನೊಂದು ಕೈಯನ್ನು ಬಾಗಿಲ ಹೊರಗೆ ಹಾಕಿ ತಾಳ ಬಡಿಯುತ್ತಾ ತೂಂಗಾದೆ ತಂಬಿ ತುಂಗಾದೆ ಎಂದು ಹಾಡ ತೊಡಗಿದ. ರಾಮನಕಣ್ಣು ಎಳೆಯ ತೊಡಗಿತು. ಆ ಮಂಪರಿನಲ್ಲೂ ಸಹ ರಾಮನಿಗೆ ಪಂಜಾಬಿ ಡ್ರೈವರನ ಮುಖ ಕಂಡು ಬಂದು ಅವನ ನಿಂದೆ ಕಿವಿಯಲ್ಲಿ ಮೊಳಗತೊಡಗಿತು. ಒಂದೆರಡು ಕಡೆ ಲಾರಿ ನಿಂತು ಉಕ್ಕಡಗಳಲ್ಲಿ ತಪಾಸಣೆಯ ನಂತರ ಮುಂದುವರೆಯುತ್ತಾ ಇತ್ತು. ರಾಮನಿಗೆ ಅರಿವಿಲ್ಲದೇ ಕಣ್ಣುಗಳು ಎಳೆಯತೊಡಗಿದವು. ಆಗಲೂ ಅವನಿಗೊಂದು ಶಂಕೆ ತನ್ನ ಮುಖದಲ್ಲಿ ಮೃತ್ಯುದರ್ಶನ ಕಂಡನಲ್ಲಾ ತಾನು ಸಾಯುತ್ತೇ ನೆಯೇ ಎಂದು.

ಹಠಾತ್ತಾಗಿ ನಿಂತ ಲಾರಿಯ ಚಲನೆಯಿಂದ ರಾಮನ ತಲೆ ಕಂಬಿಗೆ ಬಡಿದು ಎದ್ದು ಕೂತ. ಲಾರಿ ನಿಂತಿತ್ತು. 'ಏಕಣ್ಣಾ?' ಎಂದ. "ಮುಂದೆ ವಾಹನಗಳು ನಿಂತಿವೆ'ಎಂದ. ಏಕಿರಬಹುದು ಎಂದದ್ದಕ್ಕೆ ಬಹುಶಃ ರೇಲ್ವೆ ಗೇಟ ಮುಚ್ಚಿರಬಹುದು ಎಂದ ಷಣ್ಮುಖ. ಆ ದಾರಿಯ ಪರಿಚಯ ರಾಮನಿಗೆ ಇತ್ತು. ರೇಲ್ವೆಗೇಟು ಇನ್ನೂ ಒಂದೂವರೆ ಮೈಲು ದೂರವಿದೆ. ಅದನ್ನು ಮೈಲುಗಲ್ಲು ದೃಢೀ ಕರಿಸುತ್ತದೆ. ಇನ್ನೂ ಕೊಂಚ ಹೊತ್ತು ಕಾಯ್ದ. ಲಾರಿಗಳು ಕದಲುವ ಸೂಚನೆ ಕಾಣಲಿಲ್ಲ. ಕೂತು ಕೂತು ಬೇಜಾರಾದ ರಾಮ ಷಣ್ಮುಖನಿಗೆ, "ಮುಂದೆ ಏನಾಗಿದೆಯೋ ನೋಡಿ ಬರುತ್ತೇನೆ. ಲಾರಿಗಳು ಮುಂದೆ ಚಲಿಸಿದರೆ ನೀವೂ ಬನ್ನಿರಿ. ನನ್ನ ಕೈಚೀಲ ನಿಮ್ಮಲ್ಲೇ ಇರಲಿ. ಬಲಗಡೆಯೇ ನಿಂತಿರುತ್ತೇನೆ" ಎಂದು ಒಪ್ಪಿಸಿ ಮುಂದೆ ಸಾಗಿದ. ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಇತರ ವಾಹನ ಚಾಲಕರನ್ನು ಕೇಳಿದರೆ, ಮುಂದೆ ಯಾವುದೇ ಲಾರಿ ರಸ್ತೆಗಡ್ಡವಾಗಿ ಮುಗುಚಿ ಬಿದ್ದಿದೆ. ರಸ್ತೆ ಬಂದಾಗಿದೆ. ಆ ಲಾರಿ ಯನ್ನು ಕದಲಿಸುವವರೆಗೂ ನಮಗೆ ಮೋಕ್ಷವಿಲ್ಲ ಎಂಬ ಉತ್ತರ ಬಂತು.

ರಾಮ ನಡೆದ, ನಡೆದ, ನಡೆದೇ ನಡೆದ- ಅಗೋ ಅಲ್ಲಿ ಬಿದ್ದಿದೆ ದಾರಿಗಡ್ಡವಾಗಿ ಪೆಡಂಭೂ ತದಂತಹ ಲಾರಿ-ತಲೆ ಕೆಳಗಾಗಿ. ಲಾರಿಯ ಎಣ್ಣೆ, ಡೀಸಲುಗಳೆಲ್ಲ ಇಕ್ಕೆಲುಗಳಲ್ಲು ರಸ್ತೆಯಲ್ಲಿ ಹರಿಯು ತ್ತಿದೆ. ಲಾರಿಯಲ್ಲಿ ಜೋಡಿಸಿದ್ದ ಯಂತ್ರೋಪಕರಣ ಚೆಲ್ಲಾಪಿಲ್ಲಿಯಾಗಿವೆ. ಕುತೂಹಲದಿಂದ ಇನ್ನಷ್ಟು ಹತ್ತಿರ ಹೋದ. ಕತ್ತಲು ಕವಿದಿದೆ. ಏನೂ ಸ್ಪಷ್ಟವಾಗಿ ಕಾಣುತ್ತಿಲ್ಲ... ಮಗುಚಿ ಬಿದ್ದ ಲಾರಿಯ

ಚಾಲಕ, ಕ್ಲೀನರು ರಸ್ತೆಪಕ್ಕದ ಗುಂಡಿಯಲ್ಲಿ ಬಿದ್ದಿದ್ದಾರೆ.

ಉಳಿದ ವಾಹನ ಚಾಲಕರು ಸೇರಿ ಪರಿಹಾರ ಕಾರ್ಯಕ್ಕೆ ಕೈಹಾಕಿದರು. ಬಿದ್ದಿದ್ದ ಲಾರಿಯನ್ನು ಹಗ್ಗಕಟ್ಟಿ ಎಳೆದು, ದಾರಿ ಬಿಡಿಸುವುದು. ಗುಂಡಿಯಲ್ಲಿ ಬಿದ್ದ ಚಾಲಕ, ಕ್ಲೀನರನನ್ನು ಸಾಧ್ಯವಾದರೆ ಸಂರಕ್ಷಿಸುವುದು. ಒಂದು ಗುಂಪು, ತಮ್ಮ ತಮ್ಮ ಲಾರಿಗಳನ್ನು ಚಾಲೂ ಮಾಡಿ ದೀಪದ ಪ್ರಕಾಶದಲ್ಲಿ ಕಾರ್ಯಪ್ರವೃತ್ತವಾಯಿತು. ಇನ್ನೊಂದು ಗುಂಪು ಚಾಲಕ ಮತ್ತು ಕ್ಲೀನರ್‌ರನ್ನು ಎತ್ತಿ ರಸ್ತೆ ಬದಿಯಲ್ಲಿ ಮಲಗಿಸಿತು.

ರಾಮ ನೋಡಿದ... ನೋಡಿದ....ನೋಡೇ ನೋಡಿದ. ಲಾರಿಗಳ ದೀಪದ ಬೆಳಕು ಹೆಣಗಳ ಮೇಲೆ ಬೀಳುತ್ತಾ ಇದೆ. ಸಾಕೇತ ರಾಮನ ಮೈಗೂದಲು ನಿಮಿರಿ ನಿಂತು ಅವನ ಬಾಯಿಂದ ಚೀತ್ಕಾರ ಹೊರಟಿತು. ಯಾವ ಡ್ರೈವರ್ ರಾಮನನ್ನು ಹೀಯಾಳಿಸಿ ನಿಂದಿಸಿ ಮಾರ್ಗಮಧ್ಯದಲ್ಲಿ ತಳ್ಳಿದ್ದನೋ, ಅದೇ ಪಂಜಾಬಿ ಡ್ರೈವರ್. ಕ್ಲೀನರ್ ಜೊತೆಗೆ ಹೆಣವಾಗಿ ಮಲಗಿದ್ದ. ಮೃತ್ಯು ಮುಖ ನರ್ತನ, ದರ್ಶನ ಕಂಡ ಅವರ ಮುಖದಲ್ಲಿ ಭಯ ಇನ್ನೂ ಗೋಚರಿಸುತ್ತಾ ಇದೆ.

ಸಾಧಾರಣ ಪರಿಸ್ಥಿತಿಯಲ್ಲಿ ಬದುಕಿ ಉಳಿಯಬೇಕಾಗಿದ್ದ ಡ್ರೈವರ್, ಕ್ಲೀನರ್‌ಗಳು ಲಾರಿಯಲ್ಲಿ ಹೇರಿದ್ದ .ಯಂತ್ರೋಪಕರಣಗಳು ಮೇಲೆ ಬಿದ್ದ ಪರಿಣಾಮವಾಗಿ ಸಾವನ್ನು ಅಪ್ಪಿದ್ದಾರೆ....! ರಕ್ತದ ಧಾರೆ ಹರಿದು ಗುಂಡಿಯ ನೀರನ್ನು ಕೆಂಪಗಾಗಿಸುತ್ತಾ ಇದೆ.

ಸಾಕೇತ ರಾಮ ದಿಗ್ಭ್ರಾಂತನಾದ. ಕಾಣದ ಕೈಯೊಂದು ಅವನನ್ನು ಅಂದು ಮೃತ್ಯುಮುಖದ ರ್ಶನದಿಂದ ತಪ್ಪಿಸಿತ್ತು. ದಾರಿ ಸಿಕ್ಕ ಕೂಡಲೇ ವಾಹನಗಳು ಚಲಿಸಿದವು. ರಾಮ ತನ್ನ ಲಾರಿಯನ್ನೇರಿ ಕುಳಿತು ಊರು ಸೇರಿ, ಮನೆಯಲ್ಲಿ ತಾಯಿಯನ್ನು ಕಂಡು ಎಲ್ಲರೊಂದಿಗೆ ಘಟನೆಯನ್ನು ಅನೇಕ ಬಾರಿ ವಿವರಿಸಿದ್ದರೂ ಆ ಡ್ರೈವರನ ನೆನಪಿನ ನೆರಳು ಅವನನ್ನು ಹಿಂಬಾಲಿಸುತ್ತಲೇ ಇತ್ತು. ●

ಜಾಣ ಜಾಹೀರಾತು

ಒಂದು ರಸ್ತೆಯಲ್ಲಿ ಎರಡು ಅಂಗಡಿಗಳಿದ್ದವು. ಅವುಗಳಲ್ಲಿ ಒಂದು ಹೆಚ್ಚುಕಡಿಮೆ ಐವತ್ತು ವರ್ಷಗಳಷ್ಟು ಹಳೆಯದು. ಅದರ ಮಗ್ಗುಲಲ್ಲೇ ಇನ್ನೊಬ್ಬರು ಅಂಗಡಿಯನ್ನಿಟ್ಟರು. ಅದರಿಂದ ಎರಡೂ ಅಂಗಡಿಗಳ ನಡುವೆ ಸ್ಪರ್ಧೆ ಏರ್ಪಟ್ಟು ಅವರಿಬ್ಬರೂ ಜಾಹೀರಾತು ಮಾಡಬೇಕಾಗಿ ಬಂತು.

ಹಳೆಯ ಅಂಗಡಿಯವರು, 'ನಮ್ಮ ಅಂಗಡಿ ಐವತ್ತು ವರ್ಷಗಳಷ್ಟು ಹಳೆಯದು!' ಎಂದು ಬೋರ್ಡನ್ನು ಬರೆದು ತಗಲಿಹಾಕಿದರು.

ಆ ಕೂಡಲೇ ಎರಡನೇ ಅಂಗಡಿಯವರು ತಾವೂ ಒಂದು ಬೋರ್ಡನ್ನು ಬರೆಸಿ ಹಾಕಿದರು:

'ನಮ್ಮ ಅಂಗಡಿಯನ್ನು ಹೊಸದಾಗಿ ಪ್ರಾರಂಭಿಸಿದ್ದೇವೆ. ಆದ್ದರಿಂದ ನಮ್ಮ ಅಂಗಡಿಯಲ್ಲಿ ಹಳೆಯ ಸಾಮಾನುಗಳಿಲ್ಲ.'

✤ ಬಾರಾಶಂ

ಕುರುಡು ನಂಬಿಕೆ?

ಆಗ ಸಿಡುಬು ರೋಗ ಉಗ್ರರೂಪ ತಳೆದು ಸಾಂಕ್ರಾಮಿಕವಾಗಿ ಹರಡುತ್ತಿತ್ತು. ೧೮೯೦ರಲ್ಲಿ ಜನರಿಗೆ ಸಿಡುಬು ಹಾಕುವುದನ್ನು ಕಾನೂನಿನ ಮುಖಾಂತರ ಕಡ್ಡಾಯಗೊಳಿಸಿದಾಗ ಮಸೂದೆಯನ್ನು ಬಾಲಗಂಗಾಧರ ತಿಲಕರು ವಿರೋಧಿಸಿದರು. ಹಿಂದುಗಳ ಖಾಸಗಿ ವಿಷಯದಲ್ಲಿ ಸರ್ಕಾರ ಅತಿಕ್ರಮ ಮಾಡುತ್ತಿದೆ ಎಂದು ಅವರು ನಂಬಿದ್ದರು.

ಆಧಾರ - ಖುಷವಂತಸಿಂಗರ 'ಇಂಡಿಯಾ' ✤ ಎಚ್.ಎಸ್.ಎನ್.

ಒಂದು ಜಿದ್ದಿನ ಪ್ರಸಂಗ

-ಎಚ್. ಆನಂದರಾಮ ಶಾಸ್ತ್ರೀ



ಜೀವನದಲ್ಲಿ ಅನೇಕ ಸಲ ನಾವು ಜಿದ್ದಿಗೆ ಬೀಳುತ್ತೇವೆ. ನಾವು ಮಾಡುತ್ತಿರುವುದು ಸರಿಯೋ ತಪ್ಪೋ ಎಂಬ ಯೋಚನೆಗೆ ನಮ್ಮೊಳಗೆ ಅವಕಾಶವನ್ನೇ ನೀಡದೆ ನಮ್ಮ ಮನಸ್ಸನ್ನು ಕೇವಲ ಜಿದ್ದಿನ ಸಾಧನೆಯ ಕಡೆಗೆ ಕೇಂದ್ರೀಕರಿಸಿಬಿಡುತ್ತೇವೆ. ನಮಗಾಗ ಬೇಕಾಗಿರುವುದು ಗೆಲುವು ಮಾತ್ರ. ಆ ಗೆಲುವು ಪಡೆಯುವ ಮಾರ್ಗದಲ್ಲಿ ನಾವು ನಮ್ಮ ವ್ಯಕ್ತಿತ್ವದ ಮೌಲ್ಯವನ್ನು ಒಂದಷ್ಟು ಕುಗ್ಗಿಸಿಕೊಳ್ಳುತ್ತಿದ್ದೇವೆಂಬ ಅರಿವು ಆ ಸಂದರ್ಭದಲ್ಲಿ ನಮಗಿರುವುದೇ ಇಲ್ಲ.

ಈ ಜಿದ್ದೆಂಬುದೇ ವಿಚಿತ್ರವಾದದ್ದು. ಸಾಧಿಸಲ್ಪಡುವ ಸಮಯದಲ್ಲಿ ಸಂಬಂಧಿತ ವ್ಯಕ್ತಿಯ ಸಾರಾಸಾರ ವಿವೇಚನೆಯನ್ನು ಸಂಪೂರ್ಣವಾಗಿ ಕಸಿದುಬಿಡುವ ಈ ಜಿದ್ದೆಂಬುದು ಅನಂತರದಲ್ಲಿ ಆ ವ್ಯಕ್ತಿಗೆ ವಿವೇಚನೆಯನ್ನು ಹಿಂದಿರುಗಿಸಿ ಹಿಂಸಿಸತೊಡಗುತ್ತದೆ!

ನನ್ನ ಜೀವನದಲ್ಲಿ ಇಂಥದೊಂದು ಜಿದ್ದಿನ ಪ್ರಸಂಗ ನಡೆದುಹೋಗಿ ನಾಲ್ಕು ದಶಕಗಳೇ ಕಳೆದಿದ್ದರೂ ಪ್ರಸಂಗಾನಂತರದಲ್ಲಿ ವಿವೇಚನೆಯು ಎಸೆದ ಪ್ರಶ್ನೆಗಳಿಗೆ ಉತ್ತರ ನನಗೆ ಇನ್ನೂ ಸ್ಪಷ್ಟವಾಗಿಲ್ಲ. ಅದು ನಡೆದದ್ದು ಹೀಗೆ:

ನಿಮಗೆ ಗೊತ್ತಿರಬೇಕಲ್ಲ, ಆಗ ಟ್ರೈನಿನಲ್ಲಿ ಮೂರು ದರ್ಜೆಗಳಿದ್ದವು. ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್ ಮತ್ತು ಆರ್ಡಿನರಿ ಕ್ಲಾಸ್ ಎಂದು. ಆಗ ನಾನು ರಾಯಚೂರಿನ ಕರ್ನಾಟಕ ಸಂಘದ ಕಾರ್ಯದರ್ಶಿ. ಬಿಸಿ ರಕ್ತದ ತರುಣ. ಮುಂಬೈಯಲ್ಲಿ

ನೆಲಸಿದ್ದ ಖ್ಯಾತ ಕನ್ನಡ ಸಾಹಿತಿಯೋರ್ವರನ್ನು ಸಂಘದ ಉಪನ್ಯಾಸಮಾಲಿಕೆಯ ಭಾಷಣವೊಂದಕ್ಕೆ ಆಹ್ವಾನಿಸಿದ್ದೆವು. ಭಾಷಣ ಮುಗಿಸಿ ಸಾಹಿತಿಗಳು ಊರಿಗೆ ಹೊರಟುನಿಂತರು ಮುಂಬೈಗಲ್ಲ, ರಾಯಚೂರಿನಿಂದ ಕೆಲವೇ ಕಿಲೋಮೀಟರ್ ದೂರದಲ್ಲಿರುವ ಮಂತ್ರಾಲಯಕ್ಕೆ. ಅಲ್ಲಿಂದ ಹಾಗೇ ಮುಂಬೈ ಕಡೆಗೆ ತಾವು ಪ್ರಯಾಣ ಬೆಳೆಸುವುದಾಗಿ ಅವರು ನಮಗೆ ಮೊದಲೇ ತಿಳಿಸಿದ್ದರಿಂದ ಅವರಿಗೆ ನಾವು ಮುಂಬೈಗೆ ಟಿಕೆಟ್ಟನ್ನು ತೆಗೆಸಿರಲಿಲ್ಲ. ಬದಲಾಗಿ ಗೌರವಧನವೆಂದು ಕವರಿನಲ್ಲಿ ಹಣವಿಟ್ಟು ಕೊಡಹೋದರೆ, ಗುರುಗಳ ಸೇವೆಯ ಪುಣ್ಯವನ್ನೆಲ್ಲ ನೀವೇ ತೆಗೆದುಕೊಂಡರೆ ಹೇಗೆ? ನನಗೂ ಪುಣ್ಯ ಬರಲಿ ಬಿಡಿ. ಮಂತ್ರಾಲಯಂ ರೋಡ್‌ವರೆಗೆ ತಿಕೀಟು ತೆಗೆಸಿಕೊಡಿ ಸಾಕು,"ಎಂದು ನಮ್ಮ ಬಾಯಿ ಮುಚ್ಚಿಸಿದರು.

ರಾಯಚೂರು ಬಿಟ್ಟರೆ ಟ್ರೈನು ನಿಲ್ಲುವುದೇ ಮಂತ್ರಾಲಯಂ ರೋಡ್ ಸ್ಟೇಷನ್‌ನಲ್ಲಿ (ಅಲ್ಲಿಂದ ಮಂತ್ರಾಲಯಕ್ಕೆ ಬಸ್‌ನಲ್ಲಿ ಹೋಗಬೇಕು. ಆಗಿನ್ನೂ ರಾಯಚೂರಿನಿಂದ ಮಂತ್ರಾಲಯಕ್ಕೆ ನೇರ ಬಸ್ ಆಗಿರಲಿಲ್ಲ.) ಸಾಹಿತಿಗಳನ್ನು ರೇಲ್ವೆ ಸ್ಟೇಷನ್‌ಗೆ ಕರೆದುಕೊಂಡು ಹೋದೆ. ಟಿಕೆಟ್ ತೆಗೆಸಲು ನಾನು ಜೇಬಿಗೆ ಕೈಹಾಕಿ ನೂರರ ನೋಟನ್ನು ಹೊರತೆಗೆದದ್ದನ್ನು ನೋಡಿ ಸೂಕ್ಷ್ಮಮತಿಗಳಾದ ಸಾಹಿತಿಗಳು, "ಆರ್ಡಿನರಿ ಕ್ಲಾಸೇ ಸಾಕಪ್ಪಾ, ಇಲ್ಲಿಂದಿಲ್ಲಿಗೆ ಫಸ್ಟ್ ಕ್ಲಾಸು, ಸೆಕೆಂಡ್ ಕ್ಲಾಸು ಯಾಕೆ? ದುಡ್ಡು ವ್ಯರ್ಥ," ಅಂದರು. ಆದರೆ ನನ್ನ ಮನಸ್ಸು ಕೇಳೀತೇ? ನಮ್ಮ ಅತಿಥಿಗಳಾದ ಸಾಹಿತಿಗಳನ್ನು ಆರ್ಡಿನರಿ ಕ್ಲಾಸ್‌ನಲ್ಲಿ ಕಳಿಸಿಕೊಡುವದೆಂದರೆ ಏನು? ಆದರೆ....., ಅವರು ಆರ್ಡಿನರಿ ಕ್ಲಾಸೇ ತೆಗೆಸೆಂದು ಅಪ್ಪಣೆ ಮಾಡಿಬಿಟ್ಟಿದ್ದಾರಲ್ಲಾ! ಏನು ಮಾಡುವುದು? ಎಂದು ಯೋಚಿಸಿ ಕೊನೆಗೆ, ಫಸ್ಟ್ ಕ್ಲಾಸ್ ತೆಗೆಸುತ್ತಿದ್ದವನು ಅದನ್ನು ಬಿಟ್ಟು ಸೆಕೆಂಡ್ ಕ್ಲಾಸ್ ಟಿಕೆಟ್ ತೆಗೆಸಿದೆ. ಅದಕ್ಕೂ ಅವರು, "ಸುಮ್ಮನೆ ದುಡ್ಡು ದಂಡ," ಎಂದಾಗ, ನಮ್ಮ ಸರ್ಕಾರಕ್ಕೇ ತಾನೇ ಹೋಗಿ ಸೇರುವುದು ಈ ದುಡ್ಡು ಅಂತ ಒಂದು ಜಾಣ್ಮೆಯ ಮಾತಸೆದು ಅವರನ್ನು ಸುಮ್ಮನಾಗಿಸಿಬಿಟ್ಟೆ.

ಟ್ರೈನು ಬಂತು. ಕಣ್ಣಿಗೆ ಕಂಡ ಮೂರೋ ನಾಲ್ಕೋ ಸೆಕೆಂಡ್ ಕ್ಲಾಸ್ ಬೋಗಿಗಳಲ್ಲಿ ಒಂದನ್ನುಳಿದು ಇನ್ನೆಲ್ಲವೂ ರಿಜರ್ವ್ ಎಂಬ ಫಲಕ ಹೊತ್ತಿದ್ದವು. ಟ್ರೈನಿನ ಆರಂಭಿಕ ಸ್ಥಳದಿಂದ ಕೊನೆಯ ಸ್ಥಳದವರೆಗೆ ಪ್ರಯಾಣಿಸುವವರಿಗಾಗಿ ಕಾದಿರಿಸಿದ ಬೋಗಿಗಳಿರಬೇಕು ಅವು. ಉಳಿದೊಂದು ಬೋಗಿಯ ಕಡೆಗೆ ನಡೆದೆ. ಸಾಹಿತಿಗಳು ನನ್ನನ್ನು ಹಿಂಬಾಲಿಸಿದರು. ಆ ಬೋಗಿಯನ್ನು ತಲುಪಿ ಬಾಗಿಲು ತೆಗೆಯಲು ಕೈಹಾಕಿದಾಗ ಒಳಗಿನಿಂದ ಕರ್ಕಶವಾಗಿ "ಯೇ ರಿಸರ್ವ್ಡ್ ಹೈ; ಆಗೇ ಚಲೋ," ಎಂಬ ಕೂಗು ಕೇಳಿಬಂತು. ದಿಗಿಲುಗೊಂಡು ಒಳಕ್ಕೆ ದೃಷ್ಟಿ ಹಾಯಿಸಿದೆ. ಹತ್ತಾರು ಮಂದಿ ಸಮವಸ್ತ್ರ ಧರಿಸಿದ ಮಿಲಿಟರಿ ಸಿಪಾಯಿಗಳ ಹೊರತು ಮತ್ತಾರೂ ಇರಲಿಲ್ಲ. ಅವರ 'ರಿಸರ್ವ್ಡ್'ನ ಅರ್ಥ ನನಗಾಯಿತು. ನನ್ನ ಬಳಿ ಇದ್ದ ಟಿಕೆಟ್ಟನ್ನು ಅವರಿಗೆ ತೋರಿಸುತ್ತಾ, "ಹಮಾರೇ ಪಾಸ್ ಸೆಕೆಂಡ್ ಕ್ಲಾಸ್ ಕಾ ಹೀ ಟಿಕೆಟ್ ಹೈ ಭಾಯಿ," ಅಂದೆ. "ನೈ ಚಲೇಗಾ. ಯೇ ಆರ್ಮಿ ಕೇ ಲಿಯೇ ರಿಸರ್ವ್ಡ್ ಹೈ,"ಎಂದು ಗುಂಡುಹೊಡೆದಂತೆ ಉತ್ತರ ಬಂತು. ಅವರೆಂದಂತೆ ಸೈನಿಕರಿಗಾಗಿ, ಅದೂ ಆ ಹತ್ತಾರು ಮಂದಿ ಮಾತ್ರರಿಗಾಗಿ, ಇಡೀ ಬೋಗಿಯೇ ಕಾದಿರಿಸಲ್ಪಟ್ಟಿಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಅವರ ಮಾತಿಗೆ ನಾನು ಸೊಪ್ಪು ಹಾಕಲಿಲ್ಲ. ಬಾಗಿಲನ್ನು ಜೋರಾಗಿ ಅಲುಗಾಡಿಸತೊಡಗಿದೆ. ಒಳಗಿನಿಂದ ಕೀಲಿ ಹಾಕಿದ್ದ ಅವರು ಬಾಗಿಲು ತೆರೆಯುವ ಬದಲು ಏಕಕಂಠದಲ್ಲಿ, ಏರಿದ ಧ್ವನಿಯಲ್ಲಿ ನನ್ನನ್ನು ವಾಚಾಮಗೋಚರವಾಗಿ ಬಯ್ಯತೊಡಗಿದರು. ಅವರ ಒಂದೊಂದೂ ಬಯ್ಗಳವನ್ನೂ ಕೇಳಿದಂತೆ ನನ್ನ ಜಿದ್ದೂ ಹೆಚ್ಚಾಗತೊಡಗಿತು. (ಪಕ್ಕದಲ್ಲಿ ಅತಿಥಿ-ಖ್ಯಾತ ಸಾಹಿತಿ ಬೇರೆ. ಮರ್ಯಾದೆಯ ಪ್ರಶ್ನೆ.) ಬಾಗಿಲನ್ನು ಇನ್ನಷ್ಟು ಜೋರಾಗಿ ಅಲುಗಿಸತೊಡಗಿದೆ. ಅವರಿಗೂ ಜಿದ್ದು ಹತ್ತಿತು. ಕುಳಿತಲ್ಲಿಂದ ಒಂದಿಂಚೂ ಮಿಸುಕದೆ ತಮ್ಮ ಬಯ್ಗಳವನ್ನು ಇನ್ನಷ್ಟು ಜಾಸ್ತಿ ಮಾಡಿದರು. ಗಲಾಟೆ ಕೇಳಿ ನನ್ನ ಸುತ್ತ ಜನ ಜಮಾಯಿಸಿದರು. ಇದನ್ನೆಲ್ಲ ಕಂಡು ಕಸಿವಿಸಿಗೊಂಡ ಸಾಹಿತಿಗಳು ಅದೊಂದು ಬಗೆಯ ದೈನ್ಯಭಾವದಿಂದ ನನ್ನನ್ನುದ್ದೇಶಿಸಿ, "ಹೋಗ್ಲಿ ಬಿಟ್ಬಿಡಪ್ಪಾ, ಮತ್ತಾವುದಾದರೂ ಖಲ್ಲಾ ಇದ್ದ ಡಬ್ಬೀಗೆ

ಹತ್ತತೇನಿ. ಆರ್ಡಿನರಿ ಕ್ಲಾಸ್ ಆದ್ರೂ ಪರವಾಗಿಲ್ಲ. ಸುಮ್ಮನೆ ಜಗಳವೇಕೆ?" ಅಂದರು. ಆದರೆ ನಾನೀಗ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಸುಮ್ಮನಿರುವಂತೆ ಅವರಿಗೆ ಕಣ್ಣಿನಲ್ಲೇ ಸನ್ನೆ ಮಾಡಿ ಬಾಗಿಲು ಎಳೆಯುವದನ್ನು ಮುಂದುವರಿಸಿದೆ. ನನ್ನ ಜಿದ್ದನ್ನೂ, ಸುತ್ತಲೂ ಜನ ಸೇರಿರುವುದನ್ನೂ ಗಮನಿಸಿದ ಸಿಪಾಯಿಗಳು ಎದ್ದುಬಂದು ಬಾಗಿಲು ತೆರೆದರು. ಒಳನುಗ್ಗಿದ ನನ್ನನ್ನು ಹಿಡಿದು ನಿಲ್ಲಿಸಿ ದಬಾಯಿಸತೊಡಗಿದರು! ಅವರು ದಬಾಯಿಸುತ್ತಿದ್ದಂತೆಯೇ ನಾನು ನನ್ನ ಕೈಲಿದ್ದ ಟಿಕೆಟ್ಟನ್ನು ಸಾಹಿತಿಗಳ ಕೈಗೆ ತುರುಕಿ ಅವರನ್ನು ಒಳಕ್ಕೇರಿ ಬರುವಂತೆ ಕೇಳಿಕೊಂಡೆ. 'ಮುಂದಿನ ಸ್ಟೇಶನ್‌ವರೆಗೆ ಮಾತ್ರ', 'ಇವರು ಇಂಥವರು-ಖ್ಯಾತರು', ಎಂದು ಸಿಪಾಯಿಗಳಿಗೆ ತಿಳಿಹೇಳಬೇಕೆನ್ನಿಸಿದರೂ ಮರುಘಳಿಗೆಯೇ 'ಯಾಕೆ ಹೇಳಬೇಕು?' ಎಂಬ ಪ್ರತಿಷ್ಠೆ-ಕಾನೂನು ಎದುರಾಗಿ ಅದೇನೂ ಹೇಳಲಿಲ್ಲ. "ನೀವು ಕೂತ್ಕೊಳ್ಳಿ ಸಾರ್, ಬನ್ನಿಎಂದು ಸಾಹಿತಿಗಳಿಗೆ ಮತ್ತೊಮ್ಮೆ ಹೇಳಿದೆ. ಸಿಪಾಯಿಗಳಲ್ಲೊಬ್ಬರು ನನ್ನ ಕತ್ತುಹಿಡಿದು ನೂಕಲಾರಂಭಿಸಿದರು. ಟ್ರೈನು ಚಲಿಸತೊಡಗಿತು.

ಇನ್ನೇನು ಮಾಡಲಿ? ಕೆಳಕ್ಕಿಳಿದುಬಿಡಬೇಕು, ಅಷ್ಟೆ. ಅಲ್ಲವೆ? ಆದರೆ ನಾನು ಹಾಗೆ ಮಾಡಲಿಲ್ಲ. ಸೊಕ್ಕಿದ ಗೂಳಿಯಂತೆ ಒಳನುಗ್ಗಿ ಒಂದೇ ಪಟ್ಟಿಗೆ ಚೈನಿಗೆ ಕೈಹಾಕಿ ಎಳೆದುಬಿಟ್ಟೆ. ಒಂದಷ್ಟು ದೂರ ಚಲಿಸಿದ್ದ ಟ್ರೈನು ಕಿರ್ರ್ ಎನ್ನುತ್ತ ನಿಂತುಬಿಟ್ಟಿತು. ಕೆಳಗೇ ಇದ್ದ ಸಾಹಿತಿಗಳು ಓಡೋಡಿ ನನ್ನ ಬಳಿ ಬಂದರು. ತಮಾಷೆ ನೋಡುವ ಜನರೂ ಓಡಿ ಬಂದರು. ಇಷ್ಟಾದರೂ ಸಿಪಾಯಿಗಳು ಜಗ್ಗಲಿಲ್ಲ. ಮತ್ತೆ ನನ್ನನ್ನು ಕೆಳಕ್ಕೆ ನೂಕತೊಡಗಿದರು. ನಾನು ಕೊಸರಾಡತೊಡಗಿದೆ.

ಹೀಗೇ ಒಂದೆರಡು ನಿಮಿಷ ಕಳೆದಿರಬೇಕು. ಅಷ್ಟರಲ್ಲಿ ಗಾರ್ಡ್ ಬಂದ. ಅವನಿಗೆ ನಾನು ವಿಷಯ ವಿವರಿಸಿದೆ. ಅವನು ನಮ್ರತೆಯಿಂದ ಸಿಪಾಯಿಗಳಿಗೆ ಹೇಳಿದ. ಆದರೆ ಅವರು ಅವನಿಗೂ ಏನೇನೋ ಉಡಾಫೆಯ ಉತ್ತರ ನೀಡಿದರು. ಅವನು ಅಸಹಾಯಕನಂತೆ ನನ್ನತ್ತ ದೃಷ್ಟಿ ಬೀರಿ, "ಬೇರೆ ಕಡೆ ಸೀಟ್ ಮಾಡಿಸಿಕೊಡುತ್ತೇನೆ, ಟಿ.ಟಿ.ಇ.ಗೆ ಹೇಳಿ ವ್ಯವಸ್ಥೆ ಮಾಡುತ್ತೇನೆ, ಬನ್ನಿ



ಏನೇಪ್ಪಾ! ನಿಮಗೆ ಯಾವತ್ತೂ ರಜೇನೇ ಇಲ್ವಾ?!

ಸಾರ್," ಎಂದ. ಆದರೆ ಅವನ ಮಾತಿಗೆ ನಾನೇಕೆ ಒಪ್ಪಲಿ? ಒಪ್ಪಲಿಲ್ಲ. ಈ ಬೋಗಿಯಲ್ಲೇ ಏಕೆ ಸೀಟು ದೊರೆಯಬಾರದೆಂದು ನನ್ನ ಹಕ್ಕೊತ್ತಾಯವನ್ನು ಮಂಡಿಸಿದೆ. ಒಂದು ನಿಮಿಷ ಮೌನವಾಗಿ ನಿಂತ ಗಾರ್ಡ್ ಏನೂ ಉತ್ತರಿಸದೆ ಹೊರಟು ಹೋದ. ನಾನೂ ಸಿಪಾಯಿಗಳೂ ವೈರಿ ಹುಲಿಗಳಂತೆ ಮುಖ ಮುಖ ದಿಟ್ಟಿಸುತ್ತ ನಿಂತೆವು. ಮತ್ತೊಂದು ನಿಮಿಷ. ಟ್ರೈನ್ ಮತ್ತೆ ಚಲಿಸತೊಡಗಿತು.

ಮತ್ತೆ ನಾನು ಮುನ್ನುಗ್ಗಿ ಸರಪಳಿ ಎಳೆದೆ. ಪುನಃ ಟ್ರೈನು ಕಿರ್ರ್ ಎಂದು ಸದ್ದು ಮಾಡುತ್ತ ಸ್ಟಿಲ್ ಆಯಿತು. ಪುನಃ ಗಾರ್ಡ್ ಧಾವಿಸಿ ಬಂದ. ನನ್ನ ಆಶ್ಚರ್ಯಕ್ಕೆ ಈ ಸಲ ನನ್ನನ್ನೇ ದಬಾಯಿಸತೊಡಗಿದ! ಹೀಗೆಲ್ಲ ಎರಡೆರಡು ಸಲ ಚೈನ್ ಎಳೆದರೆ ದಂಡ ತೆರಬೇಕಾಗುತ್ತಲ್ಲದೆ ಜೈಲಿಗೆ ಹೋಗಬೇಕಾಗುತ್ತದೆ ಎಂದು ಹೆದರಿಸಿದ! ನನಗೆ ಕೋಪ ನೆತ್ತಿಗೇರಿತು. ಗಾರ್ಡನ್ನೂ ಸಿಪಾಯಿಗಳನ್ನೂ ಅಲ್ಲಿ ಸೇರಿದ್ದ ಜನಗಳನ್ನೂ ಉದ್ದೇಶಿಸಿ ಏರಿದ ಸ್ವರದಲ್ಲಿ ಒದರತೊಡಗಿದೆ,

"ಅದು ಹ್ಯಾಗೆ ಇಲ್ಲಿ ಸೀಟು ಕೊಡೋಲ್ಲ, ನೋಡ್ತೇನಿ. ಇವ್ರಿಗೇನು ಈ ಇಡೀ ಬೋಗಿ ರಿಸರ್ವ್ ಆಗಿದೆಯೇನು? ಬರ್ಲಿ ಟಿ.ಟಿ.ಇ. ಕೇಳ್ತೇನಿ,

ಮಿಲಿಟರಿ ಅಂತ ಏನು ಮಾಡಿದರೂ ನಡೆಯುತ್ತೆ ಅಂದ್ಕೊಂಡಿದಾರೇನು ಈ ನನ್ಮಕ್ಳು? ಇವರ ಈ ದುಂಡಾವರ್ತಿ ವಿಷಯ ತಿಳಿದರೆ ಇವರ ಮೇಲಧಿಕಾರಿಗಳೇ ಇವರನ್ನ ಬಲಿ ಹಾಕ್ತಾರೆ, ಗೊತ್ತೇನು? ನಾನು ಕಂಪ್ಲೇಂಟ್ ಮಾಡ್ತೀನಿ, ಬಿಡಲ್ಲ. ನಾನು ಒಂದು ಸಂಸ್ಥೆ ಪರವಾಗಿ ಬಂದಿದೀನಿ. ವಿ.ಐ.ಪಿ. ಒಬ್ರನ್ನ ಕರೆದುಕೊಂಡು ಬಂದಿದೀನಿ. ಏನಾದ್ರೂ ಹೆಚ್ಚುಕಮ್ಮಿ ಆದ್ರೆ ಹೊರಗಡೆ ನನಗೆ ನೂರಾರು ಜನ ಇದಾರೆ. ಅವರೇ ಮುಂದಿನದನ್ನೆಲ್ಲ ನೋಡ್ಕೋತಾರೆ. ನಾನು ಈ ಜಾಗ ಬಿಟ್ಟು ಕದಲೋದೂ ಇಲ್ಲ, ಇವರು ಸೀಟು ಕೊಡೋವರೆಗೂ ಚೈನ್ ಎಳೆಯೋದನ್ನ ನಿಲ್ಲಿಸೋದು ಇಲ್ಲ. ಅದೇನಾಗುತ್ತೋ ಆಗಿಹೋಗ್ಲಿ ಇವತ್ತು".

ಇಷ್ಟು ನಾನು ಕೂಗಿದೆನೋ ಇಲ್ಲವೋ ಸಿಪಾಯಿಗಳು ಕಳೆಗುಂದಿದರು! ಹೊರಗಡೆ ಇದ್ದ ಜನರಲ್ಲಿ ಹಲವರು ನನ್ನ ಪರವಾಗಿ ಮಾತಾಡತೊಡಗಿದರು. ಇದನ್ನು ಕಂಡು ಸಿಪಾಯಿಗಳು ಸಂಪೂರ್ಣ ನರಂ ಆಗಿಬಿಟ್ಟರು!

"ಆಯಿಯೇ ಸಾಬ್. ಬಿಠಾಯಿಯೇ ಆಪ್‌ಕಾ ಗೆಸ್ಟ್‌ಕೋ," ಎಂದು ಆಹ್ವಾನ ನೀಡಿದರು! ಒಮ್ಮೆಲೆ ಅದೆಂಥಾ ಬದಲಾವಣೆ!

"ಕೂರ್‍ಲಿ ಸಾರ್ ನಿಮ್ಮೋರ್‍ನ. ಟೈಮ್ ಈಸ್ ರನ್ನಿಂಗ್ ಔಟ್," ಅಂತ ಗಾರ್ಡ್ ಸಹ ವಿನಂತಿಸಿಕೊಂಡ. ಅಷ್ಟರಲ್ಲಾಗಲೇ ಅಲ್ಲಿ ಬಂದು ನಿಂತ್ಕಿದ್ದ ಟಿ.ಟಿ.ಇ. ಕೂಡ ಸಹಮತವೆಂಬಂತೆ ಗೋಣಲ್ಲಾಡಿಸಿದ.

"ಬನ್ನಿ, ಕೂತ್ಕೊಳ್ಳಿ" ಅಂತ ನಾನು ತಿರುಗಿ ನೋಡಿದರೆ, ಎಲ್ಲಿ ನನ್ನ ಗೆಸ್ಟು? ನಾಪತ್ತೆ! ಜನಸಂದಣಿಯ ಕಡೆಗೆ ಕಣ್ಣಾಡಿಸಿದೆ. ಸಾಹಿತಿಗಳು ಅಲ್ಲೂ ಕಾಣಿಸಲಿಲ್ಲ. ಎಲ್ಲಿ ಹೋದರೋ?!

ಗಾರ್ಡು, ಟಿ.ಟಿ.ಇ. ಇಬ್ಬರೂ ಅವಸರಪಡಿಸತೊಡಗಿದರು. ನನಗೆ ಪೀಕಲಾಟಕ್ಕಿಟ್ಟುಕೊಂಡಿತು. ಇಷ್ಟು ಹೊತ್ತೂ ಇವರಿಗಾಗಿಯೇ ಜಿದ್ದುಹಿಡಿದು ಹೋರಾಡಿ ಗೆದ್ದೆನೆನ್ನುವಾಗ ಇವರೇ ನಾಪತ್ತೆ! ನನಗೆ ಹೇಗಾಗಬೇಡ?! ಟ್ರೈನನ್ನು ಇನ್ನೂ ನಿಲ್ಲಿಸಿಕೊಂಡು ಹುಡುಕುವುದು ಸಾಧ್ಯವೇ? ಸರಿಯೆ? ಗಾರ್ಡು, ಟಿ.ಟಿ.ಇ. ಇಬ್ಬರೂ ತಲಾ ಒಂದೊಂದು (ಕೆನ್ನೆಗೆ) ಬಿಟ್ಟಾರು!

ಕಣ್ಣಿಗೆ ಕಾಣುವಷ್ಟು ಏರಿಯಾವನ್ನೆಲ್ಲಾ ನಿಂತಲ್ಲಿಂದಲೇ ಜಾಲಾಡಿ ಹತಾಶನಾಗಿ ಟ್ರೈನಿಂದ ಕೆಳಕ್ಕಿಳಿದೆ. 'ಹೊರಡಿ' ಎಂದು ಗಾರ್ಡ್‌ಗೆ ಸಪ್ಪೆ ಮುಖದಿಂದಲೇ ಸನ್ನೆ ಮಾಡಿದೆ. ಮುಂದಿನ ಒಂದು ನಿಮಿಷ ನನಗೆ, ಅಲ್ಲಿದ್ದ ಎಲ್ಲರೂ ನನ್ನನ್ನು ನೋಡಿ ನಗುತ್ತಿರುವಂತೆ ಭಾಸವಾಯಿತು. ಸಿಪಾಯಿಗಳು ಕೇಕೆಹಾಕಿ ನಗುತ್ತಿದ್ದುದಂತೂ ಸುಳ್ಳಲ್ಲ. ನಾನು ಸುಮ್ಮನೆ ಪಿಳಿಪಿಳಿ ನೋಡುತ್ತ ನಿಂತೆ. ಟ್ರೈನು ಚಲಿಸಲಾರಂಭಿಸಿತು.

ಒಂದೊಂದೇ ಬೋಗಿ ನನ್ನ ಕಣ್ಣಮುಂದೆ ಪಾಸ್ ಆಗತೊಡಗಿತು. ನಾನು ಗರಬಡಿದವನಂತೆ ನೋಡುತ್ತ ನಿಂತಿದ್ದೆ. ಒಂದರ ಹಿಂದೆ ಒಂದು ಬೋಗಿ ನನ್ನ ದೃಷ್ಟಿಯಿಂದ ಮರೆಯಾಗುತ್ತ ಸಾಗಿ ಕೊನೆಯ ಬೋಗಿ ನನ್ನ ಕಣ್ಣಿಗೆ ಬೀಳುತ್ತಲೇ, ಅರೆ! ಓವರ್‌ಲೋಡ್ ಆಗಿರುವ ಈ ಮೂರನೇ ದರ್ಜೆಯ ಬೋಗಿಯ ಬಾಗಿಲಿನಲ್ಲಿ, ಹತ್ತಾರು ಜನ ನೇತಾಡುತ್ತಿರುವವರ ಮಧ್ಯೆ ನಮ್ಮ ಸಾಹಿತಿವರ್ಯರು ಬಾಗಿಲಿನ ಕಂಬಿ ಹಿಡಿದು ಜೋತಾಡುತ್ತಿದ್ದಾರೆ! ನನ್ನನ್ನು ಅವರು ಗಮನಿಸದೇ ಇದ್ದರೂ ಅವರ ಮುಖ ಮಾತ್ರ ನನಗೆ ಸ್ಪಷ್ಟವಾಗಿ ಕಂಡಿತು. ಏದುಸಿರು ಬಿಡುತ್ತಿದ್ದ ಅವರ ಮುಖದಲ್ಲಿ ಗೆಲುವಿನ ಕಳೆ ಇತ್ತು.

ಗಾಂಧೀಜಿ ಅನ್ಯಾಯದ ವಿರುದ್ಧ ದಕ್ಷಿಣ ಆಫ್ರಿಕದಲ್ಲಿ ಹೋರಾಟ ನಡೆಸಿ ಅನೇಕ ಬಾರಿ ತುರಂಗವಾಸ ಅನುಭವಿಸಿದ ವಿಷಯ ಎಲ್ಲರಿಗೂ ಗೊತ್ತಿದೆ. ಕಾರಾಗೃಹದಲ್ಲಿದ್ದಾಗ ತಾವೇ ಸ್ವತಃ ತಯಾರಿಸಿದ ಪಾದರಕ್ಷೆಗಳನ್ನು ಅವರು ಜನರಲ್ ಸ್ಮಟ್ಸ್‌ರವರಿಗೆ ಉಡುಗೊರೆಯಾಗಿ ಕೊಟ್ಟರು. ಸ್ಮಟ್ಸ್‌ರವರಿಗೆ ಗಾಂಧೀಜಿಯನ್ನು ಕಂಡರೆ ಆಂತರ್ಯದಲ್ಲಿ ಮೆಚ್ಚುಗೆ. 'ಈ ಮಹಾನ್ ವ್ಯಕ್ತಿಯ ಪಾದರಕ್ಷೆಯನ್ನು ನಾನು ಮೆಟ್ಟಿಕೊಳ್ಳುವುದಕ್ಕೆ ಯೋಗ್ಯನೆ?' ಎನ್ನಿಸುತ್ತದೆ ಎಂದು ಅವರು ಹೇಳಿದ್ದುಂಟು.

(ಆಧಾರ) ✤ ಎಚ್.ಎಸ್.ಎನ್.

ಕನ್ನಡದ ವಿಶಿಷ್ಟ ಮಹಿಳೆ

'ವಿಚಿತ್ರ' ಯೇತಡ್ಕ

✷ ಡಾ. ಹರಿಕೃಷ್ಣ ಭರಣ್ಯ


ಶ್ರೀಯುತ ಯೇತಡ್ಕ ಸುಬ್ರಾಯ ಭಟ್ಟ ಮತ್ತು ಶ್ರೀಮತಿ ಲಕ್ಷ್ಮಿಅಮ್ಮ ದಂಪತಿಗಳು ತಮ್ಮ ಮಗನಿಗಿಟ್ಟ ಹೆಸರು ಹರಿಹರಭಟ್ಟ ಎಂದಾದರೆ, ಆತ್ಮೀಯ ಬಂಧುಗಳು, ಊರ ಮಿತ್ರರಿಗೆಲ್ಲಾ ಅವರು ರಂಗಣ್ಣ. ಈ ವ್ಯಕ್ತಿ ಬರಹಗಾರರಾಗಿ ಬೆಳೆಯುತ್ತಿರುವಂತೆ ತಾವೇ ಕರೆದುಕೊಂಡ ಹೆಸರು 'ವಿಚಿತ್ರ'. ಹೀಗೆ ಅವರು ವಿಚಿತ್ರ ಯೇತಡ್ಕ ಎಂಬ ಹೆಸರಿನಿಂದ ಕನ್ನಡ ಸಾಹಿತ್ಯಲೋಕದಲ್ಲಿ ಪ್ರಸಿದ್ಧರು.

ವಿಚಿತ್ರರನ್ನು ನಾನು ಎಷ್ಟೋ ಸಮಯದಿಂದ ಬಲ್ಲೆನೆನ್ನುವುದಕ್ಕಿಂತ ಅವರು ನನ್ನನ್ನು ಹೆಚ್ಚು ಬಲ್ಲರು ಎಂಬುದು ಸತ್ಯಸ್ಯಸತ್ಯ. ಏಕೆಂದರೆ, ನಾನು ಹುಟ್ಟುವ ಸಮಯಕ್ಕಾಗಲೇ ವಿಚಿತ್ರರು ಪತ್ರಿಕಾ ವರದಿಗಾರರಾಗಿಯೂ ಸಾಹಿತಿಯಾಗಿಯೂ ಹೆಸರು ಮಾಡಿದ್ದರು. ಚಿಕ್ಕಂದಿನಲ್ಲಿ, ಅವರ ವಿಚಿತ್ರವೆಂಬ ಹೆಸರನ್ನು ನಾನೆಷ್ಟೋ ಬಾರಿ ವಿಚಿತ್ರವೆಂಬಂತೆ ನೋಡಿದ್ದರೂ, ಅವರನ್ನು ಕಂಡಮೇಲೆ ಇವರು ವಿಚಿತ್ರರೇ ಎಂಬುದಾಗಿ ತೀರ್ಮಾನಿಸಿದ್ದೆ. ಕಾರಣ, ನಾನು ಕಂಡಿದ್ದ ಇತರ ಸಾಹಿತಿಗಳಂತಲ್ಲ, ಬದಲಾಗಿ ಅವರು ತೀರಾ ಸರಳ ಸೀದಾ ಸಾದಾ ವ್ಯಕ್ತಿ. ಅವರು ಹೇಳುವುದನ್ನೇ ಮಾಡುತ್ತಾರೆ; ಮಾಡಿದ್ದನ್ನೇ ಬರೆಯುತ್ತಾರೆ. ಹೊರತಾಗಿ ಕಲ್ಪನೆಯ ಭ್ರಮೆಗಳ ಬೂಟಾಟಿಕೆಯ ವ್ಯಕ್ತಿ ಅವರಲ್ಲ. ಅವರ ಬರೆಹಗಳೆಲ್ಲ ಸ್ವಂತ ಅನುಭವಗಳೇ... ಹೀಗೆ ಅವರು ವಿಚಿತ್ರರು.

೧೯೨೫ನೇ ಇಸವಿಯ ಜುಲೈ ತಿಂಗಳ ಎರಡನೇ ತಾರೀಖಿನಂದು ಜನಿಸಿದ ಹರಿಹರಭಟ್ಟರು ಕಲಿತದ್ದು ಪಕ್ಕದ ಯೇತಡ್ಕ ಶಾಲೆಯಲ್ಲಿ-ಐದನೆಯ ತರಗತಿಯವರೆಗೆ ಮಾತ್ರವೇ.

ಅವರಿಗೆ ಹಿಂದಿನ ತಲೆಮಾರುಗಳಿಂದ ರಕ್ತಗತವಾಗಿ ಬಂದುದು ಅಡಿಕೆ-ಭತ್ತದ ಕೃಷಿ. ಸ್ವಪ್ರಯತ್ನದಿಂದ ಕಲಿತದ್ದು ಕನ್ನಡದೊಂದಿಗೆ ಸಂಸ್ಕೃತ, ಇಂಗ್ಲೀಷು ಮಲಯಾಳಗಳನ್ನು. ನಡೆಸಿದ್ದು ಕನ್ನಡ ಸಾಹಿತ್ಯ ಕೃಷಿಯನ್ನು. ಅದು ಹೇಗೆ ಕೃಷಿ ಹಾಗೂ ಸಾಹಿತ್ಯ ಕೃಷಿಗಳು ಒಂದಕ್ಕೊಂದು ಹೊಂದಿಕೊಂಡು ಸಮರಸವಾಗಿ ಬೆಳೆಯಿತೋ ನಾ ಕಾಣೆ. ದೊಡ್ಡದಾದ ಅವಿಭಕ್ತ ಕುಟುಂಬದಲ್ಲಿ ಹುಟ್ಟಿ ಬೆಳೆದ ವಿಚಿತ್ರರಿಗೆ ಮಾನವ ಸಹಬಾಳ್ವೆ, ಸಹಜ ಪ್ರೀತಿ, ವಾತ್ಸಲ್ಯ, ಆತ್ಮೀಯತೆಗಳೆಂದರೇನೆಂಬುದು ಮನೆ ಪಾಠ. ಮನೆಯಲ್ಲಿ ಹಾಗೂ ಗದ್ದೆ-ಅಡಿಕೆ ತೋಟಗಳಲ್ಲಿ ಅವರು ಕಲಿತದ್ದು ಅಪಾರ; ಶ್ರಮ ಹಾಗೂ ಬುದ್ಧಿ ಎರಡು ಕೈಗಳಿದ್ದಂತೆ ಬೆಳೆದು ಬಂದವರು ಅವರು.

ವಿಚಿತ್ರರು ಹುಟ್ಟಿದಾಗ ಭಾರತವಿನ್ನೂ ಸ್ವತಂತ್ರವಾಗಿರಲಿಲ್ಲ. ಪಾರತಂತ್ರ್ಯವೆಂದರೇನು-ಹೇಗೆ, ಎಂಬುದು ಅವರಿಗೆ ನಿಖರವಾಗಿ ಗೊತ್ತು. ಜೊತೆಗೆ ಅವರಿಗೆ ಆಧುನಿಕ ಕನ್ನಡ ಸಾಹಿತ್ಯವು ನಡೆದು ಬಂದ ದಾರಿಯೂ ಗೊತ್ತು. ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ ಹಾಗೂ ನವ್ಯೋತ್ತರ ಹೀಗೆ ಹೊಸಗನ್ನಡ ಸಾಹಿತ್ಯದ ಮೆಟ್ಟಲುಗಳನ್ನು ಕಣ್ಣೆದುರಿನಲ್ಲಿ ಕಂಡು ಅರಗಿಸಿಕೊಂಡು ತಮ್ಮದ್ದೇ ಸಾಹಿತ್ಯ ಕೃಷಿಯನ್ನು ನಡೆಸಿದವರು ಅವರು. ಸಾಹಿತ್ಯದಲ್ಲಿ ಅವರಿಗೆ ತಮ್ಮದ್ದೇ ಆದ ಹಣೆಪಟ್ಟಿ ಇಲ್ಲ. ಅದು ಅವರಿಗೆ ಬೇಕಾಗಿಯೂ ಇಲ್ಲ. ಇಲ್ಲೂ ಅವರ ಹೆಸರು ಅನ್ವರ್ಥ. ಜೊತೆಗೆ ಕಾಸರಗೋಡು ಅನ್ಯಾಯವಾಗಿ



ಕೇರಳದೊಳಗೆ ಸೇರಿಹೋದುದಕ್ಕೆ (೧೯೫೬) ಜೀವಂತ ಸಾಕ್ಷಿಯಾಗಿದ್ದವರು. ಅದಕ್ಕಾಗಿ ನೊಂದು ಬೆಂದವರು, ಸಂದರ್ಭ ಬಂದಾಗಲೆಲ್ಲಾ ಅದನ್ನು ಪ್ರತಿಭಟಿಸುತ್ತ ಬಂದವರು. ಎಪ್ಪತ್ತೊಂದರ ಪಕ್ವವಯಸ್ಸಿನ ವಿಚಿತ್ರರು ಈಗಲೂ 'ಕಾಸರಗೋಡು-ಕನ್ನಡ ನಾಡು' ಎಂಬ ಘೋಷಣೆಯನ್ನು ಕೂಗಿ ಹೇಳುತ್ತಾರೆ.

'ನಾನೂ ಸಾಹಿತಿಯಾದೆ'

೧೯೪೩ರಲ್ಲಿ ಬೆಂಗಳೂರಿನ 'ವಿಕಟ ವಿನೋದಿನಿ' ಮಾಸ ಪತ್ರಿಕೆಯಲ್ಲಿ 'ನಾನೂ ಸಾಹಿತಿಯಾದೆ' ಎಂಬ ಲೇಖನದ ಮೂಲಕ ಸಾಹಿತಿಗಳ ಸಾಲಿಗೆ ವಿಚಿತ್ರರು ಸೇರಿಕೊಂಡರು. ಅಂದಿನ ಪ್ರಸಿದ್ಧ ಬರಹಗಾರರಾಗಿದ್ದ ಕಡೆಂಗೋಡ್ಲು ಶಂಕರಭಟ್ಟರು, ಮಂಜೇಶ್ವರ ಗೋವಿಂದ ಪೈಗಳು, ಮುಳಿಯ ತಿಮ್ಮಪ್ಪಯ್ಯ, ಅ.ನ.ಕೃ., ತ.ರಾ.ಸು., ಕಟ್ಟೀಮನಿ, ನಿರಂಜನ ದಂಪತಿಗಳು, ಎಂ.ಎಸ್. ಭಾರದ್ವಾಜ, ವೆಂಕಟರಾಜ ಪಾನಸೆ, ಯುಮರ್ಣಂಜ ರಾಮಚಂದ್ರ, ಕೈಂತಜೆ ಗೋವಿಂದಭಟ್ಟ, ಸೂಡಂಕೂರು ತಿರುಮಲೇಶ್ವರಭಟ್ಟ ಮೊದಲಾದ ಲೇಖಕರೆಲ್ಲ ಅವರ ಸಮಕಾಲೀನರು ಮಾತ್ರವಲ್ಲ, ಇವರುಗಳಲ್ಲಿ ಕೆಲವರು ಒಡನಾಡಿಗಳೂ ಆಗಿದ್ದರು. ಇಂದು ಬರೆಯುತ್ತಿರುವ ಸಾಹಿತಿಗಳೂ ಅವರಿಗೆ ಸಮಕಾಲೀನರೇ ಎಂಬುದೂ ವಿಚಿತ್ರ ಸತ್ಯ!

ಸುಮಾರು ೧೯೪೦ ರಿಂದ ಈಚೆಗೆ ವಿಚಿತ್ರರು ಸಾಹಿತ್ಯ ರಚನೆಗೆ ಕೈ ಹಾಕಿದರು. ಮೊದಮೊದಲಿಗೆ ಸಂಗಾತಿ, ತಾಯಿನುಡಿ, ಪ್ರಪಂಚ, ಕನ್ನಡಬಂಧು ಮೊದಲಾದ ಅಂದಿನ ಜನಪ್ರಿಯ ಪತ್ರಿಕೆಗಳಿಗೆ ವರದಿಗಾರರಾಗಿ ಸೇವೆ ಸಲ್ಲಿಸಿದರು. ಅಲ್ಲಿಂದ, ಚುಟುಕಗಳು, ಕವಿತೆಗಳು ಮೊದಲಾಗಿ ಸೃಜನಶೀಲ ರಚನೆಗಳಿಗೂ ಕೈಹಾಕಿದರು. ಅಷ್ಟೇ ಅಲ್ಲ, ಪತ್ರಿಕೆಗಳಲ್ಲಿ ಸಮಕಾಲೀನ ಸಾಮಾಜಿಕ, ರಾಜಕೀಯ ಇತ್ಯಾದಿ ಸುದ್ದಿಗಳ ಬಗ್ಗೆ ಟೀಕೆ ಟಿಪ್ಪಣೆಗಳನ್ನೂ ಬರೆಯತೊಡಗಿದರು. ವಿಚಿತ್ರರು ಸಾಹಿತಿಯಾಗಿ ಬೆಳೆಯತೊಡಗಿದ್ದು ಹೀಗೆ.

'ವಿಚಿತ್ರ' ರಸಾಯನ

ಮುಂದೆ, ಕನ್ನಡದ ಖ್ಯಾತ ಕವಿ, ಲೇಖಕರಾದ ಕಡೆಂಗೋಡ್ಲು ಶಂಕರಭಟ್ಟರ ನೇತೃತ್ವದಲ್ಲಿ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ 'ರಾಷ್ಟ್ರಮತ' ವಾರಪತ್ರಿಕೆಯಲ್ಲಿ ಹೊಸತಾಗಿ 'ವಿಚಿತ್ರ ರಸಾಯನ' ಎಂಬ ಅಂಕಣವನ್ನು ಬರೆಯತೊಡಗಿ ಅಂಕಣಕಾರರಾಗಿಬಿಟ್ಟರು.

ಅರವತ್ತರ ದಶಕದಲ್ಲಿ ಕಡೆಂಗೋಡ್ಲು ಅವರು 'ಅಲ್ಲಲ್ಲಿ ಇಷ್ಟಿಷ್ಟು' ಎಂಬ ಅಂಕಣವನ್ನು 'ರಾಷ್ಟ್ರಬಂಧು' ವಾರ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಇದುವೆ ವಿಚಿತ್ರರ ಅಂಕಣ ಬರೆಹಗಳಿಗೆ ಪ್ರೇರಣೆ ಎಂಬುದಾಗಿ ಅವರು ಸ್ಮರಿಸಿಕೊಳ್ಳುತ್ತಿರುತ್ತಾರೆ. ೧೯೬೦ರ ದಶಕದಲ್ಲಿ ಆರಂಭವಾದ 'ರಸಾಯನ'ದ ಅಂಕಣದಲ್ಲಿ ವಿಚಿತ್ರರು ಕೈಯಾಡಿಸದ ಕ್ಷೇತ್ರವೇ ಇಲ್ಲವೆಂದರೂ ಸರಿ. ಹೊನ್ನಾವರದಿಂದ ಪ್ರಕಟಗೊಳ್ಳುತ್ತಿದ್ದ 'ಸಾಧನ' ಪತ್ರಿಕೆಯಲ್ಲಿ 'ವಿಚಿತ್ರವಾಣಿ' ಎಂಬ ಅಂಕಣ ಬರಹಗಳು ಸತತ ನಾಲ್ಕು ವರ್ಷ ಪ್ರಕಟವಾದವು. ಸಮಕಾಲೀನ ಸಮಾಜದ, ಸಾಹಿತ್ಯದ ಆಗು ಹೋಗುಗಳು, ರಾಜಕೀಯ ಸುದ್ದಿ, ವಿಪರ್ಯಾಸಗಳು, ಶೈಕ್ಷಣಿಕ ಕ್ಷೇತ್ರ ಹೀಗೆ ಹತ್ತು ಹಲವು ಸಮಾಜದ, ಜನಜೀವನದ ಮುಖಗಳು ಹಾಸ್ಯ, ವ್ಯಂಗ್ಯ, ವಿಡಂಬನೆ, ಲೇವಡಿಗಳಿಂದ 'ವಿಚಿತ್ರ ರಸಾಯನ' ಮತ್ತು 'ವಿಚಿತ್ರವಾಣಿ'ಗಳಲ್ಲಿ ಮೆರೆದಿವೆ. ಈ ಅಂಕಣಗಳನ್ನೋದುವುದಕ್ಕೆಂದೇ ಓದುಗರು ಆಯಾ ಪತ್ರಿಕೆಗಳ ಬರವಿಗಾಗಿ ಕಾಯುತ್ತಿದ್ದುದನ್ನು ನೆನಪಿಸಿಕೊಳ್ಳುವ ಹಿರಿಯರು ಕೆಲಮಂದಿಯಾದರೂ

ಇಂದು ನಮ್ಮೊಂದಿಗಿದ್ದಾರೆ. 'ರಾಷ್ಟ್ರಮತ' ಪತ್ರಿಕೆಯ ಎಂಟು ವರ್ಷಗಳ ವಿಚಿತ್ರ ರಸಾಯನ ಹಾಗೂ 'ಸಾಧನ' ಪತ್ರಿಕೆಯಲ್ಲಿನ ನಾಲ್ಕು ವರ್ಷಗಳ ವಿಚಿತ್ರ ವಾಣಿ ಅಂಕಣ ಬರಹಗಳನ್ನು ಸಮಗ್ರವಾಗಿ ಸಂಗ್ರಹಿಸಲು ಸಾಧ್ಯವಾದರೆ, ವಿಚಿತ್ರರ ಬಂಡವಾಳದ ಅದ್ಭುತ ಲೋಕವನ್ನೇ ಅನಾವರಣಗೊಳಿಸಬಹುದು. ಅಂದಿನ ಕಾಲಕ್ಕೆ ಬಹುಶಃ ಕಾಸರಗೋಡು ಕಡೆಯಿಂದ ಮೊದ ಮೊದಲಿಗೆ ಅಂಕಣ ಬರಹವನ್ನು ಬರೆಯುತ್ತಿದ್ದವರಲ್ಲಿ ವಿಚಿತ್ರರೂ ಒಬ್ಬರು.

ಸಾಹಿತ್ಯ ಕೃಷಿ

ವಿಚಿತ್ರ ಯೇತಡ್ಕ ಅವರು ೧೯೫೭ರ ಅಗಸ್ಟ್ ೧೫ನೇ ತಾರೀಖಿನ ಶುಭದಿನದಂದು 'ಸ್ಫೂರ್ತಿ' ಎನ್ನುವ ಕೈಬರಹದ ಪತ್ರಿಕೆಯೊಂದನ್ನು ಆರಂಭಿಸಿ ಸಾಹಿತ್ಯ ಬರೆಹಕ್ಕೂ ದೇಶದ ಸ್ವಾತಂತ್ರ್ಯೋತ್ಸವದ ಆಚರಣೆಗೂ ಶುಭಾರಂಭವನ್ನು ಮಾಡಿದರು. ಅಂದಿನ ಕಾಲಕ್ಕೆ ಅನಕೃ, ನಿರಂಜನ, ಮಿರ್ಜಿ ಅಣ್ಣಾರಾಯ, ಶಿವರಾಮ ಕಾರಂತ, ಬಸವರಾಜ ಕಟ್ಟೀಮನಿ ಮೊದಲಾದ ಸಾಹಿತ್ಯ ದಿಗ್ಗಜರುಗಳ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಿದ ಕೀರ್ತಿ ವಿಚಿತ್ರರದ್ದು ಎನ್ನುವುದು ಹಲವು ಮಂದಿ ಹಿರಿಯ ಸಾಹಿತಿಗಳಿಗೆ ನೆನಪಿರಲಾರದು. ಕನ್ನಡದ ನವ್ಯ ಸಾಹಿತ್ಯದ ಆರಂಭದ ಪ್ರವರ್ತಕರಾದ ಯರ್ಮುಂಜ ರಾಮಚಂದ್ರರ ಕವಿತೆ ಹಾಗೂ ಲೇಖನಗಳನ್ನೂ ವಿಚಿತ್ರರು 'ಸ್ಫೂರ್ತಿ'ಯಲ್ಲಿ ಪ್ರಕಟಿಸಿದ್ದರು.

ವಿಚಿತ್ರರ 'ಕೀಚಕ ನಂ.೨' ಏಕಾಂಕವು (೧೯೬೧) ಅವರ ಸ್ಫೂರ್ತಿ ಪ್ರಕಾಶನದ ಮೊತ್ತ ಮೊದಲ ಮುದ್ರಿತ ಕೃತಿ. 'ಸ್ಫೂರ್ತಿ' ಪ್ರಕಾಶನದ ಉದ್ದೇಶವನ್ನು ಅವರು, 'ಚಿಕ್ಕ ಚಿಕ್ಕ ಹೊತ್ತಗೆಗಳನ್ನು ಕಡಿಮೆ ಬೆಲೆಗೆ ದೊರಕುವಂತೆ ಪ್ರಕಟಿಸುವುದು ನಮ್ಮ ಉದ್ದೇಶ. ಹೊತ್ತಗೆಗಳು ಜನರಿಗೆ ಮನರಂಜನೆಗೊಳಿಸುವುದರ ಜೊತೆಗೆ ವಿಚಾರವನ್ನೂ ಪ್ರಚೋದಿಸುವಂತವುಗಳಾಗಿರಬೇಕೆಂದು ನಮ್ಮ ಬಯಕೆ' ಎಂದು ಹೇಳಿಕೊಂಡಿದ್ದಾರೆ. ಮುಂದೆ 'ಸ್ಫೂರ್ತಿ' ಅವರ ನಿರಂತರವಾದ ಬತ್ತದ ಚಿಲುಮೆಯಾಯಿತು. ಅದು ಅವರ ಮನೆಯ ಹೆಸರೂ ಹೌದು.

ವಿಚಿತ್ರರು ಕೈಯಾಡಿಸದೇ ಇರುವ ಸಾಹಿತ್ಯ ಕ್ಷೇತ್ರವೇ ಇರಲಾರದು. 'ಕೀಚಕ ನಂ. ೨', 'ಇಚ್ಛಾಮರಣ', 'ತೀರದ ಫಲ', 'ನಾವೂ ಕಲಿಯುವೆವು', 'ನಾಳಿನ ಭಾರತ' ಇವುಗಳು ಅವರ ನಾಟಕ ಕೃತಿಗಳು. ೧೯೬೧ರಷ್ಟು ಹಿಂದೆಯೇ ಪ್ರಕಟವಾದ 'ಕೀಚಕ ನಂ ೨' ನಾಲ್ಕು ದೃಶ್ಯಗಳುಳ್ಳ ಒಂದು ಪುಟ್ಟ ನಾಟಕ. ಅದು ಸಿರಿತನದ ಮದದಿಂದ ಉಬ್ಬಿಕೊಬ್ಬಿದ ಪುರುಷ ಮೃಗವೊಂದು ಒಡಲಿನಾಸೆಯಿಂದ ಚಾಕರಿಗಾಗಿ ಬಂದ ಯುವತಿಯೊಬ್ಬಳ ಮೇಲೆ ಅತ್ಯಾಚಾರ ಮಾಡಲೆಳಸಿ, ಕೊನೆಗೆ ತನ್ನ ಪತ್ನಿಯಿಂದಲೇ ತೇಜೋವಧೆ ಮಾಡಿಸಿಕೊಳ್ಳುವ ನೀತಿ ಪ್ರಧಾನ ಕತೆಯನ್ನೊಳಗೊಂಡಿದ್ದು, ಸರಳವಾದ ಭಾಷೆ-ಶೈಲಿಗಳಿಂದ ಆಕರ್ಷಕವಾಗಿದೆ.

ಹಾಗೆಯೇ ಅವರ 'ಬೆಳಕು ಕಾಣದ ಜೋಡಿ' (೧೯೬೮) ಒಂದು ಪುಟ್ಟ ಗೀತ ರೂಪಕ. ಅವರ ಇತರ ನಾಟಕಗಳಂತೆ ಚಿಕ್ಕದಾಗಿದ್ದು, ಚೊಕ್ಕವಾದ ಹಿತಮಿತ ಪದಗಳಿಂದ ಸರಳವಾಗಿ ನಿರೂಪಿಸುವ ಪದ್ಯಗಂಧೀ ಶೈಲಿಯ ರೂಪಕ. ಧೃತರಾಷ್ಟ್ರ-ಗಾಂಧಾರಿಯವರ ಪ್ರಣಯವನ್ನು, ಕುರುಡುತನ ಹಾಗೂ ಬೆಳಕುಗಳ ಸಾಂಕೇತಿಕ ಹಿನ್ನೆಲೆಯಿಂದ ಧ್ವನಿಸುವ ಅರ್ಥಪೂರ್ಣ ರಚನೆ ಅದು.

೧೯೫೮ರ ವೇಳೆಗಾಗಲೆ ವಿಚಿತ್ರರು ಕವಿಯಾಗಿ, ಬರಹಗಾರರಾಗಿ ರೂಪುಗೊಂಡಿದ್ದರು. ಅವರಿಗೆ ಇಷ್ಟವಾದ ಸಾಹಿತ್ಯ ಪ್ರಾಕಾರ ಕವಿತೆ. ಅದರಲ್ಲೂ ಚುಟುಕಗಳೆಂದರೆ ಅವರಿಗೆ ತುಂಬಾ ಇಷ್ಟ. 'ತಾಯಿನುಡಿ', 'ಕಾಸರಗೋಡು ಸಮಾಚಾರ' ಹಾಗೂ ಇನ್ನಿತರ ಪತ್ರಿಕೆಗಳಲ್ಲಿ ಅವರ ಅಸಂಖ್ಯ ಕವಿತೆ, ಚುಟುಕಗಳು ಪ್ರಕಟವಾಗಿವೆ. ಅವರು "ದಿವ್ಯಜ್ಞನ ದಿವ್ಯವಾಣಿ" ಹಾಗೂ 'ಸರ್ವಜನ ಪದಗಳು' ಇತ್ಯಾದಿಯಾಗಿ (೧೯೫೮) ತ್ರಿಪದಿಗಳನ್ನೂ ಪ್ರಕಟಿಸಿದ್ದರು.

ವಿಚಿತ್ರರು 'ಪರಿಮಳದ ಹಿಂದೆ' ಎಂಬ ಪತ್ತೇದಾರಿ ಕಾದಂಬರಿ, 'ಲಚ್ಚಿಯ ಭಾಗ್ಯ'ವೆನ್ನುವ ಕಥಾಗುಚ್ಛ, 'ರಸಬಿಂದು' ಎಂಬ ಚುಟುಕ ಸಂಕಲನ, 'ಸಮರ ಕಹಳೆ' ಮತ್ತು 'ಕನ್ನಡ ಕಹಳೆ' ಎಂಬ ಕವಿತಾಗುಚ್ಛಗಳನ್ನೂ ಪ್ರಕಟಿಸಿದ್ದಾರೆ. 'ಲಚ್ಚಿಯ ಭಾಗ್ಯ' ಕೃತಿಯು ೧೯೭೯ರಲ್ಲಿ ಕಾಸರಗೋಡಿನ ಗೀತಾ ಪ್ರಕಾಶನದಿಂದ ಪ್ರಕಟವಾದ ಮೂರು ಕತೆಗಳ ಒಂದು ಸಂಕಲನ. ಅವರು ಉದ್ದೇಶಿಸಿದಂತೆ, ಇವು ಶುಚಿಯಾಗಿಯೂ ರುಚಿಯಾಗಿಯೂ ಇವೆ. ಕುತೂಹಲಕರವಾದ ಕತೆಯ ನಡಿಗೆ, ನೀತಿಯನ್ನು ಸೊಗಸಾಗಿ ಹೇಳುವ ಕಥನ

ಶೈಲಿಯನ್ನು ಇಲ್ಲಿ ನೋಡಬಹುದು. ಇದು ಉತ್ತಮ ಮಟ್ಟದ ಶಿಶು ಸಾಹಿತ್ಯ ಮಾತ್ರವೇ ಅಲ್ಲ, ಎಲ್ಲರೂ ಓದಬೇಕಾದ ಪುಸ್ತಕ.

ವಿಚಿತ್ರರು ಹವ್ಯಕ ಆಡು ನುಡಿಯಲ್ಲಿ 'ಅವಿಲು' ಎನ್ನುವ ವಿಶಿಷ್ಟವಾದ ಕವನ ಸಂಕಲನವನ್ನು ಹೊರ ತಂದಿದ್ದಾರೆ. ದಕ್ಷಿಣ ಕನ್ನಡ ಹವ್ಯಕ ಆಡು ಭಾಷೆಯಲ್ಲಿ ಈಚೆಗೆ ಅನೇಕ ಸಾಹಿತ್ಯ ರಚನೆಗಳು ಪ್ರಕಟವಾಗುತ್ತಿದ್ದು, ಅವುಗಳಲ್ಲಿ 'ಅವಿಲು' ಕವನ ಸಂಕಲನವು ಮೊತ್ತಮೊದಲಿಗೆ ಪ್ರಕಟಗೊಂಡ ಕವನ ಸಂಕಲನವೆಂಬ ಗೌರವಕ್ಕೆ ಪಾತ್ರವಾಗಿದೆ.

ಭಾಷೆ, ಶೈಲಿ ಇತ್ಯಾದಿ

ವಿಚಿತ್ರರ ಲೇಖನಗಳಲ್ಲಿ ಮುಖ್ಯವಾಗಿ ಕಾಣಸುವುದು ಅವರ ನಿಸ್ಪೃಹವಾದ, ನಿರ್ದುಷ್ಟವಾದ ಸಾಹಿತ್ಯಾಸಕ್ತಿ. ಅವರೊಬ್ಬ ನಿರಾಡಂಬರ, ನಿಗರ್ವಿ, ಪ್ರಾಮಾಣಿಕ ಕೃತಿಕ ಹೇಗೋ, ಹಾಗೆಯೇ ಅಪ್ಪಟವಾದ ಕನ್ನಡಾಭಿಮಾನಿ, ದೇಶಾಭಿಮಾನಿ. ಅನಿಸಿದ್ದನ್ನು ಬರೆಯುವ, ಸ್ವ-ಅನುಭವದಿಂದಲೇ ಅಭಿವ್ಯಕ್ತಿಯನ್ನು ಕಂಡುಕೊಂಡ, ಸರಳ ಸಜ್ಜನಿಕೆಯ, ಭಾವ ಬಂಧುರತೆಯ ಸಾಹಿತ್ಯ ಕೃತಿಕ. ತಾವೇನು, ತಮ್ಮದ್ದೇನು ಎಂಬುದರ ಬಗ್ಗೆ ಸಂಪೂರ್ಣ ತಿಳಿದುಕೊಂಡಿರುವ ಪ್ರಾಮಾಣಿಕ ಬರೆಹಗಾರ ಎಂಬುದು ಒತ್ತಿ ಹೇಳಬೇಕಾದ ಅಂಶ. ಅವರ ಹೆಚ್ಚಿನ ರಚನೆಗಳಲ್ಲಿ ಎದ್ದು ಕಾಣಿಸುವುದು ಸರಳತೆ, ವ್ಯಂಗ್ಯ ಅಥವಾ ವಿಡಂಬನೆ, ಜೊತೆಗೆ ತಿಳಿ ಹಾಸ್ಯ. ಇಲ್ಲೆಲ್ಲಾ ಧ್ವನಿಪೂರ್ಣವಾದ ಕವಿಮಾತುಗಳನ್ನೂ ಅವರು ಹುದುಗಿಸಿರುತ್ತಾರೆ.

ವಜ್ರಗಳ ತವರು

ದಕ್ಷಿಣ ಆಫ್ರಿಕದಲ್ಲಿ ಆರೇಂಜ್ ನದಿ ಒಂದು ಸಾವಿರ ಮೈಲು ದೂರದವರೆಗೆ ಹರಿದು ಅಟ್ಲಾಂಟಿಕ್ ಸಮುದ್ರವನ್ನು ಸೇರುವುದು. ಈ ನದಿಯು ತನ್ನ ಉಗಮಸ್ಥಾನದಿಂದ ಅನೇಕ ಕಲ್ಲುಗಳನ್ನು ಉರುಳಿಸಿಕೊಂಡು ಬರುತ್ತಿತ್ತು. ಅವುಗಳೆಲ್ಲ ದುಂಡಾದ ಬೆಣಚುಕಲ್ಲುಗಳಂತಿದ್ದವು.

ಕಳೆದ ಶತಮಾನದಲ್ಲಿ ಯುರೋಪಿಯನ್ನರು ಆ ಪ್ರದೇಶಕ್ಕೆ ಬಂದು ನೆಲೆಸಿದಾಗ ಸ್ಥಳೀಯ ಹುಡುಗರು ಆ ಕಲ್ಲುಗಳನ್ನಿಟ್ಟುಕೊಂಡು ಗೋಲಿ ಆಟವಾಡುವುದನ್ನು ಕಂಡರು. ಅವುಗಳನ್ನು ಒರೆಗೆ ಹಚ್ಚಿದಾಗ ಅವೆಲ್ಲ ವಜ್ರಗಳು ಎಂದು ತಿಳಿಯುತ್ತಲೇ ಅವರೆಲ್ಲ ಅಲ್ಲೇ ನೆಲೆಸಿದರು. ಅಲ್ಲಿ ಅಪಾರ ವಜ್ರದ ಸಂಗ್ರಹವಿರುವುದನ್ನು ಕಂಡುಕೊಂಡರು!

ಇಂದಿಗೂ ಆರೇಂಜ್ ನದಿ ತಟದಲ್ಲಿರುವ ಕಿಂಬರ್ಲಿ ವಜ್ರಗಳ ತವರು.

✤ ಸಂಗ್ರಹ: ಬಿ. ಹನುಮಂತ ಭಟ್

"ಯಾರು ನನ್ನ ಮನೆಯಲ್ಲಿ ೨ ಗಂಟೆಗಳ ಕಾಲ ಕೂತು ನನ್ನ ಕವಿತೆ ಕೇಳುವರೋ ಅವರಿಗೆ ೨೦೦ ರೂಪಾಯಿಗಳ ಬಹುಮಾನ ನೀಡುತ್ತೇನೆ' ಎಂದೊಬ್ಬ ಕವಿ ಮಹಾಶಯ ಪ್ರಚಾರ ಮಾಡಿದ. ಎಷ್ಟೋ ದಿನಗಳು ಕಳೆದುಹೋದವು. ಯಾರೂ ಬರಲಿಲ್ಲ.

ಒಂದು ಭಾನುವಾರ ಇಬ್ಬರು ಬಂದರು. ಒಬ್ಬಾತ ಇನ್ನೊಬ್ಬನನ್ನು ತೋರಿಸಿ, 'ಇವರು ನಮ್ಮ ಅಣ್ಣ, ಮೈಸೂರಿನಿಂದ ಬಂದಿದ್ದಾರೆ. ಇವರಿಗೆ ಕನ್ನಡ ಕವಿತೆಗಳೆಂದರೆ ಬಹಳ ಇಷ್ಟ. ನಿಮ್ಮ ಶರತ್ತಿನ ಪ್ರಕಾರ ಇವರು ೨ ಗಂಟೆ ನಿಮ್ಮ ಕವಿತೆಗಳನ್ನೆಲ್ಲಾ ಕೇಳುವರು. ಅವರಿಗೆ ನೀವು ದಯಮಾಡಿ ೨೦೦ ರೂಪಾಯಿ ಬಹುಮಾನ ನೀಡುವುದು' ಅಂದ. ಕವಿ ಹುರುಪಿನಿಂದ "ಆಗಬಹುದು" ಎಂದು, ಸತತ ಎರಡು ಗಂಟೆಗಳವರೆಗೆ ಆತನಿಗೆ ತನ್ನ ಕವಿತೆಗಳನ್ನು ಹೇಳಿದ. ಆತ ಮಧ್ಯೆ ಮಧ್ಯೆ "ಆಹಾ! ಭೇಷ್" ಎನ್ನುತ್ತಿದ್ದ. ಎರಡು ಗಂಟೆಗಳ ನಂತರ ತಮ್ಮನು ಬಂದು ೨೦೦ ರೂ. ತೆಗೆದುಕೊಂಡು ಅಣ್ಣನನ್ನು ಕರೆದುಕೊಂಡು ಹೋದ.

ನಂತರ ಕವಿಮಹಾಶಯನಿಗೆ ತಿಳಿಯಿತು, ಅಣ್ಣ ಹುಟ್ಟು ಕಿವುಡ ಎಂದು.

✤ ಟೇಕಲ್ ಗೋಪಾಲಕೃಷ್ಣ

ಇದುವೆ ವಿಚಿತ್ರರ ವಿಶಿಷ್ಟ ಶೈಲಿ.

ವಿಚಿತ್ರರ 'ಮೊಮ್ಮಗನಿಗೆ ಬರೆದ ಪತ್ರ'(೧೯೮೩) ಕೃತಿಯಲ್ಲಿ ಅವರ ಅನುಭವದ ಸಾಂದ್ರತೆಯನ್ನು ಸರಳವಾಗಿ, ತಿಳಿಯಾಗಿ ಪುಟ್ಟಮಗುವಿಗೆ ಹೇಳುತ್ತಾರೆ. ಈ ಕೃತಿಯನ್ನು 'ಪತ್ರ ಸಾಹಿತ್ಯ'ವೆಂಬುದಾಗಿ ಅವರು ಕರೆದಿದ್ದಾರೆ. ಇದು ಇಪ್ಪತ್ತೇಳು ಪುಟಗಳಷ್ಟಿರುವ ಪುಟ್ಟ ಪುಸ್ತಿಕೆ. ಅವರ ಹಿರಿತನ, ಅನುಭವದ ಸಿರಿತನಗಳನ್ನು ಸಿಂಚನಗೊಳಿಸುವಂತಹ ಈ ಕೃತಿ ಗಾತ್ರದಲ್ಲಿ ಕಿರಿದಾದರೂ ಮೌಲ್ಯದಲ್ಲಿ ಹಿರಿದು. ಮುಖ್ಯವಾಗಿ ನಗರಗಳಲ್ಲಿ ವಾಸವಾಗಿರುವ ಚಿಕ್ಕ ಮಕ್ಕಳನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದ ಈ ಕೃತಿ ಕುಟುಂಬ ಜೀವನದ ಪರಿಕಲ್ಪನೆ, ಸರಳ ಸುಂದರ ಗ್ರಾಮೀಣ ಬದುಕು, ಆದರ್ಶ ಬದುಕಿನ ಬಗೆಯನ್ನು ತಿಳಿಯಾಗಿ ಅನಾವರಣಗೊಳಿಸುವ ಸರಳ ಹಾಗೂ ವಿರಳಕೃತಿ.

ಹನಿಗವನಗಳು ಮತ್ತು ಚುಟುಕಗಳು

ಅವರು ಚಿಕ್ಕದರಲ್ಲಿ ಚೊಕ್ಕವಾಗಿ ಹೇಳುವ ಜಾಣ ಅನುಭವಿ ಕವಿಯಾಗಿ ಅಲ್ಲಲ್ಲಿ ತಟ್ಟಿ ಎಚ್ಚರಿಸುತ್ತಾರೆ. ಅವರ ಕವಿತೆಗಳು, ಹನಿಗವನಗಳು ಅಸಂಖ್ಯ. ಸಂಕಲನವಾಗಿ ಕೆಲವು, ಇನ್ನು ಕೆಲವು ಬಿಡಿಯಾಗಿ ಅಲ್ಲಲ್ಲಿ ಪ್ರಕಟಗೊಂಡಿವೆ. ವಸ್ತುಸ್ಥಿತಿಯ ವಿಡಂಬನೆ ಒಂದೆಡೆಯಾದರೆ, ಸಾಹಿತ್ಯದ ಮೇಲಿನ ನಿಜವಾದ ಕಾಳಜಿ ಇನ್ನೊಂದೆಡೆ, ಭಾವಪೂರ್ಣ ಭಕ್ತಿ ಗೀತೆಗಳು ಮಗುದೊಂದೆಡೆ ರಸಾರ್ದ್ರ ರಮ್ಯ ಭಾವಗೀತೆಗಳು. ಹೀಗೆ ಮಿಶ್ರಪಾಕದಿಂದ ವಿಚಿತ್ರರು ಜನಮನವನ್ನು ಹೊಕ್ಕು ಬಿಡುತ್ತಾರೆ. ಬಹುಶಃ ಅವರ ಕವಿತೆಗೆ ವಸ್ತುವಾಗದ ವಿಷಯ ಇರಲಾರದು. ಇಂದೂ ಬರೆಯುತ್ತಲೇ ಇರುವ ಅವರ ರಚನೆಗಳು ಕನ್ನಡದ ಹಲವಾರು ಪತ್ರಿಕೆಗಳಲ್ಲಿ ಕಾಣಸಿಗುತ್ತವೆ. ಅಸಂಖ್ಯ ಕವನ, ಚುಟುಕಗಳ ಸರದಾರ ಅವರು.

ಅವರ ಚುಟುಕಗಳಲ್ಲಿರುವ ಹಾಸ್ಯದ ಲೇಪನ, ಒಳಗಿನ ಧ್ವನ್ಯಾರ್ಥವು ತೆರೆದುಕೊಳ್ಳುವ ರೀತಿ ನೋಡಿ: ಬೆಲೆಯೇರಿಕೆ ಬಗ್ಗೆ

ಬೆಲೆಯೇರಿಕೆಯ ಸುದ್ದಿ ಈಗ ಹಳತಾಯಿತು
ಒಟ್ಟೆಷ್ಟು ಬೆಲೆ ಕೊಟ್ಟು ಅಭ್ಯಾಸವಾಯಿತು
ಓ ನನ್ನ ಚಿನ್ನ, ಇದಕ್ಕಿಲ್ಲ ಪರಿಹಾರ
ಚಿತ್ರ ಗೀತೆಯಲಷ್ಟೇ ಬದುಕು ಬಂಗಾರ

ಹಾಗೆಯೇ, ಪ್ರಜಾಸತ್ತೆಯ ಒಂದು ತೀಕ್ಷ್ಣವಾದ ಒಳನೋಟ ಅವರ ಕತ್ತೆ-ಲತ್ತೆ ಹನಿಗವನದಲ್ಲಿ:

ನಮ್ಮ ಪ್ರಜಾಸತ್ತೆಯಲ್ಲಿ
ಕತ್ತೆಗಳಿಗೆ ತುಂಬಾ
ಪ್ರಧಾನ್ಯವಿದೆ
ಕಾರಣ
ಅವು ಎಂದೂ ಲತ್ತೆ
ಕೊಡುವುದೇ ಇಲ್ಲ!

ಅಲ್ಲದೆ, ಅವರ 'ಸಹಜ-ಅಸಹಜ', 'ಕೋಳಿ ಗಂಟೆ', 'ತಪ್ಪಿದ ಲೆಕ್ಕ', 'ಪ್ರಾರ್ಥನೆ', 'ತೆರೆದ ಗುಟ್ಟು', 'ಅಜ್ಜ ನೆಟ್ಟ ಆಲದ ಮರ'ಮೊದಲಾದ ಹಲವಾರು ಕವಿತೆಗಳಲ್ಲಿ ಅನುಭವದ ಆಳದಿಂದ ವಸ್ತು ಸ್ಥಿತಿಯನ್ನು ವಿಡಂಬಿಸುವ ರೀತಿಯನ್ನು ಗುರುತಿಸಬಹುದು.

ಕೆಲವೆಡೆ ಅವರನ್ನೇ ಲೇವಡಿಗೊಳಪಡಿಸುವ ರೀತಿ ನೋಡಿ:

ಕನಸಿನಲ್ಲಿ ನನಗೊಮ್ಮೆ
ಜ್ಞಾನ ಪೀಠ ಪ್ರಶಸ್ತಿ
ಬಂದಿತ್ತು
ಕಣ್ತೆರೆದಾಗ
ನನ್ನ ಕೃತಿಯೊಂದರ
ಮೇಲೆ ಗೆದ್ದಲು ಹುಳ
ಗೂಡು ಕಟ್ಟಿತ್ತು!

ಕನ್ನಡ ಕನ್ನಡ ಎಂದು ಬೊಬ್ಬಿರಿಯುವ ಜನರ ಬಗ್ಗೆ:

ತನು ಕನ್ನಡ ಮನ ಕನ್ನಡ
ಕಣ ಕಣವೂ ಕನ್ನಡ
ಹಾಡುತ್ತಿದ್ದಂತೆಯೇ
ಕಿಣ್ ಕೆರಳಿಸುತ್ತಾ ಒಬ್ಬ ಕಣವನ
ಕೇಳಿದ-ಎನ್ನಡಾ? ಎನ್ನಡಾ?

ಇಷ್ಟು ಮಾತ್ರವಲ್ಲದೆ, 'ವಿಚಿತ್ರಾರ್ಥಕೋಶ'ವೆಂಬ ವಿಕಟಾರ್ಥಕೋಶವನ್ನೂ ವಿಚಿತ್ರರು ಪ್ರಕಟಿಸಿದ್ದಾರೆ. ಹಾಗೆಯೇ, ಅವರು ಅನುಭವದ ಮಾತುಗಳನ್ನು 'ವಿಚಿತ್ರಾಮೃತ' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಹೀಗೆ ಹತ್ತು ಹಲವು ರೀತಿಯ ಸಾಹಿತ್ಯ ಕೃಷಿಕರು ವಿಚಿತ್ರರು. ಇವರ ರಚನೆಗಳಿಂದ ಬದುಕಿನ ಹಲವಾರು ಮುಖಗಳ ಒಳನೋಟವನ್ನೂ ಅರ್ಥವತ್ತಾದ ಕವಿಮಾತುಗಳನ್ನೂ ನಾವು ಆಯ್ದುಕೊಳ್ಳಬಹುದಾಗಿದೆ.

ಜೀವನ ಸತ್ಯ

ಹೀಗೊಬ್ಬ ಮನುಷ್ಯ ಗೂಡಂಗಡಿಯನ್ನಿಟ್ಟು ಜೀವನ ನಿರ್ವಹಣೆ ಮಾಡುತ್ತಾನೆ. 'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬಂತೆ ಬದುಕಿಗಾಗಿ ಏನಾದರೂ ಉದ್ಯೋಗ ಮಾಡಲೇಬೇಕಲ್ಲವೆ? ಉದ್ಯೋಗದಲ್ಲಿ ಮೇಲು- ಕೀಳು ಭಾವನೆ ಇಲ್ಲ ಆತನಿಗೆ. ಅವನು ಕಲಿತವನು. ಅಂಥ ಇಂಥ ಕೆಲಸ ಮಾಡಿದರೆ ಇಸ್ತ್ರಿ ಬಟ್ಟೆ ಮಾಸುತ್ತವೆ. ಈ ಧಂದೆ ತನ್ನ ಓದಿಗೆ ಸರಿಯಲ್ಲ ಎಂಬ ತತ್ವದವನಲ್ಲ ಆತ. ಒಂದು ಬಗೆಯಲ್ಲಿ ನಿಯತ್ತಿನ ಮನುಷ್ಯ, ಅಷ್ಟೇ ಕಠೋರ. ಸತ್ಯ, ಶಿಸ್ತು, ಪ್ರಾಮಾಣಿಕತೆ ಎಂದರೇನು ಎಂಬುದನ್ನು ನಾವು ಆತನಿಂದ ಕೇಳಿ ತಿಳಿಯಬೇಕು, ನೋಡಿ ಕಲಿಯಬೇಕು. ತನ್ನ ಉದ್ಯೋಗದ ದಾರಿಯಲ್ಲಿ ಅಸತ್ಯದ ಹಾದಿ ತುಳಿದು ಮಾತಿಗೆ ಮೀರುವವರೊಂದಿಗೆ ಕೆರಳಿದ ಸಿಂಹನಾದರೆ ನಂಬಿದವರಿಗೆ ಜೀವಕ್ಕೆ ಜೀವ ಕೊಡಲೂ ಸಿದ್ಧ.

ಆದೊಂದು ದಿನ ಪೇಟೆಗೆ ಏನೋ ಖರೀದಿಗೆ ಹೋಗಿದ್ದೆ. ಅದೇ ಸಮಯಕ್ಕೆ ಬಂದ ಅಂಚೆ ಜವಾನ ಅಂಚೆ ಕಾರ್ಡೊಂದನ್ನು ಅಂಗಡಿಯ ಮಾಲೀಕರನ ಕೈಗಿತ್ತು ಹೊರಟುಹೋದ. ನನ್ನ ಸುಪರಿಚಿತ ಅಂಗಡಿಯಾತ ಅದನ್ನೋದಿ ನನ್ನ ಕೈಗಿತ್ತಾಗ ನನಗೋ ಎಲ್ಲಿಲ್ಲದ ಆಶ್ಚರ್ಯ- ಅನ್ಯರ ಪತ್ರ ನನ್ನ ಕೈಗೇಕೆ? ಅಂತ. ಓದಿದಾಗ ಬಾಯಿಂದ ಮಾತೇ ಹೊರಡಲಿಲ್ಲ.

"ಇಂಥವರೂ ಇದ್ದಾರೆ ನನ್ನ ಗ್ರಾಹಕರು," ಎಂದ ಅಂಗಡಿಯಾತ.

"ಹೌದು, ನಾನು ಬಲ್ಲೆ ಆತನನ್ನು. ಆತನ ಸ್ವಭಾವವೇ ಅಂತಹುದು. ತನ್ನದಾದ ಒಂದು ಕವಡೆ ಕಾಸನ್ನೂ ಬಿಡಲಾರ, ಅನ್ಯರ ಒಂದು ಪೈಸೆಯನ್ನೂ ಮುಟ್ಟಲಾರ. ಈ ಕಾಲದಲ್ಲೂ ಇಂಥವರು ಇರುತ್ತಾರೆಂದರೆ ಹೆಮ್ಮೆಪಡಬೇಕಾದದ್ದೆ," ಎಂದೆ ನಾನು.

ಅಂಚೆ ಕಾರ್ಡಿನ ಒಕ್ಕಣೆ ಹೀಗಿತ್ತು-

ಪ್ರಿಯರೇ, ಸಪ್ರೇಮ ವಂದನೆಗಳು.

ತರುವಾಯ ಮೊನ್ನೆ ಖರೀದಿಸಿದ ಸಾಮಗ್ರಿಗಳಲ್ಲಿ ಹತ್ತು ಬಂಡಲ್ ಬೀಡಿಗಳನ್ನು ಬಿಲ್ಲಿನಲ್ಲಿ ಸೇರಿಸುವುದನ್ನು ಮರೆತು ನಾಲ್ಕುನೂರಾ ಮೂವತ್ತು ರೂಪಾಯಿಗಳಷ್ಟು ಕಳೆದುಕೊಳ್ಳುವುದರಲ್ಲಿದ್ದಿರಲ್ಲ! ಇರಲಿ, ಮುಂದಿನ ಸಲ ಪೇಟೆಗೆ ಬಂದಾಗ ಆ ರಖಮು ಸಂದಾಯ ಮಾಡುತ್ತೇನೆ.

ವಿಶ್ವಾಸವಿರಲಿ,

ಇತಿ ತಮ್ಮ ಗ್ರಾಹಕ.

ಆಕಸ್ಮಿಕವೆಂಬಂತೆ ಆ ವ್ಯಕ್ತಿ ಭೇಟಿಯಾದಾಗ ಪತ್ರದ ವಿಷಯ ಹೇಳಿದೆ. "ಹೌದು ಮಹಾರಾಯರೆ, ಅನ್ಯಾಯವಾಗಿ ಒಬ್ಬರ ಹಣ ನಮಗೇಕೆ? ನಮ್ಮದೇ ನಮಗೆ ಸಿಕ್ಕರೆ ಸಾಕು," ಎಂದ ಆತ. ಸತ್ಯ, ಧರ್ಮ, ಪ್ರಾಮಾಣಿಕತೆಯ ಬೆಲೆ ಬಲು ದೊಡ್ಡದಲ್ಲವೆ?

✷ ಕಲ್ಪನಾ ಶ್ರೀಧರ ಶಾನಭಾಗ.

ಮಹಾಭಾರತ ಯುದ್ಧ ನಡೆದದ್ದು ಯಾವಾಗ?

ತೆಕ್ಕುಂಜ ಜಯಶಂಕರಭಟ್

'ಕಸ್ತೂರಿ'ಯ ಮೇ ಸಂಚಿಕೆಯಲ್ಲಿ ಪ್ರಕಟವಾದ ಮಹಾಭಾರತ ಯುದ್ಧದ ಕಾಲದ ಬಗೆಗಿನ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಈ ಲೇಖನ. ಅದರಲ್ಲಿನ ಅಭಿಪ್ರಾಯಗಳು ಮಹಾಭಾರತದಲ್ಲಿರುವ ವ್ಯಾಸೋಕ್ತಿಗಳಿಗೆ ಸ್ವಲ್ಪವೂ ತಾಳೆಯಾಗುವುದಿಲ್ಲ.

ಮಹಾಭಾರತ ಯುದ್ಧದ ಹದಿನೆಂಟನೆ ದಿನ ರಾತ್ರಿ ಅಶ್ವತ್ಥಾಮನು ಪಾಂಡವ ಶಿಬಿರವನ್ನು ಧ್ವಂಸಗೊಳಿಸಿದ ವರ್ಣನೆಗಳನ್ನು ಗಮನಿಸುವಾಗ ಆ ದಿನ ಅಮವಾಸ್ಯೆಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

೧೪ನೇ ದಿವಸದ ರಾತ್ರಿ ಯುದ್ಧದ ವೇಳೆ ಸೂರ್ಯೋದಯಕ್ಕೆ ಮೂರು ಮುಹೂರ್ತ ಉಳಿದಿರುವಂತೆ ಚಂದ್ರೋದಯದ ಮನೋಹರವಾದ ವರ್ಣನೆಯಿಂದಲೂ ೧೮ನೆಯ ದಿನ ಅಮವಾಸ್ಯೆ ಎಂದು ತಿಳಿಯಬಹುದು.

ಅನಂತರ ಪಾಂಡವರು ಅಶೌಚ ಕಾರ್ಯಗಳಿಗಾಗಿ ಗಂಗಾತೀರದಲ್ಲಿ ೧೨ ದಿವಸಗಳನ್ನು ಕಳೆದು ಮರುದಿನ ಹಸ್ತಿನಾಪುರವನ್ನು ಪ್ರವೇಶಿಸುತ್ತಾರೆ.

ಯುಧಿಷ್ಠಿರನ ಪಟ್ಟಾಭಿಷೇಕವಾದ ನಂತರ ಒಂದು ದಿನ ಪಾಂಡವರು ಶರಶಯ್ಯೆಯಲ್ಲಿದ್ದ ಭೀಷ್ಮಾಚಾರ್ಯರ ಬಳಿಗೆ ಪ್ರಯಾಣಿಸುತ್ತಾರೆ.

ಪಂಚಾಶತಂ ಷಟ್ಚಕುರು ಪ್ರವೀರ|
ಶೇಷಂ ದಿನಾನಾಂ ತವ ಜೀವಿತಸ್ಯ||

ಉತ್ತರಾಯಣವನ್ನು ನಿರೀಕ್ಷಿಸುತ್ತಿರುವ ಭೀಷ್ಮರು ಮುಂದೆ ೫೬ ದಿವಸಗಳವರೆಗೆ ಜೀವವನ್ನು ಹಿಡಿದುಕೊಂಡಿರುತ್ತಾರೆ. ಅರ್ಥಾತ್ ಉತ್ತರಾಯಣಾರಂಭಕ್ಕೆ ೫೬ ದಿವಸ ಉಳಿದಿದೆ ಎಂದು ಶ್ರೀಕೃಷ್ಣ ಸೂಚಿಸಿದ್ದ. ಅನಂತರ ಸಾಯಂಕಾಲ ಪಾಂಡವರು ಹಸ್ತಿನಾವತಿಗೆ ಹಿಂತಿರುಗುವಲ್ಲಿನ ವರ್ಣನೆಗಳು ಆ ದಿನವು ಹುಣ್ಣಿಮೆ ಎಂಬುದನ್ನು ಸೂಚಿಸುತ್ತವೆ.

ಮುಂದೆ ಆರು ದಿವಸಗಳ ಕಾಲ ಭೀಷ್ಮರು ಯುಧಿಷ್ಠಿರನಿಗೆ ವಿವಿಧ ಉಪದೇಶಗಳನ್ನು ಮಾಡಿ ಉತ್ತರಾಯಣ ಆರಂಭವಾದ ಬಳಿಕ ಕುರುಕ್ಷೇತ್ರಕ್ಕೆ ಬರುವಂತೆ ಸೂಚಿಸಿ ಸುಮ್ಮನಾಗುತ್ತಾರೆ.

ಉಷಿತ್ವಾಶರ್ವರೀ ಶ್ರೀಮಾನ್ ಪಂಚಾಶನ್ ನಗರೋತ್ತಮೇ|
ಸಮಯಂ ಕೌರವಾಗ್ರಸ್ಯ ಸಸ್ಮಾರ ಪುರುಷರ್ಷಭ|| ಅನು ೧೬೭-೫||

ಯುಧಿಷ್ಠಿರನು ಹಸ್ತಿನಾವತಿಯಲ್ಲಿ ೫೦ ದಿವಸಗಳನ್ನು ಸುಖವಾಗಿ ಕಳೆದ ನಂತರ ಉತ್ತರಾಯಣ ಆರಂಭವಾಯಿತು.

ಅಷ್ಟಪಂಚಾಶತಂ ರಾತ್ರ್ಯಃ ಶಯಾನಸ್ಯಾದ್ಯಮೇ ಗತಾಃ|
ಮಾಘೋಽಯಂ ಸಮನುಪ್ರಾಪ್ತೋ ಮಾಸಃ ಸೌಮ್ಯೋ ಯುಧಿಷ್ಠಿರ:|
ತ್ರಿ ಭಾಗಶೇಷ ಪಕ್ಷೋಽಯಂ ಶುಕ್ಲೋಭವಿತುಮರ್ಹತಿ|| ಅನು ೧೬೭||

ಪಾಂಡವರು ಭೀಷ್ಮರಲ್ಲಿಗೆ ಬಂದ ಹುಣ್ಣಿಮೆಯಿಂದ ೫೮ ರಾತ್ರಿಗಳನ್ನು ಭೀಷ್ಮರು ಶರಶಯ್ಯೆಯಲ್ಲಿ ಕಳೆದಿದ್ದರು. ಅದು ಮಾಘಮಾಸದ ಶುಕ್ಲಪಕ್ಷವಾಗಿದ್ದು, ಹುಣ್ಣಿಮೆಗೆ ಮೂರು ದಿವಸ ಉಳಿದಿತ್ತು. ಅಂದರೆ ಭೀಷ್ಮರು ಉತ್ತರಾಯಣಾರಂಭವಾದ ಮರುದಿನ ಸ್ವರ್ಗಸ್ಥರಾಗಿದ್ದರು ಎಂದು ಹೇಳಬಹುದು. ಒಟ್ಟಿನಲ್ಲಿ ಸುಮಾರು ೮೦ ದಿವಸ ಭೀಷ್ಮರು ಶರಶಯ್ಯೆಯಲ್ಲಿ ಮಲಗಿದ್ದರು.

ಮಹಾಭಾರತ ಕಾಲದಲ್ಲಿ ಧನಿಷ್ಠಾದಿಯಿಂದ ಉತ್ತರಾಯಣವೂ, ಕೃತ್ತಿಕಾದಿಯಿಂದ ವಸಂತ ವಿಷುವ ದಿನವೂ ಪ್ರಾರಂಭವಾಗುತ್ತಿತ್ತು. (ವನಪರ್ವ ೨೩೦ನೇ ಅಧ್ಯಾಯ) ಸೂರ್ಯನು ಸುಮಾರಾಗಿ ಫೆಬ್ರುವರಿ ೭ರಂದು ಧನಿಷ್ಠಾ ನಕ್ಷತ್ರವನ್ನೂ, ಮೇ ೧೦ ಅಥವಾ ೧೧ರಂದು ಕೃತ್ತಿಕೆಯನ್ನೂ

ಪ್ರವೇಶಿಸುತ್ತಾನೆ.

ಸಾಮಾನ್ಯವಾಗಿ ಫೆಬ್ರವರಿ ತಿಂಗಳಲ್ಲಿ ಮಾಘಮಾಸವಿರುತ್ತದೆ. ಡಿಸೆಂಬರ್ ತಿಂಗಳಲ್ಲೆಂದೂ ಬರುವುದಿಲ್ಲ. ಉತ್ತರಾಯಣಾರಂಭದಿಂದ ಶಿಶಿರ ಋತುವೂ, ದಕ್ಷಿಣಾಯಣಾರಂಭದಿಂದ ವರ್ಷಾಋತುವೂ ಪ್ರಾರಂಭವಾಗುತ್ತದೆ.

ಪ್ರಸ್ತುತ ಸಮಯದಲ್ಲಿ ಉತ್ತರಾಯಣಾರಂಭವು ಡಿಸೆಂಬರ್ ೨೨ರಂದೂ, ರಿಷುವ ದಿನವು ಮಾರ್ಚ್ ೨೨ರಂದೂ ಘಟಿಸುತ್ತದೆ. ಆದ್ದರಿಂದ ಮಹಾಭಾರತ ಕಾಲದ ಉತ್ತರಾಯಣಾರಂಭದ ದಿನಕ್ಕೂ ವರ್ತಮಾನಕ್ಕೂ ಇರುವ ವ್ಯತ್ಯಾಸ ಗರಿಷ್ಠ ೫೦ ದಿವಸಗಳಷ್ಟು.

ಭೂಮಿಯು ಉತ್ತರ ಧ್ರುವವನ್ನು ೨೩ ೧/೨ ಅಂಶಗಳಷ್ಟು ವಾಲಿಸಿಕೊಂಡು ೩೬೫.೨೪೨ ದಿವಸಗಳಲ್ಲಿ ಸೂರ್ಯನಿಗೆ ಒಂದು ಪ್ರದಕ್ಷಿಣೆ ಹಾಕುವುದರಿಂದ ಋತುಗಳು ಉಂಟಾಗುತ್ತವೆ.

ಭೂಮಿಯು ವಾಲಿಕೊಂಡಿರುವುದರಿಂದ ಸೂರ್ಯನ ನೇರ ಕಿರಣಗಳು ಉತ್ತರಕ್ಕೂ, ದಕ್ಷಿಣಕ್ಕೂ ಬೀಳುವುದೇ ಇದಕ್ಕೆ ಕಾರಣ. ಸೂರ್ಯನು ಉತ್ತರದ ತುದಿಯಿಂದ ದಕ್ಷಿಣಕ್ಕೆ ತಿರುಗುವ ದಿನ ದಕ್ಷಿಣಾಯಣಾರಂಭ. ದಕ್ಷಿಣದಿಂದ ಉತ್ತರಕ್ಕೆ ತಿರುಗುವ ದಿನ ಉತ್ತರಾಯಣಾರಂಭ. ಇದರೊಂದಿಗೆ ಭೂಮಿಗೆ ಇನ್ನೊಂದು ರೀತಿಯ ಚಲನೆಯಿದೆ. ಇದಕ್ಕೆ ಅಯನಾಂದೋಲನ ಎಂದು ಹೆಸರು.

ಬುಗುರಿಯು ತನ್ನ ಅಕ್ಷದಲ್ಲಿ ತಿರುಗುತ್ತಿರುವಾಗ ಅದರ ಮೇಲ್ಭಾಗವು ತೊನೆದಾಡುವುದನ್ನು ಗಮನಿಸಿ. ಅದೇ ರೀತಿ ಭೂಮಿಯ ಉತ್ತರ ಧ್ರುವವು ೨೩ ೧/೨ ಡಿಗ್ರಿ ವಾಲಿಕೊಂಡಿರುವಂತೆ ಸುಮಾರು ೨೬ ಸಾವಿರ ವರ್ಷಗಳಲ್ಲಿ ಒಂದು ಸಲ ತೊನೆಯುತ್ತದೆ. ಪರಿಣಾಮವಾಗಿ ಅಯನಾರಂಭದ ದಿನಗಳು. ಅದನ್ನು ಹೊಂದಿಕೊಂಡು ಋತುಗಳು ೭೨ ವರ್ಷಗಳಿಗೆ ಒಂದು ದಿವಸದಷ್ಟು ಹಿಂದಕ್ಕೆ ಸರಿಯುತ್ತವೆ. ಇದರಿಂದಾಗಿ ಧನಿಷ್ಠಾದಿಯಲ್ಲಿದ್ದ ಉತ್ತರಾಯಣಾರಂಭ ಇಂದು ಡಿಸೆಂಬರ್ ೨೨ಕ್ಕೆ ಬಂದು ನಿಂತಿದೆ. ಆದ್ದರಿಂದ ೫೦x೭೨= ಗರಿಷ್ಠ ೩,೬೦೦ ವರ್ಷಗಳ ಹಿಂದೆ ಮಹಾಭಾರತ ಯುದ್ಧ ನಡೆದಿರಬಹುದೇ ಹೊರತು ೫ ಸಾವಿರ ಅಥವಾ ೮ ಸಾವಿರ ವರ್ಷಗಳ ಹಿಂದಲ್ಲ.

ಡಾ. ಎ.ಎಚ್. ಶಿವಯೋಗಸ್ವಾಮಿಗಳು ಸಾಧಿಸಿದ ಮಹಾಭಾರತದಲ್ಲಿ ಬರೆದಿದೆಯೆನ್ನಲಾದ ಗ್ರಹಗತಿಗಳು ವ್ಯಾಸಭಾರತದಲ್ಲಿ ಕಂಡುಬಾರದಿರುವುದು ಬಹಳ ಆಶ್ಚರ್ಯ. ಅಕ್ಟೋಬರ್ ೧೬ರಂದು ಸೂರ್ಯನು ಚಿತ್ತಾ ನಕ್ಷತ್ರದ ೩ನೇ ಪಾದದಲ್ಲಿರುತ್ತಾನೆ. ಆದ್ದರಿಂದ ಸ್ವಾತಿ ಅಥವಾ ಚಿತ್ತಾದಲ್ಲಿ ರಾಹುವಿದ್ದರೆ ಮಾತ್ರ ಅಕ್ಟೋಬರ್ ೧೬ಕ್ಕೆ ರಾಹುಗ್ರಸ್ತ ಸೂರ್ಯಗ್ರಹಣ ಘಟಿಸೀತೇ ಹೊರತು, ಉತ್ತರಾಷಾಢದಲ್ಲಲ್ಲ.

ವ್ಯಾಸರು ೧೩ ದಿವಸಗಳ ಪಕ್ಷದಲ್ಲಾದ ಸೂರ್ಯಗ್ರಹಣದ ವಿವರಗಳನ್ನು ಧೃತರಾಷ್ಟ್ರನಿಗೆ ತಿಳಿಸುವಾಗ ಯುದ್ಧ ಏನೂ ಆರಂಭವಾಗಿರಲಿಲ್ಲ. ಅಲ್ಲದೆ ಮೇಲೆ ನಾನು ತೋರಿಸಿಕೊಟ್ಟ ವ್ಯಾಸ- ಭಾರತದಲ್ಲಿರುವ ವಿವರಗಳಂತೆ ಯುದ್ಧವು ಕಾರ್ತಿಕ ಶುದ್ಧ ಏಕಾದಶಿ ಅಥವಾ ದ್ವಾದಶಿಯಂದು ಆರಂಭವಾಗಬೇಕು.

ಭೀಷ್ಮಪರ್ವದ ೩ನೇ ಅಧ್ಯಾಯದಲ್ಲಿರುವ ಗ್ರಹಗಳ ಸ್ಥಾನ ನಿರ್ದೇಶನ ದ್ವಂದ್ವಾರ್ಥಯುಕ್ತ ಶ್ಲೋಕಗಳಲ್ಲಿರುವುದರಿಂದ ಸುಲಭದಲ್ಲಿ ಅರ್ಥ ಮಾಡಲು ಅಸಾಧ್ಯ.

ಪ್ರಜಾಪತ್ಯಂ ಹಿ ನಕ್ಷತ್ರಂ ಗ್ರಹಸ್ತೀ ಕ್ಷ್ಣೋಮ
ಹಾದ್ಯುತಿ:।
ಶೈಶ್ಚರ: ಪೀಡಯತಿ ಪೀಡಯನ್ ಪ್ರಾಣಿನೋ
ಧಿಕಂ।
ಕೃತ್ವಾ ಚಾಂಗಾರ ಕೋ ವಕ್ರಂ ಜ್ಯೇಷ್ಠಾಯಾಂ
ಮಧುಸೂದನ । ಉದ್ಯೋ ೧೪೨।

ರೋಹಿಣಿ ಮತ್ತು ಮೂಲಾನಕ್ಷತ್ರಗಳಿಗೆ ಪ್ರಜಾಪತಿ ಎಂಬ ಹೆಸರಿದೆ. ಭೀಷ್ಮ ಪರ್ವದ ೩ನೆಯ ಅಧ್ಯಾಯದಲ್ಲಿ ಶನಿಯು ಭಗ ನಕ್ಷತ್ರದಲ್ಲಿದ್ದಾನೆ ಎಂದಿದೆ. ಭಗ ಎಂದರೆ ಮೂಲಾ ಎಂಬರ್ಥವೂ ಇದೆಯಷ್ಟೆ. ಆದ್ದರಿಂದ ಮೂಲಾ ನಕ್ಷತ್ರಕ್ಕೆ ಪೀಡೆ ಕೊಡುತ್ತಿರುವ ಶನಿಯು ವಕ್ರನಾಗಿ ಜೇಷ್ಠಾದಲ್ಲಿದ್ದಾನೆ ಎಂದು ಹೇಳಬಹುದು. ಸಿಂಹರಾಶಿಯಲ್ಲಿ ಮಘಾ ಮೊದಲನೆಯದಾದುದರಿಂದ ಅದನ್ನು ಜ್ಯೇಷ್ಠ ಎನ್ನಲಡ್ಡಿಯಿಲ್ಲ. ಆದುದರಿಂದ ಮಂಗಳನೂ ವಕ್ರನಾಗಿ ಮಘಾದಲ್ಲಿದ್ದಾನೆ.

ಮಘಾ ಸ್ವಂಗಾರಕೊ ವಕ್ರ: ಶ್ರವಣೇಚ ಬೃಹ
ಸ್ಪತಿ
ಭಗಂ ನಕ್ಷತ್ರ ಮಾಕ್ರಮ್ಯ ಸೂರ್ಯಪುತ್ರೇ:
ಪೀಡ್ಯತೇ॥೧೪॥
ಚಿತ್ರಾ ಸ್ವಾತ್ಯಂತರೇಚೈವ ವಿಶ್ರಿತ: ಪರುಷ
ಗ್ರಹ:॥೧೭॥
ವಕ್ರಾನು ವಕ್ರಂ ಕೃತ್ವಾಚ ಶ್ರವಣಂ ಪಾವಕ
ಪ್ರಭ:।
ಬೃಹದ್ರಾಶಿಂ ಸಮೂವೃತ್ಯ ಲೋಹಿತಾಂಗೋ
ವ್ಯವಸ್ಥಿತ:॥೧೮॥

ಸಂವತ್ಸರಸ್ಥಾಯಿನ್ ಚಗ್ರಹೌ ಪ್ರಜ್ವಲಿತಾ ವೃಭೌ।
ವಿಶಾಖಾಯಾಃ ಸಮೀಪಸ್ಥೌ ಬೃಹಸ್ಪತಿ ಶನೈ ಶ್ಚಕೆ ॥ಭ.೩-೨೭॥

ಇಲ್ಲಿ ಶ್ರವಣ ಎಂಬ ಶಬ್ದವು "ಕೇಳು"ಎಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿರಬೇಕು. ಏಕೆಂದರೆ ಮಂಗಳನು ಮಘಾದಲ್ಲಿದ್ದವ ಶ್ರವಣಕ್ಕೆ ಹೋಗಲು ಸಾಧ್ಯವಿಲ್ಲ. ಗುರು ಮತ್ತು ಶನಿಗಳು ವಕ್ರರಾಗಿ ವಿಶಾಖಾದತ್ತ ಹೋಗುತ್ತಿರುವಾಗ ಬೃಹಸ್ಪತಿಯು ಶ್ರವಣಾದಲ್ಲಿರಲು ಸಾಧ್ಯವಿಲ್ಲ.

ಆದ್ದರಿಂದ ಮಂಗಳನು ಮಘಾದಲ್ಲಿ, ಗುರು ಶನಿಗಳು ವೃಶ್ಚಿಕ ರಾಶಿಯಲ್ಲಿ ಹಾಗೂ ರಾಹುವು ಚಿತ್ತಾ ಮತ್ತು ಸ್ವಾತಿಗಳ ನಡುವೆ ಇದ್ದುವು ಎಂದೇ ಹೇಳಬಹುದು. ಇಲ್ಲಿ ಸಿಂಹರಾಶಿಯನ್ನು ವ್ಯಾಸರು ಬ್ರಹ್ಮರಾಶಿ ಎಂದು ಕರೆದಿರುವುದರಿಂದ ಮಹಾಭಾರತ ಕಾಲದಲ್ಲಿ ಕ್ರಾಂತಿವೃತ್ತವು ೧೨ ಭಾಗಗಳಾಗಿ ವಿಂಗಡಿಸಲ್ಪಟ್ಟಿತ್ತು ಎಂದು ತಿಳಿಯಬಹುದು.

ಮಾಘ ಶುಕ್ಲದಲ್ಲಿ ಉತ್ತರಾಯಣಾರಂಭ ಮತ್ತು ಶಿಶಿರ ಋತುವಿನ ಆರಂಭವಾದರೆ ಯುದ್ಧವು ಶರದ್ ಋತುವಿನ ಎರಡನೆ ತಿಂಗಳಲ್ಲಿ ನಡೆಯಬೇಕು. ಅಶ್ವಯುಜ - ಕಾರ್ತಿಕ ಶರದ್ ಋತುವಾಗಿರುವುದರಿಂದ ಕಾರ್ತಿಕ ಶುಕ್ಲದಲ್ಲಿ ಯುದ್ಧಾರಂಭ ಎಂದು ಮೇಲೆ ನಾನು ತೋರಿಸಿಕೊಟ್ಟುದಕ್ಕೆ ತಾಳೆಯಾಗುತ್ತದೆ. ಆದರೆ ಶ್ರೀಕೃಷ್ಣನು ಸಂಧಾನಕ್ಕೆ ಹೊರಟ ದಿನದ ಬಗೆಗೆ ಒಂದು ಸರಳವೆಂದು ತೋರುವ, ಬಹುಕ್ಲಿಷ್ಟವಾದ ಶ್ಲೋಕವು ವಿಮರ್ಶಿಸುವಂತಹುದು.

ಮೈತ್ರೇ ಮುಹೂರ್ತೇ ಸಂಪ್ರಾಪ್ತೇ ಮೃದ್ವರ್ಚಿಷಿ
ದಿವಾಕರೇ॥ ಕೌಮುದೇ ಮಾಸಿ ರೇವತ್ಯಾಂ ಶರದಂತೇ ಹಿಮಾಗಮೇ [illegible] ೮೩-೭॥

ಶ್ರೀಕೃಷ್ಣನು ಮೈತ್ರ ಮುಹೂರ್ತದಲ್ಲಿ, ರೇವತೀ ನಕ್ಷತ್ರವಿರುವಾಗ, ಶರಧೃತುವಿನ ಅಂತ್ಯದಲ್ಲಿ ಹೇಮಂತ ಋತುವಿನ ಪ್ರಾರಂಭದಲ್ಲಿ ಹಸ್ತಿನಾವತಿಗೆ ಹೊರಟನು ಎಂದು ಇದುವರೆಗೆ ಈ ಶ್ಲೋಕಕ್ಕೆ ಅರ್ಥ ಮಾಡಲಾಗಿದೆ. ಇದು ಹೇಗೆ ಸಾಧ್ಯ? ಶರಧೃತುವಿನ ಅಂತ್ಯದಲ್ಲಿ ಅಶೌಚ ಕಾರ್ಯಗಳಿಗಾಗಿ ಪಾಂಡವರು ಗಂಗಾತೀರದಲ್ಲಿದ್ದರು.

ಇದನ್ನು ಅರ್ಥೈಸಬೇಕಾದರೆ ಯುದ್ಧಕಾಲದಲ್ಲಾದ ಅಪೂರ್ವ ಸೂರ್ಯಗ್ರಹಣದ ವಿವರಣೆಯನ್ನು ಓದಬೇಕು. ಯಾವುದೇ ತಿಂಗಳಿನ ಒಂದು ಪಕ್ಷದಲ್ಲಿ ಹದಿಮೂರು ದಿವಸಗಳಿದ್ದರೆ ಅದು ತ್ರಯೋದಶ ದಿನ ಪಕ್ಷ ಎಂದು ಕರೆಯಲ್ಪಡುತ್ತದೆ.


ಹುಣ್ಣಿಮೆಯು ಸೂರ್ಯೋದಯವಾಗಿ ೫ ಗಳಿಗೆಗಳೊಳಗೆ ಮುಗಿದರೆ, ಮುಂದಿನ ಹದಿಮೂರನೇ ದಿನದಲ್ಲಿ ಅಮವಾಸ್ಯೆ ಬರುತ್ತದೆ. ಮಹಾಭಾರತ ಯುದ್ಧಕಾಲದಲ್ಲಿ ೧೩ ದಿನದಲ್ಲಿ ಅಮವಾಸ್ಯೆಯಿದ್ದು, ರಾಹುಗ್ರಸ್ತ ಸೂರ್ಯಗ್ರಹಣವಿತ್ತು ಎಂಬುದರಿಂದ ಹಿಂದಿನ ಹುಣ್ಣಿಮೆಯು ೫ ಗಳಿಗೆಗಳೊಳಗೆ (ಸೂರ್ಯೋದಯವಾಗಿ) ಮುಗಿದಿರಬೇಕು.

ಅದನ್ನೇ ಇಲ್ಲಿ ವ್ಯಾಸರು ಸೂಚಿಸಿದ್ದು. ಎರಡು ಗಳಿಗೆಗೆ ಒಂದು ಮಹೂರ್ತ. ಮೈತ್ರವು ದಿನದ ಮೂರನೇ ಮಹೂರ್ತ. ಶರತ್=ವರ್ಷ. ಹಿಮಾ=ಚಂದ್ರ=ಹುಣ್ಣಿಮೆ. ಕೌಮುದೀಮಾಸ= ಉತ್ಸವದ ತಿಂಗಳು= ಅಶ್ವಯುಜ (ತುಲಾಮಾಸ).

ಆದುದರಿಂದ ಶ್ಲೋಕವನ್ನು ಹೀಗೆ ವಿವರಿಸಬಹುದು: ಅಶ್ವಯುಜ ತಿಂಗಳಲ್ಲಿ ರೇವತಿ ನಕ್ಷತ್ರವಿದ್ದ ದಿನ, ಮೈತ್ರ ಮುಹೂರ್ತದ ಪ್ರಾರಂಭದಲ್ಲಿ ಹುಣ್ಣಿಮೆಯ ತಿಥಿ ಮುಗಿದಾಗ, ವರ್ಷ ಋತುವಿನ ಅಂತ್ಯದಲ್ಲಿ ಶ್ರೀಕೃಷ್ಣನು ಸಂಧಾನಕ್ಕಾಗಿ ಹಸ್ತಿನಾವತಿಗೆ ಹೊರಟನು. ೪ನೇ ಗಳಿಗೆಯಲ್ಲಿ ಹುಣ್ಣಿಮೆಯು ಮುಗಿದುದರಿಂದಲೇ ಮುಂದಿನ ೧೩ನೆಯ ದಿನ ರಾಹುಗ್ರಸ್ತ ಸೂರ್ಯಗ್ರಹಣ ಘಟಿಸಿತು.

ಉತ್ತರಾಯಣಾರಂಭ ಧನಿಷ್ಠಾದಿಯಲ್ಲಾದುದರಿಂದ ಫೆಬ್ರುವರಿ ೬ ಮತ್ತು ೧೧ರ ನಡುವೆ ಇರಬೇಕು. ಆದುದರಿಂದ ಅಶ್ವಯುಜದಲ್ಲಿ ಸಂಭವಿಸಿದ ಸೂರ್ಯಗ್ರಹಣವು ಅಕ್ಟೋಬರ್ ೩೧, ನವೆಂಬರ್ ೪,೨,೩ ತಾರೀಖುಗಳಲ್ಲಷ್ಟೆ ಬಹ್ವಂಶ ನಡೆದಿರಲು ಸಾಧ್ಯ. ಸ್ಪಷ್ಟವಾಗಿ ಯಾವ ದಿವಸ ಆ ಗ್ರಹಣ ನಡೆಯಿತು ಎಂಬುದನ್ನು ನಾನು ಹೇಳಬಲ್ಲೆನಾದರೂ ಅದು ಆಖೈರದ ನಿರ್ಣಯವಾದೀತು.

ಒಟ್ಟಿನಲ್ಲಿ ಸ್ಥೂಲವಾಗಿ ಹೇಳುವುದಾದರೆ, ವ್ಯಾಸೋಕ್ತಿಗಳನ್ನು ವೈಜ್ಞಾನಿಕವಾಗಿ ವಿಮರ್ಶಿಸಿದಾಗ ಮಹಾಭಾರತದ ಕಾಲ ಕ್ರಿ.ಪೂ. ೧೬ ಮತ್ತು ೧೫ನೆಯ ಶತಮಾನಗಳ ಮಧ್ಯಭಾಗ ಎನ್ನಲಡ್ಡಿಯಿಲ್ಲ. ಇತ್ತೀಚೆಗೆ ಗುಜರಾತಿನ ಬಳಿ ಸಮುದ್ರದಡಿಯಲ್ಲಿ ಶ್ರೀಕೃಷ್ಣನ ದ್ವಾರಕೆ ಪತ್ತೆಯಾಗಿ, ದೂರದರ್ಶನದಲ್ಲೂ ತೋರಿಸಲ್ಪಟ್ಟಿತು. ಅಲ್ಲಿ ಸಿಕ್ಕ ವಸ್ತುಗಳು ಕಾರ್ಬನ್-೧೪ ಪರೀಕ್ಷೆಯಿಂದ ಕ್ರಿ.ಪೂ. ೧೫ನೇ ಶತಮಾನದವುಗಳು ಎಂದು ತಿಳಿದುಬಂದಿರುವುದು ವ್ಯಾಸೋಕ್ತಿಗೆ ತಾಳೆಯಾಗುತ್ತದೆ. ●



ಪತ್ತೇದಾರ ರಾಮರಾಯರು

ಮೂಲ: ನವರತ್ನ ರಾಮರಾಯರು
ಸಂಗ್ರಹ: ಬಸವರಾಜ ಕುಡಚಿ



ಪತ್ತೇದಾರ ರಾಮರಾಯರು

ಬೆಳಗಿನ ಜಾವ ಸುಮಾರು ಐದು ಗಂಟೆ ಇದ್ದಿರಬಹುದು. ನಾನು ಮಲಗಿದ್ದ ಕೋಣೆಯ ಕಿಟಕಿಯಲ್ಲಿ ಕೆಟ್ಟ ಅಳುವು ಆಚೆ ಬೀದಿಯಲ್ಲಿಂದ ನುಗ್ಗಿ ಬಂದು ನಮ್ಮನ್ನು ಹೊಡೆದು ಎಬ್ಬಿಸಿತು. ನನ್ನ ಹೆಂಡತಿ, 'ಯಾರೋ ಹೆಂಗಸು, ಕೆಟ್ಟ ಸ್ವರದಿಂದ ಅಳುತ್ತಿದ್ದಾಳೆ, ಏನೋ ಪಾಪ, ವಿಚಾರಿಸಿ', ಎಂದು ತಾನು ಎದ್ದು ಕಿಟಕಿಯ ಬಳಿ ನಿಂತು.

'ಯಾರಮ್ಮ ಅದು? ಯಾಕಮ್ಮ ಅಳುತ್ತೀರಿ?' ಎಂದು ಕೇಳಿದಳು. ಆ ವ್ಯಕ್ತಿ

'ನಾನು ಸುಬ್ಬಮ್ಮ ಸುಬೇದಾರರಿದ್ದಾರೆಯೆ?' ಎಂದು ಬಿಕ್ಕುಗಳ ನಡುವೆ ಕೇಳಿ, ಇನ್ನೂ ಗಟ್ಟಿಯಾಗಿ ಅಳುವುದಕ್ಕೆ ಮುಂದು ಮಾಡಿದಳು. ಅದಕ್ಕೆ ನನ್ನ ಹೆಂಡತಿ,

'ಅಯ್ಯೋ, ಕೃಷ್ಣಪ್ಪನವರ ಹೆಂಡತಿ ಸುಬ್ಬಮ್ಮ ನಾವು ನಿನ್ನೆ ಅವರ ಮಗಳ ಮದುವೆಗೆ ತಾಂಬೂಲಕ್ಕೆ ಹೋಗಿರಲಿಲ್ಲವೆ? ಏನಾಯಿತೋ ಏನೋ ಪಾಪ,' ಎಂದು ಹೋಗಿ ದೀಪ ಹಚ್ಚಿ ಮನೆಯ ಬಾಗಿಲು ತೆಗೆದು,

'ಸುಬ್ಬಮ್ಮ ಯಾಕ್ರೀ? ಏನಾಯ್ತ್ರೀ? ಹೆದರಬೇಡಿ, ಒಳಗೆ ಬನ್ನಿ, ಹೂಂ, ಯಜಮಾನರಿದ್ದಾರೆ -ಬನ್ನಿ' ಎಂದು ಹೊರಗೆ ಅಳುತ್ತ ನಿಂತಿದ್ದ ಮುತ್ತೈದೆಯನ್ನು ಕೈಹಿಡಿದು ಒಳಗೆ ಕರೆದುಕೊಂಡು ಬಂದಳು. ಅಷ್ಟು ಹೊತ್ತಿಗೆ ಶಾಲು ಹೊದ್ದುಕೊಂಡು ನಾನೂ ಕೋಣೆಯೊಳಗಿನಿಂದ ಈಚೆಗೆ ಬಂದೆ.

ಸುಬ್ಬಮ್ಮ-ಹೆಸರುಗಳನ್ನು ಬದಲಾಯಿಸಿದ್ದೇನೆ-ಮೂವತ್ತು ಮೂವತ್ತೈದು ವರ್ಷದ ಸಂಕೇತಿ ಬ್ರಾಹ್ಮಣ ಮುತ್ತೈದೆ. ಲಕ್ಷಣವಾದ ಸಾತ್ವಿಕ ರೂಪು. ಈಗ ಕ್ಲೇಶದಿಂದ ಕೆಳಗೆಟ್ಟು ವಿಕಾರವಾಗಿದೆ. ತಲೆ ಕೆದರಿದೆ. ಕಣ್ಣುಗಳು ಊದಿವೆ. ಆಕೆಯ ಯಜಮಾನರನ್ನು ನಾನು ಬಲ್ಲೆ. ಸಾಮಾನ್ಯ ಅನುಕೂಲಸ್ಥರಾದ ವೈದಿಕರು. ಸ್ವಲ್ಪ ಜಮೀನಿನಿಂದಲೂ, ವೈದಿಕವೃತ್ತಿಯಿಂದಲೂ ಜೀವನ ಮಾಡಿಕೊಂಡು ಒಬ್ಬರ ಹವ್ಯಾಸಕ್ಕೆ ಹೋಗದೆ ವೇದ, ಶಾಸ್ತ್ರ ಪುರಾಣಗಳನ್ನು ಓದುತ್ತಾ ಸಾಧುವಾಗಿ ಕಾಲ ಕಳೆಯುವ ಪ್ರಾಣಿ.

ಏನೆಂದು ವಿಚಾರಿಸಲಾಗಿ ಆಕೆ ಹೇಳಿದಳು-

ಪತ್ತೇದಾರ ರಾಮರಾಯರು

'ನಮ್ಮ ಒಬ್ಬಳೇ ಮಗಳ ಮದುವೆ ಹಿಂದಿನ ದಿನ ನಮಗೆ ದೇವರು ಕೊಟ್ಟ ಮಟ್ಟಿಗೆ ಚೆನ್ನಾಗಿ ಮಾಡಿದೆವು. ನಾವು ಬಡವರು ಮದುವೆ ಹೆಣ್ಣಿಗೆ-ಪಾಪ ಮಗುವಿನ ಆಸೆ ಇರೋದಿಲ್ಲವೇ-ಹಾಕುವುದಕ್ಕಾಗಿ ನಮ್ಮ ನೆಂಟರು, ಸ್ನೇಹಿತರು ಇವರುಗಳ ಮನೆಯಿಂದ ವಸ್ತ್ರ ಒಡವೆ ಎರವಲು ಇಸುಗೊಂಡು ಬಂದಿದ್ದೆವು. ಉತ್ಸವ, ಊಟ, ಉಪಚಾರ ಎಲ್ಲ ಮುಗಿಯಬೇಕಾದರೆ ಸರಿರಾತ್ರಿ ಆಯಿತು. ಮಗು ಬಹಳ ಸೋತು ಹೋಗಿ, ಕೂತ ಕಡೇನೆ ತೂಕಡಿಸಿ ಮಲಗುವುದು, ಒಡವೆ, ಭಾರಕ್ಕೆ ಅಮ್ಮ ಕಿವಿ ಜಗ್ಗುತ್ತೆ ಮೂಗು ನೋಯುತ್ತೆ, ಸೆಕೆ ಆಗುತ್ತೆ ಎಂದು ಹೇಳಿ? ಮನೆಯಲ್ಲಿ ಎಲ್ಲರೂ ನಮ್ಮವರೆ. ಮನೆ ತಲೆಬಾಗಿಲು ಹಾಕಿ, ಹಜಾರದಲ್ಲಿ ಗಂಡಸರು ಮಲಗಿದ್ದರು. ನಮ್ಮ ಯಜಮಾನರು, ನಮ್ಮ ಅಣ್ಣ, ವೆಂಕಟರಾಮಯ್ಯನವರು ತಮ್ಮ ಭಾವ ಮೈದುನ, ಇಂಥವರೇ- ಮಲಗಿದ್ದರು. ಬಹಳ ಹೊತ್ತು ಮಾತನಾಡುತ್ತಾ ಇದ್ದರು. ಅವರ ಮಾತು ಮುಗಿಯುವುದರೊಳಗಾಗಿ ನನಗೆ ನಿದ್ರೆ ಬಂದು ಬಿಟ್ಟಿತ್ತು. ಬೆಳಗ್ಗೆ ದೇವಸ್ಥಾನದ ವಾಲಗ ಪೂ ಅನ್ನೋಕೆ ಮುಂಚೇನೇ ನಾನೂ ಎದ್ದೆ. ಕಣ್ಣು ಉಜ್ಜಿಕೊಂಡು ನೋಡುತ್ತೇನೆ- ಒಡವೆ ಬುಟ್ಟಿ ಕಾಣಲಿಲ್ಲ. ಗಾಬರಿಯಾಗಿ ಗಟ್ಟಿಯಾಗಿ ಕೂಗಿ ಅತ್ತೆ. ಎಲ್ಲರೂ ಏನು-ಏನು- ಎನ್ನುತ್ತಾ

ದಿ. ನವರತ್ನ ರಾಮರಾಯರ "ಕೆಲವು ನೆನಪುಗಳು"ಪುಸ್ತಕದಿಂದ ಆಯ್ದ ಭಾಗ. ಇದೊಂದು ಹಳೆಗಾಲದ ಘಟನೆಯೊಂದನ್ನು ಚಿತ್ರಿಸಿದ ಪ್ರಸಂಗ - ನವರತ್ನ ರಾಮರಾಯರ ಆತ್ಮಕಥಾತ್ಮಕವಾದ ಕೆಲವು ನೆನಪುಗಳ ಪುಸ್ತಕದಿಂದ ಆಯ್ದದ್ದು. ಸ್ವತಃ ರಾಮರಾಯರು ಮುತುವರ್ಜಿ ವಹಿಸಿ ಪೋಲೀಸರ ನೆರವಿನಿಂದ ಪತ್ತೆ ಹಚ್ಚಿದ ಕಳವಿನ ಪ್ರಸಂಗ ಷರ್ಲಾಕ್ ಹೋಮ್ಸ್ ಕತೆಯಂತೆಯೇ ರೋಚಕವಾಗಿದೆಯಲ್ಲದೆ ಆ ಕಾಲದ ಶೈಲಿಯನ್ನೂ ಪರಿಚಯಿಸುತ್ತದೆ.

ಅಳೋದು, ಹೀಗೆ ಮಾಡಹತ್ತಿದಳು. ಸ್ವಲ್ಪ ತಾಳಮ್ಮ ಮಲಗೋ ಹೊತ್ತಿಗೆ ಎಲ್ಲ ತೆಗೀವಂತೆ ಎಂದು ಸಮಾಧಾನ ಮಾಡಿ, ಸರಿರಾತ್ರಿ ಒಂದು ಗಂಟೆ ಒಂದೂವರೆ ಗಂಟೆ ಇರಬಹುದು, ಆಗ ಒಡವೆಗಳನ್ನೆಲ್ಲಾ ತೆಗೆದು ಚಿಕ್ಕ ಒಂದು ಬೆತ್ತದ ಬುಟ್ಟಿಯಲ್ಲಿ ಇರಿಸಿ, ಅದರ ಮೇಲೆ ಮಗು ಉಟ್ಟಿದ್ದ ಪಟ್ಟೆ ಸೀರೆಯನ್ನು ಮಡಿಸಿ ಮುಚ್ಚಿ, ನಾವು ಮಲಗುವ ಮನೆಯಲ್ಲಿನ ನಾಲ್ಕು ಕಾಲು ಮಣೆಯ ಮೇಲೆ ಇಟ್ಟು ಅದೇ ಕೊಠಡಿಯಲ್ಲಿ ನಾವುಗಳು -ನಾಲ್ಕೈದು ಜನ ಹೆಂಗಸರು-ಮಲಗಿದೆವು. ದೀಪ ಉರಿಯುತ್ತಿತ್ತು. ಆಯಾಸವಾಗಿತ್ತಾದ್ದರಿಂದ ಪ್ರಜ್ಞೆ ತಪ್ಪಿದ ಹಾಗೆ ನಿದ್ರೆ ಬಂತು. ನಮಗೇನೂ ಭಯವಿರಲಿಲ್ಲ. ಭಯವ್ಯಾಕೆ ಓಡಿ ಬಂದರು. ಇಷ್ಟು ಜನರಿದ್ದ ತುಂಬಿದ ಮನೆಯಲ್ಲಿ ಕಳವು ಎಂದರೇನು? ನೀನೇ ಎಲ್ಲೋ ಇಟ್ಟು ಮರೆತಿರಬೇಕು. ಜ್ಞಾಪಿಸಿಕೋ, ನೋಡು, ಅಂದರು. ಮನೆಯೆಲ್ಲಾ ಹುಡುಕಿದೆವು. ನಾನು ಹುಚ್ಚಿಯ ಹಾಗೆ ನಿಂತಿದ್ದೆ. ಅಷ್ಟರಲ್ಲೆ ನಮ್ಮಣ್ಣ ಪೋಲೀಸರಿಗೆ ತಿಳಿಸಿ ಪೋಲೀಸು ಇನ್‌ಸ್ಪೆಕ್ಟರು, ಜಮಾದಾರರು, ರೈಟರು ಇವರುಗಳನ್ನು ಕರೆದುಕೊಂಡು ಬಂದರು. ಅಷ್ಟು ಹೊತ್ತಿಗೆ ಊರಿಗೆ ಊರೇ ನಮ್ಮ ಮನೆಗೆ ಬಂದು ನೆರೆದಿತ್ತು. ನನಗೆ ಒಡವೆಗಳನ್ನು ಕೊಟ್ಟಿದ್ದವರೂ ಬಂದಿದ್ದರು. ಅವರುಗಳು ಗುಸುಗುಸು ಏನೇನೋ ಮಾತನಾಡಿಕೊಂಡು-ಆಮೇಲೆ ಅವರ ಪೈಕಿ ಒಬ್ಬರು,

ಪುಸ್ತಕ ವಿಭಾಗ

"ನೋಡಿ, ಸುಬ್ಬಮ್ಮನವರೆ, ನಾವೂ ಬಡವರು, ನಂಬಿ ಮಾಲು ಕೊಟ್ಟಿದ್ದೇವೆ, ನೀವೇ ಎಲ್ಲಿಯೋ ನಿದ್ದೆಗಣ್ಣಿನಲ್ಲಿ ಇಟ್ಟು ಮರೆತಿರಬಹುದು, ಜ್ಞಾಪಿಸಿಕೊಂಡು ತೆಗೆದುಕೊಟ್ಟುಬಿಡಿ, ಇನ್ನು ಸುಮ್ಮನೆ ಪೋಲೀಸು, ಕೋರ್ಟು, ಕಛೇರಿ, ಯಾಕೆ?" ಅಂದರು. ಇತರರೂ ಅದನ್ನೇ ಹೇಳೋ ಹಾಗೆ ತಲೆದೂಗಿದರು. ನನಗೆ ಎದೆ ಧಸಕ್ ಅಂದು, ಪ್ರಾಣವೇ ಹೋಗೋ ಹಾಗಾಯಿತು. ಎರವಲು ತಂದ ಒಡವೆಯನ್ನು ದಕ್ಕಿಸಿಕೊಳ್ಳುವುದಕ್ಕೆ ಈ ಆವಟ ಎತ್ತಿದ್ದೇವೆಂದು ತಿಳಿದಿದ್ದಾರೆ. ಇನ್ನೇನು ಗತಿ, ಯಾಕೆ ಬದುಕಿರಬೇಕು? ನಾವು ಬಡವರಾದರೂ ಮಾನಸ್ತರು, ಸತ್ಯವಂತರು ಎನ್ನಿಸಿಕೊಂಡು ಬಾಳಿದೆವು. ನಮ್ಮ ಯಜಮಾನರು ಇನ್ನು ಪ್ರಾಣವನ್ನಿಟ್ಟುಕೊಂಡಿರುವುದಿಲ್ಲ. ನನ್ನದೂ ಅದೇ ದಾರಿ. ಕಾವೇರಮ್ಮ ಕಾದಿದ್ದಾಳೆ. ನಮ್ಮ ಗೌರಿ ಗತಿ ಏನು-ಎಂದು ಗಟ್ಟಿಯಾಗಿ ಅತ್ತೆ- ನಮ್ಮ ಯಜಮಾನರು-ಯಾವಾಗಲೂ ನಾಲ್ಕು ಜನರ ಎದುರಿಗೆ ನನ್ನ ಸಂಗಡ ಸಲಿಗೆಯಾಗಿ ಮಾತನಾಡಿದವರೇ ಅಲ್ಲ-ಬಂದು ನನ್ನ ತಲೆ ಮೇಲೆ ಕೈಯಿಟ್ಟು ಕಣ್ಣು ಒರೆಸಿಕೊಳ್ಳಲಿಕ್ಕೆ ಅಂಗವಸ್ತ್ರ ಕೊಟ್ಟು, "ಅಳಬೇಡ, ದೇವರಿದ್ದಾನೆ, ದ್ರೌಪದಿಯನ್ನು ಕಾಪಾಡಲಿಲ್ಲವೆ? ನಮ್ಮನ್ನು ಕೈಬಿಟ್ಟಾನೆಯೇ?" ಎಂದು, ಅಲ್ಲಿಂದ ಜನರ ಕಡೆ ತಿರುಗಿ "ನೋಡಿ ಸುಬ್ಬರಾಯರೆ, ಸೋಮಯಾಜಿಗಳೆ, ಶಾಸ್ತ್ರಿಗಳೆ, ನಾವು ಏನು ಪಾಪ ಮಾಡಿದ್ದೇವೋ ದೇವರು ನಮಗೆ ಈ ಕಷ್ಟ ತಂದುಬಿಟ್ಟ. ಅನುಭವಿಸೋಣ, ಆದರೆ ನೀವು ನಂಬಿ ಕೊಟ್ಟ ಒಡವೆ ಹೋಗುತ್ತೆಂದು ಕನಸಿನಲ್ಲೂ ಹೆದರಬೇಡಿ. ನನ್ನ ಮನೆ, ಬಾಗಿಲು, ಭೂಮಿ, ಕಾಣಿ, ಕೊನೆಗೆ ಪಾತ್ರೆ, ಪದಾರ್ಥ ಬಟ್ಟೆಬರೇ ಕೂಡ ಮಾರಿ ಋಣವಿಮುಕ್ತರಾಗುತ್ತೇವೆ. ಇದೋ ಅರ್ಕೇಶ್ವರನ ಸಾಕ್ಷಿಯಾಗಿ ಹೇಳುತ್ತೇನೆ," ಅಂದರು.

ಅಷ್ಟು ಹೊತ್ತಿಗೆ ಪೋಲೀಸು ಇನ್‌ಸ್ಪೆಕ್ಟರು ಪೋಲೀಸಿನವರು ಮನೆ ಜನಗಳ ಹೊರತು ಬಾಕಿಯವರನ್ನೆಲ್ಲಾ ಆಚೆಗೆ ಕಳುಹಿ ವಿಚಾರಣೆ ಪ್ರಾರಂಭ ಮಾಡಿದರು. ಕಳವಾದ ಮಾಳಿನ ಪಟ್ಟಿ ಬರೆದುಕೊಂಡರು. ಆ ಸಾಮಾನುಗಳನ್ನು ನಮಗೆ ಕೊಟ್ಟವರ ಹೆಸರು ಬರೆದುಕೊಂಡರು. ಆಮೇಲೆ ಮನೆಯನ್ನೆಲ್ಲಾ- ಅಡಿಗೆ ಮನೆ, ದೇವರು ಮನೆ ಕೂಡ ಬಿಡದಹಾಗೆ- ಶೋಧಿಸಿದರು. ಅವರವರಲ್ಲೇ ಏನೇನೋ ತುರುಕು ಮಾತಿನಲ್ಲಿ ಮಾತನಾಡಿಕೊಂಡು ಆಮೇಲೆ ಜಮೇದಾರರು ನನಗೆ, "ನೀವು ಬಹಳ ಹುಷಾರು ಹೆಂಗಸು. ಒಡವೆ ಏನಾಯಿತು ಹೇಳಿ? ನೀವು ಹೇಳಿದ್ದೆಲ್ಲಾ ನಿಜವಾಗಿದ್ದರೆ, ಹೊರಗಿನವರು ಯಾರು ಬರುತ್ತಾರೆ?" ಎಂದರು.

ಅವಸು ತುರುಕನಾದರೇನು? ಕಷ್ಟಕಾಲದಲ್ಲಿ ಯಾರ ಕಾಲು ಕಟ್ಟಿದರೇನು? ಅಂದುಕೊಂಡು ಕೈಮುಗಿದು ನಮಸ್ಕಾರ ಮಾಡಿ, "ಸತ್ಯವಾಗೂ ನಾನು ಏನೂ ಕಾಣೆ- ಮನೆಯಲ್ಲಿದ್ದವರೆಲ್ಲ ನಮ್ಮವರೆ. ಸತ್ಯವಂತರು, ನಿಷ್ಠರು," ಎಂದೆ.

"ನಿಮ್ಮಣ್ಣ ಸತ್ಯವಂತರು, ಅವರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರೆ ಬಾಯಿಬಿಡುತ್ತಾರೆ" ಎಂದು ಒಬ್ಬ ಪೋಲೀಸಿನವನನ್ನು ಕರೆದು, ನಮ್ಮಣ್ಣನ ಕಡೆ ತೋರಿಸಿ, ಅವರನ್ನು ಹಿಡಿಸಿ ಪೋಲೀಸಿಗೆ ಕಳಿಸಿದರು. ಸೆಳೆದುಕೊಂಡು ಹೋಗುತ್ತಿದ್ದಾಗ ನಮ್ಮಣ್ಣ ನನ್ನ ಕಡೆ ನೋಡಿದ್ದು ಜ್ಞಾಪಿಸಿಕೊಂಡರೆ ನನ್ನ ಹೊಟ್ಟೆ ಬೆಂದು, ನಾನೇಕೆ ಸಾಯಬಾರದು ಅನ್ನಿಸುತ್ತೆ. ಹೊಳೆಗೆ ಬೀಳುವುದು ಸುಲಭ. ಆದರೆ ಈ ಅಪವಾದದ ಹೊರೆ ಇರುವಾಗ ಹ್ಯಾಗೆ ಸಾಯಲಿ? ನಮ್ಮ ಯಜಮಾನರ ಗತಿ ಏನು? ನಮ್ಮ ಗೌರಿ? ಸುಬೇ

ಪತ್ತೇದಾರ ರಾಮರಾಯರು

ದಾಗರು ಬ್ರಾಹ್ಮಣರು, ಒಳ್ಳೆಯವರು, ಬಹಳ ಪ್ಯಾಸು ಮಾಡಿದ್ದಾರೆ; ಬುದ್ಧಿವಂತರು-ಅವರಲ್ಲಿ ಹೋಗಿ ನನ್ನ ಮಾನ ಪ್ರಾಣ ರಕ್ಷಿಸಿ, ನಾನು ನಿಮ್ಮ ಅಕ್ಕ ತಂಗಿ ಬಡವೆ. ದೇವರ ಸತ್ಯವಾಗೂ ನಿರಪರಾಧಿ ಎಂದು ಅಡ್ಡ ಬೀಳೋಣವೆಂದು ಪೋಲೀಸಿನವರಿಂದ ತಪ್ಪಿಸಿಕೊಂಡು ಇಲ್ಲಿಗೆ ಬಂದೆ.'

ಹೀಗೆಂದು ಹೇಳಿ ಆಕೆ ಬಿಕ್ಕಿ ಬಿಕ್ಕಿ ಅತ್ತಳು. ನನ್ನ ಹೆಂಡತಿ ಆಕೆಯ ಹೆಗಲಿನ ಮೇಲೆ ಕೈ ಇಟ್ಟು ಆಕೆಯ ಕಣ್ಣು ಒರೆಸಿ, 'ಅಳಬೇಡಿ ಅಮ್ಮ ದೇವರಿದ್ದಾನೆ. ನಮ್ಮಂಥ ಅಬಲೆಯರನ್ನ ಕಾಪಾಡೋಕೆ. ಕೂತುಕೊಳ್ಳಿ. ನಮ್ಮ ಯಜಮಾನರು ಬಂದು ಅವರೇ ಈ ಕೇಸನ್ನು ವಿಚಾರಿಸುತ್ತಾರೆ,' ಎಂದು ಹೇಳಿದರು.

ಸರಿ, ಈ ಕೇಸನ್ನು ನಾನೇ ವಿಚಾರಿಸಬೇಕೆಂದು ನಮ್ಮ ಮನೆಯ ಅಧಿಕಾರ ಸ್ಥಾನದಲ್ಲಿ ಅಪ್ಪಣೆಯಾಯಿತಲ್ಲ. ಆಗಿನ ಪೋಲೀಸು ರೂಲ್ಸಿನ ಪ್ರಕಾರ ಕೂಡ ಅದು ನನ್ನ ಕರ್ತವ್ಯವೂ ಆಗಿತ್ತು. ಐನೂರೋ-ಸಾವಿರವೋ-ರೂಪಾಯಿಗಳ ಮೇಲಿನ ಕಳುವುಗಳು **heinous offences** ಎಂಬ ವರ್ಗಕ್ಕೆ ಸೇರಿದುವು; ಅವುಗಳನ್ನು ಅಮಲ್ದಾರರೇ ತನಿಖೆ ಮಾಡಬೇಕೆಂಬ ನಿಯಮ. ಅದೂ ಅಲ್ಲದೆ-ಈಗ ಹೇಳಲು ಸಂಕೋಚವೇಕೆ? ಈ ಸಾಧು ಬ್ರಾಹ್ಮಣ ವೈದಿಕ ಕುಟುಂಬದವರು ಕರ್ಕಶವಾದ ತನಿಖೆಗೆ ಒಳಪಟ್ಟು ಏನು ಕ್ಲೇಶವನ್ನು ಅನುಭವಿಸುತ್ತಾರೋ ಎಂಬ ಕಳವಳ ಬೇರೆ. ನಾನು ನನ್ನ ಎತ್ತಿನ ಬಂಡಿ ಕಟ್ಟಿಸಿ ಅದರಲ್ಲಿ ಬರುವಂತೆ ಸುಬ್ಬಮ್ಮನವರಿಗೆ ಹೇಳಿ, ನನ್ನ ಕುದುರೆಯ ಮೇಲೆ ಕುಳಿತು ಯಡತೊರೆಗೆ ಹೋದೆ.

ಅಲ್ಲಿ ಕೃಷ್ಣಪ್ಪನವರ ಮನೆಯ ಮುಂದೆ ಪರಿಶೆ ನೆರೆದಿತ್ತು. 'ಆ ಬ್ರಾಹ್ಮಣ ಗಿತ್ತಿ ಚಾಲು ನೋಡಿದ! ಬದುಕು ಎತ್ತಿ ಅಕ್ಕೊಳ್ಳೋಣ ಅಂತ ಎತ್ತಿರೊ ಆಟಾನ! ಅಯ್ಯೋ ಪಾಪ ಯಂತ ವಳ್ಳೇರೂ, ಇಂತ ಪಾಡು ಬರಬೈದಾ' 'ಕೃಷ್ಣಪ್ಪನೋರು ದೇವರಂಥ ಮನುಷ್ಯರು; ಇದನ್ನು ಅವರ ಹೆಂಡತಿ, ಮೈದ ಸೇರಿ ಮಾಡಿರಬೇಕು.'

ಹೀಗೆ ನಾನಾ ರೀತಿಯಲ್ಲಿ ಜನ ಮಾತನಾಡುತ್ತಿದ್ದದ್ದನ್ನು ಕೇಳುತ್ತಾ ಕಳವು ನಡೆದ ಮನೆಯೊಳಕ್ಕೆ ಹೋದೆ. ಅಲ್ಲಿ ಇನ್‌ಸ್ಪೆಕ್ಟರೂ ಜಮಾದಾರರೂ ದರ್ಬಾರು ಮಾಡುತ್ತಿದ್ದರು. ನಾನು ಹೋದ ಕೂಡಲೆ ಎಲ್ಲರೂ ಎದ್ದರು. ಎಲ್ಲಿಂದಲೋ ಒಂದು ಕುರ್ಚಿಯನ್ನು ತಂದು ಹಾಕಿದರು. ನಾನು ಕುಳಿತು ದರ್ಬಾರಿನ ಅಧ್ಯಕ್ಷನಾಗಿ ಅದುವರೆಗೆ ನಡೆದದ್ದರ ವರದಿಯನ್ನು ಕೇಳಿದೆ. ಇನ್‌ಸ್ಪೆಕ್ಟರು ನನ್ನ ಕಿವಿಯಲ್ಲಿ,

'ಆ ಬ್ರಾಹ್ಮಣ ಇದ್ದಾರಲ್ಲ, ಅವರು ಬಹಳ ಗುಗ್ಗೂ. ಇದೆಲ್ಲ ಹೆಂಗಸರದೇ ಕೆಲಸ. ಅವರ ಅಣ್ಣ ಒಬ್ಬ ಬಹಳ ಚಾಲೋಕು ಇದಾನೆ. ಅವನ್ನ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ದಫೇದಾರ್ ನಂಜಪ್ಪ ವಿಚಾರಿಸುತ್ತಿದ್ದಾನೆ.

ವಚನಗುಮ್ಮಟ


ದಿವಂಗತ ಬಿ.ಎಂ. ಶ್ರೀಕಂಠಯ್ಯನವರು ತಮ್ಮ ಉತ್ತರ ಕರ್ನಾಟಕದ ಪ್ರವಾಸದಲ್ಲಿ ಒಮ್ಮೆ ಬಿಜಾಪುರಕ್ಕೆ ಹೋಗಿದ್ದರು. ಅಲ್ಲಿಯ ಜನ ಅವರನ್ನು ತುಂಬ ಆದರದಿಂದ ಸ್ವಾಗತಿಸಿದರು. ಐತಿಹಾಸಿಕ ಗೋಲಗುಮ್ಮಟವನ್ನು ನೋಡಬೇಕೆಂದು ಸಲಹೆ ಮಾಡಿದರು. ಅದಕ್ಕೆ ಶ್ರೀಯವರು, "ಹೌದು, ನಾನು ಅದನ್ನು ನೋಡಬೇಕು. ಮೊದಲು, ಅದಕ್ಕಿಂತ ಮಹತ್ವವಾದ ವಚನಗುಮ್ಮಟವನ್ನು ನೋಡಬೇಕು. ನಾನು ಫ.ಗು. ಹಳಕಟ್ಟಿಯವರನ್ನು ಕಾಣಬೇಕಾಗಿದೆ," ಎಂದರು. ಆ ಕನ್ನಡದ ಕಣ್ವನಿಗೆ ಯಾವಾಗಲೂ ಕನ್ನಡದ್ದೇ ಚಿಂತೆ.

✷ ಡಿ. ಗುಂಡೂರಾವ್

ಇಬ್ಬರೂ ಸೇರಿ ಮಾಡಿದ್ದಾರೆ,' ಎಂದು ಹೇಳಿದರು. ನಾನು ಸುಮ್ಮನೆ ತಲೆ ಅಲ್ಲಾಡಿಸಿದೆ.

ಇನ್ಸ್‌ಪೆಕ್ಟರು 'ಇದು **heinous** ಕೇಸು. **F.I.R (First Information Report)** ತಾವೇ ರುಜು ಮಾಡಬೇಕು. ತನಿಖೆಯೂ ತಮ್ಮ ಹೆಸರಿನಲ್ಲೇ ಆಗಬೇಕು. **Heinous** ಕೇಸು **Head of police**ಋ ಮಾಡಬೇಕು ನಾವೆಲ್ಲ ಇದ್ದೀವಲ್ಲ, ಮಾಡ್ತೀವಿ. ತಾವು ನಮಗೆ ಭುಜತಟ್ಟಿ ತಾಕೀತು ಮಾಡಿದರೆ ಸಾಕು' ಎಂದರು.

ನಾನು ಕೆಲಸಕ್ಕೆ ಹೊಸಬ. ಪೋಲೀಸು **investigation'** (ತನಿಖೆ) ಮಾಡಿದವನೇ ಅಲ್ಲ. ಇನ್ಸ್‌ಪೆಕ್ಟರು ಖದೀಮರು. ಪೋಲೀಸು ಕೆಲಸದಲ್ಲೇ ನುರಿತು ನೆರೆತು ಹೆಸರನ್ನೂ ಪ್ರಮೋಷನ್‌ಗಳನ್ನೂ ಗೆದ್ದವರು. ನನ್ನ ತನಿಖೆಯ ಪರಿಜ್ಞಾನ ಕಾನನ್ ಡಾಯ್ಲ್‌ರ **'Sherlock Holmes'** ಕಥೆಗಳಿಂದಲೂ, ನಾನು ಮ್ಯಾಜಿಸ್ಟ್ರೇಟಾಗಿ ವಿಚಾರಿಸಿದ ಪೋಲೀಸು ಕೇಸುಗಳಿಂದಲೂ ಬಂದುಬೆಳೆದದ್ದು. ಈ ಮೊಕದ್ದಮೆಯನ್ನು ಅನುಭವಸ್ಥರಾದ ಇನ್ಸ್‌ಪೆಕ್ಟರ ಕುಮ್ಮಕ್ಕು ಇಟ್ಟುಕೊಂಡು ನಾನೇ ಪತ್ತೆ ಮಾಡಬೇಕೆಂಬ ಆಸೆ ಹುಟ್ಟಿತು. ಅಲ್ಲದೆ ಬೆಳಿಗ್ಗೆ ಅಳುತ್ತಾ ಬಂದ ಹೆಣ್ಣು ಮಗಳಿಗೆ, ಅವಳ ನಿರ್ದುಷ್ಟ (ಇದು ಆಗಲೇ ಸಾಕಾದಷ್ಟು ಕಾರಣವಿಲ್ಲದ ನನ್ನ ಭಾವನೆ) ಕುಟುಂಬಕ್ಕೆ ನನ್ನಿಂದ ಏನಾದರೂ ಸಹಾಯವಾದರೆ ಆಗಲಿ, ಎಂಬ ಯೋಚನೆ. ಆಕೆ-'ಸುಬೇದಾರರು ಒಳ್ಳೆಯವರು, ಬುದ್ಧಿವಂತರು. ಅವರಲ್ಲಿ ಹೋಗಿ ಮೊರೆಯಿಡೋಣ'ವೆಂದು ಹೇಳಿದ ಮಾತಿನ ನೆನಪು. ನಾನು ಇದನ್ನು ಪತ್ತೆ ಮಾಡುತ್ತೇನೆಂಬ ನನ್ನ ಹೆಂಡತಿಯ ಸ್ಥಿರವಾದ ನಂಬಿಕೆ, ಇವೆಲ್ಲವೂ ಒಟ್ಟುಗೂಡಿ ಈ ಮೊಕದ್ದಮೆಯ ವಿಚಾರಣೆಯನ್ನು ಕೈಗೊಳ್ಳುವುದಕ್ಕೆ ನನಗೆ ಉತ್ಸಾಹ



ಕೊಟ್ಟವು. **F.I.R.**ನ್ನು ಕಳುಹಿಸಿ, ಈ ಕೇಸನ್ನು ನಾನೇ ತನಿಖೆ ಮಾಡುತ್ತೇನೆಂದು ಡಿಸ್ಟ್ರಿಕ್ಟು ಅಧಿಕಾರಿಗಳಿಗೆ ವರದಿ ಮಾಡಿದ್ದೇನೋ ಮಾಡಿದೆ. **'Lock up'**ನಲ್ಲಿದ್ದ ವೆಂಕಟರಾಮಯ್ಯನನ್ನು ಅಪ್ಪಣೆ ವಿನಾ ಊರು ಬಿಟ್ಟು ಹೋಗಕೂಡದೆಂಬ ಷರತ್ತಿನ ಮೇಲೆ ಬಿಡುಗಡೆ ಮಾಡಿಸಿದೆ. ಸೊತ್ತುಗಳ ಪಟ್ಟಿಯನ್ನು ಅವುಗಳ ಮಾಲಿಕರ ತನಿಖೆಯಿಂದ ನಿರ್ದಿಷ್ಟಪಡಿಸಿ ಬೆಲೆಯ ಅಂದಾಜು ಮಾಡಿಸಿದ್ದಾಯಿತು. ಒಟ್ಟು ರೂ. ೩,೫೦೦ ಬೆಲೆ ಎಂದು ಪಂಚಾಯಿತರು ಠರಾಯಿಸಿದರು. ಆಮೇಲೆ ಆ ಮನೆಯಲ್ಲಿ ಅವತ್ತು ರಾತ್ರಿ ಇದ್ದವರ ಹೇಳಿಕೆಗಳನ್ನೆಲ್ಲ ತೆಗೆದುಕೊಂಡಿದ್ದಾಯಿತು. ಆಮೇಲೆ?

ಆ ಮನೆಯ ನಕಾಸೆ ತಯಾರು ಮಾಡಿಸಿ ಮನೆಯೊಳಗಿನ ಪ್ರತಿಯೊಂದು ಭಾಗವನ್ನೂ ಭೂತಕನ್ನಡಿ ಹಿಡಿದು **Sherlock Holmes** ರೀತಿಯಲ್ಲಿ ನೋಡಿದ್ದಾಯಿತು.

ಕಳವು ಮಾಲುಗಳ ಪಟ್ಟಿಯನ್ನು ಪೊಲೀಸ್

ಸ್ಟೇಷನ್ ಆಫೀಸರುಗಳಿಗೆಲ್ಲ ಕಳುಹಿಸಿ, ತಮ್ಮ ತಮ್ಮ ಉಸ್ತುವಾರಿ ಎಲ್ಲೆಗಳೊಳಗಿನ ನೇಕಚಾಲು ಆಸಾಮಿಗಳ ಮೇಲೂ ಸರಾಫರುಗಳ ಮೇಲೂ, ಅಕ್ಕಸಾಲಿಗಳ ಮೇಲೂ ನಿಗಾ ಇಡಬೇಕೆಂದು ರಹಸ್ಯವಾದ ನಿರೂಪ ಕೊಟ್ಟೆವು.

ಆಯಿತು. ರಾಮಲಿಂಗ, ಪಟಾಕಿ, ಶಂಬ, ಈ ಹಳೆಯ ಕಳ್ಳರು ತಮ್ಮ ತಮ್ಮ ಗ್ರಾಮಗಳಲ್ಲೇ ಇದ್ದಾರೆ. ಹೊಸ ಸಾಹಸಗಳೇನೂ ಮಾಡಿದಂತಿಲ್ಲ. ಅವರುಗಳ ಚಾಲು ಚಾಲನೆಗಳನ್ನು ಕಾದು ನೋಡಲು ಗ್ರಾಮ ಅಧಿಕಾರಿಗಳಿಗೂ ಬೀಟು ಪೊಲೀಸಿನವರಿಗೂ ತಿಳಿಸಿದೆ. ತಂದ್ರೇಲಿಂಗ ಎಂಬ ಕಳ್ಳ ತನ್ನ ಗ್ರಾಮ ಬಿಟ್ಟು ಎರಡು ತಿಂಗಳಿಂದಲೂ ಪತ್ತೆ ಇಲ್ಲದೆ ಎಲ್ಲೋ ಹೋಗಿದ್ದಾನೆ ಎಂದು ವರದಿಗಳು ಬಂದವು. ಆಮೇಲೆ ಹದಿನೈದು ದಿನ ಯಾವ ಸುದ್ದಿಯೂ ಇಲ್ಲ. ಕೇಸು ತಣ್ಣಗಾಗಿ ತಂಗಳು ಬಿದ್ದಂತೆ ಕಾಣುತ್ತಿತ್ತು.

ಹೀಗಿರುವಲ್ಲಿ ಒಂದು ದಿನ ಭೇರ್ಯದ ಪೋಲೀಸು **'Out-Post'** ನಿಂದ ರಿಪೋರ್ಟು ಬಂತು: 'ತಂದ್ರೇಲಿಂಗನೆಂಬ ಕೇಡಿ ಸಂತೆಯಲ್ಲಿ ಬಹಳ ರಾಂಗ್ ಮಾಡಿ ಒಬ್ಬಿಬ್ಬರನ್ನು ಮಾರಾಮಾರಿ ಮಾಡಿದ್ದರಿಂದ ಸದರಿ ಆಸಾಮಿಯನ್ನು ಸ್ಟೇಷನ್ನಿಗೆ ತಂದು ಅವೊತ್ತು ಅಲ್ಲೇ ಇಟ್ಟುಕೊಂಡಿದ್ದು ಖುದ್ ಎಚ್ಚರಿಸಿ ಬಿಟ್ಟಿರುತ್ತೆ ಜಾಹೀರ್' ಎಂದು.

ಈ ತಂದ್ರೇಲಿಂಗನೆಂಬುವನು ಹೆಸರುವಾಸಿಯಾದ ಕಳ್ಳ. ಸಾಲಿಗ್ರಾಮದಿಂದ ಸುಮಾರು ಆರು ಮೈಲಿ ದೂರದಲ್ಲಿರುವ ತಂದ್ರೆ ಗ್ರಾಮದ ನಿವಾಸಿ. ಅವನಿಗೆ ಅಲ್ಲಿ ಒಂದು ಸಣ್ಣ ಮನೆ, ಸ್ವಲ್ಪ ಭೂಮಿ ಸಹ ಉಂಟು. ಆದರೆ ಮನೆಗೆ ಸಾಮಾನ್ಯವಾಗಿ ಯಾವಾಗಲೂ ಬೀಗವೇ. ಭೂಮಿಯಲ್ಲಿ ದತ್ತೂರಿ, ನೆಗ್ಗಿನ ಮುಳ್ಳೇ ಬೆಳೆ. ಒಂದು ಸಲ ನಾನು ಅಲ್ಲಿಗೆ ಹೋದಾಗ ಪಟೇಲನನ್ನು 'ಲಿಂಗಯ್ಯ ಜಮೀನನ್ನು ಯಾಕೆ ಪಾಳು ಬಿಟ್ಟುಕೊಂಡಿದ್ದಾನೆ?' ಎಂದು ಕೇಳಿದ್ದಕ್ಕೆ ಪಟೇಲ, 'ಬೇಸಾಯ ಯಾಕೆ ಬುದ್ಧಿ, ಕಾಮಧೇನಾಗಿ ಕಳ್ಳತನ ಇರೋವಾಗ?' ಎಂದು ಹೇಳಿದ.

'ಹಾಗಾದರೆ ಕಂದಾಯ?'

'ಕಂದಾಯ ಬಾಕಿಯಿಲ್ಲ ಮಾಸೋಮಿ-ಸಾಲಾಖೈರಿಗೆ ನಾವೇ ಯಾರಾದರೂ ಕಟ್ಟಿಬಿಡುತ್ತೇವೆ.'

'ಏನು? ಅವನ ಹೆದರಿಕೇಗೇ?'

'ಇಲ್ಲ ಬುದ್ಧಿ ಖಾವಂದರ ಹೆ[illegible] ಸಾಲಾಖೈರಿಗೆ ನಮ್ದು ಯಾವಾಗ[illegible] ಬೇಬಾಕಿ ಗ್ರಾಮ ಲಾಗಾಯ್ತಿನಿಂದಲೂ.'

ಆಮೇಲೆ ಶಾನುಭೋಗನಿಂದ ನಿಜಸ್ಥಿತಿ ತಿಳಿದುಬಂತು. ತಂದ್ರೇಲಿಂಗ ಆ ಗ್ರಾಮದ ಅನಿಷ್ಟ ದೇವತೆ. ಅವನಿಗೆ ಬೇಡದವನ ದನ ಸಾಯುವುದು, ಬಣವೆಗೆ ಬೆಂಕಿ ಬೀಳುವುದು. ಅಲ್ಲದೆ (ಭೇರ್ಯದ ದಫೇದಾರರ ರಸವತ್ತಾದ ಭಾಷೆಯಲ್ಲಿ) ಅವನು ರಾಂಗುಕೋರ, ಮಾರಾಮಾರಿ ಮನುಷ್ಯ. ಹಿಂದೆ ಎರಡು ಮೂರು ಸಲ ಸಜಾವಾಗಿದ್ದರೂ ಮೆತ್ತಗಾದವನಲ್ಲ.

ಮೊದಲನೆಯಸಲ ಸಜವಾದ ಕತೆ ವಿಚಿತ್ರವಾಗಿದೆ. ಯಡತೊರೆಯಲ್ಲಿ ಒಬ್ಬ ನಾಲಾ ಸಬ್ ಓವರ್ಸಿಯರ್ ವಾಸವಾಗಿದ್ದರು. ತರುಣರು, ಅವರ ಹೆಂಡತಿ ರೂಪವತಿ. ಬಹಳ ಪ್ರಣಯದ ಸಂಸಾರ. ಒಂದು ದಿನ ಸಬ್ ಓವರ್ಸಿಯರು ತನ್ನ ಹೆಂಡತಿಗೆ,

'ಸಾಹೇಬರು ಹೊಸ ಅಗ್ರಹಾರಕ್ಕೆ ಇನ್‌ಸ್ಪೆಕ್ಷನ್ನಿಗೆ ಬರುತ್ತಾರೆ. ಇವೊತ್ತು ಅಲ್ಲೇ ಮೊಕ್ಕಾಂ ಮಾಡುತ್ತಾರೆ. ನಾನು ಅಲ್ಲೇ ಇರಬೇಕಾಗುತ್ತೋ ಏನೊ. ಆದರೂ ಸಾಧ್ಯವಾದರೆ ಮನೆಗೆ ಬಂದುಬಿಟ್ಟು, ತಿರುಗ ಬೆಳಗ್ಗೆ ಟಪ್ಪು ಹೊತ್ತಿಗೆ ಹೊಸ ಅಗ್ರಹಾರಕ್ಕೆ ಹೋದರೂ ಆಯಿತು.

ಆರು ಮೈಲಿ ತಾನೆ? ಬೈಸಿಕಲ್ಲೂ ಇದೆ'ಎಂದು ಹೇಳಿದರು. ಆಕೆ.

'ಆಯಾಸ ಮಾಡಿಕೋಬೇಡಿ,'ಎಂದಳು.

ಸಬ್ ಓವರ್ಸಿಯರ್, 'ಹೊತ್ತಾಗುತ್ತೇನೋ ಏನೋ! ನೀನು ಎಚ್ಚರವಾಗಿರಬೇಕಾಗಿಲ್ಲ. ಬಾಗಿಲಿಗೆ ಅಗಣಿ ಹಾಕಬೇಡ. ಹಾಗೇ ಸುಮ್ಮನೆ ಮುಚ್ಚಿರು. ಎಷ್ಟು ಹೊತ್ತಾದರೂ ಬಂದೇ ಬರುತ್ತೇನೆ,'ಎಂದರು.

ಮನೆಯ ಮುಂದಿನ ಬೀದಿಯಿಂದ ಲಿಂಗ ಇದನ್ನ ಕೇಳುತ್ತಿದ್ದ. ಸಬ್ ಓವರ್ಸಿಯರ್ ಹೊಸ ಅಗ್ರಹಾರಕ್ಕೆ ಹೊರಟ ಸ್ವಲ್ಪ ಹೊತ್ತಿನ ಮೇಲೆ ತಾನೂ ಅಲ್ಲಿಗೆ ಪಯಣ ಬೆಳೆಸಿದ. ಟ್ರಾವಲರ್ಸ್ ಬಂಗಲೆಯಲ್ಲಿ ಡಿ.ಪಿ.ಡಬ್ಲ್ಯು. ಸಾಹೇಬರನ್ನು ನೋಡಲು ಬಂದಿದ್ದ ಜನಸಂದಣಿಯಲ್ಲಿ ತಾನೂ ಸೇರಿದ. ಅವೊತ್ತಿನ ಕೆಲಸ ಕಾರ್ಯಗಳೆಲ್ಲ ಮುಗಿದ ಮೇಲೆ ಸಾಹೇಬರು ತಮ್ಮ ಸಿಬ್ಬಂದಿಯವರಿಗೆಲ್ಲ ತಮ್ಮ ಕ್ಯಾಂಪಿನಲ್ಲೇ ರಾತ್ರಿ ಭೋಜನಕ್ಕೆ ನಿಲ್ಲಿಸಿಕೊಂಡಿದ್ದನ್ನು ತಿಳಿದ. ಸಾಹೇಬರ ಔತಣವೆಂದರೆ ಆಜ್ಞೆಯಲ್ಲವೆ? ಊಟ ಮುಗಿಬೇಕಾದರೆ ಹತ್ತು ಹನ್ನೊಂದು ಗಂಟೆಯಾಗಬಹುದೆಂದು ಊಹಿಸಿ ತನ್ನ ಯೋಚನೆ ಕೈಗೂಡಿತೆಂದು ಯಡತೊರೆಗೆ ವಾಪಸು ಬಂದ. ರಾತ್ರಿ ಒಂಬತ್ತು ಗಂಟೆಯೊಳಗಾಗಿ ತಾಲೂಕು ಕಸಬೆ ಗ್ರಾಮಗಳು ಮಲಗಿಬಿಡುತ್ತವೆ. ಆಗಿನ ಕಾಲದಲ್ಲಿ ರಾಜಬೀದಿಯಲ್ಲಿ ಅಲ್ಲಲ್ಲಿ ಬಹು ವಿರಳವಾಗಿ ಎಣ್ಣೆ ಲಾಂದ್ರದ ಕಂಬಗಳು. ಬೆಳಕನ್ನು ಕೊಡುತ್ತಿರಲಿಲ್ಲ, ಕತ್ತಲನ್ನು ತೋರಿಸುತ್ತಿದ್ದವು. ಊರಿನವರು ಮಲಗಿ ಮೊದಲ ನಿದ್ರೆಯ ಸುಖವನ್ನು ಅನುಭವಿಸುವ ಸಮಯ. ಪೊಲೀಸಿನವರು ಇನ್ನೂ ಬೀಟಿಗೆ ಹೊರಡುವ ಮುನ್ನ ನಾನೂ ಪೊಲೀಸಿನವರ ಗಸ್ತಿನ ಪರೀಕ್ಷೆಗೆ ಯತ್ನ ಮಾಡಿದ್ದೇನೆ. ನಾನು ಜಾಗ್ರತೆಯಾಗಿ ಅಜಮಾಯಿಷಿಗೆ ಹೊರಟರೆ, ಅವರು ನನ್ನ ಅಜಮಾಯಿಷಿ ಮುಗಿದು ಮನೆಗೆ ಬಂದ ಸ್ವಲ್ಪ ಹೊತ್ತಿಗೆಲ್ಲ ಡ್ಯೂಟಿಗೆ ಪ್ರಾರಂಭಿಸುತ್ತಾರೆ. ನಾನು ತಡಮಾಡಿಕೊಂಡು ಹೊರಟರೆ ಅಷ್ಟರಲ್ಲೇ ಡ್ಯೂಟಿ ಮುಗಿಸಿಕೊಂಡು ಸ್ಟೇಷನ್ನಿಗೆ ವರದಿ ಒಪ್ಪಿಸಲು ಹೋಗಿರುತ್ತಾರೆ. ನಾನು ಹೊರಟ ವೇಳೆಯಲ್ಲಿ ಆಕಸ್ಮಾತ್ತಾಗಿ ಅವರಿದ್ದರೆ ನನ್ನನ್ನು ನೋಡದೆ ಇದ್ದವರಂತೆ ಸೀಟಿಗಳಿಂದಲೂ ಕೂಗುಗಳಿಂ

ತಬ್ಬಿಬ್ಬು

ವಿಶ್ವವಿಖ್ಯಾತ ಲೇಖಕ ಅಲೆಗ್ಸಾಂಡರ್ ಡ್ಯೂಮಾ ದೇಶ ಸಂಚಾರ ಮಾಡುತ್ತಾ ಯಾವುದೋ ಒಂದು ಊರಿಗೆ ಬಂದ. ಆ ಊರಿನ ದೊಡ್ಡ ಪುಸ್ತಕದ ಅಂಗಡಿಗೆ ಮರುದಿನ ಅಂಗಡಿಯಾತನ ಅಪೇಕ್ಷೆಯ ಮೇರೆಗೆ ಭೇಟಿ ನೀಡಲು ಒಪ್ಪಿಕೊಂಡ. ಅಂಗಡಿಯ ಯಜಮಾನ ಡ್ಯೂಮಾ ಬರುತ್ತಾನೆಂಬ ಸಂಭ್ರಮದಲ್ಲಿ ಮಿಕ್ಕ ಪುಸ್ತಕಗಳನ್ನೆಲ್ಲಾ ತೆಗೆದು ಅಂಗಡಿ ತುಂಬಾ ಡ್ಯೂಮಾನ ಪುಸ್ತಕಗಳನ್ನೇ ಜೋಡಿಸಿದ.

ಮರುದಿನ ಡ್ಯೂಮಾ ಅಂಗಡಿಗೆ ಬಂದಾಗ ಬರೀ ತನ್ನ ಪುಸ್ತಕಗಳೇ ತುಂಬಿರುವುದನ್ನು ಕಂಡು ಆಶ್ಚರ್ಯದಿಂದ "ಮಿಕ್ಕ ಪುಸ್ತಕಗಳೆಲ್ಲಿ?" ಎಂದು ಪ್ರಶ್ನಿಸಿದ.

ಅಂಗಡಿಯಾತ ತಬ್ಬಿಬ್ಬಾಗಿ ಏನು ಹೇಳಲೂ ತೋಚದೆ "ಮಿಕ್ಕ ಪುಸ್ತಕಗಳು... ಹಾಂ... ಮಾರಾಟವಾದವು" ಎಂದುಬಿಟ್ಟ.

- ಜೆ.ವಿ. ತಿಪ್ಪೇಸ್ವಾಮಿ

ದಲೂ ಕತ್ತಲನ್ನು ಭೀಕರವಾಗಿ ಮಾಡಿ ಎಲ್ಲ ದಿಕ್ಕುಗಳಿಂದಲೂ ಘೇರಾಯಿಸಿಕೊಂಡು ಮುತ್ತಿ ನಾನು ಸುಬೇದಾರನಾದದ್ದಕ್ಕೆ ಬದುಕಿದೆ, ಕಳ್ಳ ನಾಗಿದ್ದರೆ ನನ್ನ ಗತಿ ಏನು? ಎನ್ನಿಸುತ್ತಾರೆ.

ಏನು ಹೇಳಲಿಕ್ಕೆ ಬಂದೆ? ತಂದ್ರೆಲಿಂಗ ಊರು ನಿದ್ರಿಸುವ ವೇಳೆಯನ್ನರಿತು ಸಬ್ ಓವರ್ಸಿಯರ್ ಮನೆಗೆ ಬಂದು ಬಾಗಿಲು ನೂಕಿ ನೋಡಿದ. ಅವನು ನಿರೀಕ್ಷಿಸಿದ್ದಂತೆಯೇ ಅಗಣಿ ಹಾಕಿರಲಿಲ್ಲ, ತಳ್ಳಿದ. ಕೂಡಲೆ ಕದ ತೆಗೆಯಿತು. ಒಳಕ್ಕೆ ಹೋಗಿ ಕದ ಮುಂದು ಮಾಡಿಕೊಂಡ. ನಡುಮನೆಯಲ್ಲಿ ಸಬ್ ಓವ ರ್ಸಿಯರರ ಹೆಂಡತಿ ಮಲಗಿದ್ದರು. ಹತ್ತಿರ ಒಂದು ಕಾಲುಮಣೆಯ ಮೇಲೆ ಹಣತೆಯಲ್ಲಿ ದೀಪ ಉರಿಯುತ್ತಿತ್ತು. ಅದರ ಬೆಳಕಿನಲ್ಲಿ ಆಕೆಯ ಕತ್ತಿನಲ್ಲಿ ಷರಟಡ್ಡಿಕೆ, ಕಾಸಿನ ಸರ ಕಂಡವು. ಕೈಯಲ್ಲಿ ಚಿನ್ನದ ಬಳೆ ಇದ್ದವು. ಆಗ ಅವನು ಏನು ಮಾಡಬೇಕೆಂದು ಯೋಚಿಸಿರ ಬೇಕು. ಆ ಸಾಧ್ವಿಯ ಆಯುಸ್ಸು ಗಟ್ಟಿಯಾಗಿ ದ್ದುದರಿಂದ ಅವನಿಗೆ ಕೊಲೆ ಹೊಳೆಯಲಿಲ್ಲ. ಅವಳ ಪಾತಿವ್ರತ್ಯದ ಮಹಿಮೆಯಿಂದ ಅವನಿಗೆ ಅತ್ಯಾಚಾರದ ಆಸೆ ಆಗಲಿಲ್ಲ. ಆಕೆ ಹೊದ್ದಿದ್ದ ಬಟ್ಟೆಯಿಂದ ಆಕೆಯ ಮುಖವನ್ನು ಮುಚ್ಚಿ, ಅದೇ ಬಟ್ಟೆಯನ್ನು ಆಕೆಯ ಬಾಯಿಯಲ್ಲಿ ತುರುಕಿ, ಒದ್ದಾಡುತ್ತಿರುವ ಆಕೆಯ ಕೊರಳಿ ನಿಂದ ಕಾಸಿನ ಸರವನ್ನು ಕಿತ್ತು ಹರಿದುಕೊಂಡ. ಅಷ್ಟರಲ್ಲೇ ಬೀದಿಯಲ್ಲಿ ನಾಯಿ ಬೊಗಳಿದ್ದು ಕೇಳಿಬರಲಾಗಿ ತಟಕ್ಕನೆ ಆಕೆಯನ್ನು ಬಿಟ್ಟು, ದೀಪವನ್ನು ಊದಿ ಆರಿಸಿ, ಬಾಗಿಲು ಕಡೆಗೆ ನೆಗೆದು, ಓಡುವುದಕ್ಕೆ ಯತ್ನ ಮಾಡಿದ. ಅದೇ ಹೊತ್ತಿಗೆ ಹೊರಗಿನಿಂದ ಒಳಕ್ಕೆ ನುಗ್ಗಿ ಬರುತ್ತಿದ್ದ ಒಂದು ವ್ಯಕ್ತಿ ಬಾಗಿಲ ಬಳಿ ಇವನಿಗೆ ಡಿಕ್ಕಿ ಹೊಡೆದು ಕೆಳಕ್ಕೆ ಬಿದ್ದರು. ಇಬ್ಬರೂ ಒಬ್ಬನು ಹಿಡಿಯುವುದಕ್ಕೆ, ಮತ್ತೊಬ್ಬನು ಬಿಡಿಸಿಕೊಳ್ಳು ವುದಕ್ಕೆ ಹೆಣಗಾಡುತ್ತಿರುವಲ್ಲಿ ಆ ಧೀರ ಹುಡುಗಿ ಹಾಸಿಗೆಯಿಂದ ನೆಗೆದೆದ್ದು ಕಳ್ಳ ತನಗೆ ಕವುಚಿದ್ದ ಕಂಬಳಿಯನ್ನೇ ಇಬ್ಬರ ಮೇಲೂ ಎಸೆದು ಹಿಡಿದು ಕೂಗಿಕೊಂಡಳು. ನೆರೆಹೊರೆಯವರೆಲ್ಲ ಬಂದು ನೋಡುವಲ್ಲಿ ಕಳ್ಳ ತಂದ್ರೆಲಿಂಗನೆಂ ತಲೂ ಅವನನ್ನು ತಬ್ಬಿ ಹಿಡಿದು ತಡೆದ ವ್ಯಕ್ತಿ ಸಬ್ ಓವರ್ಸಿಯರ್ ಎಂತಲೂ ಗೊತ್ತಾ ಯಿತು. ಸಬ್ ಓವರ್ಸಿಯರ್ ಹೊಸ ಅಗ್ರಹಾ ರದಿಂದ ಊಟ ಮಾಡಿದ ಕೂಡಲೆ ತಮ್ಮ ಸಾಹೇಬರ ಅಪ್ಪಣೆಯನ್ನು ಪಡೆದು ಬೈಸಿಕಲ್ಲಿನ ಮೇಲೆ ಯಡತೊರೆಗೆ ವಾಪಸ್ಸು ಬಂದದ್ದರಿಂದ ಲಿಂಗ ನಿರೀಕ್ಷಿಸಿದ್ದುದಕ್ಕಿಂತ ಮುಂಚಿತವಾಗಿಯೇ ಒದಗಿದ ಆಕಸ್ಮಾತ್ತಿನಿಂದ ಲಿಂಗನ ಸಾಹಸ ಭಂಗವಾಯಿತು. ಲಿಂಗನ ಮೆಹನತ್ತಿನ ಫಲ ಎರಡು ವರ್ಷಗಳ ಕಠಿಣ ಸಜಾ.

ನಾನು ತಂದ್ರೆಲಿಂಗನನ್ನು ಮೊದಲು ನೋಡಿದ ಸಂದರ್ಭವನ್ನು ಮರೆಯುವಹಾಗಿಲ್ಲ. ಸಾಲಿಗ್ರಾಮದಿಂದ ಅರಕಲಗೂಡಿಗೆ ಹೋಗುವ ರಸ್ತೆ ಒಂದು ಕಣಿವೆಯಲ್ಲಿ ಬರುತ್ತೆ. ಸರಕಾರಿಯ ಅಂಚೆ ಅದೇ ಮಾರ್ಗವಾಗಿ ನಡೆಯುವುದು. ಸಾಲಿಗ್ರಾಮ ವ್ಯಾಪಾರ ಮತ್ತು ಲೇವಾದೇವಿ ಮಾಡುವ ಸಾಹುಕಾರರು ಇರುವ ಸ್ಥಳವಾದ್ದ ರಿಂದ ಆ ಮಾರ್ಗವಾಗಿ ಟಪಾಲು, ಮನಿಯಾ ರ್ಡರುಗಳ ಇರಸಾಲು ನಡೆಯುತ್ತದೆ. ಅನೇಕ ವೇಳೆ ನೂರಾರು ರೂಪಾಯಿಗಳು ಅಂಚೆ ರನ್ನರುಗಳ ಚೀಲದಲ್ಲಿರುವುದುಂಟು. ಆ ದಾರಿ ಯಲ್ಲಿ ರಾತ್ರಿ ತಿರುಗು ಗಾಡಿಗಳ ಸಂಚಾರವೂ ಹೇರಳವಾಗಿರುತ್ತಿತ್ತು. ಅನೇಕ ವೇಳೆ ಅರ್ಧದಾ ರಿಯಲ್ಲಿರುವ ಕಣಿವೆಯಲ್ಲಿ ಕಳ್ಳತನಗಳೂ ದರೋಡೆಗಳೂ ನಡೆದು, ನಡೆದುದಕ್ಕಿಂತಲೂ ನುಡಿದದ್ದು ಮಿಗಿಲಾಗಿ, ಆ ರಸ್ತೆಗೆ ಅಪಖ್ಯಾತಿ ಬಂದಿತ್ತು. ತಂದ್ರೆ ಗ್ರಾಮವು ರಸ್ತೆಯ ನೆರವಿನಲ್ಲಿ ಇದ್ದುದರಿಂದಲೂ ಆ ಗ್ರಾಮದ ಲಿಂಗಯ್ಯನು ಹೆಸರುವಾಸಿ ಕಳ್ಳನಾದ್ದರಿಂದಲೂ ಇವನೇ ಆ ಕಳ್ಳರ ಗುಂಪಿನ ನಾಯಕ, ಕಳ್ಳತನಗಳ ನಾಯ

ಕನೆಂದು ಜನಗಳ ಗುಮಾನಿಯಿತ್ತು. ಹೀಗಿರುವಲ್ಲಿ ತಂಡ್ರೆಲಿಂಗ ಅರಕಲುಗೂಡು ಕಚೇರಿಗೆ ಹೋಗಲಿದ್ದ ಕಂದಾಯದ ಇರಸಾಲನ್ನೂ ಅಂಚೆ ರನ್ನರಿನ ಚೀಲವನ್ನೂ ದರೋಡೆ ಮಾಡಲು ಏರ್ಪಾಡು ಮಾಡುತ್ತಿದ್ದಾನೆಂದು ಅನೇಕ ಬೇನಾಮಿ ಅರ್ಜಿಗಳು ತಾಲೂಕಿಗೂ ಡಿಸ್ಟ್ರಿಕ್ಟಿಗೂ ದಿವಾನ್ ಕಚೇರಿಗೂ ಬರಲಾಗಿ ಇವನ ಮೇಲೆ ಜಾಗರೂಕತೆಯಿಂದ 'ನಿಗಾ' ಇಡಬೇಕೆಂದು ಗೊತ್ತು ಮಾಡಿದೆವು. ಆದರೆ ಪೋಲೀಸ ಆಫೀಸರುಗಳು ಯಾವಾಗ ತಂಡ್ರೆಗೆ ಹುಡುಕಿಕೊಂಡು ಹೋದರೂ ಇವನ ಭೇಟಿ ಲಭಿಸುತ್ತಿರಲಿಲ್ಲ. ಒಂದು ದಿನ ನಾನು ತಂಡ್ರೆಯ ಹತ್ತಿರದ ಅಂಕನಹಳ್ಳಿ ಎಂಬಲ್ಲಿಗೆ ಅಲ್ಲಿ ನಡೆಯುತ್ತಿದ್ದ ಮರಾಮತ್ತು ಕೆಲಸಗಳ ಅಜಮಾಯಿಷಿಗಾಗಿ ಹೋಗಿದ್ದವನು ಕುದುರೆಯೇರಿ ತಂಡ್ರೆ ಮಾರ್ಗವಾಗಿ ಸಾಲಿಗ್ರಾಮಕ್ಕೆ ವಾಪಸ್ಸು ಬರುತ್ತಿದ್ದೆ. ತಂಡ್ರೆ ಗ್ರಾಮದ ಪಟೇಲನನ್ನು 'ಲಿಂಗ ಊರಲ್ಲಿದ್ದಾನೆಯೇ?' ಎಂದು ವಿಚಾರಿಸಿದೆ. 'ಇದ್ದಾನೆ! ಅದೇ ನೋಡಿ! ಅದೇ ಅವನ ಮನೆ. ಅಲ್ಲಿ ನಿಂತಿರುವಳೇ ಅವನ ಹೆಂಡತಿ' ಎಂದು ತೋರಿಸಿದ. ನಾನು ಆ ಬಳಿ ಹೋಗಿ ಆ ಹೆಣ್ಣು ಮಗಳನ್ನು 'ಲಿಂಗಯ್ಯ ಇದ್ದಾನೇನು ತಾಯಿ?' ಎಂದು ಕೇಳಲಾಗಿ ಅವನು ಹೊಲಕ್ಕೆ ಹೋಗಿರುವುದಾಗಿ ತಿಳಿದುಬಂತು. ಕಾಮಧೇನುವಾಗಿ, ಕಳ್ಳತನವನ್ನು ಕಟ್ಟಿಕೊಂಡಿರುವ ಇವನಿಗೆ ಜಮೀನಿನ ಗೋಜು ಯಾಕೆ? ಎಂದು ತೋರಿ ಮುಂದೆ ನಡೆದೆ. ದಾರಿಯಲ್ಲಿ ಪಟೇಲ ಅಲ್ಲಿನ ಒಂದು ಪಾಳು ಹೊಲದಲ್ಲಿ ಬಗ್ಗಿಕೊಂಡು ಏನೋ ಮಾಡುತ್ತಿದ್ದ ಒಂದು ವ್ಯಕ್ತಿಯನ್ನು 'ಅವನೇ ಲಿಂಗ ಬುದ್ಧಿ' ಎಂದು ತೋರಿಸಿ ಗಟ್ಟಿಯಾಗಿ, 'ಲಿಂಗಯ್ಯನೋರೆ, ಬನ್ನಿ ಬುದ್ಧಿ ಸುಬೇದಾರರ ಅಪ್ಪಣೆ ಆಗುತ್ತೆ' ಎಂದು ಕೂಗಿದ. ಆ ವ್ಯಕ್ತಿ ತಲೆಕೂಡ ಎತ್ತಿ ನೋಡದೆ, 'ಸುಬೇದಾರರ ತಾವ ನನಗೇನೂ ಕೆಲಸವಿಲ್ಲ ಗೌಡರೆ, ಅವರಿಗೆ ನನ್ನ ತಾವ ಕೆಲಸವಿದ್ದರೆ ಇಲ್ಲಿಗೇ ಬರಲಿ,' ಎಂದ.

ನಾನು, 'ಎಲೋ ಲಿಂಗ, ಬಾರೋ ಇಲ್ಲಿಗೆ ಮಗನೇ!' ಎಂದು ಕೂಗಿದೆ. ಅವನು ಬಗ್ಗಿದ್ದವನು ನೆಟ್ಟಗೆ ನಿಂತ. ನೀಳಾದ ಎತ್ತರವಾದ ಆಳು. ಸುಮಾರು ಮೂವತ್ತೈದು ವರುಷವಿದ್ದಿರಬಹುದು. ಬಲವಾದ ಶರೀರ. ಆದರೆ ಬಲಕ್ಕಿಂತಲೂ ಚಟುವಟಿಕೆ ಹೆಚ್ಚಿರುವಂತೆ ಕಾಣುತ್ತಿತ್ತು.

'ಯಾಕ್ರೀ ಬೈತೀರಾ? ನಿಮ್ಮ ದಾರಿ ಹಿಡಿದು ಹೋಗಿರಿ. ಸುಬೇದಾರರಾದರೆ ನಾನು ತಕ್ಷೀರು ಮಾಡಿದಾಗ ಹಿಡಿದು ಸಜಾ ಕೊಡುವಿರಂತೆ,' ಎಂದು ನನ್ನ ಕಡೆ ನಿರ್ಲಕ್ಷ್ಯದಿಂದ ನೋಡುತ್ತಾ ನಿಂತ. ಮುಖದಲ್ಲಿ ಧೀರ ಪಟಿಂಗತನ, ಕೈಯಲ್ಲಿ ಕುಡಗೋಲು. ನನಗೆ ಬಹಳ ಕೋಪ ಬಂತು. ಹೀಗೆ ತಿರುಗಿಬಿದ್ದ ಕಳ್ಳನನ್ನು ನಾನು ಉಪೇಕ್ಷಿಸಿದರೆ ನಾನು ಅಂಜುಬುರುಕನೆಂದು ಜನಗಳು ತಿಳಿದು ಅಪಹಾಸ್ಯ ಮಾಡುವುದಲ್ಲದೆ, ಈ



ತುಂಟ ತಾಲೂಕನ್ನು ಹತೋಟಿಯಲ್ಲಿಡುವುದೂ ನನಗೆ ಅಸಾಧ್ಯವಾಗುತ್ತದೆಂದು ತಿಳಿದ. ಪಟೇಲನೂ ಸುತ್ತಮುತ್ತಲಿನ ಹೊಲಗಳಲ್ಲಿನ ರೈತರುಗಳೂ ನೋಡುತ್ತಿದ್ದರು. ಅವರುಗಳ ಮುಂದೆ ಅಪಮಾನವೆಂಬುದು ದುಸ್ಸಹವಾಗಿತ್ತು. ನಾನು ಬಲಿಷ್ಠನಾದ ಯುವಕ. ನನ್ನ ಜೇಬಿನಲ್ಲಿ ರಿವಾಲ್ವರು ಆಗಿನ ಕಾಲದಲ್ಲಿ ಯಾವಾಗಲೂ ಇರುತ್ತಿತ್ತು. ಈ ಗ್ರಾಮ್ಯಧೀರನ ಪೊಗರು ಮುರಿಯದಿದ್ದರೆ ಸರ್ಕಾರದ ದರ್ಪಕ್ಕೆ ಕೇಡೆಂದು ಭಾವಿಸಿ ನಾನು ಅವನ ಹತ್ತಿರಕ್ಕೆ ಕುದುರೆಯನ್ನು ನೆಗಿಸಿ, ಕೈಲಿದ್ದ ಕುದುರೆ ಛಡಿಯಿಂದ ಅವನಿಗೆ ಒಂದು ಪೆಟ್ಟು ಹೊಡೆದೆ. ಕೂಡಲೇ ಅವನು ಕುದುರೆಯ ಲಗಾಮನ್ನು ಎಡಗೈಯಿಂದ ಹಿಡಿದು ಬಲಗೈಯಿಂದ ಕುಡಗೋಲನ್ನು ಎತ್ತಿದ. ಅವನು ಹೊಡೆಯುವುದಕ್ಕೆ ಎತ್ತಿದನೋ, ಹೆದರಿಸುವುದಕ್ಕೆ ಮಾತ್ರವೋ ನನಗೆ ತಿಳಿಯದು. ನಾನು ಆ ಕ್ಷಣವೇ ಜೇಬಿನಿಂದ ರಿವಾಲ್ವರನ್ನು ತೆಗೆದು ಅವನ ತೋಳಿನ ಕಡೆಗೆ ಗುರಿಯಿಟ್ಟು ಸುತ್ತಲಿದ್ದವರು ಹಾಹಾಕಾರ ಮಾಡುತ್ತಿರಲು,

'ಹಾಕೋ ಕೆಳಗೆ ಕುಡಗೋಲನ್ನು! ಇಲ್ಲದಿದ್ದರೆ ನಿನ್ನ ರೆಕ್ಕೆ ಮುರಿಯುತ್ತೇನೆ' ಎಂದು ಗರ್ಜಿಸಿದೆ. ಕುಡುಗೋಲನ್ನು ಕೆಳಗೆ ಬಿಸುಟ. ನನ್ನ ಪಿಸ್ತೂಲು ಬಾರಾಗಿರಲಿಲ್ಲವೆಂದು ನನಗೆ ಜ್ಞಾಪಕವಿರಲಿಲ್ಲ. ಅವನಿಗೇನು ಗೊತ್ತು ಪಾಪ. ಅವನಿಗೆ ಇನ್ನೆರಡು ಮೂರು ಏಟುಗಳನ್ನು ಬಿಗಿದೆ. ಅಷ್ಟು ಹೊತ್ತಿಗೆ ಅಲ್ಲಿಗೆ ಬಂದಿದ್ದ ನನ್ನ ಆರ್ಡರ್ಲಿ, ಪಟೇಲ, ತಳವಾರ ಇವರುಗಳ ಉಸ್ತುವಾರಿಯಲ್ಲಿ ಅವನ ಮೇಲೆ ಬಂದಿದ್ದ ಅರ್ಜಿಗಳ ವಿಷಯದ ವಿಚಾರಣೆಗಾಗಿ ಸಾಲಿಗ್ರಾಮದ ಪೊಲೀಸು ಸ್ಟೇಷನ್ನಿಗೆ ಕಳುಹಿಸಿದೆ.

ಈಗ ತಂದ್ರೆಲಿಂಗ ಯಾರು, ಎಂಥವನು, ಎನ್ನುವುದು ಸ್ವಲ್ಪ ಭಾವನೆಗೆ ಬರಬಹುದು.

ಲಿಂಗ ಭೇರ್ಯಕ್ಕೆ ಹೋಗಿದ್ದನೆಂದು ತಿಳಿದ ಕೂಡಲೇ ನಾನು ಬೇರೆ ಕೆಲಸದ ನೆಪದ ಮೇಲೆ ಆ ಗ್ರಾಮಕ್ಕೆ ಹೋಗಿ ಏನೋ ಮಾತಿನ ಮೇಲೆ ಮಾತೆಂಬಂತೆ ಅವನ ಚಲನೆಗಳನ್ನು ವಿಚಾರಿಸಿದೆ. ಛತ್ರದ ಪಾರುಪತ್ತೆಗಾರರು ಹೇಳಿದರು- 'ತಂದ್ರೆಲಿಂಗಯ್ಯ ನಡುಮಧ್ಯಾಹ್ನ ಬಂದು ಅನ್ನ ಕೊಡಿ ಎಂದು ಕೇಳಿದ. ಅನ್ನ ಉಳಿದಿರಲಿಲ್ಲ, "ಯಾವ ಛತ್ರವಿದ್ದರೂ ನಿಮ್ಮಹಾಳು ಹಾರುವರ ಹೊಟ್ಟೆಗೇ ಸಾಲದು" ಎಂದು ಗೊಣಗುಟ್ಟಿಕೊಂಡು ಪಟೇಲರ ಮನೆಗೆ ಹೋದ. ನಾನೂ ಹೋಗಿ,

"ಬನ್ನಿ ಲಿಂಗಣ್ಣನವರೇ, ಅಕ್ಕಿ ಕೊಡ್ತೀನಿ, ನೀವೇ ಮಾಡಿಕೊಂಡು ಉಣ್ಣಿ" ಅಂದೆ.

"ಅಯ್ಯೋ ಬ್ಯಾಡ, ನೀವೇ ಉಣ್ಣಿ, ನಿಮ್ಮ ಹೊಟ್ಟೇಲೇ ಚೆನ್ನ ಆಗಲಿ," ಅಂದ.

'ಪಟೇಲರ ಮುಂದ, ನೋಡಿ ಗೌಡರೆ, ಊರುಬಿಟ್ಟು ಮೂರು ತಿಂಗಳಾಯಿತು. ಇದೇ ಅತ್ತಿಗುಪ್ಪೆ ಕಡೆಯಿಂದ ದಾರಿ ನಡೆದು ಬಿಸಿಲಲ್ಲಿ ಬೆಂಡಾಗಿ ಬಂದಿವ್ನಿ. ಮುದ್ದೇ ಏನಾದರೂ ಸಿಕ್ಕಾತ, ಅಂದ. ಪಟೇಲರ ಮನೆಯಲ್ಲಿ ಊಟ ಮಾಡಿದ.

ಪಟೇಲನೂ ಇದೇ ಮಾತನ್ನು ಹೇಳಿದ. ತಂದ್ರೆಲಿಂಗ ತಾನು ಮೂರು ತಿಂಗಳ ಹಿಂದೆ ಊರನ್ನು ಬಿಟ್ಟವನು ಅವೊತ್ತು ತಾನೆ ಭೇರ್ಯಕ್ಕೆ ಬಂದನೆಂಬುವುದನ್ನು ದೃಢಪಡಿಸುವುದಕ್ಕಾಗಿ ಛತ್ರಕ್ಕೆ ಪಟೇಲನ ಮನೆಗೆ, ಸಂತೆಗೆ, ಅಲ್ಲಿ ಜಗಳಮಾಡಿಕೊಂಡು ಪೋಲೀಸು ಸ್ಟೇಷನ್ನಿಗೆ, ಸಾಕ್ಷ್ಯಕ್ಕಾಗಿ ಭೇಟಿಕೊಟ್ಟು ರುಜುವಾತು ಹುಟ್ಟಿಸಿಕೊಳ್ಳಲು ಈ ರೀತಿ ವರ್ತಿಸಿದ್ದಾನೆಂದು ನನಗೆ ತೋರಿತು. ಇಲ್ಲವಾದರೆ ಇಷ್ಟು ನಾಟಕವೇತಕ್ಕೆ? ಈ ನನ್ನ ಅನುಮಾನ ವಾಸ್ತವವಾಗಿದ್ದರೆ, ಅವನು ಅದಕ್ಕೆ ಮುಂಚೆಯೇ ಕಳವು ನಡೆದ ನೆರವಿನಲ್ಲೇ ಏಕಿರಬಾರದು? ಬೇರೆ

ಮಾರ್ಗವಾಗಿ ತಂಡ್ರೆಗೆ ವಾಪಸ್ ಹೋಗಿರಬೇಕು. ಕಳವು ನಡೆದದ್ದು ಯಡತೊರೆಯಲ್ಲಿ. ಅದನ್ನು ಮಾಡಿದವನು ಲಿಂಗನಾಗಿದ್ದರೆ ಅವನು ಅದೇ ರಾತ್ರಿ ಕಳವು ಮಾಲಿನ ವಿಲೇವಾರಿಗಾಗಿ ಮೈಸೂರಿಗೆ ಹೋಗಿದ್ದರೂ ಹೋಗಿರಬಹುದು. ಅಥವಾ ವಿಲೇವಾರಿಗೆ ಅಷ್ಟೇ ಸೌಕರ್ಯವುಳ್ಳ ಸಾಲಿಗ್ರಾಮಕ್ಕಾದರೂ ಹೋಗಿರಬಹುದು. ಇದು ಮೈಸೂರಿಗಿಂತಲೂ ಇವನಿಗೆ ಅನುಕೂಲವಾದ ಸ್ಥಳ. ಏಕೆಂದರೆ ಇಲ್ಲಿ ಇವನ ಪರಿಚಯದ, ಬಹುಶಃ ಜನಗಳಿರಬೇಕು. ಅಥವಾ ಕೃತ್ಯ ನಡೆಸಿದ ಬಿಸಿಯಲ್ಲಿ ಮಾಲುಗಳ ಬಿಕರಿಗೆ ಯತ್ನ ಮಾಡುವುದು ಅಪಾಯ. ಎಲ್ಲ ಕಡೆಗಳಲ್ಲೂ ಪತ್ತೆ ತರದೂದು ನಡೆಯುತ್ತಿರುತ್ತೆ, ಜನಗಳು ಜಾಗರೂಕರಾಗಿರುತ್ತಾರೆ. ಆದ್ದರಿಂದ ಕೆಲವು ಕಾಲ ಮಾಲುಗಳನ್ನು ಗೋಪ್ಯವಾಗಿ ಮುಚ್ಚಿಟ್ಟಿದ್ದರೆ, ಆಮೇಲೆ ಒಂದೊಂದನ್ನಾಗಿ ವಿಲೇವಾರಿ ಮಾಡಬಹುದೆಂಬುದು ಇವನ ಎಣಿಕೆಯಾಗಿದ್ದರೆ ಹಾಗೆ ಮಾಡುವುದಕ್ಕೆ ಇವನು ತಂಡ್ರೆಗೆ ಹೋಗಿರಬಹುದು. ಯಡತೊರೆಯಿಂದ ತಂಡ್ರೆಗೆ ಹೋಗಬೇಕಾದರೆ ಎರಡು ಸಾಮಾನ್ಯವಾದ ಮಾರ್ಗಗಳು. ಒಂದು ಎಡತೊರೆಯಿಂದ ಸೇತುವೆ ಮೇಲೆ ಹಾದು ಹಂಪಾಪುರ, ಮಿರ್ಲೆ, ಅಂಕನಹಳ್ಳಿ ಮೇಲೆ. ಸಾಮಾನ್ಯವಾಗಿ ಇದೇ ವಾಡಿಕೆಯಾದ ದಾರಿ. ಮತ್ತೊಂದು ಹೊಳೆಯ ದಕ್ಷಿಣಕ್ಕೆ ಹೊಳೆಯ ಸಾಲನ್ನೇ ಹಿಡಿದು ಹೋಗುವ ಚುಂಚನಕಟ್ಟೆ ದಾರಿ. ಈ ಎರಡನೆಯ ದಾರಿಯಲ್ಲಿ ಹೋದರೆ ಸೇತುವೆಯಿಲ್ಲ. ಹೊಳೆಯನ್ನು ಚಿಕ್ಕನಾಯಕನಹಳ್ಳಿಯ ಹತ್ತಿರವಿರುವ ಕಡುವಿನಲ್ಲಿ ಹಾಯಬೇಕು. ಆಗಿದ್ದಂತೆ ಹೊಳೆಯಲ್ಲಿ ನೀರು ಇದ್ದರೆ ಏಕೆ, ಬೇಸಿಗೆ ಮೂರು ನಾಲ್ಕು ತಿಂಗಳುಗಳ ಹೊರತು ಬಾಕಿ ಕಾಲದಲ್ಲೆಲ್ಲಾ ಹರಿಗೋಲಿನಲ್ಲೇ ಹೊಳೆಯನ್ನು ದಾಟಬೇಕು. ಈ ಎರಡನೆಯ ದಾರಿ ಸ್ವಲ್ಪ ಬಳಸಾದರೂ ವಾಡಿಕೆ ದಾರಿಯಷ್ಟು ಸುಗಮವಲ್ಲದಿದ್ದರೂ ಗೋಪ್ಯವಾಗಿ ನಡೆಯಬೇಕೆಂಬುವವನಿಗೆ ಇದರಲ್ಲಿ ಮುಖ್ಯವಾದ ಅನುಕೂಲತೆಗಳುಂಟು. ಈ ದಾರಿಯಲ್ಲಿ ದೊಡ್ಡ ಗ್ರಾಮಗಳಿಲ್ಲ. ಹೆಚ್ಚಾಗಿ ತಿರುಗಾಟವಿಲ್ಲ. ಇದರಲ್ಲಿ ರಾತ್ರಿಗಳಲ್ಲಂತೂ ಸಂಚಾರವೇ ಇಲ್ಲ. ಸೇತುವೆ ಮೇಲಿನ ರೋಡು ತುಂಬ ಟ್ರಾಫಿಕ್ ಇರುವ ರಾಜಮಾರ್ಗ. ಸೇತುವೆಯ ಮುಂಭಾಗದಲ್ಲೇ ಒಂದು ಉಕ್ಕಡವಿದೆ. ಹೊಳೆಯನ್ನು ದಾಟಿದ ಕೂಡಲೆ ಹಂಪಾಪುರ. ಹಂಪಾಪುರದ ಊರಬಾಗಿಲಲ್ಲೇ ಅಮಲ್ದಾರರ ಮನೆ. ಅವರ ಆಳುಗಳು, ಆರ್ಡರ್ಲಿಗಳು ಒಬ್ಬರಲ್ಲ ಒಬ್ಬರು ಇದ್ದೇ ಇರುತ್ತಾರೆ. ನಂತರ ಮಿರ್ಲೆ, ಅಲ್ಲಿ ಪೊಲೀಸು **Out Post** ಇದೆ. ಯಡತೊರೆಯಲ್ಲಿ ರಾತ್ರಿ ಕಳ್ಳತನ ಮುಡಿದವನು ಕಳುವು ಮಾಲು ಸಮೇತ ತಂಡ್ರೆಗೆ ಹೋಗಬೇಕಾದರೆ ಅವನು ಅಸಲು ಬೇಕೂಫನಲ್ಲದಿದ್ದರೆ ಚುಂಚನಕಟ್ಟೆ ಮಾರ್ಗವನ್ನೇ ಹಿಡಿದಾನೆಂದು ನನಗೆ ತೋರಿತು.

ಆದರೆ ಲಿಂಗ ಕೃಷ್ಣಪ್ಪನವರ ತುಂಬು ಮನೆಯೊಳಗೆ ಅದರಲ್ಲೂ ಹೆಂಗಸರು ಮಲಗಿದ್ದ ಒಳಗಣ ಕೋಣೆಯೊಳಗೆ ಪ್ರವೇಶ ಮಾಡಿದ್ದಾದರೂ ಹೇಗೆ? ಸಬ್ ಓವರ್ಸಿಯರ್ ಮನೆಯೊಳಕ್ಕೆ ನುಗ್ಗಿದ್ದ ಧೀರನೇನೋ ಹೌದು! ಆದರೆ ಆ ಸನ್ನಿವೇಶವೇ ಬೇರೆ. ಇದನ್ನು

ಮೊದಲ ಚಲನಚಿತ್ರ

ದೂರದರ್ಶನದಲ್ಲಿ ಮೊಟ್ಟಮೊದಲಿಗೆ ತೋರಿಸಿದ ಚಲನಚಿತ್ರವೆಂದರೆ ಹಿಂದಿಯ 'ಮಹಲ್' ಎಂಬುದು. ಅದನ್ನು ದಿಗ್ದರ್ಶಿಸಿದವರು ಕಮಾಲ್ ಆಮ್ರೋಹಿ. ಅದು ಬಿಡುಗಡೆಯಾದದ್ದು ೧೯೪೯ರಲ್ಲಿ. ಅದನ್ನು ಮೂರು ಭಾಗಗಳಾಗಿ ಮೂರು ಭಾನುವಾರ ಪ್ರದರ್ಶಿಸಲಾಯಿತು.

✷ ಡಿ. ಗುಂಡೂರಾವ್

ನೋಡಿದರೆ, ಯಾರೋ ಮನೆಯವರೇ, ಕುಟುಂಬದ ನಂಬಿಕೆಯನ್ನು ಸಂಪಾದಿಸಿದವರೇ ಅವನಿಗೆ ಶಾಮೀಲಾಗಿದ್ದಿರಬೇಕು. ನಡೆದದ್ದು ಹೀಗಿರಬಹುದು: ಈ ಒಳಗಿನ ದ್ರೋಹಿಗೂ ಲಿಂಗನಿಗೂ ಚೆನ್ನಾಗಿ ಪರಿಚಯವಿದ್ದಿರಬೇಕು. ದ್ರೋಹಿಯು ಹೊಂಚು ಕಾದು ಸಿಕ್ಕಿದ್ದನ್ನು ಕದ್ದು ನಿನ್ನ ಕೈಗೆ ಕೊಡುತ್ತೇನೆ. ನೀನು ಅದನ್ನು ತೆಗೆದುಕೊಂಡು ಭದ್ರ ಮಾಡಿಕೊ. ಆಮೇಲೆ ಹಂಚಿಕೊಳ್ಳೋಣ ಎಂದು ಲಿಂಗನ ಸಂಗಡ ಒಪ್ಪಂದ ಮಾಡಿಕೊಂಡಿರಬೇಕು. ಆ ದ್ರೋಹಿಯು ಮನೆಯವರ ಕೆಲಸಕ್ಕಾಗಿ ಬಳಕೆಯಾಗಿ ಓಡಾಡುತ್ತಿರುವ ಮನುಸ್ಯನಿದ್ದಿರಬೇಕು. ಕಳವು ಮಾಲು ಮೇಲಿನ ಏರ್ಪಾಡಿನಂತೆ ತನ್ನ ಕೈಗೆ ಬಂದಕೂಡಲೇ ಲಿಂಗ ಚುಂಚನಕಟ್ಟೆ ನಿರ್ಮಾನುಷ ರೋಡಿನ ಮೂಲಕ ಅದೇ ರಾತ್ರಿ ಓಡಿರಬೇಕು. ಇದು ಬಹುಮಟ್ಟಿಗೆ ಊಹೆ. ಆದರೆ ಇದಕ್ಕಿಂತಲೂ ತರ್ಕಕ್ಕೆ ಸಾಧುವಾದ ಮತ್ತಾವ ಉದಾಹರಣೆ ಸಾಧ್ಯ? ಅಂತೂ ನೋಡೋಣ. ಈ ಊಹೆ ಸರಿಯಾಗಿದ್ದರೆ ಚಿಕ್ಕನಾಯಕನ ಹಳ್ಳಿಯ ಹತ್ತಿರ ಇವನು ಹರಿಗೋಲಲ್ಲಿ ಹೊಳೆ ದಾಟಿರಬೇಕು. ಅಂಬಿಗರನ್ನು ಉಪಾಯವಾಗಿ ವಿಚಾರಿಸೋಣ ಎಂದು ನಿಶ್ಚಯಿಸಿದೆ.


ಜನಗಳ ಸಂಗಡ ಬಳಕೆಯಾಗಿ ಬೆರೆತು ಉಪಾಯವಾಗಿ ಸಂಗತಿಗಳನ್ನು ಹೊರಡಿಸುವುದರಲ್ಲಿ ಆಗ ನಮ್ಮಲ್ಲಿದ್ದ ಪೋಲೀಸ್ ಇನ್‌ಸ್ಪೆಕ್ಟರು- ಅವರ ಹೆಸರು ಖಾಜಾ ಮಹಮ್ಮದ್- ಬಹಳ ಬುದ್ಧಿವಂತರು. ನಾನು ನೋಡಿದ ಪೋಲೀಸು ಆಫೀಸರುಗಳಲ್ಲಿ ಇವರಿಗಿಂತಲೂ ಶಕ್ತರು ಯಾರು ಇಲ್ಲ. ಅವರು ಮಾತನಾಡುವ ಕನ್ನಡ ಆಗಿನ ಸಾಬರ ಕನ್ನಡ. ಷ,ಸ,ಶ, ಇವುಗಳಿಗೆ ಒಂದೇ ಬೆಲೆ. ಆ ಹೊತ್ತಿಗೆ ಯಾವುದು ನಾಲಿಗೆಗೆ ಅಥವಾ ಪೆನ್ನಿಗೆ ಸಿಕ್ಕುತ್ತೋ ಅದನ್ನೇ ಚಲಾಯಿಸಿಬಿಡುತ್ತಿದ್ದರು. (ಈಗ ಅನೇಕ ಮುಸ್ಲಿಮರು ಕನ್ನಡವನ್ನು ಸೊಗಸಾಗಿ ಮಾತನಾಡುತ್ತಾರೆ, ಬರೆದೂ ಬರೆಯುತ್ತಾರೆ. ಕೆಲವರು ಕನ್ನಡದಲ್ಲಿ ಪ್ರವೀಣರೂ ಹೌದು. ನಾನು ಹೇಳುತ್ತಿರುವುದು ಸುಮಾರು ಐವತ್ತು ವರುಷದ ಹಿಂದಿನ ಮಾತು.) ಆದರೆ ಅವರ ವರದಿಗಳೂ ಮಾತೂ ಸಾಹಿತ್ಯವಲ್ಲದಿದ್ದರೂ ಅಪ್ಪಟ ವಿವೇಕ, ಪ್ರಪಂಚಜ್ಞಾನಗಳಿಂದ ತುಂಬಿರುತ್ತಿದ್ದವು. ಮನುಷ್ಯನೋ ಬಹಳ ಸತ್ಯವಂತ, ಸ್ನೇಹಪರ. ಒಳ್ಳೆಯ ನಿಯತ್ತಿನವರು.

ನಾನು ಇನ್‌ಸ್ಪೆಕ್ಟರನ್ನು ಸಂಗಡ ಕರೆದುಕೊಂಡು ಚುಂಚನಕಟ್ಟೆಗೆ ಹೋಗಿ, ಅಲ್ಲಿಂದ ಅವರನ್ನು ತಂದ್ರೇಲಿಂಗ ಆ ದಾರಿಯಲ್ಲಿ ಸಂಚಾರ ಮಾಡಿದ ಸುಳಿವು ಏನಾದರೂ ಸಿಕ್ಕೀತೆ? ಎಂಬ ವಿಚಾರಣೆಗೆ ಕಳುಹಿಸಿಕೊಟ್ಟೆ. ಯಡತೊರೆಯಿಂದ ಚುಂಚನಕಟ್ಟೆವರೆಗೆ ರಸ್ತೆಯ ಬಾಜೂನಲ್ಲಿ ಯಾವ ಗ್ರಾಮಗಳೂ ಇಲ್ಲ. ಅಲ್ಲದೆ ನನ್ನ ಊಹೆಯಲ್ಲಿ ಲಿಂಗ ಆ ಭಾಗವನ್ನು ಕೇವಲ ಕತ್ತಲಿರುವಾಗಲೇ ನಡೆದಿರಬೇಕು. ಅಲ್ಲಿಂದ ಮೇಲೂ ಯಾವ ಸುಳಿವೂ ಸಿಕ್ಕಲಿಲ್ಲ. ಆಮೇಲೆ ಇನ್‌ಸ್ಪೆಕ್ಟರು ಚಿಕ್ಕನಾಯಕನಹಳ್ಳಿ ಕಡುವಿನಲ್ಲಿ ಹರಿಗೋಲನ್ನು ನಡೆಸುವ ಅಂಬಿಗರನ್ನು ವಿಚಾರಿಸಿದರು. ಅಲ್ಲಿ ನಮ್ಮ ಅದೃಷ್ಟ ಸ್ವಲ್ಪ ಖುಲಾಯಿಸಿದಂತೆ ಕಂಡಿತು. ಅಂಬಿಗರ ನಾಯಕ ತಂದ್ರೆಲಿಂಗನನ್ನು ಬಲ್ಲ. ಅವನನ್ನು ಚಿಕ್ಕನಾಯಕನಹಳ್ಳಿಯಲ್ಲಿ ಒಂದೆರಡು ಸಲ ನೋಡಿದ್ದ. ಅವರವರು ಬಹಳ ದೋಸ್ತಿ.

'ಲಿಂಗಯ್ಯನನ್ನು ಕೊನೆ ಸಲ ನೋಡಿದ್ದು ಯಾವಾಗ? ಎಂದು ಕೇಳಿದ್ದಕ್ಕೆ 'ನಮಗೇನು ಜ್ಞಪ್ತಿ ಬುದ್ಧಿ? ನಾವೇನು ಬರಹಗಾರ್ರಾ? ಹದಿನೈದು ಇಪ್ಪತ್ತು ದಿನ, ಒಂದು ತಿಂಗಳ ಇರಬೈದೇಳಿ. ಹೂ, ಒಂದು ತಿಂಗಳೂ ಅಂತೇ ಇಟ್ಟುಕೊಳ್ಳಿ. ನಾನೂ ಬೆಳಿಗ್ಗೆ ಎದ್ದವನು ಮೊಕ ತೊಳೆಯೋಕೆ ವಳೇತಾವಕೇ ಬಂದಿ, ಲಿಂಗ

ಯ್ಯನೂ ಅತ್ತ ಕಡೇಲಿ ನಿಂತು ಕೂಗಿ ಕೈಬೀಸಿ ಕರೆದ. ಹರಿಗೋಲು ತೊಗೊಂಡುವ್ಹೋದಿ. "ಏನು ಬುದ್ಧಿ ವೊತ್ತಾನೇ ಬಂದು ಬುಟ್ಟಿರಿ?" ಅಂದೆ. "ಬಂದಿ ಕಣೋ, ಬಾಳ ಕೆಲಸ, ಅದೇ ಊರಾಗೆ ಮಾತನಾಡಬೇಡ, ಕರಕೊಂಡು ನಡೀ," ಅಂದರು. "ಅಪ್ಪಾಜಿಣ್ಣ ಊರಾಗವನ" ಅಂತ ಕೇಳಿದರು. "ನನಗೇನು ಗೊತ್ತು, ಇರ ಬೈದು" ಅಂದೆ. ವಳೆ ದಾಟಿದ ಮೇಲೆ ರುಸುಂ ಕೇಳಿದೆ. "ಚಿಲ್ಲರೆ ಅದೇನೋ" ಅಂತ ಒಂದು ರೂಪಾಯಿ ತೆಗೆದರು. "ನನ್ನ ತಾವ್ರ ಚಿಲ್ಲರೆ ಎಲ್ಲಿ ಬಂತು ಬುದ್ಧಿ?" ಅಂದೆ. "ಇರಲಿ ತೊಗೋ ಬಡ್ಡಿ ಮಗನೆ. ನಾನು ಬಂದ ಸುದ್ದಿ ಬಾಯಿಬಿಟ್ಟೇಯ. ನೀನು ಒಳ್ಳೇವನಾಗಿದ್ದರೆ, ತಿರುಗ ಚುಂಚನಕಟ್ಟೆ ಜಾತ್ರೆಗೆ ಬಂದಾಗ ಭಾರಿ ಇನಾಮುಕೊಟ್ಟೇನೆಂದರು. ಕಾವಂದರು ಕೇಳಿದರೆ ಯೇಳದೆ ಇರೋಕಾದಾತಾ? ಆಗ ಅವರ ತಾವ ಏನು ಸಾಮಾನಿತ್ತು ಅಂತೀರ? ಏನೂ ಇರಲಿಲ್ಲ. ತಾಳಿ, ಒಂದು ಟವೆಲಿನಲ್ಲಿ ಕಟ್ಟಿದ್ದ ಪಟ್ಟಲ ಮಾತ್ರ ಇತ್ತು. ಅದು ಚಿಕ್ಕಪಟ್ಲೆ ಏಳಿ, ಒಂದು ಕುಂಬಳಕಾಯಿಗೆ ಸ್ವಲ್ಪ ದಪ್ಪನಾಗಿತ್ತು. ಕೈಲೇ ಹಿಡಿದಿದ್ದರು. ಅದು ಭಾರವಾಗಿತ್ತೊ ಇಲ್ಲವೋ ನಾನು ಬಲ್ಲನಾ? ನಾನು ಮುಟ್ಟಲೇ ಇಲ್ಲ.

ಮೇಲಿಂದು ಅಂಬಿಗರ ನಾಯಕನಿಂದ ಇನ್‌ಸ್ಪೆಕ್ಟರಿಗೆ ಬಂದ 'ಬಾತ್ಮಿ'ಯ ಸಾಧ್ಯವಾದ ಮಟ್ಟಿಗೆ ಅವನು ಆಡಿರಬಹುದಾದ ಮಾತಿನ ಸಾರಾಂಶ. ಮೇಲಿನ ಕತೆಯಲ್ಲಿ ಹೆಸರು ಬಂದಿರುವ ಅಪ್ಪಾಜಿ ಚಿಕ್ಕನಾಯಕನಹಳ್ಳಿಯ ಅಕ್ಕಸಾಲೆ. ಅವನಿಗೆ ಹಿಂದೆ ಒಂದು ಕಳವು ಮಾಲಿನ ಮೊಕದ್ದಮೆಯಲ್ಲಿ ಮೂರು ತಿಂಗಳು ಸಜ ಆಗಿತ್ತು. ಅದು ಆಗಲೇ ಬಹಳ ದಿವಸದ ಮಾತು. ಈಚೆಗೆ ಇವನು ತನ್ನ ಉದ್ಯೋಗಕ್ಕೆ ಸಂಬಂಧಪಟ್ಟ ಸಣ್ಣಪುಟ್ಟ ಮಾಮೂಲು ವರ್ತ



ನೆಗಳ ಹೊರತು ಸಂಭಾವಿತನಾಗಿ ಊರಿನಲ್ಲಿ ನಾಲ್ಕು ಜನಕ್ಕೆ ಬೇಕಾದವನಾಗಿದ್ದ. ಅಂಬಿಗನ ಮಾತಿನಿಂದಲೂ ಇತರರನ್ನು ವಿಚಾರಿಸಿದ್ದರಲ್ಲೂ ಅವನಿಗೂ ತಂದ್ರೇಲಿಂಗನಿಗೂ ಪರಿಚಯವಿದ್ದಂತೆ ಗೊತ್ತಾಯಿತು. ಇನ್‌ಸ್ಪೆಕ್ಟರ ಊಹೆ ಇಬ್ಬರೂ ಏಕಕಾಲದಲ್ಲಿ ಜೈಲಿನಲ್ಲಿದ್ದಿರಬೇಕೆಂದು ಆ ಮೇಲೆ ವಿಚಾರಿಸಿದ್ದರಲ್ಲಿ ಇದು ವಾಸ್ತವವೆಂದೂ ತಿಳಿಯಿತು. ಆ ಸನ್ನಿವೇಶದಲ್ಲಿ ಅಂಕುರವಾದ ಸ್ನೇಹ ನಂತರ ಉಭಯತ್ರರ ಕಸುಬುಗಳ ಅನ್ಯೋನ್ಯತೆಯಿಂದ ವೃದ್ಧಿಗೊಂಡಿರಬೇಕು.

ಇನ್‌ಸ್ಪೆಕ್ಟರು ಅಪ್ಪಾಜಿಯನ್ನು ಯಾವುದೋ ನೆವದ ಮೇಲೆ ತಮ್ಮ ಸಂಗಡ ಚುಂಚನಕಟ್ಟೆಗೆ ಕರೆದುಕೊಂಡು ಬಂದು ಪೋಲೀಸ್ ಸ್ಟೇಷನ್ನಿನಲ್ಲಿಟ್ಟಿದ್ದರು.

'ಅಪ್ಪಾಜಿಯನ್ನು ನಾವು ಬಂಧಿಸಿದ ಸಂಗತಿ ಲಿಂಗನಿಗೆ ಗೊತ್ತಾದ ಕೂಡಲೇ ಅವನು ಗಾಬರಿಬಿದ್ದು ಪರಾರಿಯಾದಾನು, ಅವನನ್ನು ಕೂಡಲೇ ದಸ್ತಗಿರಿ ಮಾಡಿ' ಎಂದು ಇನ್‌ಸ್ಪೆಕ್ಟರಿಗೆ ಹೇಳಿದ.

ಪತ್ತೇದಾರ ರಾಮರಾಯರು

ಅವರು ಆ ರೀತಿ ಮಾಡಲು ಕೂಡಲೆ ಜಮಾದಾರರನ್ನು ಹೊಳೆಹಾಸಿದ ಒಳದಾರಿಯ ಮೂಲಕ ತಂದ್ರೆಗೆ ಕಳುಹಿಸಿದರು.

ಅಪ್ಪಾಜಿ ರಾತ್ರಿ ಪೊಲೀಸ್ ಸ್ಟೇಷನ್ನಿನಲ್ಲಿ ಪೊಲೀಸಿನವರ ಗರ್ಭವಾಸದಲ್ಲೇ ಇದ್ದ. ಮಾರನೆಯ ಬೆಳಿಗ್ಗೆ ಅವನನ್ನು 'Travellers Bungalow'ಗೆ ನನ್ನಲ್ಲಿಗೆ ಕರೆದುಕೊಂಡು ಬಂದರು. ಅವನು ಹೇಳಿದ ಕಥೆ (ನನ್ನ ಮಾತಿನಲ್ಲೇ ಹೇಳುತ್ತೇನೆ).

'ತಂದ್ರೇಲಿಂಗಯ್ಯನ ಗುರುತು ನನಗೆ ಉಂಟು. ಅಂಥ ಹೆಚ್ಚು ಸ್ನೇಹ ಎಂದು ಹೇಳಲಿಕ್ಕಾಗುವುದಿಲ್ಲ. ಏನಾದರೂ ಕೆಲಸವಿದ್ದರೆ ನನ್ನಲ್ಲಿ ಬರುವುದುಂಟು. ಕೆಲಸವೆಂದರೆ ನನ್ನ ಜಾತಿ ಕೆಲಸ. ಒಡವೆ ಗಿಡವೆ ಇಂಥವು ಮಾಡುವ ಕೆಲಸ. ಅವನ ಹೆಂಡತಿಗೆ ಕಡಗ, ಡಾಬು ಮಾಡಿಕೊಟ್ಟಿದ್ದೇನೆ. ಲಿಂಗಯ್ಯ ಸ್ವಲ್ಪ ಷೋಕೀ ಮನುಷ್ಯ. ಹೆಂಡತಿಯಲ್ಲದ ಇತರರಿಗಾಗಿಯೂ ನನ್ನ ಕೈಲಿ ಗೆಜ್ಜೆ, ಗುಂಡು ಮಾಡಿಸಿದಾನೆ. ಈಗ ಸುಮಾರು ಹದಿನೈದು ಇಪ್ಪತ್ತು ದಿನದ ಹಿಂದೆ ಬೆಳಿಗ್ಗೆ ಒಂದು ಮಾರು ಹೊತ್ತಿನಲ್ಲಿ ನಮ್ಮ ಹಟ್ಟಿಗೆ ಬಂದ. ಬಹಳ ಸೋತು ಬಂದಿದ್ದಂತೆ ಕಂಡ. ರಾತ್ರಿಯೆಲ್ಲಾ ದಾರಿ ನಡೆದಿರಬೇಕೆಂದು ತೋರಿತು. "ಏನಪ್ಪ ಬಂದಿರಿ?"ಅಂದದ್ದಕ್ಕೆ "ಹೇಳುತ್ತೇನೆ ಮೊದಲು ತಿನ್ನೋಕೆ ಕೊಬ್ಬರಿ, ಕಡಲೆ, ಹಣ್ಣು ಏನಾದರೂ ತಂದುಕೊಡು. ಹಾಲು ಸಕ್ಕರೆ ತೊಗೊಂಡು ಬಾ," ಎಂದು ಒಂದು ರೂಪಾಯಿ ಕೊಟ್ಟ. ತಂದುಕೊಟ್ಟೆ. "ಇಲ್ಲೇ ಶಿವಾಚಾರದವರ ಮನೆ ಇದೆ. ಕಡುಬು ಗಿಡಬು ಮಾಡಿಸಲೇನಪ್ಪ? ಅಲ್ಲೇ ಊಟಕ್ಕೂ ಹೇಳುತ್ತೇನೆ," ಅಂದೆ. 'ಒಂದೂ ಬೇಡ ಮಹಾರಾಯ. ನಾನು ನೆಂಟರ ಮನೆ ಆರೋಗಣೆಗೆ ಬರಲಿಲ್ಲ, ನಿನ್ನಿಂದ ಕೆಲಸವಾಗಬೇಕಾಗಿದೆ' ಅಂದ. "ಬಾಗಿಲು ಮುಚ್ಚಿ ಅಗಣಿ ಹಾಕು. ಯಾರೂ ಇಲ್ಲ ತಾನೆ ಮನೇಲಿ? ನಿನ್ನ ಹೆಂಡತಿ ಎಲ್ಲಿ?" ಅಂದ. "ಸಾಲಿಗ್ರಾಮಕ್ಕೆ ತಂಗಿ ಮನೆಗೆ ಹೋಗಿದ್ದಾಳೆ" ಎಂದೆ. ಬೇಷ್, ಒಂದೆರಡು ಸಾಮಾನು ಕರಗಿಸಿ ಗಟ್ಟಿಹೊಯ್ದು ಕೊಡು, ಬೇಗ ಅಂದ. 'ಇದೇನು ಲಿಂಗಯ್ಯ! ಅಂಥ ಕೆಲಸ ನನಗೆ ಹೇಳಬೇಡಪ್ಪ' ಎಂದೆ. "ಇರಲಿ ಕಣೋ ಕುಡಿವ್ವಿ, ಬೇಗ ಕರಗಿಸಿ ಗಟ್ಟಿ ಹೊಯ್ಯಿ. ನಾನು ಹೋಗಬೇಕು" ಅಂದ. ನಾನು ಏನು ಮಾಡಲಿ. "ಆಗಲಪ್ಪ" ಎಂದೆ. ಅವನು ಹಣ್ಣು- ಕಡಲೆ ತಿನ್ನುತ್ತ ಇದ್ದ ಹಾಗೇ ನಾನು ಅಗ್ಗಿಷ್ಟಿಕೆ ಹೊತ್ತಿಸಿ ಮೂಸೇ ಸಿದ್ಧಪಡಿಸಿಕೊಂಡು, "ಯಾವುದನ್ನಪ್ಪ ಕರಗಿಸೋದು?" ಎಂದು ಕೇಳಿದೆ. ಅವನು ಟುವಾಲಿನಲ್ಲಿ ಕಟ್ಟಿದ್ದ ಗಂಟು ಬಿಚ್ಚಿ ಎರಡು ಚಿನ್ನದ ಬಳೆಗಳು ಒಂದು ಬಂದಿ ತೆಗೆದ. ಅವನ್ನು ತೂಕ ಮಾಡಲಿಕ್ಕೆ ತ್ರಾಸು ತೆಗೆಯಲಾಗಿ, "ಏನೂ ಬೇಕಿಲ್ಲ, ನನ್ನ ಎದುರಿಗೇ ಕರಗಿಸಿ ಗಟ್ಟಿಯನ್ನು ಕೊಡುತ್ತೀಯಲ್ಲ," ಎಂದ. ನನ್ನ ಅಂದಾಜು, ಅವನು ತೆಗೆದುಕೊಟ್ಟ ಸಾಮಾನುಗಳು ಹದಿನೆಂಟು ಇಪ್ಪತ್ತು ತೊಲ ಅಂದರೆ ಸುಮಾರು ಮೂರು ಪಾವಿನ ತೂಕವಿದ್ದಿರಬಹುದು.

ನಾನು ಅಕ್ಕಸಾಲಿಯನ್ನು ಕೇಳಿದೆ, "ಅವನು ನೀನು ಹೇಳಿದಂತೆ ಗಂಟಿನಿಂದ ಎರಡು ಬಳೆ ಒಂದು ಬಂದಿಯನ್ನು ತೆಗೆಯಬೇಕಾದರೆ ಅವುಗಳನ್ನು ಹುಡುಕಿ ತೆಗೆದಿರಬೇಕು. ಆ ಗಂಟಿನಲ್ಲಿದ್ದ ಇತರ ಮಾಲುಗಳು ಕಾಣಿಸಿರಬೇಕಲ್ಲವೆ?" ಬಹಳ ನಿರುತ್ಸಾಹದಿಂದ ಹೇಳಲಾರದೆ ಹೇಳಿದ, "ಹೌದು, ಮಹಾಸ್ವಾಮಿ ಚಂದ್ರಮುರ, ಅಡ್ಡಿಕೆ, ಪದಕ, ವಾಲೆಗಳು, ನಾಗಮುರಿಗೆ ಇವುಗಳನ್ನು ನೋಡಿದೆ. "ಎಲ ಬಡ್ಡಿ ಮಗನೇ"ಅಂದೆ. "ನಾನು ತೊಕ್ಕೊಂಡು ಏನು ಮಾಡಲಪ್ಪ! ಆದರೆ ಭಾರಿ ಲೂಟಿ ಹೊಡೆ

ದಿದ್ದೀ"ಎಂದೆ. "ಹೂ, ಅಯ್ಯಾ ತಪ್ಪಿದರೆ ಭಾರಿ ಸಜಾ ಬೀಳೋನು ನಾನೆ. ನಿನ್ನ ಕೆಲಸ ನೀನು ಮಾಡು"ಅಂದ. ಅವನು ಕೊಟ್ಟ ಒಡವೆಗಳನ್ನು ಜಜ್ಜಿ ಮೂಸೆಯಲ್ಲಿ ಹಾಕಿ ಕರಗಿಸಿ, ಒಂದಕ್ಕಿಂತ ಒಂದು ದೊಡ್ಡ ಎರಡು ಗಟ್ಟಿಗಳನ್ನು ಹುಯ್ದು ಕೊಟ್ಟೆ. ಗಟ್ಟಿ ಹುಯ್ಯುವುದರಲ್ಲಿ ಚಿನ್ನದ ರಸ ಸಿಡಿದು ಸುಮಾರು ಅರ್ಧ ತೊಲೆ ಗುಂಡು ಬೇರೆ ಬಿತ್ತು. ಅದನ್ನು ನನಗೆ ಮಜೂರಿಯಾಗಿ ಕೊಟ್ಟ.

'ಅದು ನಿನ್ನಲ್ಲಿಯೇ ಇದೆಯೋ?' ಎಂದು ಇನ್‌ಸ್ಪೆಕ್ಟರು ಕೇಳಿದರು.

ಇರುವುದಾಗಿ ಹೇಳಿದ. ಇನ್‌ಸ್ಪೆಕ್ಟರು ಅವನು ಮೋಕಿ ಮನುಷ್ಯ, ಯಾರ್‍ಯಾರಿಗೊ ಒಡವೆ ಮಾಡಿಸಿಕೊಟ್ಟ ಅಂದಿಯಲ್ಲಾ, ಅವರು ಯಾರು ಬಲ್ಲೆಯಾ? ಎಂದು ಕೇಳಿದರು.

ಬಹಳ ಬಲವಂತಪಡಿಸಿದ ಮೇಲೆ ಸಾಲಿ ಗ್ರಾಮದಲ್ಲಿನ ಒಬ್ಬ ವೇಶ್ಯೆಯ ಹೆಸರು ಹೇಳಿದ. ನನಗೆ ಈಗ ಆ ಹೆಸರು ಮರೆತು ಹೋಗಿದೆ. ಕೆಂಪಿ ಅಂತ ಇಟ್ಟುಕೊಳ್ಳೋಣ.

ಅದೇ ದಿವಸ ಇನ್‌ಸ್ಪೆಕ್ಟರನ್ನು ಚಿಕ್ಕನಾಯಕ ನಹಳ್ಳಿಗೆ ಕರೆದುಕೊಂಡು ಹೋಗಿ ಸುಮಾರು ಮುಕ್ಕಾಲು ತೊಲೆ ತೂಕದ ಒಂದು ಚಿನ್ನದ ಗುಂಡನ್ನು ಪಂಚಾಯಿತರ ರೂಬು ತೆಗೆದು ಕೊಟ್ಟ. ಅಗಕ್ಕೆ ಮಹಜರಾಯಿತು. ಅದೇ ಈ ಮೊಕದ್ದಮೆಯಲ್ಲಿ ಮೊದಲು ದೊರೆತ ಮಾಲು.

ಅದೇ ದಿನ ತಂದ್ರೆಯಲ್ಲಿ ತನ್ನ ಮನೆಯಲ್ಲಿ ಕಾಯಿಲೆ ಎಂದು ಮಲಗಿದ್ದ ಲಿಂಗನನ್ನು ದಸ್ತಗಿರಿ ಮಾಡಿ, ಸಾಲಿಗ್ರಾಮದ ಪೋಲೀಸ್ ಲಾಕಪ್ಪಿನಲ್ಲಿ ಬಂಧಿಸಿದರು. ಲಿಂಗ ಬಿಚ್ಚಿದ ಗಂಟಿನಲ್ಲಿ ಅಪ್ಪಾಜಿ ಕಂಡದ್ದಾಗಿ ವಿವರಿಸಿದ ಒಡವೆಗಳು ಕಳವಾದ ಮಾಲುಗಳ ಪಟ್ಟಿಯಲ್ಲಿ ನಮೂದಿಸಿದವುಗಳ ಪೈಕಿಯಾಗಿದ್ದವು.

ಕಳವಾದ ೩,೫೦೦-೪,೦೦೦ ರೂಪಾಯಿಗಳ ಸ್ವತ್ತಿನ ಪೈಕಿ ಮುಕ್ಕಾಲು ತೊಲೆ ಬಂಗಾರ ಮಾತ್ರ ಸಿಕ್ಕಿತು. ತಂದ್ರೇಲಿಂಗ ಕಳ್ಳನೆಂದು ನಿರ್ದಿಷ್ಟವಾಗಿ ಗೊತ್ತಾಯಿತು. ಉಳಿದ ಮಾಲು? ಲಿಂಗ ಕಳವು ಮಾಡಿದ ರೀತಿ? ಅವನಿಗೆ ಸಹಾಯಕರಿದ್ದರೆ, ಅವರು ಯಾರು? ಈ ವಿಚಾರಗಳು ಪತ್ತೆಯಾಗಬೇಕು.

ನಾನು ಮಾರನೆಯ ದಿನ ಸಾಲಿಗ್ರಾಮಕ್ಕೆ ಈ ವಿಚಾರಣೆ ಮುಂದುವರಿಸಲು ಹೋದೆ.

ನಿಘಂಟು....

ಶ್ರೀ ಎಸ್.ವಿ. ಪರಮೇಶ್ವರ ಭಟ್ಟರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಒಮ್ಮೆ ಟಿ.ಎಸ್. ವೆಂಕಣ್ಣಯ್ಯನವರಲ್ಲಿಗೆ ಹೋಗಿ "ಹತ್ತು ರೂಪಾಯಿ ಬೇಕಾಗಿತ್ತು"ಅಂದರು. ಏಕೆ? ಏನು? ಎಂದು ಕೇಳದೆ, ದೇಹಿ ಎಂದವರಿಗೆ ನಾಸ್ತಿ ಎನ್ನದ ಆ ಹಿರಿಯ ಜೀವ ಜೇಬಿನಿಂದ ಹತ್ತು ರೂಪಾಯಿ ತೆಗೆದುಕೊಟ್ಟಿತು. ಕೆಲವು ತಿಂಗಳ ಬಳಿಕ ಶಿಷ್ಯವೇತನ ಬಂದಾಗ ಭಟ್ಟರು ಆ ಹತ್ತುರೂಪಾಯಿಗಳನ್ನು ಹಿಂದಿರುಗಿಸಲು ಹೋದರು. ಆಗ ವೆಂಕಣ್ಣಯ್ಯನವರು "ನಿನ್ನ ಬಳಿ ಕಿಟ್ಟೆಲ್ ನಿಘಂಟು ಇದೆಯೆ?" ಎಂದು ಕೇಳಿದರು. ಭಟ್ಟರು ಇಲ್ಲವೆನ್ನಲು ವೆಂಕಣ್ಣಯ್ಯನವರು "ಹಾಗಾದರೆ ಈ ದುಡ್ಡು ತೆಗೆದುಕೊಂಡು ವೆಸ್ಲಿ ಪ್ರೆಸ್ಸಿಗೆ ಹೋಗಿ ಒಂದು ಪ್ರತಿ ಕಿಟ್ಟೆಲ್ ನಿಘಂಟು ತೆಗೆದುಕೋ. ಅದು ನಿನಗೆ ಜೀವನವಿಡಿ ಬೇಕಾಗುತ್ತದೆ" ಎಂದು ಹೇಳಿದರು.

- ಡಾ. ಕೆ. ಶ್ರೀಕಂಠಯ್ಯ

ಪೊಲೀಸ್ ಇನ್‌ಸ್ಪೆಕ್ಟರು ಆದುವರೆಗೆ ದೊರೆತಿದ್ದ ಸುಳಿವುಗಳ ಮೇಲೆ ಮಾಮೂಲು ತನಿಖೆ ಮಾಡಿದರು. ವೇಶ್ಯೆ ಕೆಂಪಿಯ ಮನೆಯಲ್ಲಿ ಪಟ್ಟೆಸೀರೆ ಸಿಕ್ಕಿತು. ಅದೇ ಒಡವೆಗಳನ್ನಿಟ್ಟಿದ್ದ ಪುಟ್ಟಿಯ ಮೇಲೆ ಹೊದೆಸಿದ್ದ ಸೀರೆ ಎಂದು ಗುರುತಿಸಲ್ಪಟ್ಟಿತು. ಅದನ್ನು ಲಿಂಗ ಅವಳಿಗೆ ಬಹುಮಾನವಾಗಿ ಕೊಟ್ಟನೆಂದು ಹೇಳಿದಳು. ಗಾಬರಿ ಬಿದ್ದಿದ್ದ ಆ ಬಡಪಾಯಿಯ ಮೂಲಕ ಲಿಂಗನ ಆಪ್ತ ಒಡನಾಡಿಗಳು ಹಲವರ ಪರಿಚಯವಾಯಿತು. ಅವರ ಪೈಕಿ ಪಟೇಲ ದೇವರಸೇಗೌಡನ ಅಣ್ಣನ ಮಗನೋ ತಮ್ಮನ ಮಗನೋ ಆದ ಲಚುಮೇಗೌಡನೆಂಬುವನೊಬ್ಬ. ಇವರುಗಳ ದರ್ಯಾಪ್ತಿಯಿಂದ ಕಳವು ನಡೆದ ಮಾರನೆಯ ದಿನವೇ ಲಿಂಗ ಸಾಲಿಗ್ರಾಮಕ್ಕೆ ಬಂದು ಕೆಂಪಿಯ ಮನೆಯಲ್ಲಿ ರಹಸ್ಯವಾಗಿ ಇದ್ದುಕೊಂಡು ತನ್ನ ಸ್ನೇಹಿತರನ್ನೂ ಅಲ್ಲಿಗೇ ಕರೆಸಿ ಊಟ, ತಿಂಡಿ ವಗೈರೆ ಮಜ ಮಾಡಿ, ಇಸ್ಪೇಟು, ಪಗಡೆ ಇವುಗಳಲ್ಲಿ ಕಾಲ ಕಳೆಯುತ್ತಿದ್ದನೆಂದು ತಿಳಿದುಬಂತು. ಅವನು ಸಾಲಿಗ್ರಾಮಕ್ಕೆ ಬರುವುದಕ್ಕೆ ಮುಂಚೆಯೇ ತಂದ್ರೆಗೂ ಹೋಗಿದ್ದ. ಅವನು ಸಾಲಿಗ್ರಾಮದಲ್ಲಿದ್ದಾಗ ಅವನ ಹೆಂಡತಿ ಒಂದೆರಡು ಸಲ ಅಲ್ಲಿಗೆ ಬಂದಿದ್ದಳು. ಲಿಂಗನ ಕೈಲಿ ದುಡ್ಡು ಓಡಾಡುತ್ತಿರುವಂತಿತ್ತು ಎಂದು ಗೊತ್ತಾಯಿತು. ಅವನು ಚಿಕ್ಕನಾಯಕನಹಳ್ಳಿಯಲ್ಲಿ ಹುಯ್ಯಿಸಿದ ಗಟ್ಟಿಗಳ ಪೈಕಿ ಒಂದನ್ನು ಅಥವಾ ಎರಡನ್ನೂ ಮಾರಿರಬೇಕು. ಎಷ್ಟು ಮೆಹನತ್ತು ಮಾಡಿದರೂ ಯಾರಿಗೆ ಮಾರಿದನೆಂಬುದು ಪತ್ತೆಯಾಗಲಿಲ್ಲ. ತಂದ್ರೆಯಲ್ಲಿ ಲಿಂಗನ ಮನೆಯನ್ನು ಝಡ್ತಿ ಮಾಡಲಾಗಿ ಆದರಲ್ಲಿ ಅಡಿಗೆ ಉಗ್ರಾಣದ ಸಾಮಾನುಗಳ ಹೊರತು ಮತ್ತೇನೂ ಇರಲಿಲ್ಲ. ಅವನ ಹೆಂಡತಿಯ ಗೋಳಾಟ, ತನ್ನ ಗಂಡ ತನಗೆ ಕೊಡುತ್ತಿರುವ ಪೇಚಾಟ, ಅವನ ದುಷ್ಟತನ, ಕಳ್ಳನ ಹೆಂಡತಿ ಎಂದಿಗಿದ್ದರೂ ಮುಂಡೆ ಬುದ್ಧಿ, ಅವನ್ನ ಹಿಡಿದು ಜೈಲಿಗೆ ಹಾಕಿ, ನನ್ನ ಹೊಟ್ಟೆ ತಣ್ಣಗಾಗುತ್ತೆ ಎಂಬ ಬಯಕೆ ಇವುಗಳೇ ಝಡ್ತಿಯ ಮುಖ್ಯ ಫಲಿತಾಂಶ.

ನನಗೆ ಇದರಿಂದ ತೋರಿದ್ದು, ಲಿಂಗನ ಹೆಂಡತಿಗೂ ಅವಳ ಗಂಡನಿಗೂ ಈ ಕಳವು ಮಾಲುಗಳ ವಿಚಾರದಲ್ಲಿ ಏನೋ ಒಳ ಸಂಬಂಧವಿದೆ. ಅದನ್ನು ಮರೆಮಾಚುವುದಕ್ಕೆ ಈ ತಿರಸ್ಕೃತ ಸತಿರೋಷ- ದ್ವೇಷಗಳ ಪ್ರದರ್ಶನವೆಂದು. ಇನ್‌ಸ್ಪೆಕ್ಟರು 'ಬಹಳ ಫಾಟಿ ಘುಂಡೆ' ಎಂದು ಅನುಮೋದಿಸಿದು.

ಲಿಂಗ ಲಾಕಪ್ಪಿನಲ್ಲಿ ರಿಮ್ಯಾಂಡಿನ ಮೇಲಿದ್ದ. ಅವನನ್ನು ದಿನವಹಿ ಪೊಲೀಸಿನವರು ಪ್ರಶ್ನಿಸುತ್ತಿದ್ದರು. ಆದರೆ ಮಂತ್ರಕ್ಕೆ ಮಾವಿನಕಾಯಿ ಬೀಳಲಿಲ್ಲ. ಕಲ್ಲಿಗೂ ಬೀಳಲಿಲ್ಲವೆಂದು ಕಾಣುತ್ತೆ, ನಾನು ಅವನನ್ನು ಒಂದು ಸಲ ಕೇಳಿದಾಗ, "ನನ್ನ ಒಂದೇ ಸಲ ಗಲ್ಲಿಗೆತ್ತಿಬಿಡಿ. ಈ ಪೊಲೀಸಿನವರ ಹಿಂಸೆ ಯಾಕೆ ಕೊಡಿಸುತ್ತೀರಿ?" ಅಂದ.

'ನೀನು ಈ ಕಳವು ಮಾಡಿದ್ದೇನೋ ಚೆನ್ನಾಗಿ ಗೊತ್ತಾಯಿತು. ಯಾರ ಸಹಾಯದಿಂದ ಮಾಡಿದೆ? ಮಾಲು ಎಲ್ಲಿ?' ಎಂದು ಕೇಳಿದೆ. ಅವನು ನಕ್ಕು

'ಅಪ್ಪಾಜೀನ ಕೇಳಿ. ಕೆಂಪೀನ ಕೇಳಿ. ಅವರು ಮಾಲು ಕೊಟ್ಟರಂತೆ, ಅವರಿಗೆ ಗೊತ್ತಿರಬೇಕು. ಕೇಳಿ, ಒಂದು ಮಾತು ಹೇಳುತೀನಿ. ಹತ್ತು ಹಳೇ ಕಳ್ಳರು ಸೇರಿದರೆ ಒಬ್ಬ ಖದೀಮ ಇನ್‌ಸ್ಪೆಕ್ಟರು, ನಿಮ್ಮ ಇನ್‌ಸ್ಪೆಕ್ಟರನ್ನೇ ಕೇಳಿ. ನೀವು ಹುಡುಗರು, ಪಾಪ ನಿಮ್ಮನ್ನು ತೊಗಲು ಬೊಂಬೇ ಆಡಿಸುತ್ತಿದ್ದಾರೆ' ಅಂದ. ಆಗ ಅಲ್ಲೇ ಇದ್ದ ಇನ್‌ಸ್ಪೆಕ್ಟರು, 'ಯಾಕೆ ಸುಮ್ಮನೆ ಸತಾಯಿಸುತ್ತೀಯೋ ಈಗಿರುವ ರುಜುವತ್ತೇ ಸಾಕು, ನಿನಗೆ ಸಜ ಆಗೋಕೆ. ಇರೋ ಸಂಗತಿ ಹೇಳೋ. ನಿನಗೆ ೪-೫ ವರುಷ ಸಜಾ ಆದರೆ

ನೀನು ಜೈಲಿನಲ್ಲೇ ಸಾಯುತ್ತೀಯೋ ಏನೋ. ಮಾಲನ್ನು ಯಾರು ಅನುಭವಿಸುತ್ತಾರೋ ಏನೋ' ಅಂದರು.

'ನಾನು ಇದನ್ನು ಮಾಡಿದವನಲ್ಲ. ಮಾಲನ್ನು ಅನುಭವಿಸುವ ಪುಣ್ಯಾತ್ಮರು ಅನುಭವಿಸಲಿ. ಆದರೆ ನೀವೇಳೋದು ಎಂತ ಮಾತು ಸಾಹೇಬರೆ? ಪಿಂಚಿಣಿ ತಗೋಬೇಕೆಂದು ನಮ್ಮಂಥ ಬಡಬಗ್ಗರನ್ನೆಲ್ಲಾ ಬಡೀತೀರಲ್ಲ. ನೀವು ಪಿಂಚಿನಿ ತೆಗೆಯೋಕೆ ಮುಂದೆ ಸಾಯ್ತೀರೋ ಏನೋ ಬಲ್ಲಿರಾ?'

ಪ್ರಯೋಜನವಿಲ್ಲದ ಮಾತು. ಅಲ್ಲಿಗೆ ನಿಲ್ಲಿಸಿದೆ.

ಬಳಿಕ ಸ್ಟೇಷನ್ ಹೌಸ್ ಆಫೀಸರಿಂದ ತಿಳಿಯಬಂತು- ಲಿಂಗನನ್ನು ಲಾಕಪ್ಪಿಗೆ ಹಾಕಿದ ಮೇಲೆ ಅನೇಕ ಜನ ಅಲ್ಲಿ ಸುಳಿದಾಡುತ್ತಾರೆ. ಕೆಲವರು ಅವನನ್ನು ನೋಡಬೇಕೆನ್ನುತ್ತಾರೆ. ಅವಕಾಶ ಕೊಡಬಹುದೆ? ಎಂದು.

ಸರಿ. ಸುಳಿದಾಡುವವರ ಉದ್ದೇಶ, ಅವನನ್ನು ನೋಡಬೇಕೆಂಬ ಅಕ್ಕರೆಯ ಉದ್ದೇಶ ನನಗೆ ಸ್ಪಷ್ಟವಾಗಿ ಕಂಡಿತು. ದೇವರ ವಿಗ್ರಹದ ಕಣ್ಣುಗಳು ರತ್ನಗಳೆಂದು ತಿಳಿದ ಮೇಲೆ ಅಕ್ಕಸಾಲಿ ಅಸಲು ಭಕ್ತನಾದನಂತೆ. ಹಾಗೆ ಲಿಂಗನ ಹತೋಟೀಲಿ ಕಳವು ಮಾಲು ಮುಕ್ಕಾಲು ಮೂರುವೀಸಪಾಲು ಅಮಾನತ್ತಿನಲ್ಲಿರುವುದು ಅವನ ಭಕ್ತರಿಗೆ ಗೊತ್ತಿರಬೇಕು.

ಯಾರು ಯಾರು ಕೈದಿಯನ್ನು ನೋಡಲಿಕ್ಕೆ ಬಂದವರೆಂದು ವಿಚಾರಿಸಲಾಗಿ, ದೇವರಸೇಗೌಡನ ಕಡೆ ಇಬ್ಬರು, ಒಬ್ಬಿಬ್ಬರು ಆಚಾರಿಗಳು ಅಂದರೆ ಅಕ್ಕಸಾಲಿಗಳು, ಒಬ್ಬಿಬ್ಬರು ಜೈನ ವರ್ತಕರು ಎಂದು ಗೊತ್ತಾಯಿತು. ಇದು ನನ್ನ ಸಂದೇಹವನ್ನು ಖಾತರಿ ಮಾಡಿತು. ಯಾರನ್ನೂ ಸ್ಟೇಷನ್ನಿನ ಒಳಗೆ ಬಿಡಕೂಡದು. ಕೈದಿಯ ಸಂಗಡ ಮಾತನಾಡಲಿಕ್ಕಂತೂ ಅವಕಾಶ ಕೊಡಲೇಕೂಡದೆಂದು ಕಟ್ಟುನಿಟ್ಟಾಗಿ ಅಪ್ಪಣೆ ಮಾಡಿ, ಈ ಹುಕುಂ ಸರಿಯಾಗಿ ಜಾರಿಯಾಗುವ ಜವಾಬ್ದಾರಿಯನ್ನು ತಾಲೂಕು ಜಮಾದಾರರಿಗೆ ವಹಿಸಿದೆ.



ಆದರೂ ನನಗೆ ಸಮಾಧಾನವಿಲ್ಲ. ಪಟೇಲರ ಕಡೆಯವರು ಯತ್ನ ಮಾಡುತ್ತಿದ್ದಾರೆಂದರೆ, ಪಟೇಲನ ಬೆಂಬಲ ಅವರಿಗಿರಬಹುದು. ಬಹುಶಃ ಪಟೇಲನೇ ಇದಕ್ಕೆ ಆಸೆಪಟ್ಟಿದ್ದರೂ ಪಟ್ಟಿರಬಹುದು. ಅವನ ಪರವಾಗಿ ಅವನ ಶಿಷ್ಯರು ಓಡಾಡುತ್ತಿರಬಹುದೆಂದು ತೋರಿತು. ಪಟೇಲ, ಶಾನುಭೋಗರ ಬಹಳ ಪ್ರಬಲ ಚರಿತ್ರಾರ್ಹನಾದ ಮನುಷ್ಯ. ಅಕ್ಕಸಾಲಿಗಳು ಜೈನ ವರ್ತಕರ ಕಡೆಯ ದೂತರಿರಬಹುದು. ಜೈನ ವರ್ತಕರ ಪೈಕಿ ಕೆಲವರು ಮುಖ್ಯವಾಗಿ ಲಾಕಪ್ಪಿನ ಕೈದಿಯ ದರ್ಶನವನ್ನಪೇಕ್ಷಿಸಿದವರು. ಇದೂ ಒಂದು ವ್ಯಾಪಾರ. ವ್ಯಾಪಾರಧರ್ಮಕ್ಕೆ ಲಾಭವೇ ಸೂತ್ರವೆಂದು ತಿಳಿಯುವರು. ಇವರುಗಳೆಲ್ಲರೂ ಕೇವಲ ಲಿಂಗನ ಪ್ರಿಯದರ್ಶನಕ್ಕಾಗಿ ಲಾಕಪ್ ಯಾತ್ರೆಯನ್ನು ಕೈಗೊಂಡಿಲ್ಲ.

ಅಂತೂ ಇಂಥ ಅತಿರಥ ಮಹಾರಥರ ಸಂಘಟನೆಯಲ್ಲಿ ಕಳವು ಮಾಲು ಚಿಂದಿ ಉಡಾಯಿಸಿ ಹೋಗುವುದರಲ್ಲಿ ಸಂದೇಹವಿಲ್ಲ. ಬೇಗನೆ ಸಿಕ್ಕಿದರೆ ಹಾಗೆ, ಇಲ್ಲದಿದ್ದರೆ ಅದರ ವಾಸನೆಯೇ ಉಳಿದಿರುವುದಿಲ್ಲವೆಂದು ತೋರಿತು.

ಇದೇ ವಿಚಾರವನ್ನು ಇನ್‌ಸ್ಪೆಕ್ಟರ ಸಂಗಡ ಮಾತನಾಡುತ್ತಿರುವಾಗ ನನಗೊಂದು ಉಪಾಯ ಹೊಳೆಯಿತು. ಇವರುಗಳೆಲ್ಲರೂ ಲಿಂಗನಿಗೆ ಅವನ ಮೇಲೆ ಬಂದಿರುವ ಕೇಸಿನ ಬಚಾವಿನದೋ ಅಥವಾ ಇನ್ನೇನೋ ಆಶೆಯನ್ನು ತೋರಿಸಿ, ಆ ಯತ್ನಕ್ಕೆ ತಗಲಬಹುದಾದ ಖರ್ಚಿನ ಸಲುವಾಗಿ ಕಳವು ಮಾಲುಗಳಲ್ಲಿ ಯಾವುದನ್ನಾದರೂ ಕೊಡುವಂತೆ ಪುಸಲಾಯಿಸಲು ನೋಡುತ್ತಿದ್ದಾರೆ. ಅವನು ಒಂದು ಮಾಲನ್ನು ತೆಗೆದರೂ ಉಳಿದ ಮಾಲುಗಳೆಲ್ಲಿವೆ ಎಂಬುದರ ಗುಟ್ಟು ತಿಳಿಯುತ್ತೆ. ಆ ಮಾಲುಗಳನ್ನೆಲ್ಲಾ ತಾವೇ ಅಪಹರಿಸಬಹುದೆಂಬ ಆಸೆ ಇರಬೇಕು.

'ಅವರ ಪೈಕಿ ಯಾರನ್ನಾದರೂ ನಮ್ಮವರನ್ನಾಗಿ ಮಾಡಿಕೊಂಡು ಈ ಗುಟ್ಟನ್ನು ಕಂಡುಹಿಡಿಯುವುದಕ್ಕೆ ಆಗುವುದಿಲ್ಲವೇ ಇನ್‌ಸ್ಪೆಕ್ಟರೇ?'

'ಒಳ್ಳೇ ಯೋಚನೆ, ಆದರೆ ಹ್ಯಾಗೆ ಅದನ್ನು ರೂಪಗೊಳಿಸೋದು?'

ಬಹಳ ಹೊತ್ತು ಯೋಚನೆ ಮಾಡಿ ಕೊನೆಗೆ ಒಂದು ನಿರ್ಧಾರಕ್ಕೆ ಬಂದೆವು. ಇನ್ನು ಎರಡು ಮೂರು ದಿನಗಳಲ್ಲೇ ಕೈದಿಯನ್ನು ಮೈಸೂರು ಜೈಲಿಗೆ ರವಾನೆ ಮಾಡುತ್ತೇವೆಂದು ಸುದ್ದಿ ಹುಟ್ಟಿಸುವುದು. ಇದರಿಂದ ಬೀಳಿನ ಮೇಲೆ ಪರದಾಡುವ ಹದ್ದುಗಳಿಗೆ ಹಸಿವು ತೀವ್ರವಾಗುತ್ತದೆ. ಲಿಂಗ ಸಾಗಿ ಹೋಗುವುದರೊಳಗಾಗಿ ಏನಾದರೂ ಇತ್ಯರ್ಥಕ್ಕೆ ಬರಬೇಕೆಂದು ಯತ್ನ ದುಗ್ಗಣಿಸುತ್ತಾರೆ. ಸರಿಯಾದ ವೇಳೆ ಮತ್ತು ಆಸಾಮಿಯನ್ನು ನೋಡಿ ಅವನಿಗೆ ಲಿಂಗನ ಸಂಗಡ ಮಾತನಾಡಲಿಕ್ಕೆ ಆಕಸ್ಮಾತ್ತಾಗಿ ದೊರೆಯಿತೆಂಬಂತೆ ಅವಕಾಶ ಕೊಡುವುದು. ಈ ಮಾತು ನಡೆಯುವಾಗ ನಮ್ಮ ರಹಸ್ಯದಲ್ಲಿರುವ ಒಬ್ಬ ಮನುಷ್ಯ ಹಾಜರಿದ್ದು, ಅವರ ಸಂಭಾಷಣೆಯನ್ನು ನಮಗೆ ತಿಳಿಸುವಂತೆ ಏರ್ಪಾಡು ಮಾಡುವುದು.

ಈ ಉಪಾಯ ನಮ್ಮ ರಹಸ್ಯದಲ್ಲಿನ ಮನುಷ್ಯನ ಬುದ್ಧಿವಂತಿಕೆ, ಅದಕ್ಕಿಂತ ಹೆಚ್ಚಾಗಿ ನಿಯತ್ತು, ಇವುಗಳ ಮೇಲೆ ನಿಲ್ಲಬೇಕು ಅಥವಾ ಬೀಳಬೇಕು. ಆ ಮನುಷ್ಯ ನಮ್ಮ ಶಹಭಾಷಗಿರಿಗಿಂತಲೂ ಅವರ ಲೂಟಿಯ ಪಾಲಿನ ಮೇಲೆ ಹೆಚ್ಚು ಬೆಲೆ ಕಟ್ಟಿದರೆ ಕೆಲಸ ಕೆಟ್ಟಿತು. ಅವರೂ ಅವನೂ ಸೇರಿ ಪಾಲು ಹಂಚಿಕೊಳ್ಳುವಾಗ ನಮ್ಮನ್ನು ಅಪಹಾಸ್ಯ ಮಾಡಿ, ಲಾಭಕ್ಕೆ ಲಾಭ, ವಿನೋದಕ್ಕೆ ವಿನೋದ ಎಂದು ಹಿಗ್ಗಬಹುದು.

ಆದರೆ ಬೇರೆ ಮಾರ್ಗ ಯಾವುದೂ ಕಾಣದೆ ಕೊನೆಗೆ ಈ ಉಪಾಯದ ನೇತೃತ್ವದ ಜವಾಬ್ದಾರಿಯನ್ನು ನಾನೇ ಇಟ್ಟುಕೊಂಡೆ. ನನ್ನ ತೈನಾತಿಯಲ್ಲಿ ಷೇಕ್ ಮೊಹದಿನ್ ಎಂಬ ಕಾನ್‌ಸ್ಟೇಬಲ್ ಇದ್ದ. ಅವನು ಚೆನ್ನಾಗಿ ಬಾಳಿದ ಮನೆಯವನು. ಪೋಲೀಸಿನಲ್ಲಿ ಹೊಸದಾಗಿ ಸೇರಿದವನಾದ್ದರಿಂದ ಕಮ್ ದರ್ಜಾ ಪೋಲೀಸಿನವರ ರೀತಿಗಳನ್ನು ಕಲಿತವನಲ್ಲ. ಒಳ್ಳೆಯ ಹೆಸರು ತೆಗೆದುಕೊಂಡು, ಬೇಗನೆ ಪ್ರಮೋಷನ್ ಪಡೆಯಬೇಕೆಂಬ ಆಶೆಯುಳ್ಳವನು. ಬಲಿಷ್ಟನಾದ ಖಸರತೀ ಆಳು. ನನ್ನ ಅಭಿಪ್ರಾಯದಲ್ಲಿ ಧೈರ್ಯವಂತ, ನಿಯತ್ತುಳ್ಳವನು. ಮುಖ್ಯವಾಗಿ ನನ್ನ ಕಂಡರೆ ಅವನಿಗೆ ತಂದೆ, ಉಸ್ತಾದ್, ಯಜಮಾನ ಎಂಬ ಮೂರು ಎಳೆಯುಳ್ಳ ಪ್ರೇಮ, ಭಕ್ತಿ. ನಾನು ಇವನಿಗೆ ನನ್ನ 'ಪ್ಲಾನ್' ಹೇಳಿ ಈ ರೀತಿ ಆಜ್ಞೆ ಕೊಟ್ಟೆ.

'ನಿನ್ನ ಸುಪರ್ದಿಯಲ್ಲಿ ಕೈದಿಯನ್ನು ನನ್ನ ಬಳಿಗೆ ಈ 'Travellers Bungalow'ಗೆ

ಕಳಿಸಬೇಕೆಂದು ನಾನು ತಾಕೀತು ಕೊಡುತ್ತೇನೆ. ಹಾಗೆ ಕಳಿಸುವುದಕ್ಕೆ ಮುಂಚೆ ಅವನಿಗೆ ಕಾಲಿಗೆ ಕೈಗೆ ಬೇಡಿ ಹಾಕಬೇಕೆಂದು ಬರೆಯುತ್ತೇನೆ. ಅವನು ರಾಂಗು ಮಾಡುತ್ತಾನೆ, ಓಡಿ ಹೋಗುತ್ತಾನೆ ಎಂಬ ಭಯವಿಲ್ಲ. ಕೆರೆ ಕೋಡಿ ಹಳ್ಳ ನಿಮ್ಮ ದಾರಿಯಲ್ಲಿದೆ. ಅಲ್ಲಿ ಯಾರಾದರೂ ಅವನ ಸಂಗಡ ಮಾತನಾಡುವುದಕ್ಕೆ ಬಂದರೆ ಮೊದಲು ಬಿಲ್‌ಖುಲ್ ಆಗುವುದಿಲ್ಲವೆಂದು ಜೋರು ಮಾಡಿ ಆಮೇಲೆ ಅವರ ಪುಸಲಾವಣೆಗೆ ಮರುಳಾದವನಂತೆ ನಟಿಸಿ, ಅವರ ಮಾತನ್ನೆಲ್ಲಾ ಕೇಳಿ ನನಗೆ ವರದಿ ಮಾಡಬೇಕು. ಒಂದು ಕ್ಷಣವೂ ನೀನು ಕಳ್ಳನ ಬೇಡಿ ಸರಪಣಿಯನ್ನು ನಿನ್ನ ಕೈಯಿಂದ ಬಿಡತಕ್ಕದ್ದಲ್ಲ. ಅವನು ನಿನ್ನ ಕಣ್ಣೆದುರಿನಲ್ಲೇ ಇರಬೇಕು. ಅವರು ನಿನ್ನನ್ನು ಒಪ್ಪಿಸಲಿಕ್ಕೆ ಲಂಚ ರುಷುವತ್ತು ಕೊಡುವುದಾಗಿ ಆಸೆ ತೋರಿಸಬಹುದು. ಅದಕ್ಕೂ ಸಮ್ಮತಿಸಿದವನಾಗಿ ನಡೆ. ಮುಖ್ಯವಾಗಿ ನಿನ್ನನ್ನು ಒಳಗು ಮಾಡಿಕೊಂಡೆವೆಂಬ ನಂಬಿಕೆ ಅವರಿಗೆ ಪೂರಾ ಆಗಬೇಕು. ನೀನು ಹೆದರಬೇಡ. ಆ ಕೋಡಿ ಹಳ್ಳದ ಬಾಜೂದಲ್ಲಿರುವ ಮುಂಡುಗಳ್ಳಿ ಪೊದೆಯಲ್ಲಿ ನಿನ್ನ ರಕ್ಷಣೆಗಾಗಿ ಇಬ್ಬರು ಕಾನ್‌ಸ್ಟೇಬಲ್‌ಗಳು ಬಂದೂಕು ಸಹಿತವಾಗಿ ನೆರೆಯಾಗಿರುತ್ತಾರೆ.

ಇನ್‌ಸ್ಪೆಕ್ಟರು ದಾಡಿ ನೀವಿ, 'ಇನ್‌ಷಾ ಅಲ್ಲಾ, ನೀವು ಈ ಕೇಸು ಪತ್ತೆಯಾದ ಕೂಡಲೇ ದಫೇದಾರ್ ಆಗುತ್ತೀರಾ' ಎಂದು ಅವನಿಗೆ ಭುಜ ತಟ್ಟಿ, ತಮ್ಮ ರಿವಾಲ್ವರನ್ನು ಅವನಿಗೆ, ಇರಲಿ, ಜೇಬಿನಲ್ಲಿಡು ಎಂದು ಕೊಟ್ಟರು.



ಪತ್ತೇದಾರ ರಾಮರಾಯರು

ನಾನು ಮೇಲೆ ಹೇಳಿದಂತೆ ತಾಕೀತು ಬರೆದು ಸ್ಟೇಷನ್ ಹೌಸ್ ಆಫೀಸರಿಗೆ ಕಳಿಸಿದೆ. 'ಷೇಕ್ ಮೊಹದಿನ್ ಕುಮಕ್ಕಿಗೆ ಯಾರನ್ನೂ ಕಳಿಸಬೇಕಾಗಿಲ್ಲ. ಕೈದಿಗೆ ಬಲವಾಗಿ ಕೈಗೆ ಕಾಲಿಗೆ ಬಳಿ ಸಂಕೋಲೆ ಹಾಕಿದರೆ ಸಾಕೆಂದು' **Confidential** ಆಗಿ ಬರೆದೆ.

ಪೊಲೀಸ್ ಸ್ಟೇಷನ್ನಿಂದ **Travellers Bungalow** ಗೆ ಮುಕ್ಕಾಲು ಮೈಲಿ ದೂರ. ರಸ್ತೆ ಕೆರೆಯ ಏರಿ ಮೇಲೆ ಸ್ವಲ್ಪ ದೂರ ಹಾಯ್ದು ಕೋಡಿ ಹಳ್ಳವನ್ನು ದಾಟಿ ಬಂಗಲೆಗೆ ತಲುಪುತ್ತದೆ. ಷೇಕ್ ಮೊಹದಿನ್ ನನ್ನ ಆರ್ಡರನ್ನು ತೆಗೆದುಕೊಂಡು ಹೋಗಿ ಒಂದು ಒಂದೂವರೆ ಗಂಟೆಯಾಯಿತು. ನನಗೆ ಏನೇನೋ ಸಂದೇಹಗಳು, ಊಹೆಗಳು, ಚಿಂತೆಗಳು. ಷೇಕ್ ಮೊಹದಿನ್ ಅಪಾಯಕ್ಕೆ ಗುರಿಯಾಗಿರಬಹುದು. ಅವನನ್ನು ಖೂನ್ ಮಾಡಿ ಕೈದಿಯೂ ಅವನ ಸ್ನೇಹಿತರೂ ಪರಾರಿಯಾಗಿರಬಹುದು. ಷೇಕ್‌ಮೊಹದಿನ್ ಅವರ ಸಂಗಡವೇ ಸೇರಿಕೊಂಡು ಪರಾರಿಯಾಗಿರಬಹುದು. ಒಬ್ಬ ಅನುಭವವಿಲ್ಲದ ಹುಡುಗನ ಮೇಲೆ ಎಷ್ಟು ಭಾರಿ ವಜನ್ ಹೊರಿಸಿದ್ದೇನೆ! ಪೊಲೀಸು ಇನ್‌ಸ್ಪೆಕ್ಟರು, 'ತಾವು ಮಾಡಿರುವುದು ಬಹಳ ಒಳ್ಳೆಯ ಉಪಾಯ. ಆದರೆ ಅದರಲ್ಲಿ ಅಪಾಯ ಉಂಟು. ಷೇಕ್ ಮೊಹದಿನ್ ಒಳ್ಳೆಯ ಹುಡುಗ. ಆದರೆ ಅನುಭವವಿಲ್ಲದವನು. ಏನಾಯಿತೊ? ನೋಡುವುದಕ್ಕೆ ಯಾರನ್ನಾದರೂ ಕಳಿಸೋಣವೆ? ಅಪ್ಪಣೆಯಾದರೆ ನಾನೇ ಹೋಗ್ತೀನಿ!' ಎಂದರು.


ಅರೆ ಮನಸ್ಸಿನಿಂದ ತಾಳಿ, ನೋಡೋಣವೆಂದೆ. ಇನ್ನು ಸ್ವಲ್ಪ ಕಾಲ ಹೀಗೇ ಸಂದೇಹಾಂದೋಲನದಲ್ಲಿದ್ದರೆ ಇನ್‌ಸ್ಪೆಕ್ಟರನ್ನು ಕಳುಹಿಸುವುದು ಹಾಗಿರಲಿ, ನಾನೇ ಹೊರಡುತ್ತಿದ್ದೆ. ಅಷ್ಟರಲ್ಲೇ ಒಬ್ಬ ಪೊಲೀಸಿನವನು ಒಳಕ್ಕೆ ಬಂದು ಕೈದಿಯನ್ನು ಕರೆತರುತ್ತಿದ್ದಾರೆಂದು ಹೇಳಿದ. ಷೇಕ್ ಮೊಹದಿನ್ ಬಲವಾಗಿ ಬೇಡಿ ಸರಪಳಿಗಳಿಂದ ಬಂಧಿತನಾದ ಲಿಂಗನನ್ನು ಹಿಡಿದುಕೊಂಡು ಬಾಗಿಲ ಹತ್ತಿರ ಬಂದು ಕೊಠಡಿಯೊಳಕ್ಕೆ ಕರೆತಂದ.

ಕೈದಿಯು ಸಿಡುಕು ಮೊಂಡು ಧಿಕ್ಕಾರದ ಮೋರೆ ಮಾಡಿಕೊಂಡು ನಮ್ಮ ಕಡೆ ನೋಡದೆ ಸುಮ್ಮನೆ ನಿಂತ. ನಾನು,

'ಇನ್‌ಸ್ಪೆಕ್ಟರೇ, ಲಿಂಗನನ್ನು ನಿಮ್ಮ ಕೊಠಡಿಗೆ ಕರೆದುಕೊಂಡು ಹೋಗಿ, ಈಚೆಗೆ ಬಂದಿರುವ ಬಾತ್ಮಿ ಮೇಲೆ ಅವನನ್ನು ವಿಚಾರಿಸಿ' ಎಂದು ಹೇಳಿದೆ. ಅವರು 'ಅಪ್ಪಣೆ ಸಾರ್'ಎಂದು ಷೇಕ್ ಮೊಹದಿನ್ ಕೈಗೆ ಬಂಧಿಸಲ್ಪಟ್ಟಿದ್ದ ಕೈದಿಯನ್ನು ಬಿಡಿಸಿಕೊಂಡು ತಮ್ಮ ಕಡೆ ಕಾನ್‌ಸ್ಟೇಬಲ್ ಇಬ್ಬರನ್ನು ಕರೆದು ಅವರ ಸುಪರ್ದಿಯಲ್ಲಿ ಹಿಡಿಸಿಕೊಂಡು ಹೋದರು. ಷೇಕ್ ಮೊಹದಿನ್ ಒಬ್ಬನೆ ಉಳಿದ. ನಾನು ಅವನನ್ನು, ಏನಾಯಿತು ಬಹಳ ಹೊತ್ತು ದಾರಿಯಲ್ಲಿದ್ದಿರಲ್ಲ?' ಎಂದು ಕೇಳಿದೆ. ಅವನು ಹೇಳಿದ್ದು:

'ನಾನು ಈಚೆಗೆ ಬರುತ್ತಿದ್ದ ಹಾಗೇ ಸ್ಟೇಷನ್ ಮುಂದೆ ನಿಂತಿದ್ದ ಲಚುಮ, ಪಟಾಕಿ ಇವರು ಗಲ್ಲಿ ಕಡೆ ತಿರುಗಿ ಕಣ್ಣುಮರೆಯಾದರು. ದಫೇದಾರರು ನನಗೆ, "ಏನೋ ಮಾದು! ನಾನು ಬರಲೆ?" ಎಂದು ಕೇಳಿದರು. ಕೈದಿ, "ಯಾಕೆ ದಫೇದಾರ್ರೇ, ನಾನು ಓಡಿ ಹೋದೇನೆಂತಲೆ? ನಾಕೈದು ಮಣ ಕಬ್ಬಿಣ ತೊಡಿಸಿದ್ದೀರಿ, ಇನ್ನೂ ಭಯವೆ?"ಅಂತ ನಕ್ಕ. ಯಜಮಾನರು ನೀನೇ ಕರೆದುಕೊಂಡು ಬಾ ಅಂತ ಹುಕುಂ ಮಾಡಿದ್ದಾರೆ ಅಂದೆ. ಸರಿ. ಇನ್ನೊಂದು ಸರಪಳಿ ಹಾಕಿ ಕಾಲಿನ ಬೇಡಿಗಳಿಗೆ ನನ್ನ ಕೈಗೆ ಜಾಯಿಂಟು ಮಾಡಿ ಕೈದಿಯನ್ನು ನನ್ನ ಸುಪರ್ದು ಮಾಡಿದರು. ನಾನು ಅವನನ್ನು ಹಿಡಿದುಕೊಂಡು ಊರಾಚೆ ಬಂದಾಗ. ಅವನು ನನ್ನ ಸಂಗಡ

ಬಹಳ ದೋಸ್ತಿಗೆ ಬಂದ. ಏನೇನೋ ಹೇಳಿದ. ನಮ್ಮ ತಂದೆಯವರಿಗೆ ಅವನಿಗೆ ಬಾಳಬಾಳ ಅಂತೆ. "ಹೂಂ"ಅಂದೆ. "ಈ ಚಾಕರಿಯಿಂದ ಏನೋ ಆಗೋದು? ನಿನ್ನಂತ ರುಸ್ತುಂ ಹುಡುಗ ಈ ಗುಲಾಂಗಿರಿಯಲ್ಲಿರಬಾರದು" ಎಂದ. "ಆಗಲಪ್ಪ, ನನಗೆ ಜಾಗೀರಿ ಬಂದಾಗ ಖಾಕಿ ತೆಗೆದುಬಿಡುತ್ತೇನೆ. ಇನ್ನು ಗಪ್ ಆಗು, ಹಲ್ಲು ಮುರಿದೇನು" ಅಂದೆ. ಅಷ್ಟು ಹೊತ್ತಿಗೆ ಕೋಡಿ ಹಳ್ಳಕ್ಕೆ ಬಂದೆವು. ಅಲ್ಲಿ ಒಂದು ಮರದ ಹಿಂದಿನಿಂದ ಲಚುಮೇಗೌಡ ಬಂದ. "ಮೊಯಿದಿನ್ ಸಾಬರೆ"ಅಂದ. ಕೈದಿ ಜತೆಗೆ ವಸಿ ಗ್ರಾಕತ್ಯ ಮಾತಾಡಬೇಕಲ್ಲ ಅಂದ. "ಆಗಲಪ್ಪ, ಬಂಗಲೇ ತಾವಕೆ ನೀನೂ ಬಾ, ಮಾತಾಡುವಂತೆ"ಅಂದೆ. ಇಲ್ಲ, ಇಲ್ಲೇ ಮಾತಾಡಬೇಕು. ನಾಕು ಮಾತು. ನಿನಗೆ ಅದರಿಂದ ನುಕಸಾನಿಲ್ಲ ಅಂದ. ಜೇಬಿನಿಂದ ಎರಡು ನೋಟು ತೆಗೆದ. ನಾನು ಹೇಳಿದೆ, "ನಾನು ನೋಟು ನೋಡಿದೀನಿ ಗೌಡ, ನಿನ್ನ ದುಡ್ಡಿನ ಆಸೆಗೆ ನಾನು ಅನ್ನದ ಬಾಯಲ್ಲಿ ಮಣ್ಣು ಹಾಕಿಕೊಳ್ಳಲ? ಸಾಕು ಹೋಗು," ಅಂದೆ. ಅವನು "ನೋಡಿದೊ, ಇದೇ ಸಾಬನ ಬುದ್ಧಿ ಅನ್ನೋದು! ಅನ್ನದ ಬಾಯಲ್ಲಿ ಮಣ್ಣು ಹಾಕ್ಕೋ, ಅಂದೆನಾ? ಅನ್ನದ ಜೊತೆಗೆ ಬಿರ್‍ಯಾನಿ ತಿನ್ನು, ಖಬಾಬು ತಿನ್ನು, ಅಂತ ಹೇಳುತೀನಿ ನಾನು, ಕೇಳಾದರೂ ಕೇಳು, ನಾವು ಲಿಂಗನ ಸಂಗಡ ನಾಲ್ಕು ಮಾತಾಡುತ್ತೀವಿ. ಇಪ್ಪತ್ತು ರೂಪಾಯಿ ತೊಗೋ. ನಿನಗೆ ಇಪ್ಪತ್ತು ರೂಪಾಯಿ ಬರಬೇಕಾದರೆ ಎರಡು ತಿಂಗಳು ದುಡೀಬೇಡವೆ? ಒಂದು ಗಳಿಗೇಲಿ ಬರತದೆ ನೋಡು? ಇದು ಯಾರಿಗೆ ಗೊತ್ತಾಗುತ್ತೆ? ಸುಭೇದಾರ್‍ರಿಗೆ ತಿಳಿಯುತ್ತೆ ಅಂತಲೋ? ನೀನು ಹೇಳ್ತೀಯಾ? ನಾನು ಹೇಳ್ತೇನೊ? ಲಿಂಗಣ್ಣ ಹೇಳ್ತಾನೋ? ಪಟಾಕಿ ಹೇಳ್ತಾನೊ?" (ಅಷ್ಟು ಹೊತ್ತಿಗೆ ಹತ್ತಿರವೇ ಇದ್ದ ಇನ್ನೊಂದು ಮರದ ಹಿಂದಿನಿಂದ



ಪಟಾಕಿ ಬಂದ. ನನ್ನ ಜೇಬಿನಲ್ಲಿದ್ದ ಪಿಸ್ತೂಲನ್ನು ನೆನೆದು ನನಗೆ ಎಷ್ಟೋ ಬೇಫಿಕರ ಆಯಿತು) ನಾನು ಸುತ್ತುಮುತ್ತ ನೋಡಿ, ಬಹಳ ಕಷ್ಟದಿಂದ ಒಪ್ಪಿದವನ ಹಾಗೇ ತೋರಿಸಿ, ಲಚುಮನಿಂದ ಹತ್ತು ಹತ್ತು ರೂಪಾಯಿನ ಎರಡು ನೋಟುಗಳನ್ನು ಇಸಿದುಕೊಂಡೆ. 'ಇದೋ ಹಾಜರ್‍ಆಗಿದೇನೆ ಲಚುಮ, ಇನ್ನು ನೀನು ದೂರ ಹೋಗು. ನಾವು ಮಾತಾಡಬೇಕು' ಅಂದ. "ಬಿಲ್‌ಖಿಲ್ ನಾನು ಕೈದಿಯನ್ನು ಬಿಡುವುದಕ್ಕೆ ಆಗೋಲ್ಲ. ನನ್ನ ಕೈಗೆ ಅವನ ಕಾಲುಬೇಡಿಗೆ ಜೈಂಟು ಮಾಡಿದ್ದಾರೆ. ನೀವು ಏನು ಬೇಕಾದರೂ ಮಾತನಾಡಿಕೊಳ್ಳಿ, ನಾನು ನಿಮ್ಮ ಹತ್ತಿರ ರುಷುವತ್ತು ತಿಂದು ಮಾತನಾಡೋಕೆ ಬಿಟ್ಟಿದ್ದನ್ನು ನಾನೇ ಯಾರಿಗಾದರೂ ತಿಳಿಸುತ್ತೇನೆ? ಎಂದೆ. 'ಜೈಂಟ್ ಬಿಡಿಸುತ್ತೀವಿ ಕಣೋ'ಎಂದು ಹೆದರಿಸುವುದಕ್ಕೆ ಬಂದರು. ನಾನು ಹೆದರಲಿಲ್ಲ. ನಮ್ಮೋರು ಅಪಾಯವಾದರೆ ಕುಮಕ್ಕಿಗೆ ಹತ್ತಿರದಲ್ಲೇ ಇರುತ್ತಾರೆಂದು ಗೊತ್ತು. ಆಮೇಲೆ ಅವನು ಹೇಳೋದು ನಿಜ ಕಣೋ, ಅವನೇ

ಹೇಳ್ಯಾನೆ ಲಂಚ ತಿಂದೆ ಅಂತ? ಇಲ್ನೋಡ್ರಿ ಸಾಬ್ರೆ, ಈಗ ಕೊಟ್ಟಿರುವ ಇಪ್ಪತ್ತು ರೂಪಾಯಿ ಯಲ್ಲದೆ ನಮ್ಮ ಕೆಲಸ ಸರಿಯಾಗಿ ಆದರೆ ಇನ್ನೂ ಎಂಬತ್ತು ರೂಪಾಯಿ ಕೊಡುತೀವಿ. ಅಲ್ಲದೆ ನೀವು ನಮ್ಮವರೆಂದು ಎಂಥ ಕಷ್ಟಬಂದರೂ ಬಚಾಯಿಸುತ್ತೀವಿ. ನೀವು ಬಾಯಿ ಬಿಟ್ಟರಿ ಅಂದರೆ ನಮಗಾಗೋದು ಅಷ್ಟರಲ್ಲೇ ಇದೆ, ನಿಮ್ಮ ಜನ್ಮ ತೀರಿತು ಎಂದು ಲಚುಮ ಅಂದ. ಪಟಾಕಿ, ಲಿಂಗ ಇಬ್ಬರೂ 'ಹೌದು ಕಣೋ ಸಾಬಿ. ನಿನ್ನ ಬುದ್ಧಿ ನಿನ್ನ ಕೈಲಿರಲಿ,' ಅಂದರು. ನಾನು ಹೆದರಿದವನ ಹಾಗೆ, "ಆಗಲಪ್ಪ, ಆದರೆ ದುಡ್ಡಿನ ಮಾತು ಮರೀಬೇಡ; ಎಂಬತ್ತು ಸಾಲದು ನೂರಾದರೂ ಮಾಡಿಕೋ" ಅಂದೆ. ಲಿಂಗ ನಕ್ಕು "ಸಾಬಿ ಪರವಾ ಇಲ್ಲ ಕಣೋ, ನೂರಕ್ಕೆ ಒಪ್ಪು" ಅಂದ. ಆಯಿತು.

ಆಮೇಲೆ ನಡೆದದ್ದನ್ನು ನನ್ನ ಮಾತಿನಲ್ಲೇ ಹೇಳುತ್ತೇನೆ. ಲಿಂಗನ ಮೇಲೆ ಇರುವ ರುಜು ಮಾತು ಸಾಲದು. ಪೊಲೀಸ್ ಜಬರದಸ್ತಿಯಿಂದ ಹೇಗಾದರೂ ಕೇಸನ್ನು ಬನಾವಟ್ಟು ಮಾಡಬೇಕೆಂದು ಆ ಮುದಿಯ ಇನ್‌ಸ್ಪೆಕ್ಟರು ನೋಡುತ್ತಿದ್ದಾನೆ. ಲಿಂಗನನ್ನು ಬಿಟ್ಟರೆ ಯಾರೂ ಧೈರ್ಯವಾಗಿ ಸಾಕ್ಷ್ಯ ನುಡಿಯುವುದಿಲ್ಲವೆಂದು ಅವನನ್ನು 'ಲಾ'ಕ್ಕೆ ವಿರೋಧವಾಗಿ ಲಾಕಪ್ಪಿನಲ್ಲಿಟ್ಟಿದ್ದಾರೆ. ಒಳ್ಳೆಯ ಲಾಯರನ್ನಿಟ್ಟು ಶೆಷನ್ ಛೀಫ್ ಕೋರ್ಟುಗಳವರೆಗೂ ಹೋಗಿ ಮೊದಲು ಲಿಂಗನನ್ನು ಜಾಮೀನಿನ ಮೇಲೆ ಬಿಡಿಸಬೇಕು. ಇದಕ್ಕೆ ಹಣ ಬೇಕು. ಲಿಂಗನ ಕಳವು ಮಾಲಿನ ಪೈಕಿ ಕೆಲವನ್ನಾದರೂ ಲಚುಮ (ಲಕ್ಕೇಗೌಡ)ನ ವಶಕ್ಕೆ ಕೊಟ್ಟರೆ ಅದನ್ನು ಗೋಪ್ಯವಾಗಿ ಬಿಕರಿ ಮಾಡಿ ಲಾಯರನ್ನಿಟ್ಟು, ಹೇಳೋರಿಗೆ ಹೇಳಿ, ಕೊಡೋರಿಗೆ ಕೊಟ್ಟು, ಲಿಂಗನನ್ನು ಜಾಮೀನಿನ ಮೇಲೆ ಮೊದಲು ಬಿಡಿಸಿಕೊಂಡು ಆಮೇಲೆ ಅವನ ಬಚಾವಿಗೆ ಅವಶ್ಯವಾದ ಮುಂದಿನ ಯತ್ನ ಮಾಡುವುದಕ್ಕೆ ಲಚುಮ ಜವಾಬ್ದಾರ ಎಂದು ತಂದ್ರೇಲಿಂಗನಿಗೆ ಆಶೆ ತೋರಿಸಿದರು. ಅವನು ಕ್ರಮೇಣ ಅವರ ಮಾತಿಗೆ ಸೋತು ತುರ್ತು ಎಷ್ಟು ಹಣ ಬೇಕಾಗುತ್ತದೆಂದು ಕೇಳಿ. ನಾನೂರು ಐನೂರು ರೂಪಾಯಿಯಾದ್ರೂ ಬೇಕಾಗಬಹುದೆಂದು ಲಚುಮ ಹೇಳಿದ. ಹಾಗಾದ್ರೆ ಪೂಜಾರಿ ಮಲ್ಲಯ್ಯನನ್ನು ಕರೆದು ಕೊಂಡು ಅಂದೇ ಸಮರಾತ್ರಿ ಸುಮಾರಿಗೆ ತಂದ್ರೆಗೆ, ತನ್ನ ಮನೆಗೆ ಹೋದರೆ, ತನ್ನ ಹೆಂಡತಿಯನ್ನು ಕೇಳಿದರೆ ಅವಳಿಗೆ ಎಲ್ಲವೂ ಗೊತ್ತಿದೆ. ಅನುಕೂಲವಾಗಬಹುದು. ಆದರೆ ಮಲ್ಲಯ್ಯನೇ ಹೋಗಬೇಕು, ಅವನ ಸಂಗಡ ಇನ್ನಾರಾದರೂ ಒಬ್ಬರು ಹೋಗಬಹುದು. ಮಲ್ಲಯ್ಯನ ಹೊರತು ಇನ್ನಾರು ಹೋದರೂ ಆಗದು. ಒಬ್ಬರಿಗಿಂತ ಹೆಚ್ಚು ಜನ ಅವನೊಂದಿಗೆ ಹೋದರೂ ಕೆಲಸ ಕೆಡುತ್ತೆ. ಹೀಗೆ ಅವರಿಂದ ಆಣೆ, ಪ್ರಮಾಣ ಮಾಡಿಸಿಕೊಂಡನಂತೆ. ಅದಕ್ಕೆ ಇಷ್ಟು ಹೊತ್ತಾದದ್ದು, ಸುಭೇದಾರರು ಕೇಳಿದರೆ ಕೈದಿ ಎರಡಕ್ಕೆ ಹೋಗಬೇಕೆಂದು ಹೇಳಿದ; ಅವನಿಗೆ ಹೊಟ್ಟೆ ನೋವಂತೆ, ಎಂದು ಹೇಳುವಂತೆ ಷೇಕ್ ಮೊಹದಿನ್‌ಗೆ ಕುಂಸಲ್ (ಬಹುಶಃ **Counsel** ಅಪಭ್ರಂಶವಿರಬೇಕು) ಮಾಡಿದರಂತೆ.

ಅಷ್ಟು ಹೊತ್ತಿಗೆ ಇನ್‌ಸ್ಪೆಕ್ಟರು ಕೈದಿಯನ್ನು ಕರೆದುಕೊಂಡು ನನ್ನ ಕೊಠಡಿಗೆ ತಿರುಗಿ ಬಂದರು. ಆತ ಅವರಿಗೆ ಬಹಳ ಸತಾಯಿಸಿ ಅವರ ತಾಬೇದಾರರ ರೂಬು ರೂಬು ಬಹಳ ಅವಮಾನಕರವಾಗಿ ಹೀಯಾಳಿಸಿರಬೇಕು. ಅವರ ಮುಖವೆಲ್ಲ ಕೆಂಪೇರಿ, ಅವರ ನೆರೆದಾಡಿಯೇ ರೋಷದಿಂದ ಕುಣಿಯುವಂತೆ ಕಾಣುತ್ತಿತ್ತು. ಕೈದಿಗೆ ನನ್ನ ಕೊಠಡಿ ಬಾಗಿಲ ಹತ್ತಿರ ಅವನು ಮುಗ್ಗರಿಸಿ ಮುಂದೆ ಬೀಳುವಂತೆ ಬಲವಾಗಿ ಒದ್ದರು.

'ಏನೂ ಬಾಯಿ ಬಿಡಲಿಲ್ಲವೋ ಇನ್‌ಸ್ಪೆಕ್ಟರೇ' ಎಂದೆ.

'ಈ-ಗೆ, ಈ-ಮಗನಿಗೆ ಮಾಡೋದು ಮಾಡಿದರೆ ಬಾಯಿಬಿಡುತ್ತಾನೆ ಸಾರ್. ತಮ್ಮ ಅಪ್ಪಣೆಯಾದರೆ ಚುಂಚನಕಟ್ಟೆ ಸ್ಪೇಷನ್ನಿಗೆ ಕರೆದುಕೊಂಡು ಹೋಗುತ್ತೀನಿ' ಎಂದರು.

'ಆಗಲಿ ನೋಡೋಣ ಸಾಹೇಬರೆ, ಈಗ ಸದ್ಯಕ್ಕೆ ಮಾಡಿರುವುದು ಸಾಕು. ಆ ಔಷಧಿಸಣ್ಣ **'Dose'**ಗಳಲ್ಲಿ ಕೊಟ್ಟರೆ ಒಳ್ಳೇದು' ಎಂದೆ.


ಲಿಂಗ 'ಪತ್ತೆ ಮಾಡಲು ಕೈಲಾಗದ ಇನ್‌ಸ್ಪೆಕ್ಟರು. ಮನೆ ಹೆಂಗಸನ್ನ ಸುಧಾರಿಸಲಾರದ ಮುದಿಗಂಡ, ಹೊಡೆತ ಹೊಡೆದು ತಾನೆ ಗಂಡಸ್ತನ ತೋರಿಸೋದು' ಅಂದ.

ಇನ್‌ಸ್ಪೆಕ್ಟರಿಗೆ ಚಿಕ್ಕಸಂಸಾರ. ಲಿಂಗನಿಗೆ ಕೂಡಲೆ ಪ್ರಯೋಗವಾಗುತ್ತಿದ್ದ ಇನ್ನೊಂದು ಭಾರಿ **'Dose'**ನ್ನು ನಾನು ತಡೆದೆ.

'ಅವನು ಲುಚ್ಚಾ ಮಗ, ಆದರೆ ಕೈದಿಯನ್ನು ಹೊಡೆಯುವುದು ತಕ್ಕೇರು. ನಮ್ಮ ಎದುರಿಗಂತೂ ಮಾಡತಕ್ಕದ್ದೇ ಅಲ್ಲ. ನಾವು ನೋಟೀಸು ಮಾಡದೇ ಇರಲು ಆಗುವುದಿಲ್ಲ' ಹೀಗೆಂದು ಅವರಿಗೆ ಮಾತ್ರ ಕೇಳುವಂತೆ ಕಿವಿಯಲ್ಲಿ ಹೇಳಿದೆ. ಆಮೇಲೆ ಆಯುಧ ಪಾಣಿಗಳಾದ ಇಬ್ಬರು ಕಾನ್ಸ್‌ಟೇಬಲ್‌ಗಳ ಸುಪರ್ದಿನಲ್ಲಿ ಕೈದಿಯನ್ನು ಲಾಕಪ್ಪಿಗೆ ವಾಪಸು ಕಳುಹಿಸಿದೆವು.

ಇನ್‌ಸ್ಪೆಕ್ಟರಿಗೆ ಕೋಪ ಸ್ವಲ್ಪ ಶಮನವಾದ ಮೇಲೆ ಷೇಕ್ ಮೊಹದಿನ್ ಹೇಳಿದ ವರ್ತಮಾನವನ್ನು ಅವರಿಗೆ ಹೇಳಿ, ಅವನನ್ನು ಮೊಖಾಬಿಲೆ ಮಾಡಿಸಿದೆ. ಆಮೇಲೆ ಮುಂದೆ ಮಾಡಬೇಕಾದ ಕಾರ್ಯವನ್ನು ಆಲೋಚನೆ ಮಾಡಿದೆವು.

ಲಚುಮ ಅಥವಾ ಲಕ್ಷ್ಮೀಗೌಡ ಪಟೇಲ ದೇವರಸೇಗೌಡನ ಅಣ್ಣನ ಮಗ. ಪಟಾಕಿ- ಆ ಗುಂಪಿಗೆ ಸೇರಿದ 'ಗೂಂಡಾ'; ದೇವರಸೇಗೌಡ ಈ ಮೊಕದ್ದಮೆಯಲ್ಲಿ ಭಾಗವಹಿಸಿದರೆ ನಮ್ಮ ಕೆಲಸ ಬಹಳ ಕಷ್ಟಸಾಧ್ಯವಾಗುತ್ತೆ. ಈ ರಾತ್ರಿಯೇ ಪೂಜಾರಿ ಮಲ್ಲಯ್ಯ ತಂದ್ರೆಗೆ ಮಾಲು ತರಲು ಹೋಗುತ್ತಾನಾದ್ದರಿಂದ ನಾವೂ ಮಾಡುವುದನ್ನು ಕೂಡಲೆ ನಿರ್ಧರಿಸಬೇಕು. ಮಾಡುವುದು ಸ್ಪಷ್ಟವಾಗೇ ಇದೆ. ಪೂಜಾರಿ ಅರ್ಧ ರಾತ್ರಿಗೆ ಅಲ್ಲಿಗೆ ಹೋಗುತ್ತಾನೆ. ನಾವು ಅದಕ್ಕೆ ಒಂದೆರಡು ತಾಸು ಮುಂಚಿತವಾಗೇ ಅಲ್ಲಿಗೆ ಹೋಗಿ, ಲಿಂಗನ ಹೆಂಡತಿ ವಾಸವಾಗಿರುವ ಮನೆಯ ವತ್ತಿನಲ್ಲೇ ಮರೆಯಾದ ಸ್ಥಳದಲ್ಲಿ ಗೋಪ್ಯವಾಗಿರುವದು. ಅವಳು ಮಾಲನ್ನು ತಂದುಕೊಡುವ ಸಂಚು ಕಾದು, ಕೂಡಲೆ ಮಾಲು ಸಹಿತ ಅವಳನ್ನೂ ಪೂಜಾರಿಯನ್ನೂ ಹಿಡಿಯುವದು. ಇದರಲ್ಲಿನ ಅಪಾಯಗಳು ಅನೇಕ. ನಾವು ಕತ್ತಲಿನಲ್ಲಿ ರಹಸ್ಯವಾಗಿ ನಾಲ್ಕೈದು ಜನ ಮಾತ್ರ ಜನಗಳು ಸಾಮಾನ್ಯವಾಗಿ ತಿರುಗಾಡದ ಹಳ್ಳಕೊಳ್ಳದ



ನೀವು 'ಭಾಷಣ'ವನ್ನು
ಇಷ್ಟೊಂದು ಚೆನ್ನಾಗಿ ಮಾಡುತ್ತಿರಲ್ಲಾ...
ಕೇಳುಗರಿಗೆ 'ನಿದ್ದೆ'ಬಂದದ್ದೇ ಗೊತ್ತಾಗೊಲ್ಲ!


ಪತ್ತೇದಾರ ರಾಮರಾಯರು

ದಾರಿಯಲ್ಲದ ದಾರಿಯಲ್ಲಿ ಏಳೆಂಟು ಮೈಲಿಗಳ ದೂರದಲ್ಲಿರುವ ತಂದ್ರೆಗೆ ಹೋಗಬೇಕು. ಪಟೇಲ ದೇವರಸೇಗೌಡ ಕಳ್ಳನ ಕಡೆ ಷಾಮೀಲಾಗಿದ್ದರೆ, ಅದು ಉಪೇಕ್ಷಿಸಬಹುದಾದ ವಿಷಯವಲ್ಲ. ಅವರಿಗೆ ಬಾತ್ಮಿ ಕೊಡತಕ್ಕವರು ಅನೇಕರಿದ್ದಾರೆ. ನಮ್ಮ ಪೋಲೀಸ್ ಸಿಬ್ಬಂದಿ ಪೈಕಿಯೇ ಯಾರಾದಗೂ ಇರಬಹುದು. ಅಥವಾ ನಾವು ಕೈದಿಯನ್ನು ನನ್ನ ಆರ್ಡರ್ಲಿ ಮೂಲಕ ಕರೆಕಳಿಸಿದ್ದು, ಲಚುಮನ ಕೈದಿಯ ಮಾತು ಮತ್ತು ಒಪ್ಪಂದವಾದಾಗ ನನ್ನ ಆರ್ಡರ್ಲಿಯು ಎದುರಿಗೇ ಇದ್ದದ್ದು, ಇವೆರಡೂ ಸಂದೇಹವನ್ನುಂಟು ಮಾಡಬಹುದು. ದೇವರಸೇಗೌಡ ಆ ಪಾಳಿಯದಲ್ಲಿದ್ದರೆ, ಅವನು ತಂದ್ರೆಗೆ ಪೂಜಾರಿ ಸುರಕ್ಷಿತ ಹೋಗುವುದಕ್ಕೂ, ಬಂಗಲೆಯ ಹತ್ತಿರ ನಮ್ಮ ಓಡಾಟದ ವರ್ತಮಾನ ತರಿಸಿಕೊಳ್ಳುವುದಕ್ಕೂ, ಬಂದೋಬಸ್ತು ಮಾಡೇ ಮಾಡುತ್ತಾನೆ. ನಾವು ಕತ್ತಲಿನಲ್ಲಿ ತಂದ್ರೆಗೆ ಮಾಡುವ ಪ್ರಯಾಣವನ್ನು ದಾರಿ ಕಾದು ತಡೆದರೂ ಆಯಿತು. ಅಂಥ ಸಂಭವದಲ್ಲಿ ನಮ್ಮನ್ನು ಹೊಡೆದರೆ ತಾನೆ ಕೇಳುವವರು ಯಾರು? ಅಥವಾ ಪೂಜಾರಿಗೆ ಅವೊತ್ತು ಹೋಗಬೇಡ, ಇನ್ನೊಂದು ದಿನ ಹೋಗು ಎಂದು ಹೇಳಿದರೂ ಆಯಿತು.

ನನಗೆ ಒಂದು ಯೋಚನೆ ತೋರಿತು. ದೇವರಸೇಗೌಡನನ್ನು ನಮ್ಮ ಸಂಗಡಲೇ ಕರೆದುಕೊಂಡು ಹೋದರೆ ಉತ್ತಮ. ಕೂಡಲೆ ಅವನನ್ನು ಕರೆಸಿದರೆ, ಲಚುಮನಿಗೆ ತಂದ್ರೆ ಯಾತ್ರೆಯ ವಿಷಯ ಅವನಿಗೆ ಸುದ್ದಿ ಹೇಳಲು ಅವಕಾಶವೂ ಇರುವುದಿಲ್ಲ. ಪಟೇಲನ ಸಹಾಯ ಈ ಪತ್ತೆ ಸಾಹಸದಲ್ಲಿ ನಮಗೆ ಬೇಕೆಂದು ಹೇಳಿದರೆ, ಅವನಿಗೆ ಒಳ್ಳೆಯ ಹೆಸರು ಬರುತ್ತೆಂಬ ಆಸೆಯೂ ಉತ್ಸಾಹವೂ ಉಂಟಾಗಬಹುದು. ಅವನು ನಮ್ಮ ಸಂಗಡವೆ ಇದ್ದರೆ ಅವನು ನಮ್ಮ ಸುರಕ್ಷತೆಗೆ ಹೊಣೆಯಾಗಿರುತ್ತಾನೆ. ಅವನ ಕಕ್ಷಿಯರು ದಾರಿ ಕಾದು ನಮ್ಮ ಮೇಲೆ ಕೈ ಮಾಡಲಾರರು- ಹಾಗೆ ಮಾಡಿದರೆ ಅವನ ಮೇಲೆ ಪ್ರತಿಕ್ರಿಯೆ ಮಾಡಿಯೇವೆಂಬ ಭಯದಿಂದ. ಇನ್‌ಸ್ಪೆಕ್ಟರು ಇದಕ್ಕೆ ಒಪ್ಪಿದರು. ಕೂಡಲೆ ಪಟೇಲ ದೇವರಸೇಗೌಡನನ್ನು ಬರಮಾಡಿಕೊಂಡು ಅವನಿಗೆ ಲಚುಮ,ಪಟಾಕಿ ಇವರುಗಳ ಹೆಸರನ್ನು ಮಾತ್ರ ಬಿಟ್ಟು ಬಾಕಿ ಸಂಗತಿಗಳನ್ನೆಲ್ಲಾ ಹೇಳಿ ಅವನು ನಮ್ಮ ಜೊತೆಗೆ ತಂದ್ರೆಗೆ ಬರಬೇಕೆಂದು ತಾಕೀತು ಮಾಡಿದೆ. ಬಹಳ ಉತ್ಸಾಹದಿಂದ ಒಪ್ಪಿದ. ಅವನಿಗೆ ನನ್ನ ಬಿಡಾರದಲ್ಲೇ ಊಟ ಮಾಡಿಸಿದೆ. ನನ್ನ ಕುದುರೆಯನ್ನು ಬೆಳಿಗ್ಗೆ ತಂದ್ರೆಗೆ ತರುವಂತೆ ಹೇಳಿ, ರಾತ್ರಿ ಎಂಟು ಗಂಟೆಗೆ ಬಂಗಲೆಯಿಂದ ಹೊರಟೆವು. ನಮ್ಮ ಪಾರ್ಟಿ-ನಾನು, ಇನ್‌ಸ್ಪೆಕ್ಟರು (ನಮ್ಮಿಬ್ಬರ ಹತ್ತಿರವೂ ರಿವಾಲ್ವರುಗಳಿದ್ದವು), ಇಬ್ಬರು ಕಾನ್ಸ್ಟೇಬಲ್‌ಗಳು (ಷೇಕ್ ಮೊಹದಿನ್ ದೇಖೀಲು), ಪಟೇಲ ದೇವರಸೇಗೌಡ, ಇಷ್ಟು ಜನ. ಪಟೇಲ ಮತ್ತು ಕಾನ್‌ಸ್ಟೇಬಲ್‌ಗಳು ಲಾಠೀ ಹಿಡಿದಿದ್ದರು. ಕತ್ತಲಲ್ಲಿ ಒಂದು ಸಣ್ಣ ಕೈದೀಪದ ಸಹಾಯದಿಂದ ದಾರಿ ನಡೆಯುವದು ಬಹಳ ಪ್ರಯಾಸವಾಯಿತು. ಕಲ್ಲು- ಮುಳ್ಳು, ಕೊರಕಲು ಇವುಗಳ ದೆಸೆಯಿಂದ ಹೆಜ್ಜೆ ಹೆಜ್ಜೆಗೂ ಎಡವುತ್ತ, ಅಂತೂ ನನ್ನ ಕೈಗಡಿಯಾರದಲ್ಲಿ ಹನ್ನೊಂದು ಗಂಟೆಯ ಹೊತ್ತಿಗೆ ತಂದ್ರೆಗೆ ತಲುಪಿದೆವು. ಕೃಷ್ಣಪಕ್ಷದ ಕತ್ತಲು; ಅದರ ಮೇಲೆ ಕಾರ್ಮೋಡ. ನಾವು ಸೇರುವ ವೇಳೆಗೆ ಗ್ರಾಮದಲ್ಲಿ ಒಂದು ದೀಪವಿಲ್ಲ, ಪ್ರಾಣಿಯ ಸುಳಿವಿಲ್ಲ; ನಾವು ಒಳಗೆ ಕಾಲಿಟ್ಟ ಕೂಡಲೆ ಕೆಲವು ನಾಯಿಗಳು ಮಾತ್ರ ಬೊಗಳಲಿಕ್ಕಿಟ್ಟವು. ಅದೃಷ್ಟಕ್ಕೆ ಯಾರೂ ಎದ್ದು ಏಕೆ ಬೊಗಳುತ್ತವೆಂದು ನೋಡಲಿಕ್ಕೆ ಬರಲಿಲ್ಲ.

ತಂದ್ರೆಲಿಂಗನ ಮನೆ ಹಳ್ಳಿಯ ಒಂದು ಬೀದಿಯ ತುದಿಯಲ್ಲಿದೆ. ಅದರ ಆಚೆಗೆ ಯಾವ ಮನೆಗಳೂ ಇಲ್ಲ. ಮನೆಯ ಮಗ್ಗುಲುಗಳಲ್ಲಿ

ಓಣಿಗಳು. ಹಿಂದೆ ಸುಮಾರು ಹತ್ತುಮಾರು ಹಿತ್ತಲು. ಹಿತ್ತಲಿಗೆ ಮುಳ್ಳು ಬೇಲಿ. ಮನೆಯ ಎರಡು ಪಕ್ಕಗಳಲ್ಲೂ ಯಾರಾದರೂ ಬಂದರೆ ಕಾಣುವುದಕ್ಕೆ ಅನುಕೂಲವಿರುವ ಸ್ಥಾನಗಳಲ್ಲಿ ಬೇಲಿಯ ಮರೆಯಲ್ಲಿ ಆಳುಗಳನ್ನು ಕಾವಲಿಟ್ಟು, ನಾನೂ ಇನ್‌ಸ್ಪೆಕ್ಟರೂ ದೇವರಸೇಗೌಡನೂ ಹಿತ್ತಲಿನಲ್ಲಿ ಬೇಲಿಯ ಹಿಂದೆ ಪೋಲೀಸು ಕಂಬಳಿಗಳನ್ನು ಹಾಕಿಕೊಂಡು ಕುಳಿತೆವು. ಒಂದು ತಾಸಾಯಿತು, ಎರಡು ತಾಸಾಯಿತು, ಭರೋ ಅಂತ ಗಾಳಿ ಬೀಸಿ, ಮಳೆ ಬೀಳುವುದಕ್ಕೆ ಪ್ರಾರಂಭವಾಯಿತು. ಕಾದು ಕಾದು ಬೇಜಾರಾಯಿತು. ಬಟ್ಟೆಗಳೆಲ್ಲ ತೊಯ್ದು ಗಾಳಿಯಲ್ಲಿ ಮೈ ಮುಳ್ಳು ಬಂದಿತು. ನಾವು ಪ್ರಯತ್ನ ಮಾಡೇವೆಂದು ಊಹಿಸಿ ಈ ಕಳ್ಳ-ಮಕ್ಕಳು ನಮಗೆ ಚಳ್ಳೇಕಾಯಿ ತಿನ್ನಿಸುತ್ತಿರಬಹುದೆ? ನಾವು ಈ ಗಲೀಜು ಹಿತ್ತಲಲ್ಲಿ ಗೊಬ್ಬರದ ಕೆಸರಿನಲ್ಲಿ ನಡುಗುತ್ತ ಇರುವಾಗ ಲಚುಮ ವಗೈರೆ ಬೆಚ್ಚಗೆ ಮನೆಯಲ್ಲಿ ಕುಳಿತು ನಮ್ಮ ಕತೆಯನ್ನು ಒಬ್ಬರಿಗೊಬ್ಬರು ಹೇಳಿಕೊಂಡು ಹೊಟ್ಟೆ ಹಿಡಿದು ನಗುತ್ತಿರಬಹುದೆ? ಅಥವಾ, ನಾವು ಬರುವುದಕ್ಕೆ ಮೊದಲೇ ಬಂದು ತಮ್ಮ ಕೆಲಸ ಮಾಡಿಕೊಂಡು ಹೊರಟುಹೋದರೋ? ಈ ಹಾಳು ಮಳೆ ಬೇರೆ (ಆ ದೇವದತ್ತವಾದ ಮಳೆಯಿಂದ ಮುಂದೆ ನಮಗೆ ಎಷ್ಟು ಸಹಾಯವಾಯಿತೆಂಬುದು ಆ ಅವಸ್ಥೆಯಲ್ಲಿದ್ದ ನಮಗೇನು ಗೊತ್ತು, ಆಗ!.) ಏನಾದರೂ ಆಗಲಿ, ಮೊದಲು ಕೋಳಿ ಕೂಗುವವರೆಗಿದ್ದು, ಗ್ರಾಮಸ್ಥರು ಎದ್ದು ಬಂದು ನಮ್ಮನ್ನು ನೋಡಿ ನಗುವುದಕ್ಕೆ ಮುಂಚೆಯೇ ವಾಪಸು ಬಂದುಬಿಡೋಣವೆಂದು ಗೊತ್ತುಮಾಡಿದೆ. ದೇವರಸೇಗೌಡ ಕಂಬಳಿ ಗುಬರು ಹಾಕಿಕೊಂಡು ಮೆಲ್ಲಗೆ ಗೊರಕೆ ಹಾಕುತ್ತಿದ್ದ. ಸಾಬರು ಮುಖಕ್ಕೆ ಶಾಲು ಮುಚ್ಚಿಕೊಂಡು ಕೆಮ್ಮನ್ನು ತಡೆಯಲು ಸಾಹಸ ಮಾಡುತ್ತಿದ್ದರು.



ಏಕಾಏಕಿ ನಾಯಿಗಳು ಬೊಗಳಹತ್ತಿದವು. ನಾವು ಕಾವಲು ನೇಮಿಸಿದ್ದ ಒಬ್ಬ ಪೋಲೀಸಿನವನು ಅಂಬೆಗಾಲು ಹಾಕಿಕೊಂಡು ಬಂದು ಯಾರೋ ಬರುತ್ತಿದ್ದಾರೆಂದ. ನಾವು ಬಹಳ ಹುಷಾರಾಗಿ, ಬೇಲಿಯೊಳಗಿನ ಕಿಂಡಿಯಿಂದ ಈಚೆಗೆ ನುಸುಳಿಕೊಂಡು ಬಂದು ಮನೆಯ ಗೋಡೆಗೆ ಒತ್ತರಿಸಿಕೊಂಡು ನಿಂತೆವು. ಯಾರೋ ಮೂವರು ಬರುತ್ತಿದ್ದಂತೆ ಕಂಡಿತು. ಇಬ್ಬರು ಸುಮಾರು ಇಪ್ಪತ್ತು ಮಾರು ದೂರದಲ್ಲೇ ನಿಂತುಬಿಟ್ಟರು. ಒಬ್ಬನು ಲಿಂಗನ ಮನೆ ಬಾಗಿಲಿಗೆ ಬಂದು ಕದದ ಮೇಲೆ ಒಂದು ಕಲ್ಲಿನಿಂದಲೋ ಹಂಚಿನ ಬೋಕಿಯಿಂದಲೋ, ಮೂರು ನಾಲ್ಕು ಸಲ ಕೆರೆದ. ಒಳಗಿನಿಂದ 'ಯಾರು ಅದು?' ಎಂದು ಹೆಂಗಸಿನ ಧ್ವನಿ ಕೇಳಿಸಿತು.

'ನಾನು ಮಲ್ಲಯ್ಯ.'

'ತಮ್ಮಾಡೀನೆ? ಯಾನಪ್ಪ ಬಂದಿರಿ?'

'ಯಜಮಾನ ಕಳಿಸವನೆ.'

'ಯಾಕೆ?'

'ನಿಂಗೊತ್ತಿಲ್ಲವಾ.'

'ಏನಾದರೂ ಹೇಳಿಕಳಿಸವರೇನಪ್ಪ?'

'ದಾಸೋಗೆ-ಇಷ್ಟು ಹೇಳಿದರೆ ಸಾಕು. ನಿನಗೆ ಎಲ್ಲಾ ಗೊತ್ತಿದೆ ಎಂದು ಹೇಳಿದರು.'

ಈ ಸಂಭಾಷಣೆ ನಡೆಯುವಾಗ ಒಬ್ಬರು ಮನೆ ಹೊರಗೆ, ಒಬ್ಬರು ಒಳಗೆ ಇದ್ದದ್ದರಿಂದ ಸ್ವಲ್ಪ ಗಟ್ಟಿಯಾಗೇ ಮಾತನಾಡಬೇಕಾಯಿತೆಂದು ಕಾಣುತ್ತದೆ; ಇಲ್ಲವಾದರೆ ನಮಗೆ ಕೇಳಿಸುತ್ತಿರಲಿಲ್ಲ.

'ದಾಸೋಗ' ಎಂಬ ಸಂಕೇತದ ಮಾತು ಕೇಳಿದ ಕೂಡಲೆ ಬಾಗಿಲ ಅಗಳಿ ತೆಗೆದ ಸಪ್ಪಳ ಕೇಳಿಸಿತು. ಒಬ್ಬ ಹೆಂಗಸು-ತಂದ್ರೆಲಿಂಗನ ಹೆಂಡತಿಯೆಂದು ನಂತರ ಗೊತ್ತಾಯಿತು-ಈಚೆಗೆ ಬಂದು,

'ಹಂಗಾದರೆ ಇಲ್ಲೇ ಇರು. ನಾನು ಬರುತ್ತೀನಿ. ಇಲ್ಲಿಂದ ಕದಲಿಗಿದಲೀಯ. ನನ್ನ ಹಿಂದೇನಾದರೂ ನೀನು ಬರೋಕೆ ನೋಡಿದರೆ ನಾನು ಹಿಂತಿರುಗಿಬಿಡುತೀನಿ. ಆಮೇಲೆ ಏನೂ ಇಲ್ಲ ನೋಡಿಕೋ. ನಾನು ಹಿಂತಿರುಗಿ ಹಿಂತಿರುಗಿ ನೋಡ್ತಾನೇ ಹೋಗತೀನಿ' ಎಂದಳು.

'ಆ ಮನುಷ್ಯ

'ನಾನ್ಯಾಕವ್ವ ನಿನ್ನ ಬೆನ್ನ ಹತ್ತಲಿ? ನಿನ್ನ ಯಜಮಾನ ಹೇಳಿದ್ದು ತಿಳಿಸಿನ್ನಿ. ಹೋಗು ಅಂದರೆ ಹೋಗತೀನಿ', ಎಂದ.

'ಕ್ವಾಪ ಮಾಡಿಕೋಬ್ಯಾಡ ತಮ್ಮಡಯ್ಯ. ಬಾಳ ಹೊತ್ತು ಇರೊಲ್ಲ; ಬಂದುಬಿಡುತೀನಿ' ಎಂದು ಹೆಂಗಸು ಮನೆಯಿಂದ ಹೊರಟು, ಬೇಗ ಬೇಗ ಹೆಜ್ಜೆಯಿಟ್ಟು, ಪಕ್ಕದಲ್ಲಿದ್ದ ಜೋಳದ ಹೊಲದಲ್ಲಿ ಮರೆಯಾದಳು. ತಮ್ಮಡ್ಡಿ ಅಲ್ಲೇ ನಿಂತ. ಸುಮಾರು ಅರ್ಧ ಗಂಟೆ ಕಳೆಯಿತು. ನಾವು ಸ್ವಲ್ಪವೂ ಸದ್ದು ಮಾಡದೆ ನಿಂತಿದ್ದೆವು. ಮಳೆಯ ಸದ್ದಿನಲ್ಲಿ ನಾವು ಏನಾದರೂ ಮಾಡಿರಬಹುದಾದ ಸದ್ದು ಕೂಡ ಮರೆಯಾಯಿತೆಂದು ಕಾಣುತ್ತದೆ. ಕೊನೆಗೆ ಆ ಹೆಂಗಸು ತಾನು ಹೋದ ದಾರಿಯಲ್ಲಲ್ಲದೆ ನಾವು ಬಚ್ಚಿಟ್ಟುಕೊಂಡಿದ್ದ ಕಡೆಯ ದಾರಿಯಲ್ಲಿ ಓಡುತ್ತಾ ವಾಪಸು ಬಂದಳು.

'ತಂದಿಯಾ?' ಅಂದ.

'ಹೂ' ಅನ್ನುವಷ್ಟರಲ್ಲಿ ಏನು ಸದ್ದಾಯಿತೋ ಏನೋ, ಇನ್ಸ್‌ಪೆಕ್ಟರರು ಕೆಮ್ಮನ್ನು ತಡೆಯಲಾರದೆ ಹೋದರೋ ದೇವರಸೇಗೌಡ ಕಂಬಳಿ ಸಬರ ಮಾಡಿದನೋ-ಆ ಹೆಂಗಸು ಛಟಕ್ಕಂತ ಮನೆಯೊಳಕ್ಕೆ ಹೋಗಿ ದಡಾರ್ರಂತ ಕದ ಹಾಕಿ ಅಗಳಿ ಹಾಕಿಕೊಂಡುಬಿಟ್ಟಳು. ಆ ಮನುಷ್ಯ ಅಲ್ಲಿಂದ ತಿರುಗಿ ಸತ್ತೆನೊ ಕೆಟ್ಟೆನೊ ಅಂತ ಓಡಿದ. ಮಾಲು ಕೈಗೆ ಸೇರಿದ ಮೇಲೆ ಓಡಿದನೋ ಅದಕ್ಕೆ ಮೊದಲೇನೋ ನನಗೆ ಗೊತ್ತಾಗಲಿಲ್ಲ. ಅವನ ಕೈಗೆ ಸೇರದಿದ್ದರೆ ಮಾಲು ಲಿಂಗನ ಹೆಂಡತಿ ಹತ್ತಿರ ಅಥವಾ ಆ ಮನೆಯಲ್ಲೆ ಇರಬೇಕು, ನಾನು ಇಬ್ಬರು ಕಾನ್ಸ್‌ಟೇಬಲ್‌ಗಳನ್ನು ತರದೂದು ಮಾಡಿ ಅವನನ್ನು ಹಿಡಿಯಬೇಕೆಂದು ಓಡಿಸಿದೆ.

ಆಮೇಲೆ ಪೊಲೀಸರು ಸೀಟಿ ಊದಿ, ರಿವಾಲ್ವರನ್ನು ಹಾರಿಸಿ ಊರಿನ ಪಟೇಲನನ್ನೂ ಮುಖಂಡರನ್ನೂ ಕರೆಸಿದೆ. ತಂದ್ರೆಲಿಂಗನ ಹೆಂಡತಿಗೆ ಬಾಗಿಲು ತೆಗೆ, ಮನೆ ಝಡ್ತಿ ಮಾಡಬೇಕೆಂದೂ ಅಪ್ಪಣೆ ಮಾಡಿದೆ. ಅವಳ ಸದ್ದು ಇಲ್ಲ. ಅವಳು ನೇಣುಗೀಣು ಹಾಕಿಕೊಂಡಳೋ ಎಂಬ ಸಂದೇಹ ತೋರಿ ಬಾಗಿಲನ್ನು ಬಲಾತ್ಕಾರದಿಂದ ತೆಗೆಸಿದೆ. ಅವಳು ದೊಡ್ಡದಾಗಿ ಅಳುತ್ತ 'ಇದೇನ್ ಬುದ್ಧಿ ಮಾನವಾಗಿ ಇರೋಕಾಗದೆ ನಿಮ್ಮ ಆಳ್ವಿಕೆಯಲ್ಲಿ? ಗಂಡುಳ್ಳ ಗರತಿ ಹರ್‍ಯಾದ ಹುಡುಗಿಯ ಮನೆಗೆ ರಾತ್ರಿ ಸದ್ರಾತ್ರೀಲೆ ನುಗ್ಗಬಹುದೇ?' ವಗೈರೆ ಆವಟ

ಕಿಗೆದಳು.

ದೇವರಸೇಗೌಡ, 'ಸುಮ್ಮಗಿರಮ್ಮ ನಕ್ಕಾರು! ಸುಬೇದಾರ್ರು, ನಿನ್ನ ಚಂದಕ್ಕೆ ಮೆಚ್ಚಿ ಕಲ್ಲು ಮುಳ್ಳು ಗೋರ್ಯಾಗ ಈಟುದೂರ ಬಂದವರೆ ಅಂತೀಯಲ್ಲ', ಬೇಕಾದರೆ ನಿನ್ನೇ ಕರೆಸಿಕೊಳ್ಳಲಾರದೆ ಹೋದರೆ?' ಅಂದ.

ಈ ಆಭಾಸಕ್ಕೆ ಏನು ಮಾಡೋದು? ನಾನು 'ಸಾಕು, ಸುಮ್ಮನಿರು. ಗೌಡ', ಎಂದು ಹೇಳಿ, ಮನೆಯನ್ನು ಶೋಧಿಸುವುದಕ್ಕೆ ಕ್ರಮಪ್ರಕಾರ ಒಬ್ಬ ಕಾನ್ಸ್‌ಟೇಬಲ್‌ನನ್ನೂ ತಂದ್ರೆ ಪಟೇಲನನ್ನೂ ಬಿಟ್ಟು, ಲಿಂಗನ ಹೆಂಡತಿಯನ್ನು ಶೋಧಿಸಲಿಕ್ಕೆ ಪಟೇಲನ ಹೆಂಡತಿಯನ್ನೂ ಅಲ್ಲಿಯವರ ಭಾರಿ ರೈತನೊಬ್ಬನ ಮನೆಯಾಕೆಯನ್ನೂ ಬಿಟ್ಟೆ. ಮನೆ ಸಣ್ಣದು. ಸೂರು, ಚಾವಣಿ ಮೊದಲುಗೊಂಡು ಮಡಕೆ ಮಟ್ಟು ಎಲ್ಲವನ್ನೂ ಹುಡುಕಿದ್ದಾಯಿತು. ಲಿಂಗನ ಹೆಂಡತಿಯನ್ನು ನಿರ್ದಾಕ್ಷಿಣ್ಯವಾಗಿ ಹೆಂಗಸರು ಪಾದದಿಂದ ತಲೆಯವರೆಗೂ ಚೆನ್ನಾಗಿ ಶೋಧಿಸಿದರು. ಮಾಲು ಯಾವುದೂ ಸಿಕ್ಕಲಿಲ್ಲ. ಬೆಳಗಿನ ಜಾವ. ಅಷ್ಟು ಹೊತ್ತಿಗೆ ಪೂಜಾರಿ ಮಲ್ಲನನ್ನೂ ಹಿಡಿದುಕೊಂಡು ಬಂದರು. ಅವನ ಹತ್ತಿರವೂ ಏನೂ ಮಾಲಿರಲಿಲ್ಲ. ಒಂದು ವೇಳೆ ಇದ್ದಿದ್ದರೂ ಪಲಾಯನ ಮಾಡುವಾಗ ಬಿಸುಟಿರಲಾರನೇ? ಅವನು ಹೇಳಿದ್ದು, ತನಗೇನೂ ತಿಳಿಯದು; ಲಿಂಗಯ್ಯ ಮನೆಗೆ ಹೋಗಿ 'ದಾಸೋಗ'ವೆಂದರೆ ಲಿಂಗಯ್ಯನ ಹೆಂಡತಿ ಏನೋ ಮಾಲನ್ನು ಕೊಡುತ್ತಾಳೆ; ಅದನ್ನು ಲಚುಮಯ್ಯನಿಗೆ ಕೊಡೆಂದು ಹೇಳಿದ್ದ; ಮಾಲು ಕೈಗೆ ಬರುವುದ



ಪತ್ತೇದಾರ ರಾಮರಾಯರು

ರೊಳಗಾಗಿ ಪೋಲೀಸಿನವರ ಸಪ್ಪಳವಾಗಿ ಆಕೆ ಮನೆಯೊಳಗೆ ಹೊಕ್ಕು ಕದ ಮುಚ್ಚಿಕೊಂಡಳು; ತಾನು ಓಡಿದೆನೆಂದು ಹೇಳಿದ. ಇನ್ನೇನು ಝಡ್ತಿ ಯಿಂದ ಏನೂ ದೊರೆಯಲಿಲ್ಲವೆಂದು ಮಹ ಜರು ಬರೆಯಬೇಕು. ಬರೆಯುವುದಕ್ಕೆ ಮುನ್ನ ನಾನು ಒಂದುಸಲ ಮನೆಯೊಳಕ್ಕೆ ಹೋಗಿ ನೋಡೋಣವೆಂದು ಒಳಗೆ ಹೋದೆ; ತಂದ್ರೆ ಪಟೇಲನೂ ಇನ್‌ಸ್ಪೆಕ್ಟರೂ ಜೊತೆಗೆ ಬಂದರು. ಒಂದು ಸಲ ಸುತ್ತಲೂ ನೋಡಿದೆ. ಏನೂ ವಿಶೇಷ ಕಾಣಲಿಲ್ಲ. ಇನ್ನೊಂದು ಸಲ ಅಡಿಗೆ ಒಲೆ, ಅದರ ಹತ್ತಿರ ಇದ್ದ ಬಚ್ಚಲು ಇವುಗಳ ಕಡೆ ನನ್ನ ದೃಷ್ಟಿ ಬಿತ್ತು. ಬಚ್ಚಲು ಚಿಕ್ಕದು. ಅದರಲ್ಲಿ ನೀರು ಕಟ್ಟಿಕೊಂಡು ನಾತವಿತ್ತು. ಕೆಸರಿನ ಮೇಲೆ ಕಲ್ಲಿನ ಬದಲು ಎರಡು ಮಾವಿನ ಹಲಗೆಗಳು ಹಾಸಿದ್ದವು. ಆ ಮಾವಿನ ಹಲಗೆಗಳು ಒಣಗಿ ಬೆಳ್ಳಗಿದ್ದವು. ಆದರೆ ಎರಡು ಹಲಗೆಯ ನಡುವಿನ ಸಂದಿನಲ್ಲಿ ಕೊಚ್ಚೆ ಮೇಲೆ ಹಾರಿ ಒಂದು ಹಲಗೆಯ ಅಂಚಿನ ಮೇಲೆ ಸಿಡಿದಿತ್ತು. ನಾನು ಅದನ್ನು ಪಟೇಲನಿಗೆ ತೋರಿಸಿ ಆ ಹಲಗೆಗಳನ್ನು ಎತ್ತಿ ಕೆಳಗಿನ ಬದಿಯನ್ನು ಶೋಧಿಸಿ ನೋಡೆಂದು ಹೇಳಿದೆ. ಶೋಧಿಸಬೇಕಾದ ಆವಶ್ಯಕತೆ ಏನೂ ಇರಲಿಲ್ಲ. ಹಲಗೆ ಎತ್ತಿದ ಕೂಡಲೆ ಕೆದರಿದ ಕೊಚ್ಚೆ ಅದರಲ್ಲಿ ಮಸಕುಮಸಕಾಗಿ ಮಿನುಗುತ್ತಿದ್ದ ಒಂದು ಚಿನ್ನದ ಗಟ್ಟಿ ಕಂಡುಬಂದವು. ಆ ಚಿನ್ನದ ಗಟ್ಟಿ ಅಪ್ಪಾಜಿ ಹೇಳಿದ ಎರಡು ಗಟ್ಟಿಗಳ ಪೈಕಿ ಒಂದಾಗಿರಬೇಕು. ಕೂಡಲೆ ಮಹಜರಾ ಯಿತು. ಆ ಹೆಂಗಸು, ಆ ಗಟ್ಟಿಯನ್ನು ಪಟೇ ಲನೋ ಇನ್‌ಸ್ಪೆಕ್ಟರೋ ಹಾಕಿರಬೇಕು, ತಾನು ಯಾವುದೂ ಕಾಣೆನೆಂದು ಅತ್ತೂ ಕರೆದೂ ಆವುಟಾ ಮಾಡಿದಳು. ತೂಕಮಾಡಲಾಗಿ ಆ ಗಟ್ಟಿ ಎಂಟು ತೊಲೆ ಇತ್ತು.

ಅಷ್ಟು ಹೊತ್ತಿಗೆ ಚೆನ್ನಾಗಿ ಬೆಳಕು ಹರಿದಿತ್ತು. ಉಳಿದ ಒಡವೆಗಳು ಎಲ್ಲಿವೆ, ಅವುಗಳನ್ನು ಪಡೆಯುವುದು ಹೇಗೆ? ಎಂಬುದೇ ಮುಂದಿನ ಸಮಸ್ಯೆ. ಇದುವರೆಗೆ ಸಿಕ್ಕಿರುವ ಮಾಲುಗಳಲ್ಲಿ ಗುರುತಿಸಬಹುದಾದ್ದು ಪಟ್ಟೆಸೀರೆಯೊಂದೆ. ಉಳಿದ ಮಾಲುಗಳು ಚಂದ್ರಮುರು, ಪದಕ ಗಳು, ವೋಲೆ, ಜುಂಕಿ ಇವುಗಳೆಲ್ಲ ಗುರುತಿಸ ಬಹುದಾದ ವಸ್ತುಗಳು; ಹಣದ ಬೆಲೆಗಿಂತಲೂ ಅಧಿಕವಾದ ರುಜುವಾತು ಬೆಲೆಯುಳ್ಳವುಗಳು. ಲಿಂಗನ ಹೆಂಡತಿ- ಅವಳ ಹೆಸರು ನಂಜಮ್ಮ ನೆಂದು ಜ್ಞಾಪಕ- ಎಷ್ಟು ಪುಸಲಾಯಿಸಿ ಕೇಳಿ ದರೂ ತನಗೊಂದೂ ಗೊತ್ತಿಲ್ಲ; ಬಂಗಾರದ ಗಟ್ಟಿಯನ್ನು ತನ್ನ ಮನೆಯಲ್ಲಿ ಯಾರೋ ಗೌಡನೋ ಪೋಲೀಸಿನವರೋ ಹಾಕಿರಬೇಕು, ಅಥವಾ ಸುಬೇದಾರ್‍ರೇ ಯಾಕೆ ಹಾಕಿರಬಾ ರದು?-ಹೀಗೇ ಹೇಳುವಳು. ಅವಳ ಜಾತಿಯ ವರ ಬಾಯಲ್ಲಿ ಹೇಳಿಸಿಯಾಯಿತು. ಅವಳ ಹಿತಚಿಂತಕರ ಮೂಲಕ ಬೋಧಿಸಿಯಾಯಿತು. ಊಹೂ, ಎಲ್ಲರಿಗೂ ಇದೇ ಉತ್ತರವೇ. ಪೋಲೀಸಿನವರು ಆಗ ಸಾಮಾನ್ಯವಾಗಿ ವಾಡಿ ಕೆಯಲ್ಲಿದ್ದ ಮಂತ್ರಪ್ರಯೋಗ ಮಾಡಲು ಆತು ರರಾಗಿದ್ದರು. ನಾನು ಒಪ್ಪಲಿಲ್ಲ.

ಹೀಗಿರುವಲ್ಲಿ ನನಗೆ ಮೊದಲೇ ಹತ್ತಬೇಕಾ ಗಿದ್ದ ಯೋಚನೆ ಥಟಕ್ಕೆಂದು ಹೊಳೆಯಿತು. ಈ ಹೆಂಗಸು ರಾತ್ರಿ ಚಿನ್ನದ ಗಟ್ಟಿಯನ್ನು ಎಲ್ಲಿಂದ ತಂದಳು? ಅದನ್ನು ಪತ್ತೆ ಮಾಡುವದು ಅವನ ಹೇಳಿಕೆಯಿಲ್ಲದೆ ಸಾಧ್ಯವಿಲ್ಲವೆ? ರಾತ್ರಿ ಬಂದ ಮಳೆ ನೆಲವನ್ನು ಹೆಜ್ಜೆ ಹಿಡಿಯುವಷ್ಟು ಮೆದು ಮಾಡಿದೆಯೇ ಹೊರತು ಗುರುತುಗಳನ್ನು ಅಳಿಸಿ ಕೊಚ್ಚಿಕೊಂಡು ಹೋಗುವಷ್ಟು ಜೋರಾಗಿ ಹುಯ್ದಿಲ್ಲ. ಆಕೆ ಸುಮಾರು ಅರ್ಧ ಗಂಟೆಯ ಕಾಲ ಮನೆಯಿಂದ ಗೈರು ಹಾಜರಾ ಗಿದ್ದಳು. ಮಾಲಿದ್ದ ಸ್ಥಳ ಸುಮಾರು ಕಾಲು ಮೈಲಿ ಫಾಸಲೆಯಲ್ಲೇ ಇರಬೇಕು.. ನೋಡೋ ಣವೆಂದು ನಾನು ಒಬ್ಬನೇ ಹೊರಟೆ. ನಂಜಮ್ಮ ಹೋದ ದಾರಿಯಲ್ಲೇ ಹಿಂದಿರುಗಿ ಬರಲಿಲ್ಲ

ವೆಂದು ಹೇಳಿದ್ದೇನೆ. ಅವಳು ಹೋದ ದಾರಿಯಲ್ಲಿ ಸ್ವಲ್ಪ ದೂರ ಅವಳ ಹೆಜ್ಜೆಯನ್ನು ಗುರುತಿಸಿ ಅನುಸರಿಸಲಾಯಿತು. ಆಮೇಲೆ ಅವಳು ಜೋಳದ ಹೊಲಕ್ಕೆ ತಿರುಗಿದ್ದರಿಂದ ಹೆಜ್ಜೆ ಸಾಲು ಅಳಿಸಿಹೋಯಿತು. ಅಲ್ಲಿಗೆ ಅದನ್ನು ಬಿಟ್ಟು, ಅವಳು ವಾಪಸು ಬಂದ ಹೆಜ್ಜೆ ಸಾಲನ್ನು ಅನುಸರಿಸಿ ಹೋದೆ. ಅದು ಜನ ತಿರುಗಾಡದ ಓಣಿಯಾದ್ದರಿಂದ, ಸ್ಪಷ್ಟವಾಗಿ ಕಾಣುತ್ತಿತ್ತು. ಸುಮಾರು ಒಂದು ಫರ್ಲಾಂಗಿನಷ್ಟು ದೂರದಲ್ಲಿ ಆ ಹೆಜ್ಜೆಸಾಲು ಜೋಳದ ಹೊಲದಿಂದ ಹೊರಗೆ ಮೂಡಿದ್ದು ಕಂಡಿತು. ನಾನು ಅಲ್ಲಿಂದ ಹೊಲವನ್ನು ಹೊಕ್ಕು ಜೋಳದ ಕಡ್ಡಿ ಅತ್ತ ಇತ್ತ ಸ್ವಲ್ಪ ಬಾಗಿ ಬೈತಲೆಯಂತೆ ಕಾಣುತ್ತಿದ್ದ ಜಾಡನ್ನು ಹಿಡಿದು ಹೋದೆ. ಹೊಲದಲ್ಲಿ ಒಳಗೆ ಒಂದು ಕಡೆ ಹೊಸದಾಗಿ ಕೆದರಿದ ಮಣ್ಣು ಕೆಂಪಗೆ ಕಂಡಿತು. ಅಲ್ಲಿ ಚೆನ್ನಾಗಿ ಗಮನಿಸಿ ನೋಡಲಾಗಿ ಅದೇ ಹೆಜ್ಜೆ ತುಳಿದ ಗುರುತು, ಸ್ವಲ್ಪ ದೂರದಲ್ಲೇ ಹೊಸದಾಗಿ ತೋಡಿ ಮುಚ್ಚಿದ ನಿಶಾನು, ತೋಡಲು ಉಪಯೋಗಿಸಿದ ಹತ್ಯಾರುಗಳು ಸಹ ಕಂಡು ಬಂದವು. ನಾನು ಅಲ್ಲೇ ನಿಂತು ಸ್ವಲ್ಪ ದೂರದಲ್ಲಿ ಮಗ್ಗಲ ಹೊಲದಲ್ಲಿ ಕೆಲಸ ಮಾಡುತ್ತಿದ್ದ ರೈತನನ್ನು ಕೂಗಿ ಕರೆದು, ಪೊಲೀಸು ಇನ್‌ಸ್ಪೆಕ್ಟರನ್ನು ಬರಮಾಡಿಕೊಂಡು, ಪಟೇಲನನ್ನೂ, ಪಂಚಾಯಿತಿದಾರರನ್ನೂ, ನಂಜಮ್ಮನನ್ನೂ ಕರೆತರುವಂತೆಯೂ, ನಂಜಮ್ಮನ ಹೆಜ್ಜೆ ಗುರುತುಗಳ ಮೇಲೆ ತುಳಿದು ಅಳಿಸದಂತೆ ಕಾವಲಿಟ್ಟು ಹುಷಾರಾಗಿ ಬರಬೇಕೆಂತಲೂ ತಾಕೀತು ಮಾಡಿದೆ. ಪಂಚಾಯಿತರ ರೂಬು ರೂಬು ನಂಜಮ್ಮನನ್ನು 'ಇದೇ ಜಾಗದಲ್ಲಲ್ಲವೇನಮ್ಮ ಒಡವೆ ಗಂಟಿಟ್ಟಿರೋದು?' ಎಂದು ಕೇಳಲಾಗಿ ಅವಳಿಗೆ ಸುಳ್ಳು ಹೇಳುವುದಕ್ಕೂ ಕೂಡ ಬುದ್ಧಿ ತೋರದೆ- 'ಹೌದು ಬುದ್ಧಿ'ಅಂತ ಅಳತೊಡಗಿದಳು. 'ಎಲ್ಲಾ ಹೇಳಿಬಿಡುತೀನಿ ಬುದ್ಧಿ ನನ್ನ ಕಾಪಾಡಿ. ಪೊಲೀಸಿನವರ ಕೈಗೆ ಕೊಡಬೇಡಿ. 'ಕಳ್ಳನ ಹೆಂಡತಿ ಎಂದಿಗಿದ್ದರೂ ಮುಂಡೆ'ಎಂದು ನನ್ನ ಕಾಲುಗಳನ್ನು ಹಿಡಿದುಕೊಂಡಳು.

ಪಂಚಾಯಿತರ ಎದುರಿನಲ್ಲಿ ನಂಜಮ್ಮನೇ ಅಲ್ಲಿದ್ದ ಹತ್ಯಾರದಿಂದಲೇ ನೆಲವನ್ನು ಕೆದಕಿ, ಸುಮಾರು ಅರ್ಧ ಅಡಿ ಕೆಳಗೆ ಮುಚ್ಚಿಟ್ಟಿದ್ದ ಬಹಳ ಮಣ್ಣು ಕೊಳೆಯಾದ ಒಂದು ಬಟ್ಟೆಯಲ್ಲಿ ಕಟ್ಟಿದ್ದ ಗಂಟನ್ನು ತೆಗೆದುಕೊಟ್ಟಳು. ಅದರಲ್ಲಿ ಚಿನ್ನ, ವಜ್ರ, ಕೆಂಪು, ಇತರ ಬೆಲೆಬಾಳುವ ಕಲ್ಲುಗಳಿಂದ ಕಟ್ಟಿದ್ದ ಒಡವೆಗಳಿದ್ದವು. ಆ ಒಡವೆಗಳನ್ನು ತನ್ನಲ್ಲಿ ಗಂಡ ಲಿಂಗಯ್ಯ ನಿಕ್ಷೇಪಿಸಿದ್ದಾಗಿಯೂ, ತಾನು ಅದನ್ನು ಮನೆಯಲ್ಲಿಟ್ಟಿದ್ದರೆ ಅಪಾಯವೆಂದು ತಿಳಿದು ಹೊಲದಲ್ಲಿ ಹೂಳಿಟ್ಟಿದ್ದಾಗಿಯೂ ಹೇಳಿದಳು. ಪೂಜಾರಿ ಮಲ್ಲಯ್ಯನ ಕತೆಯೇನೆಂದು ಕೇಳಿದ್ದಕ್ಕೆ

'ನನ್ನ ಯಜಮಾನ ನನಗೆ ಹೇಳಿದ್ದ. ಯಾವಾಗಲಾದರೂ ಖರ್ಚಿಗೆ ದುಡ್ಡು ಬೇಕಾದರೆ, ಏನಾದರೂ ಸಂದರ್ಭ ಬಿದ್ದರೆ ಪೂಜಾರಿ ಮಲ್ಲಯ್ಯನ್ನ ಕಳಿಸುತೀನಿ. 'ದಾಸೋಗ' ಅಂತ ಅವನು ಅಂದರೆ ದೊಡ್ಡ ಚಿನ್ನದ ಗಟ್ಟಿಕೊಡು, ಮನೇಲಿ ಮಾತ್ರ ಮಾಲು ಇಡಬೇಡ. ಮಾಲಿದೆ ಅಂತ ತಿಳಿದರೆ ದ್ಯಾವರಸೇಗೌಡನ ಕಡೆಯವರು ಬಂದು ಗಂಜಿ ತೂಕ ಬಿಡದೆ ಎಲ್ಲ ಸೂರೆ ಮಾಡುತ್ತಾರೆ ಎಂದು'ಹೇಳಿದ್ದಾಗಿ ತಿಳಿಸಿದಳು.

ಎಲ್ಲದಕ್ಕೂ ಕ್ರಮವಾಗಿ ಮಹಜರಾಯಿತು. ಅಷ್ಟು ಹೊತ್ತಿಗೆ ನನ್ನ ಮತ್ತು ಇನ್‌ಸ್ಪೆಕ್ಟರ್ ಕುದುರೆಗಳೂ ಬಂದವು. ನಾನು ಮಾಲನ್ನು ನನ್ನ ಸುಪರ್ದಿಗೆ ತೆಗೆದುಕೊಂಡು ಇನ್‌ಸ್ಪೆಕ್ಟರು ಸಹಿತ ಸಾಲಿಗ್ರಾಮಕ್ಕೆ ವಾಪಸು ಬಂದೆ. ಮಾಲನ್ನು ನಾನಿದ್ದ ಕೊಠಡಿಯಲ್ಲಿ ಮೇಜಿನ ಮೇಲಿಟ್ಟು ಅದನ್ನು ಒಂದು ವಸ್ತ್ರದಿಂದ ಮರೆ ಮಾಡಿ ತಂದ್ರೇಲಿಂಗನನ್ನು ಲಾಕಪ್ಪಿನಿಂದ ಕರೆ

ಸಿದೆ. ಅವನು ಬಂದಾಗ ಇನ್‌ಸ್ಪೆಕ್ಟರೂ ನಾನೂ ಕೊಠಡಿಯಲ್ಲಿದ್ದೆವು. ಇನ್‌ಸ್ಪೆಕ್ಟರು,

'ಈಗಲಾದರೂ ಬಾಯಿಬಿಡೋ- ಮಗನೆ, ಮಾಲು ಎಲ್ಲಿಟ್ಟಿದ್ದಿ? ನಿನಗೆ ಅದನ್ನು ಮನೆಯಿಂದ ತೆಗೆದುಕೊಟ್ಟವರು ಯಾರು, ಅಂತ' ಎಂದರು.

'ನಿಮ್ಮಮ್ಮೆದುಳೆಲ್ಲ ಗಡ್ಡಕ್ಕಿಳಿದಿದೆ ಸಾಬರೆ, ಎಷ್ಟು ಸಲ ಹೇಳಬೇಕು ನಾನು ಕಾಣೆ.'

'ನೋಡ್ಕೊ, ಮಾದರ್-' ಎಂದು ಒಡವೆಗಳ ಮೇಲೆ ಮುಚ್ಚಿದ್ದ ವಸ್ತ್ರವನ್ನು ಸೆಳೆದು ಹಾಕಿದರು.

ಲಿಂಗ ಮಂಕು ಕವಿದವನಂತೆ ಸ್ವಲ್ಪ ಹೊತ್ತು ಕಣ್ಣು ಬಾಯಿ ತೆರೆದುಕೊಂಡು ಸುಮ್ಮನಿದ್ದ. ಆಮೇಲೆ, 'ಕೊಟ್ಟು ಬಿಟ್ಟಳು ಮುಂಡೆ! ಇನ್ನು ಬರಕೊಳ್ಳಿ ಸ್ವಾಮಿ, ಹೇಳಿಬಿಡ್ತೀನಿ. ಕಿಟ್ಟಪ್ಪನವಗ ನಂಟ ಗಂಗಾಧರಪ್ಪನಿಗೂ ನನಗೂ ಜೈಲಿನಲ್ಲಿದ್ದಾಗ ಗುರುತು. ಅವನು ಮದುವೆ ಮನೆಗೆ ಬಂದಿದ್ದ. ನಾನು ಹೋಳಿಗೆ ಬುತ್ತಿ ತಿನ್ನೋಕೆ ಹೋದಾಗ ನೀರಿಗಾಗಿ ಬಂದಿದ್ದ. "ಏನಪ್ಪ ಬಂದಿದ್ದೀ" ಅಂದೆ. "ಹೀಂಗ್ಹಿಂಗಪ್ಪ, ಮದುವೆ ಮನೆಗೆ ಬಂದಿದ್ದೆ. ಅವರು ನಮಗೆ ಬೇಕಾದವರು; ಏನಾದರೂ ಕೆಲಸಗಿಲಸ ಇರುತ್ತಲ್ಲ. ಮಾಡಿಕೊಡೋಣ ಅಂತ ಬಂದೆ" ಅಂದ. "ನಾನೂ ನಿನಗೆ ಬೇಕಾದವ ಅಲ್ಲವೆ? ನನಗೂ ಕೆಲಸಗಿಲಸ ಮಾಡಿಕೊಡು' ಅಂದೆ ಕಣ್ಣು ಮಿಟುಕಿಸಿ. ಮೊದಲು ಧರ್ಮ ಕರ್ಮ ಹಿಂಗೆ ಹಾರವರ ಮಾತದಲ್ಲ, ಅದನ್ನೆಲ್ಲಾ ಹೇಳಿ, ಆಮೇಲೆ, "ಆಗಲಿ, ಹಿತ್ತಲು ಒಬ್ಬೇತಾವ ಕಾದಿರು; ಏನಾದರೂ ಸಿಕ್ಕರೆ ತಂದುಕೊಡ್ತೀನಿ; ಅರ್ಧ ನಿನಗೆ, ಅರ್ಧ ನನಗೆ," ಅಂದ. ತಂದು ಕೊಟ್ಟ. ಇನ್ನೆಲ್ಲಾ ನಿಮಗೇ ಗೊತ್ತಿದೆ,' ಅಂದ.

ದೊರೆತ ಮಾಲುಗಳೆಲ್ಲ ಕಳವು ನಡೆದ ಕೂಡಲೆ ತಯಾರಿಸಿದ ಪಟ್ಟಿಗಳಲ್ಲಿ ಸೇರಿದವುಗಳಾಗಿದ್ದವು. ಆ ಪಟ್ಟಿಯಲ್ಲಿದ್ದ ಇತರ ಮಾಲುಗಳು, ಮುಕ್ಕಾಲು ಮೂರುವೀಸ ಪಾಲು ಚಿಕ್ಕನಾಯಕನಹಳ್ಳಿ ಅಪ್ಪಾಜಿ ಕರಗಿಸಿ ಗಟ್ಟಿ ಹುಯಿದ ತೂಕಕ್ಕೆ ತಾಳೆ ಹೊಂದಿದವು. ಸುಮಾರು ೨೦೦-೩೦೦ ರೂಪಾಯಿನ ಒಡವೆಗಳು ಮಾತ್ರ ಪತ್ತೆ ಹತ್ತಲಿಲ್ಲ.

> ತಗಣಿಗಳಿಗೆ ಕಪ್ಪುಬಣ್ಣದ ಕಂಬಳಿ ಇಷ್ಟ. ಕೆಂಪು, ಹಸಿರು, ಬಿಳಿ ಬಣ್ಣಗಳಿಗೆ ಕ್ರಮವಾಗಿ ನಂತರದ ಸ್ಥಾನ. ಅವು ಬಯಸುವ ತಾಪಮಾನ ೨೦ಡಿಗ್ರಿ ಸೆಲ್ಸಿಯಸ್. ೩೭ಡಿಗ್ರಿ ಸೆಲ್ಸಿಯಸ್ ಅವುಗಳಿಗೆ ಸಹಿಸಲಸಾಧ್ಯ.
>
> ಕೆ. ಗಣೇಶ

ಮಾಲುಗಳನ್ನೂ ಕೈದಿಯನ್ನೂ ಯಡತೊರೆಗೆ ಕರೆದುಕೊಂಡು ಬಂದೆವು. ದೇವರ ದಯದಿಂದ ದೊರಕಿದ ಮಾಲುಗಳನ್ನೂ ನಿವಾರಣೆಯಾದ ಅಪವಾದ ನಷ್ಟಗಳನ್ನೂ, ನೋಡಿದ ಆ ಬ್ರಾಹ್ಮಣ ದಂಪತಿಗಳ ಸಂತೋಷವನ್ನು ನೆನೆದು ನನಗೆ ಈಗಲೂ ಕಣ್ಣು ತೇವವಾಗುತ್ತೆ. ಗಂಗಾಧರನ ಮೇಲೆ ಹುಟ್ಟುಕಳ್ಳ ತಂದ್ರೇಲಿಂಗನ ಮಾತಿನ ಹೊರತು ರುಜುವಾತು ಯಾವುದೂ ಸಿಕ್ಕಲಿಲ್ಲ. ಅವನಿಗೆ ಹಿಂದೆ ಒಂದು ಸಲ ಕಳವಿಗಾಗಿ ಸಜಾವಾದ ದಾಖಲೆ ಇದ್ದರೂ ತದನಂತರ ಅವನು ಒಳ್ಳೆಯ ನಡತೆಯವನಾಗಿ ನಂಬಿಕಸ್ಥನಾಗಿದ್ದನೆಂದು ಎಲ್ಲರೂ ಹೇಳಿದರು. ಅವನ ಮೇಲೆ ರುಜುವಾತು ಏನೂ ಸಿಕ್ಕಲಿಲ್ಲ.

ಈ ಮೊಕದ್ದಮೆಯ ಮುಂದಿನ ಕತೆ ಸ್ವಲ್ಪ ವಿಚಿತ್ರವಾಗಿದೆ. ಮೊದಲು ಅದು ಸಬ್‌ಡಿವಿಜನ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ (ಮೊದಲನೆಯ ದರ್ಜೆಯ ಕ್ರಿಮಿನಲ್ ಕೋರ್ಟಿನಲ್ಲಿ) ಅವರ ಮುಂದೆ ಹೂಡಲ್ಪಟ್ಟಿತು. ಆ ಕೋರ್ಟಿನಲ್ಲಿ ಯಾವ ಕಾರಣದಿಂದಲೋ- ಆ ಮ್ಯಾಜಿಸ್ಟ್ರೇಟರಿಗೇ ಗೊತ್ತು-ಅಪರಾಧಿಯ ತಪ್ಪು ಸಾಬೀತಾಗಲಿಲ್ಲವೆಂತಲೋ, ಆದರೆ ಮಾಲುಗ

ಪುಸ್ತಕ ವಿಭಾಗ

ಳೇನೋ ಕೃಷ್ಣಪ್ಪನವರ ಮನೆಯಲ್ಲಿ ಕಳುವಾದ ವುಗಳೆಂತಲೋ ತೀರ್ಮಾನವಾಯಿತು. ಖುಲಾ ಸೆಯಾದ ಅಪರಾಧಿ ಪರಾರಿಯಾಗುವುದರೊಳ ಗಾಗಿ, ಅವನು ತನಗೆ ವಿರೋಧವಾಗಿ ಸಾಕ್ಷ್ಯ ಕೊಟ್ಟವರ ಮೇಲೆ ಸೇಡು ತೀರಿಸಿಕೊಳ್ಳುವುದ ರೊಳಗಾಗಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಪುನ ರ್ವಿಮರ್ಶೆಗೆ ಅರ್ಜಿ ಹಾಕಿ, ವಾರೆಂಟು ಪಡೆದು ಅವನನ್ನು ದಸ್ತಗಿರಿ ಮಾಡಿ ಇನ್ನೊಂದು ಕೋರ್ಟಿನಲ್ಲಿ ಪುನರ್ವಿಚಾರಣೆಗೆ ತಂದದ್ದಾ ಯಿತು. ಅದರಲ್ಲಿ ಅವನ ಮೇಲೆ ಛಾರ್ಜು ಆಗಿ, ಅವನು ಹಿಂದೆ ಎರಡು ಮೂರು ಸಲ ಸಜ ಅನುಭವಿಸಿದ ಹಳೆಯ ಕಳ್ಳನಾದ್ದರಿಂದ ಮ್ಯಾಜಿಸ್ಟ್ರೇಟರ ಅಧಿಕಾರಕ್ಕೆ ಮೀರಿದ ಹೆಚ್ಚು ಶಿಕ್ಷೆಗೆ ಅರ್ಹನೆಂದು ಭಾವಿಸಿ ಕೇಸು ಸೆಷನ್ಸಿಗೆ ವಿಚಾರಣೆಗೆ ಹಾಕಲ್ಪಟ್ಟಿತು. ಸೆಷನ್ಸ್ ಜಡ್ಜರಿಗೆ ಪೊಲೀಸು ಕೇಸುಗಳೆಂದರೆ ಬಹಳ ಅಪನಂಬಿಕೆ. ನನ್ನನ್ನು ಎಲ್ಲ ಕೋರ್ಟುಗಳಲ್ಲೂ ದರ್ಯಾಪ್ತಿ ಮಾಡಿದರು. ಅಪರಾಧಿಯ ಪರ ಲಾಯರು ಸೆಷನ್ಸ್ ಕೋರ್ಟಿನಲ್ಲಿ ನನ್ನನ್ನು,

'ನೀವು ಅಪರಾಧಿ ಕಳುವು ಮಾಡಿದ್ದನ್ನು ನೋಡಿದಿರಾ?' ಎಂದು ಕೇಳಿದರು. 'ಇಲ್ಲ'ವೆಂದೆ. 'ಅಪರಾಧಿ ಮಾಲನ್ನು ತೆಗೆದು ಕೊಟ್ಟನೆ?' 'ಇಲ್ಲ'. 'ಅವನ ಹೆಂಡತಿಯಲ್ಲವೆ ತೆಗೆದುಕೊಟ್ಟದ್ದು?' ಈ ವಿಚಾರದಲ್ಲಿ ತಪಶೀ ಲಾಗಿ ನಾನು ಮೊದಲೇ ಹೇಳಿದ್ದೇನೆ; ಸಾಕ್ಷಿಗಳು ನುಡಿದಿದ್ದಾರೆ; ಒಂದೇ ಮಾತಿನಲ್ಲಿ ಜವಾಬು ಕೊಡುವುದಕ್ಕೆ ಆಗುವುದಿಲ್ಲ. ಆ ಕತೆಯನ್ನೆಲ್ಲಾ ಪುನಃ ಹೇಳಬೇಕೆ?' ಎಂದು ಕೋರ್ಟನ್ನು ಕೇಳಿದೆ. ಕೋರ್ಟಿನವರು, 'ಆ ಕತೆಯೆಲ್ಲ ನಿಮಗೆ ಏತಕ್ಕೆ? ಅವರ ಪ್ರಶ್ನೆಗೆ ಉಂಟೋ ಇಲ್ಲವೋ ಹೇಳಬಿಡಿ ಸಾಕು' ಎಂದು ಬಹು ದರ್ಪದಿಂದ ಅಪ್ಪಣೆ ಕೊಟ್ಟರು. ನಾನು ಮೊಗುಂ ಆಗಿ, 'ಉಂಟು ಎಂದಾಗಲಿ, ಇಲ್ಲ ವೆಂದಾಗಲಿ ಹೇಳಲಿಕ್ಕಾಗುವುದಿಲ್ಲ. ನಾನು ಹಿಂದೆ ಹೇಳಿರುವುದನ್ನೆಲ್ಲಾ ಜವಾಬೆಂದು ಭಾವಿ ಸಬೇಕೂ', ಎಂದು ಹೇಳಿದೆ. ಜಡ್ಜಿಯವರಿಗೆ ನನ್ನ ಮೇಲೆ ಅಸಮಾಧಾನವೆಂದು ಕಂಡು ಬಂತು. ಮುಂದಿನ ಪ್ರಶ್ನೆ: 'ಅಪರಾಧಿಯ ಹೆಂಡತಿಗೆ ಈ ಮಾಲುಗಳನ್ನು ಇನ್ನಾರಾದರೂ ಯಾಕೆ ಕೊಟ್ಟಿರಬಾರದು?' ಆಗ ನಾನು ಕೋರ್ಟಿಗೆ ಕೇಳಿದೆ. 'ಇದಕ್ಕೆ ಏನು ಜವಾಬು ಕೊಡಲಿ? ತಮ್ಮ ಅಪ್ಪಣೆಯಂತೆ ಉಂಟು ಅಥವಾ ಇಲ್ಲ ಎಂದು ಹೇಳುವುದು ಸಾಧ್ಯವೆ? ಎಂದು ಕೇಳಿಕೊಂಡೆ. ಅವರು ನನ್ನ ಮೇಲಿದ್ದ ಕೋಪವನ್ನು ಲಾಯರರ ಮೇಲೆ ತಿರುಗಿಸಿ, 'ಇಂಥ ಅವಿವೇಕದ ಪ್ರಶ್ನೆಗಳನ್ನು ಕೇಳಿ ನಮ್ಮ ಕಾಲವನ್ನು ಯಾಕೆ ಕಳೆಯುತ್ತೀರಿ?' ಎಂದು ಗದರಿಸಿದರು.

ಆದರೂ ಪರಿಣಾಮದಲ್ಲಿ ಅಪರಾಧಿಯನ್ನು ಖುಲಾಸೆ ಮಾಡಿದರೆಂದು ಕೇಳಿದೆ. ಅಷ್ಟು ಹೊತ್ತಿಗೆ ನನಗೆ ಬೇರೆ ತಾಲೂಕಿಗೆ ವರ್ಗವಾ ಗಿತ್ತು. ಕೊನೆಗೆ ಸರಕಾರದ ಅಪೀಲಿನ ಮೇಲೆ ಚೀಫ್ ಕೋರ್ಟಿನಲ್ಲಿ ಲಿಂಗನಿಗೆ ಐದು ವರ್ಷ ಸಜಾ ಆಯಿತೆಂದು ಕೇಳಿದೆ. ಮಾಲುಗಳೇನೋ ಕೃಷ್ಣಪ್ಪನವರಿಗೆ ಸಂದಾಯವಾಗಿ ಅದರ ಮೂಲಕ ಅವುಗಳ ಮಾಲೀಕರುಗಳಿಗೆ ವಾಪಸು ತಲುಪಿದವು. ಇನ್‌ಸ್ಪೆಕ್ಟರಿಗೆ ಬಹಳ ಒಳ್ಳೆಯ ಹೆಸರು ಬಂತು. ನನಗೂ ಶಹಬಾಷ್‌ಗಿರಿ ಬಂತು. ಈ ಮೊಕದ್ದಮೆ ಪತ್ತೆಗಾಗಿ ಸಾರಲ್ಪಟ್ಟಿದ್ದ ನೂರು ರೂಪಾಯಿ ಬಹುಮಾನವನ್ನು ಷೇಕ್ ಮೊಹದಿನ್‌ಗೂ ನಮ್ಮ ಸಂಗಡ ತಂದ್ರೆಗೆ ಬಂದಿದ್ದ ಇನ್ನೊಬ್ಬ ಕಾನ್‌ಸ್ಟೇಬಲ್‌ಗೂ ಹಂಚಿ ಕೊಟ್ಟೆ. ಪಟೇಲ ದೇವರಸೇಗೌಡ ನಮಗೆ ಮಾಡಿದ ಕುಮಕ್ಕನ್ನು ಕುರಿತು ಡೆಪ್ಯುಟಿ ಕಮಿ ಷನರಿಗೂ ಐ.ಜಿ.ಪಿ.ಯವರಿಗೂ ಬರೆದು ಅವ ನಿಗೆ ಬಹುಮಾನ ಪತ್ರಿಕೆಯನ್ನು ತರಿಸಿಕೊಟ್ಟೆ. ಷೇಕ್ ಮೊಹದಿನ್ ಶೀಘ್ರದಲ್ಲೇ ದಫೇದಾರ್ ಆದ.

ಆರೋಗ್ಯದಂಗಳ



ಯುವಕರ ಮಾನಸಿಕ ಸಮಸ್ಯೆಗಳು



❋ ಡಾ. ಪ್ರಕಾಶ ಕೊಣ್ಣೂರ
ಕೃಷ್ಣನಿವಾಸ,
ಹುಬ್ಬಳ್ಳಿ ರಸ್ತೆ,
ಧಾರವಾಡ-೫೮೦ ೦೦೭
ಮತ್ತು
ಅಶ್ವಿನಿ ಹಾಸ್ಪಿಟಲ್
ಮೂರುಸಾವಿರಮಠದ
ಹತ್ತಿರ
ಹುಬ್ಬಳ್ಳಿ-೫೮೦ ೦೨೮

ಯುವಕರ ಮಾನಸಿಕ ಸಮಸ್ಯೆಗಳು

ಸುಮಾರು ಇಪ್ಪತ್ತೈದು ವರ್ಷದ ಬಸ್ ಕಂಡಕ್ಟರನೊಬ್ಬ ತನ್ನ ಕೆಲಸದ ನಿಮಿತ್ತ ತಿರುಗಾಟದ ಸಂದರ್ಭದಲ್ಲಿ ಮದ್ಯಪಾನದ ಜೊತೆಗೇ 'ಪೆಂಟ್‌ರ್ಝೋಸಿನ್' ಎಂಬ ನೋವು ನಿವಾರಕ ಔಷಧಿಯ ಇಂಜೆಕ್ಷನ್‌ಗಳನ್ನು ತೆಗೆದುಕೊಳ್ಳುವ ಚಟವನ್ನೂ ಬೆಳಸಿಕೊಂಡಿದ್ದ. ಈ ಚಟಕ್ಕೆ ಆತನೆಷ್ಟು ಬಲಿಯಾಗಿದ್ದನೆಂದರೆ ದಿನಕ್ಕೆ ಒಮ್ಮೆಯಾದರೂ ಈ ಇಂಜೆಕ್ಷನ್ ತೆಗೆದುಕೊಳ್ಳದಿದ್ದರೆ 'ವಂಚನಾ ಪ್ರತಿಕ್ರಿಯೆಗೆ' ಒಳಗಾಗುತ್ತಿದ್ದ.

ಹಲವಾರು ತರಹದ ಮನೋತ್ತೇಜಕ ಔಷಧಗಳನ್ನು ಬಳಸುವ ಯುವಕರ ಸಂಖ್ಯೆ ಹೆಚ್ಚಾಗುತ್ತಿದೆ. ಮೆಡಿಕಲ್, ಎಂಜಿನಿಯರಿಂಗ್ ಮುಂತಾದ ವೃತ್ತಿಪರ ಸಂಸ್ಥೆಗಳಲ್ಲಿ ಈ ಪ್ರವೃತ್ತಿ ಹೆಚ್ಚು ಎಂಬುದು ಮನೋವೈದ್ಯನಾದ ನನ್ನ ಅನುಭವ.

'ಉಮೇಶ' ಉತ್ತರ ಭಾರತದ ವ್ಯಾಪಾರಿಗಳ ಕುಟುಂಬಕ್ಕೆ ಸೇರಿದ ೨೭-೨೮ ವರ್ಷ ವಯಸ್ಸಿನ ಯುವಕ. ಪ್ರಿ-ಯುನಿವರ್ಸಿಟಿಯವರೆಗೆ ಶಿಕ್ಷಣ ಪಡೆದಾತ. ತಂದೆ ಚಿಕ್ಕಂದಿನಲ್ಲಿಯೇ ಮರಣ ಹೊಂದಿದ್ದರಿಂದ ತಾಯಿಯೇ ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಾ ಇಬ್ಬರು ಮಕ್ಕಳನ್ನೂ ಬೆಳೆಸಿದಳು. ತಂದೆಯಿಲ್ಲದ ಮಕ್ಕಳೆಂದು ತಾಯಿ ಅತಿಯಾದ ಮುದ್ದಿನಿಂದ ಬೆಳೆಸಿದ್ದು ಉಮೇಶನನ್ನು ಅಡ್ಡದಾರಿಗೆ ಎಳೆಯಿತು. ಸ್ವಭಾವತಃ ಒಳ್ಳೆಯವನೂ ಬುದ್ಧಿವಂತನೂ ಆಗಿದ್ದ ಆತ ಕೆಟ್ಟ ಸ್ನೇಹಿತರ ಸಹವಾಸಕ್ಕೆ ಬಿದ್ದು ಮಾದಕ ವಸ್ತುಗಳನ್ನು ಸೇವಿಸಲು ಪ್ರಾರಂಭಿಸಿದ. ಗಾಂಜಾವನ್ನು ಹೆಚ್ಚು ಪ್ರಮಾಣದಲ್ಲಿ ಮತ್ತು ಅದರ ಜೊತೆಗೆ

ಮನೋತ್ತೇಜಕ ಔಷಧಗಳನ್ನು ವಿಭಿನ್ನ ಮಿಶ್ರಣಗಳಲ್ಲಿ ಸೇವಿಸತೊಡಗಿದ. ವ್ಯಾಪಾರದ ಕಡೆಗೆ ಗಮನ ಕಡಿಮೆಯಾಯಿತು. ಮದುವೆ ಮಾಡಿದರೆ ಸರಿಹೋಗಬಹುದೆಂದು ಅವನ ತಾಯಿ ಒಳ್ಳೆಯ ಮನೆತನದ ಕನ್ಯೆಯನ್ನು ನೋಡಿ ಅವನ ಮದುವೆಯನ್ನು ನಿಶ್ಚಯಿಸಿದಳು. ಆದರೆ ಇವನಿಗಿದ್ದ ಚಟದ ಬಗೆಗೆ ಅಕಸ್ಮಾತ್ತಾಗಿ ತಿಳಿದುಬಂದ ಕನ್ಯೆಯ ಮನೆಯವರು ಸಂಬಂಧವನ್ನು ಮುರಿದುಕೊಂಡರು. ಉಮೇಶ ಕಂಗಾಲಾದ, ಅವನ ಗಾಯ ಮತ್ತು ಔಷಧಗಳ ಸೇವನೆ ಇನ್ನೂ ಹೆಚ್ಚಾಯಿತು. ಸಾಲದ್ದಕ್ಕೆ ಈಗ ಅವನ ಅಣ್ಣನೂ ಕುಡಿತದ ಚಟಕ್ಕೆ ಬಲಿಯಾಗಿದ್ದ. ತಾಯಿಗೆ ಈ ಇಬ್ಬರು ಮಕ್ಕಳ ಚಟಗಳನ್ನು ಬಿಡಿಸಿ ಸರಿದಾರಿಗೆ ತರಲು ಮನೋವೈದ್ಯರ ಮೊರೆ ಹೋಗಬೇಕಾಯಿತು.

ಬಸಲಿಂಗ ಗದಗಿನ ಬಳಿಯ ಒಂದು ಹಳ್ಳಿಯ ಹುಡುಗ. ಮಾಧ್ಯಮಿಕ ಶಾಲೆಗೆ ಹೋಗುತ್ತಾನೆ. ಅದರ ಜೊತೆಗೇ ಹೊಲದ ಕೆಲಸವನ್ನು ಮಾಡುತ್ತಾನೆ. ಮತ್ತು ದನಗಳನ್ನು ಕರೆದೊಯ್ಯುತ್ತಾನೆ. ಈಚೆಗೆ ಕೆಲವು ದಿನಗಳಿಂದ ಅವನು ಕಂಡ ಕಂಡವರ ಮೇಲೆ ಹರಿಹಾಯುವುದು, ಜಗಳ ಕಾಯುವುದು, ಕೆಲಸದಲ್ಲಿ ಮೈಗಳ್ಳತನ ತೋರಿಸುವುದು, ಶಾಲೆ ತಪ್ಪಿಸುವುದು, ಊಟ ನಿದ್ರೆಯಿಲ್ಲದೇ ಅಲೆಯುವುದು ಹೆಚ್ಚಾಯಿತು. ಊರಿನ ಡಾಕ್ಟರರು ಅವನನ್ನು ಮಾನಸಿಕ ಉಪಚಾರಕ್ಕಾಗಿ ಕರೆದುಕೊಂಡು ಬಂದರು. ಅವನನ್ನು ಪರೀಕ್ಷಿಸಿದಾಗ ಅವನಿಗೆ ವಿಪರೀತ ಗಾಂಜಾ ಸೇದುವ ಚಟವಿರುವುದು ಪತ್ತೆಯಾಯಿತು. ಗಾಂಜಾ ಕೊಳ್ಳಲು ಹಣವಿಲ್ಲದಿದ್ದಾಗ ಅವನ ನಡತೆ ವಕ್ರವಾಗುತ್ತಿತ್ತು. ಮಾನಸಿಕ ಉಪಚಾರದಿಂದ ಅವನ ಸಮಸ್ಯೆ ಪರಿಹಾರಗೊಂಡಿತು.

ಮಾನಸೋತ್ತೇಜಕ ಔಷಧಗಳನ್ನು ಸೇವಿಸುವುದು ಶಾಲೆಕಾಲೇಜುಗಳಲ್ಲಿ ಇಂದು 'ಮುಂದುವರೆದಿದ್ದೇವೆಂದು' ಭಾವಿಸಿದ ಹುಡುಗರ ಫ್ಯಾಶನ್ ಆಗಿ ಬೆಳೆದು, ನಂತರ ಒಂದು ಗೀಳಾಗಿ, ಪರಿವರ್ತನೆಗೊಳ್ಳುತ್ತಿದೆ. ಹೊಸದಾಗಿ ಶ್ರೀಮಂತಿಕೆ ಬಂದಿರುವವರ ಮಕ್ಕಳ ಕೈಯಲ್ಲಿ ಹರಿದಾಡುವ ಹಣವೂ ಈ ತರಹದ ಚಟಗಳಿಗೆ ಪ್ರೋತ್ಸಾಹಕವಾಗಿ ಪರಿಣಮಿಸಿದೆ.

ಮಾನಸಿಕ ಆಘಾತದ ಸಮಸ್ಯೆಗಳು

'ರಾಮಚಂದ್ರ' ಒಂದು ವ್ಯಾಪಾರಿಗಳ ಕುಟುಂಬಕ್ಕೆ ಸೇರಿದವನು. ಸದಾ ಚಟುವಟಿಕೆಯಲ್ಲಿರುವ ಪ್ರಯತ್ನಶೀಲ ತರುಣ. ತನ್ನ ಮನೆಯವರ ಸ್ಟೇಶನರಿ ಅಂಗಡಿಯನ್ನು ಉಚ್ಛ್ರಾಯಕ್ಕೆ ತರಲು ಶ್ರಮಿಸಿ ಯಶಸ್ವಿಯಾಗಿದ್ದ. ಅವನ ತಂದೆ ಮೊದಲನೆಯ ಅಂಗಡಿಯ ಯಶಸ್ಸಿನಿಂದ ಉತ್ತೇಜಿತರಾಗಿ ಇನ್ನೂ ದೊಡ್ಡದಾದ ಮತ್ತೊಂದು ಅಂಗಡಿಯನ್ನು ತೆರೆಯಲು ಲಕ್ಷಗಟ್ಟಲೆ ಸಾಲ ಪಡೆದು ಅಂಗಡಿಯನ್ನು ತೆರೆದು ಅದನ್ನು ಮುಂದೆ ತರುವ ಹೊಣೆಯನ್ನು ರಾಮಚಂದ್ರನಿಗೆ ಒಪ್ಪಿಸಿದರು. ಈಗ ಆತ ಒಂದು ರೀತಿಯ ಒತ್ತಡಕ್ಕೆ ಸಿಲುಕಿದವರಹಾಗೆ ಆದ. ತನ್ನಿಂದ ವ್ಯವಹಾರವನ್ನು ಯಶಸ್ವಿಯಾಗಿ ನಡೆಸಲು ಆಗುವುದೋ ಇಲ್ಲವೋ ಎಂಬ ಭಯ ಕಾಡತೊಡಗಿತು. ಖಿನ್ನನಾಗಿ ಮನೆಯಲ್ಲಿ ಕೂಡತೊಡಗಿದ. ಊಟ-ನಿದ್ರೆ ಹೊರಟುಹೋಯಿತು. ಕೆಲವೊಮ್ಮೆಯಂತೂ ಹಲವಾರು ದಿನಗಳವರೆಗೆ ಮಾತನ್ನೂ ಆಡದೆ ಅಳುತ್ತ ಕೂಡುತ್ತಿದ್ದ. ನಂತರ ಒಂದು ದಿನ ಮಲಗಿಕೊಂಡವ

ಹಾಸಿಗೆ ಬಿಟ್ಟೇಳಲು ತಯಾರಾಗಲೇ ಇಲ್ಲ. ಮಾತು ಪೂರ್ತಿಯಾಗಿ ನಿಂತುಹೋಯಿತು. ಪೂರ್ಣಪ್ರಮಾಣದ ಮಾನಸಿಕ ಉಪಚಾರ ಒದಗಿದಾಗ ಅವನು ಗುಣಮುಖನಾದ.

'ಜೂಹಿ'ಹಿರಿಯ ಎಂಜಿನಿಯರರೊಬ್ಬರ ಮಗಳು. ಬಿ.ಎಸ್ಸಿ. ಪದವೀಧರೆ. ತಂದೆಯ ಐದು ಮಕ್ಕಳಲ್ಲಿ ಒಬ್ಬಳು. ಅವಳ ತಂದೆಗೆ ನಾಲ್ವತ್ತು ವಯಸ್ಸಾಗುವ ಮೊದಲೇ ಹೆಂಡತಿ ತೀರಿಕೊಂಡು ಇನ್ನೂ ಚಿಕ್ಕವರಾಗಿದ್ದ ಮಕ್ಕಳನ್ನು ನೋಡಿಕೊಳ್ಳಲು ಅನುವಾಗಲೆಂದು ಹಿರಿಯ ವಯಸ್ಸಿನ ಹೆಂಗಸೊಬ್ಬಳನ್ನು ಮದುವೆಯಾದರು. ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡಿದ್ದ ಜೂಹಿಯು ಮಲತಾಯಿಗೆ ಹತ್ತಿರವಾಗದೆ ಏಕಾಕಿಯಾಗಿ, ನಾಚಿಕೆಯ ಸ್ವಭಾವದವಳಾಗಿ ಬೆಳೆದಳು. ಆಕೆ ಪದವೀಧರಳಾಗುತ್ತಿದ್ದಂತೆಯೇ ಅವಳ ತಂದೆ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಒಬ್ಬ ಯುವಕನಿಗೆ ಕೊಟ್ಟು ಮದುವೆ ಮಾಡಿದರು. ಮದುವೆಯ ನಂತರ ಆಕೆ ಸ್ವಾಭಾವಿಕವಾಗಿಯೇ ತನ್ನ ಅತ್ತೆ ಮತ್ತು ಗಂಡನೊಡನೆ ಇರತೊಡಗಿದಳು. ಸಾಮಾಜಿಕ ಸಂಪರ್ಕದ ಅಭಾವ ಮೊದಲಿನಿಂದಲೂ ಇದ್ದ ಅವಳಿಗೆ ಗಂಡ ತನ್ನ ತಾಯಿಯೊಂದಿಗೆ ಪ್ರೀತಿಯಿಂದ ಮಾತನಾಡುವದೂ ಸಂಶಯಾಸ್ಪದವಾಗಿ ಕಾಣತೊಡಗಿತು. ಗಂಡ ತನ್ನ ತಾಯಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದು ರಾತ್ರಿ ತನ್ನನ್ನು ಕೂಡಲು ಬರುವಾತ ತನ್ನ ಗಂಡನಲ್ಲವೆಂದೂ ಅವನಂತೆಯೇ ಕಾಣುವ ಮತ್ತೊಬ್ಬ ತರುಣನೆಂದೂ ಅವಳಿಗೆ ಭ್ರಾಂತಿಯಾಯಿತು. ಜೂಹಿಯ ಮನಸ್ಸಿನಲ್ಲಿ ಈ ನಂಬಿಕೆ ಎಷ್ಟು ಗಟ್ಟಿಯಾಗಿ ನೆಲೆಯೂರಿತೆಂದರೆ ಮಾನಸಿಕ ಉಪಚಾರದ ಮೂಲಕ ಈ ಭ್ರಾಂತಿಯನ್ನು ತೆಗೆಯಲು ತಿಂಗಳುಗಳೇ ಬೇಕಾದವು.

'ಗೋಮತಿ' ಪ್ರತಿಭಾವಂತೆ, ರೂಪವತಿ, ಸುಮಾರು ಇಪ್ಪತ್ತೈದು ವರ್ಷ ವಯಸ್ಸಿನ ಆಕೆ ಎಲ್ಎಲ್‌ಬಿ ಪಾಸುಮಾಡಿ ಎಲ್ಎಲ್ಎಂ ಓದುತ್ತಿದ್ದಳು. ಒಬ್ಬ ಹಿರಿಯ ವಕೀಲರ ಹತ್ತಿರ ಸಹಾಯಕಳಾಗಿ ಕೆಲಸ ಮಾಡುತ್ತ ತಾನೂ ಹಿರಿಯ ವಕೀಲಳಾಗುವ ಕನಸು ಕಾಣುತ್ತಿದ್ದಳು. ಅವಳಿಗೆ ಕೋರ್ಟಿನಲ್ಲಿ ತರುಣ ವಕೀಲರೊಬ್ಬರ ಪರಿಚಯವಾಗಿ ಗೆಳೆತನ ಪ್ರಣಯಕ್ಕೆ ತಿರುಗಿತು. ಆಗಲೇ ವಿವಾಹಿತನಾದ ಆತ ಅವಳನ್ನು ಮದುವೆಯಾಗಲು ಸಾಧ್ಯವಿಲ್ಲವೆಂದೂ ಆದರೆ ಜೀವನಪರ್ಯಂತ ಅವಳನ್ನು ಹೆಂಡತಿಯಂತೆಯೇ ನೋಡಿಕೊಳ್ಳುವದಾಗಿಯೂ ಆಶ್ವಾಸನೆ ನೀಡಿದ. ಅವನ ಮೇಲೆ ಅಪಾರ ಪ್ರೀತಿ ಬೆಳೆಸಿಕೊಂಡಿದ್ದ ಗೋಮತಿ ತೊಡಕಿನಲ್ಲಿ ಸಿಕ್ಕಳು. ಅವನನ್ನು ಬಿಟ್ಟು ಬೇರಾರನ್ನು ಮದುವೆಯಾಗಲೂ ಆಕೆ ತಯಾರಿರಲಿಲ್ಲ. ಆದರೆ ಈಗಾಗಲೆ ಮದುವೆಯಾದ ಆತ ಕಾನೂನಿನ ಪ್ರಕಾರ ಇನ್ನೊಂದು ಮದುವೆಯಾಗುವ ಹಾಗಿರಲಿಲ್ಲ. ಅಪಾರವಾದ ಮನೋವೇದನೆಯನ್ನು ಅನುಭವಿಸಿದ ಗೋಮತಿ ಸಂನ್ಯಾಸಿನಿಯಾಗಿ ಬಾಳಲು ನಿರ್ಧರಿಸಿದಳು. ಆದರೆ ಅವಳ ಮನೋವ್ಯಥೆಯನ್ನು ಕಡಿಮೆ ಮಾಡಲು ಮಾನಸೋಪಚಾರ ಅನಿವಾರ್ಯವಾಯಿತು.

ಕೆಲವೊಂದು ಸಲ ರ್‍ಯಾಂಕ್ ಪಡೆದ ಒಳ್ಳೊಳ್ಳೆಯ ವಿದ್ಯಾರ್ಥಿಗಳೂ ಮಾನಸಿಕ-ತೊಳಲಾಟಗಳಿಂದ ಬಳಲುವುದುಂಟು. ಪ್ರಿ. ಯುನಿವರ್ಸಿಟಿ ಮತ್ತು

ಎಸ್.ಎಸ್.ಎಲ್.ಸಿ. ಗಳಲ್ಲಿ ರ್‍ಯಾಂಕ್ ಪಡೆದ ವೈದ್ಯಕೀಯ ವಿದ್ಯಾರ್ಥಿಯೊಬ್ಬ ಸಲಹೆಗಾಗಿ ನನ್ನ ಕಡೆಗೆ ಬಂದ. ಮೆಡಿಕಲ್ ಕಾಲೇಜಿನಲ್ಲಿ ಸಹಪಾಠಿಯಾಗಿದ್ದ ವಿದ್ಯಾರ್ಥಿನಿಯೊಬ್ಬಳ ಮೇಲೆ ಮೋಹವುಂಟಾಯಿತು. ಇದನ್ನು ಗಮನಿಸಿದ ಅವಳು ಆತನೊಡನೆ ಚೆಲ್ಲಾಟವಾಡತೊಡಗಿದಳು. ಅವಳ ಮನದ ಇಂಗಿತವನ್ನು ತಿಳಿದುಕೊಳ್ಳಲಾರದೆ ಆತ ಭ್ರಾಂತನಾಗಿ ಮಾನಸಿಕ ಉಪಚಾರಕ್ಕೆ ಶರಣಾಗಬೇಕಾಯಿತು.

'ಮಾಧವ'ಸುಮಾರು ಇಪ್ಪತ್ತೈದು ವರ್ಷದ ಯುವಕ. ಪದವೀಧರನಾಗಿ ಸ್ವಂತ ಉದ್ಯೋಗವನ್ನು ನಡೆಸುತ್ತಿದ್ದ. ಅವನ ತಾಯಿ ಇತ್ತೀಚೆಗೆ ಕ್ಯಾನ್ಸರ್‌ನಿಂದ ತೀರಿಕೊಂಡಿದ್ದಳು. ಸುಮಾರು ಐವತ್ತೈದು ವರ್ಷ ವಯಸ್ಸಿನ ಅವನ ತಂದೆಗೆ ಎರಡನೆಯ ಮದುವೆ ಮಾಡಿಕೊಳ್ಳುವ ಖಯಾಲಿಯಾಯಿತು. ಅವರು ವಧುವನ್ನು ನಿರ್ಧರಿಸಿ ಮದುವೆಯ ದಿನಾಂಕವನ್ನೂ ನಿಶ್ಚಯಿಸಿದರು. ತನ್ನ ತಾಯಿಯ ಮರಣದ ದುಃಖ ಶಮನಗೊಳ್ಳುವಷ್ಟರಲ್ಲಿ ತಂದೆಯು ಇನ್ನೊಂದು ಮದುವೆ ಮಾಡಿಕೊಳ್ಳುವುದು ಆಗಲೆ ವಯಸ್ಸಿಗೆ ಬಂದಿದ್ದ ಮಾಧವನಿಗೆ ಸರಿ ಬರಲಿಲ್ಲ. ಅವನ ಮನಸ್ಸು ತಳಮಳಕ್ಕೀಡಾಯಿತು. ಈ ಮದುವೆ ಮಾಡಿಕೊಳ್ಳದಂತೆ ತಂದೆಯ ಮನವೊಲಿಸಲು ಪ್ರಯತ್ನಿಸಿದ. ಆದರೆ ತಂದೆಯ ನಿರ್ಧಾರ ಅಚಲವಾಗಿತ್ತು. ನಿರಾಶನಾದ ಮಾಧವ ಆತ್ಮಹತ್ಯೆಮಾಡಿಕೊಳ್ಳಲು ನಿರ್ಧರಿಸಿ ಬಹಳಷ್ಟು ನಿದ್ರೆಯ ಮಾತ್ರೆಗಳನ್ನು ಸೇವಿಸಿ ಪ್ರಜ್ಞಾಹೀನನಾದ. ಆಸ್ಪತ್ರೆಗೆ ಸಾಗಿಸಿ ಉಪಚರಿಸಿದಾಗ ಚೇತರಿಸಿಕೊಂಡ.

[illegible]

ಯುವಕರಲ್ಲಿ ಉಂಟಾಗುವ ನಡವಳಿಕೆಯ ಸಮಸ್ಯೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

(೧) ಜನರ ಮತ್ತು ಪ್ರಾಣಿಗಳ ವಿರುದ್ಧ ಆಕ್ರಮಕ ಪ್ರವೃತ್ತಿ

(೨) ಜನರನ್ನು ಬೆದರಿಸುವುದು

(೩) ದೈಹಿಕ ಹಿಂಸೆ

(೪) ಶಸ್ತ್ರಗಳ ಉಪಯೋಗ (ಚಾಕು, ಚೂರಿ, ಬಾಟಲಿ, ಬಂದೂಕುಗಳ ಉಪಯೋಗ)

(೫) ಪ್ರಾಣಿಗಳ ಹಿಂಸೆ

(೬)ಹಿಂಸಿಸುತ್ತಲೇ ಜನರ ವಸ್ತುಗಳ ಅಪಹರಣ (ಪರ್ಸು ಕಸಿದುಕೊಳ್ಳುವದು, ಶಸ್ತ್ರ ದರೋಡೆ ಇತ್ಯಾದಿ)

(೭) ಬಲವಂತದಿಂದ ಲೈಂಗಿಕ ಉಪಭೋಗ

(೮) ಆಸ್ತಿಯ ನಾಶ (ಬೆಂಕಿ ಹಚ್ಚುವುದು, ಪೀಠೋಪಕರಣಗಳ ನಾಶ, ಕಂಪೌಂಡ್ ಕೆಡವುವುದು ಇತ್ಯಾದಿ)

(೯) ಬೇರೆಯವರ ಮನೆಗೆ ಕನ್ನ ಹಾಕುವದು, ಕಾರು ಕದಿಯುವುದು

(೧೦) ಸುಳ್ಳು ಹೇಳಿ ಇತರರಿಂದ ಹಣ, ವಸ್ತು ಸೆಳೆಯುವುದು

(೧೧) ಅಂಗಡಿಗಳಿಂದ ಕದಿಯುವದು

(೧೨) ಕುಟುಂಬದ ಮತ್ತು ಸಾರ್ವಜನಿಕ ಕಟ್ಟಳೆಗಳನ್ನು ಉಲ್ಲಂಘಿಸುವುದು
(೧೩) ಮನೆಯಿಂದ ಓಡಿಹೋಗುವುದು
(೧೪) ಶಾಲೆ ತಪ್ಪಿಸುವುದು


ಪ್ರತಿದಿನದ ಪತ್ರಿಕೆಗಳಲ್ಲಿ ಮೇಲೆ ಉಲ್ಲೇಖಿಸಿದ ಸಮಸ್ಯೆಗಳ ಕನಿಷ್ಠ ಒಂದೊಂದು ಉದಾಹರಣೆಯಾದರೂ ಸಿಕ್ಕೇಸಿಗುತ್ತದೆ.

ಸಮಸ್ಯೆಯ ಕಾರಣಗಳು

೧) ಕೌಟುಂಬಿಕ ಅಭದ್ರತೆ
(೨) ತಂದೆ-ತಾಯಿಗಳಿಂದ ಹಿಂಸೆ.
(೩) ಅತಿಯಾದ ದೈಹಿಕ ಶಿಕ್ಷೆ
(೪) ತಂದೆ ತಾಯಿಗಳು ಅತಿಯಾದ ಮದ್ಯಪಾನದ ಚಟ ಬೆಳೆಸಿಕೊಂಡಿದ್ದು.

* * * * * * * * *

ನನ್ನಿಂದ ಚಿಕಿತ್ಸೆ ಪಡೆದವರೊಬ್ಬರು ತಮ್ಮ ಸಂಬಂಧಿಕನಾದ ತರುಣನೊಬ್ಬನನ್ನು ನನ್ನ ಬಳಿ ಕರೆತಂದರು. ಅವನ ಹೆಸರು 'ಅರುಣ'ಎಂದಿಟ್ಟುಕೊಳ್ಳೋಣ. ಹುಬ್ಬಳ್ಳಿಯ ಈತ ಸುಮಾರು ೨೫-೨೬ ವರ್ಷದ ತರುಣ. ಪ್ರಿ ಯುನಿವರ್ಸಿಟಿ ಪಾಸು ಮಾಡಿ ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸಿ ಬೆಂಗಳೂರಿನ ಗ್ಯಾರೇಜ್ ಒಂದರಲ್ಲಿ ಮೆಕ್ಯಾನಿಕ್ ಆಗಿ ಕೆಲಸಕ್ಕೆ ಸೇರಿದ್ದ. ಆತ ವಾಸವಾಗಿದ್ದ ಕೋಣೆಯ ಬದಿಯ ಮನೆಯಲ್ಲಿದ್ದ ವಿವಾಹಿತ ಮಹಿಳೆಯ ಪರಿಚಯ ಅವನಿಗಾಯಿತು. ಆಕೆ ಎರಡು ಮಕ್ಕಳ ತಾಯಿ; ವಯಸ್ಸಿನಲ್ಲಿ ಅವನಿಗಿಂತ; ದೊಡ್ಡವಳು. ಅವರ ಪರಿಚಯ ಸ್ನೇಹಕ್ಕೆ ತಿರುಗಿ ಕೊನೆಗೆ ಪ್ರಣಯದಲ್ಲಿ ಪರ್ಯಾವಸಾನಗೊಂಡಿತು. ಇದು ಎಷ್ಟು ದೀರ್ಘಕ್ಕೆ ಹೋಯಿತೆಂದರೆ ಆ ಹೆಂಗಸು ತನ್ನ ಗಂಡನನ್ನು ಬಿಟ್ಟು ಇವನ ಜೊತೆಗೇ ವಾಸಿಸತೊಡಗಿದಳು. ಅವನು ಅವಳಿಗಾಗಿ ಬೆಂಗಳೂರಿನ ಬೇರೊಂದು



ಭಾಗದಲ್ಲಿ ಮನೆ ಮಾಡಿದ. ನಾಲ್ಕಾರು ತಿಂಗಳುಗಳಲ್ಲಿಯೇ ಪ್ರಣಯದ ಬಿಸಿ ಆರಿ ಆ ಹೆಂಗಸಿಗೆ ಇವನ ಬಗೆಗೆ ಬೇಸರ ಹುಟ್ಟತೊಡಗಿತು. ಅವರಲ್ಲಿ ಜಗಳಗಳಾಗತೊಡಗಿದವು. ಈ ಮಧ್ಯೆ ಅವಳಿಗೆ ನೆರೆಮನೆಯ ಮತ್ತೊಬ್ಬ ಗಂಡಸಿನ ಪರಿಚಯವಾಯಿತು. ಆತ ಅರುಣನಿಗಿಂತ ಸ್ಪುರದ್ರೂಪಿಯಾಗಿದ್ದನಲ್ಲದೆ ಶ್ರೀಮಂತನೂ ಆಗಿದ್ದ. ಒಂದು ದಿನ ಸಂಜೆ ಅರುಣ ಕೆಲಸದಿಂದ ಮರಳಿದಾಗ ಆಕೆ ಆ ಶ್ರೀಮಂತನೊಡನೆ ಮಾಯವಾಗಿದ್ದಳು. ಅವರಿಬ್ಬರೂ ಮತ್ತೊಂದು ಕಡೆ ಮನೆಮಾಡಿದ್ದರು. ನಮ್ಮ 'ಅರುಣ'ನೀಗ ಮಾನಸಿಕವಾಗಿ ಉದ್ವಸ್ತನಾದ. ಆತ ಈ ಹೆಂಗಸನ್ನು ಅಪಾರವಾಗಿ ಪ್ರೀತಿಸುತ್ತಿದ್ದ. ಅವಳಿಲ್ಲದ ಜೀವನ ಅವನಿಗೆ ದುಸ್ತರ ವಾಯಿತು. ಕುಡಿತದ ಚಟ ಮೈಗಂಟಿಕೊಂಡಿತು. ಮೊದಲಿನ ಹಾಗೆ ಮನಸ್ಸು ಗೊಟ್ಟು ಕೆಲಸ ಮಾಡಲು ಸಾಧ್ಯವಾಗದೆ ಗ್ಯಾರೇಜಿನವರು ಅವನನ್ನು ನೌಕರಿ ಯಿಂದ ತೆಗೆದರು.

ಅವನ ತಂದೆ-ತಾಯಿಗಳು ಮಾನಸಿಕವಾಗಿ ಜರ್ಜರಿತನಾಗಿದ್ದ ಅವನನ್ನು ಹುಬ್ಬಳ್ಳಿಗೆ ಕರೆದುಕೊಂಡು ಬಂದರು. ಹುಬ್ಬಳ್ಳಿಯಲ್ಲಿಯೂ ಅವನಿಗೆ ತನ್ನ ಪ್ರಿಯತಮೆಯನ್ನು ಮರೆಯಲಾಗಲಿಲ್ಲ. ಒಮ್ಮೆ ಆತ ತಂದೆ-ತಾಯಿಗಳ ಕಣ್ಣುತಪ್ಪಿಸಿ ಮತ್ತೆ ಬೆಂಗಳೂರಿಗೆ ಅವಳನ್ನು ಕಾಣಲು ಹೋದ. ಆದರೆ ಅವಳು ಇವನನ್ನು ಹೊರಗಟ್ಟಿದಳು. ಹುಬ್ಬಳ್ಳಿಗೆ ಮರಳಿದ ಅರುಣ ಇನ್ನಷ್ಟು ಭ್ರಾಂತನಾಗಿ ಓಣಿಓಣಿ ಅಲೆಯುತ್ತಾ ಕುಡಿಯಲು ಹಣಕ್ಕಾಗಿ ಕಂಡಕಂಡವರನ್ನು ಪೀಡಿಸತೊಡಗಿದ. ಹಣ ಕೊಡದವರೊಡನೆ ಜಗಳಕ್ಕೂ ಇಳಿಯತೊಡಗಿದ. ಅವನ ತಂದೆ-ತಾಯಿಗಳಿಗೆ ಇದೊಂದು ಬಿಡಿಸಲಾಗದ ಸಮಸ್ಯೆಯಾಗಿ ಮನೋವೈದ್ಯರ ನೆರವು ಅಗತ್ಯವಾ ಯಿತು.

ಈಗ 'ಕುಮಾರಿ' ಎಂಬ ತರುಣಿಯ ಪ್ರಕರಣವನ್ನು ನೋಡೋಣ. ಇಪ್ಪತ್ತು-ಇಪ್ಪತ್ತೆರಡು ವರ್ಷದ ತರುಣಿ. ಪದವೀಧರೆ. ಬ್ಯಾಂಕ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದಾಳೆ. ಸ್ಥಿತಿವಂತರ ಮನೆಯವಳು. ಅವಳಿಗೆ ಕಾರು ಓಡಿಸಲು ಕಲಿಯುವ ಆಸೆ. ಡ್ರೈವಿಂಗ್ ಸ್ಕೂಲನ್ನು ಸೇರಿದಳು. ಡ್ರೈವಿಂಗ್ ಸ್ಕೂಲಿನ ಟೀಚರ್ ಆಕರ್ಷಕ ವ್ಯಕ್ತಿತ್ವದ ತರುಣ. ಡ್ರೈವಿಂಗ್ ಕಲಿಸುತ್ತಲೇ ಆಕೆಗೆ ಪ್ರೇಮದ ಪಾಠಗಳನ್ನೂ ಹೇಳಿಕೊಡತೊಡಗಿದ. ಕುಮಾರಿ ಪ್ರೇಮಪಾಶದಲ್ಲಿ ಸಿಕ್ಕಳು. ಅವನನ್ನೇ ಮದುವೆಯಾಗುವುದಾಗಿ ಪಣತೊಟ್ಟಳು. ಅವರ ಮದುವೆಗೆ ಎರಡು ದೊಡ್ಡ ಅಡಚಣೆಗಳಿದ್ದವು. ಒಂದು- ಆ ತರುಣ ವಿವಾಹಿತ. ಆಗಲೇ ಮೂರು ಮಕ್ಕಳ ತಂದೆ. ಎರಡು- ಅವನು ಬೇರೆ ಧರ್ಮದವ. ಕುಮಾರಿ ಅವನ ಎರಡನೆಯ ಹೆಂಡತಿಯಾಗಲು, ಅವಶ್ಯವಾದರೆ ಮತಾಂತರಗೊಳ್ಳಲು ಸಿದ್ಧಳಾಗಿ ದ್ದಳು. ಈ ಪ್ರೇಮ ವಿವಾಹಕ್ಕೆ ಅವಳ ಮನೆತನದವರ ವಿರೋಧವಿಲ್ಲದಿದ್ದರೂ ಕುಮಾರಿಯು ಎರಡನೆಯ ಹೆಂಡತಿಯಾಗಲು ಮತ್ತು ಮತಾಂತರಗೊಳ್ಳಲು ಒಪ್ಪಿಗೆಯಿರಲಿಲ್ಲ. ಸಹಜವಾಗಿ ಅಭಿಪ್ರಾಯಭೇದವಾಗತೊಡಗಿತು. ಮನೆಯಲ್ಲಿ ಜಗಳ, ಮನಸ್ತಾಪಗಳು ಆರಂಭವಾದವು. ಮನೆಯವರೊಡನೆ ದಿನ ಬೆಳಗಾದರೆ ನಡೆಯುತ್ತಿದ್ದ ಝಟಾಪಟಿಯಿಂದಾಗಿ ಕುಮಾರಿ ಒಂದು ರೀತಿಯಲ್ಲಿ ಭ್ರಾಂತಳಾ ದಳು. ಆದರೆ ಅವನನ್ನೇ ಮದುವೆಯಾಗುವ ನಿಲುವಿನಿಂದ ಮಾತ್ರ ಹಿಂದೆ

ಸರಿಯಲಿಲ್ಲ. ಅವಳ ತಂದೆ ಅವಳಿಗೆ ಹತ್ತಿರವಾಗಿದ್ದ ಮನೆಯ ಇತರರಿಂದ ತಿಳಿವಳಿಕೆ ಹೇಳಿಸಲು ಪ್ರಯತ್ನಿಸಿದರು.ಇದಾವುದೂ ಫಲಕೊಡದೆ ಅವಳ ಮನಃಪರಿವರ್ತನೆಗಾಗಿ ಮನೋವೈದ್ಯರ ಮೊರೆಹೋಗಬೇಕಾಯಿತು.

ಮೇಲಿನ ಎರಡೂ ಪ್ರಕರಣಗಳು ವೇಗವಾಗಿ ಬದಲಾಗುತ್ತಿರುವ ಇಂದಿನ ಸಾಮಾಜಿಕ ಪರಿಸರದಲ್ಲಿ ತರುಣರ ಆಸೆಆಕಾಂಕ್ಷೆಗಳು ಯಾವರೀತಿಯ ಸಮಸ್ಯೆಗಳನ್ನು ತಂದೊಡ್ಡಬಹುದೆಂಬುದನ್ನು ಸೂಚಿಸುತ್ತವೆ. ಶಿಕ್ಷಣದ ಪ್ರಚಾರ, ಸಮೂಹ ಮಾಧ್ಯಮಗಳ ಪ್ರಭಾವದಿಂದ ಪರಂಪರಾಗತ ಸಾಮಾಜಿಕ ಸಂಕೋಲೆಗಳು ಭರದಿಂದ ಕಳಚಿಕೊಳ್ಳುತ್ತಿವೆ. ಸ್ತ್ರೀ-ಪುರುಷರು ಸ್ವತಂತ್ರ ಮನೋವೃತ್ತಿಯವರೂ ಸ್ವೇಚ್ಛಾಜೀವಿಗಳೂ ಆಗುತ್ತಿದ್ದಾರೆ. 'ಪ್ರತಿಬಂಧಿತ ಫಲ'ಗಳನ್ನು ಸವಿದು ನೋಡುವುದು ಈ ಹೊಸ ಸಂಸ್ಕೃತಿಯ ಒಂದು ಭಾಗವಾಗುತ್ತಿದೆ. ನಮ್ಮ ರಾಜಕಾರಣಿಗಳು ಜಾತಿಮತಗಳ ಸಹಾಯದಿಂದ ಸಮಾಜವನ್ನು ಒಡೆಯುತ್ತಿದ್ದರೂ ಯುವ ವರ್ಗದಲ್ಲಿ ಇವು ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿವೆ. ಈ ಸಾಮಾಜಿಕ ಬದಲಾವಣೆ ಸ್ವಾಗತಾರ್ಹವೇ ಆಗಿದ್ದರೂ ನಮ್ಮ ಯುವವರ್ಗದಲ್ಲಿ ಹೆಚ್ಚಿನವರು ಮಾನಸಿಕವಾಗಿ ಇನ್ನೂ ಅಪರಿಪಕ್ವರೇ ಆಗಿರುವುದರಿಂದ ಇದು ಒಂದು ಸಾಮಾಜಿಕ ಕಂಟಕವಾಗಿ ಪರಿವರ್ತಿತವಾಗುವ ಅಪಾಯವೂ ಇದೆ.


ಮನೋವೈದ್ಯಕೀಯ ದೃಷ್ಟಿಕೋನದಿಂದ ಯುವಕರ ಮಾನಸಿಕ ಸಮಸ್ಯೆಗಳನ್ನು ಕೆಳಗಿನಂತೆ ವರ್ಗೀಕರಿಸಬಹುದು.

೧. ಮನೋದೈಹಿಕ ಸಮಸ್ಯೆಗಳು.
೨. ಮನೋಲೈಂಗಿಕ ಸಮಸ್ಯೆಗಳು.
೩. ಲೈಂಗಿಕ ವಿಕೃತಿಯ ಸಮಸ್ಯೆಗಳು.
೪. ಮಾದಕವಸ್ತು, ಮದ್ಯಪಾನಗಳಿಂದ ಉಂಟಾದ ಸಮಸ್ಯೆಗಳು.
೫. ನಡವಳಿಕೆಯ ಸಮಸ್ಯೆಗಳು.
೬. ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳು.
೭. ಮಾನಸಿಕ ಆಘಾತದ ಸಮಸ್ಯೆಗಳು.

ಅವುಗಳನ್ನಿಲ್ಲಿ ವಿವರವಾಗಿ ವಿವೇಚಿಸೋಣ.

ಮನೋದೈಹಿಕ ಸಮಸ್ಯೆಗಳು

'ಗಿರೀಶ'ಬಿ.ಎಸ್.ಸಿ. ಮೂರನೆಯ ವರ್ಷದ ವಿದ್ಯಾರ್ಥಿ. ಎರಡನೆಯ ವರ್ಷದ ಪರೀಕ್ಷೆಯಲ್ಲಿ ಗಣಿತದಲ್ಲಿ ಅನುತ್ತೀರ್ಣನಾದ ನಂತರ ಒಂದು ಬಗೆಯ ಭಯ ಅವನನ್ನು ಕಾಡಲು ಶುರುವಾಯಿತು. ಇದರೊಡನೆ ತಲೆನೋವು, ತಲೆಸುತ್ತುವುದು, ಕೈಕಾಲು ಹರಿಯುವುದು, ಅಪಚನ ಮುಂತಾದ ಹಲವಾರು ಬಾಧ್ಯಗಳು ಅಂಟಿಕೊಂಡವು. ಕಾಲೇಜಿಗೆ ಹೋದರೆ ಪಾಠಗಳತ್ತ ಗಮನ ಹರಿಯುತ್ತಿರಲಿಲ್ಲ. ಮನೆಯಲ್ಲಿ ಅಭ್ಯಾಸದ ಕಡೆಗೆ ಮನಸ್ಸಿರುತ್ತಿರಲಿಲ್ಲ. ಎರಡು ತಿಂಗಳುಗಳಿಂದ ಕಾಲೇಜಿಗೆ ಹೋಗುವುದನ್ನು ನಿಲ್ಲಿಸುವಷ್ಟು ಈ ಭಯ ಬೆಳೆದಿತ್ತು. ತನ್ನ ಕಡೆಯಿಂದ ಗಣಿತದ ಪರೀಕ್ಷೆ ಪಾಸು ಮಾಡಲು ಸಾಧ್ಯವೇ ಇಲ್ಲ; ತಾನು ಓದು ಮುಂದುವರೆಸಲು ಅಯೋಗ್ಯ ಎಂಬ ಭಾವನೆ ಅವನನ್ನು ಮುತ್ತಿಕೊಂಡಿತು. ಮನಸ್ಸಿನಲ್ಲಿ ಬಂದಿದ್ದ ವಿಚಾರಗಳು ಮತ್ತೆ ಮತ್ತೆ ಬರುವುದು, ನಡೆಯುವ ಮುಂದೆ



ಹೆಜ್ಜೆಗಳನ್ನು ಎಣಿಸಿ ಹಿಂದೆಮುಂದೆ ಹೋಗುವುದು ಮುಂತಾದ ವಿಚಿತ್ರ ಅಭ್ಯಾಸಗಳು ಅಂಟಿಕೊಂಡಿದ್ದವು. ಅವನಿಗೆ ಮನೋವೈದ್ಯಕೀಯ ಉಪಚಾರ ಅಗತ್ಯವಾಯಿತು.

ಅಹ್ಮದ್ ಸುಮಾರು ಇಪ್ಪತ್ತೇಳು-ಇಪ್ಪತ್ತೆಂಟು ವರ್ಷಗಳ ತರುಣ. ಎಂಜಿನಿಯರಿಂಗ್ ಪದವೀಧರ. ಅವನು ಹಲವಾರು ವರ್ಷಗಳ ಹಿಂದೆ ಎಂಜಿನಿಯರಿಂಗ್ ಕೋರ್ಸಿಗೆ ಸೇರುವಾಗ ಯಾವುದೋ ಒಂದು ಸುಳ್ಳು ಮಾಹಿತಿ ನೀಡಿದ್ದ. ನಂತರ ಇದು ಕಾಲೇಜಿನವರ ಗಮನಕ್ಕೆ ಬಂದು ಅವನನ್ನು ಮೂರು ವರ್ಷಗಳವರೆಗೆ ಹೊರಗೆ ಹಾಕಿದ್ದರು. ನಂತರ ಮತ್ತೆ ಓದು ಮುಂದುವರೆಸಿದ ಅವನು ಪದವಿ ಪಡೆದು ನೌಕರಿಗೆ ಸೇರಿಕೊಂಡಿದ್ದ. ದುಬಾಯಿಯಲ್ಲಿ ನೌಕರಿಗಿದ್ದವರೊಬ್ಬರು ಅವನಿಗೆ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿ ದುಬಾಯಿಯಲ್ಲಿಯೇ ಅವನಿಗೂ ಒಂದು ನೌಕರಿ ಕೊಡಿಸಲು ಮುಂದೆ ಬಂದರು.

ಮದುವೆಯ ನಿಶ್ಚಿತಾರ್ಥವೂ ಆಯಿತು. ಅವರು ಅವನಿಗಾಗಿ ನೌಕರಿ ಹುಡುಕುವಾಗ ದುಬಾಯಿಯ ಮಾಲಿಕರಿಗೆ ಆತ ಡಿಗ್ರಿ ಪಡೆದ ತಾರೀಖು, ಅವನ ಜನ್ಮತಾರೀಖು ಮುಂತಾದವುಗಳ ಮಾಹಿತಿ ನೀಡಬೇಕಾಗಿತ್ತು. ಅಹ್ಮದನಿಗೆ ಈ ಮಾಹಿತಿ ನೀಡುವ ಸರ್ಟಿಫಿಕೇಟುಗಳನ್ನು ಕಳಿಸಲು ಪತ್ರ ಬರೆದರು. ತನ್ನ ಮಾವನಿಗೆ ತಾನು ಡಿಬಾರ್ ಆದ ವಿಷಯವನ್ನಾತ ತಿಳಿಸಿರಲಿಲ್ಲ. ಅಲ್ಲದೆ ಡಿಗ್ರಿ ಪಡೆದ ವರ್ಷ, ಜನ್ಮ ತಾರೀಖು ಮುಂತಾದವುಗಳ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದ. ಈಗ ಅವನಿಗೆ ಪೇಚಾಟಕ್ಕಿಟ್ಟುಕೊಂಡಿತು. ಅವನಿಗೆ ವಿವರಗಳನ್ನು ಆದಷ್ಟು ಬೇಗ ಕಳಿಸುವಂತೆ ಒತ್ತಾಯ ಬರತೊಡಗಿದವು. ಅಹ್ಮದ ತನ್ನ ಸರ್ಟಿಫಿಕೇಟುಗಳ ಪ್ರತಿಗಳನ್ನು ಕಳಿಸಲು ಹೆದರತೊಡಗಿದ. ನಿಜ ತಿಳಿದರೆ ಅವರೆಲ್ಲಿ ಮದುವೆಯನ್ನೇ ರದ್ದುಮಾಡಿಬಿಡುತ್ತಾರೋ ಎಂದು ಅವನಿಗೆ ಭಯ. ಅಹ್ಮದನಿಗೆ ಮನಃಶಾಂತಿಯಿಲ್ಲದಾಯಿತು. ನಡೆಯುವಾಗ ಕೈಕಾಲುಗಳಲ್ಲಿಯ ಶಕ್ತಿ ಉಡುಗಿದಂತಾಗುತ್ತಿತ್ತು. ಹೆಜ್ಜೆ ಮುಂದಿಡಲೂ ಕಷ್ಟವಾಗುತ್ತಿತ್ತು. ತಲೆ ಭಾರವಾಗುವುದು,

ತಲೆ ಸುತ್ತುವುದು, ಎದೆ ಬಡಿದುಕೊಳ್ಳುವುದು, ಉಸಿರಾಟಕ್ಕೆ ತೊಂದರೆಯಾಗುವುದು ಮುಂತಾದ ಹಲವಾರು ಲಕ್ಷಣಗಳು ಕಾಣಿಸಿಕೊಂಡವು. ವೈದ್ಯರ ಉಪಚಾರದಿಂದ ಗುಣವಾಗದ್ದರಿಂದ ಅವನಿಗೆ ಮನೋವೈದ್ಯಕೀಯ ಉಪಚಾರದ ಅವಶ್ಯಕತೆ ಉಂಟಾಯಿತು. ಪರಿಣಾಮವಾಗಿ ಅವನು ಗುಣಮುಖನಾಗಿ ಚೇತರಿಸಿಕೊಂಡ. ನಂತರ ಅವನ ಮದುವೆಯೂ ಆಯಿತು.

ಮನೋಲೈಂಗಿಕ ಸಮಸ್ಯೆಗಳು

"ಡೇವಿಡ್' ಒಬ್ಬ ರೇಲ್ವೆ ಕೆಲಸಗಾರನ ಪುತ್ರ. ಒಂದೇ ಕೋಣೆಯ ಕ್ವಾರ್ಟರಿನಲ್ಲಿ ಅವನ ತಂದೆ ತಾಯಿಗಳು ಮೂರು ಜನ ಮಕ್ಕಳೊಂದಿಗೆ ವಾಸಿಸುತ್ತಿದ್ದರು. ದೊಡ್ಡವನಾಗುತ್ತಿದ್ದಂತೆ ರಾತ್ರಿ ತನ್ನ ತಂದೆ-ತಾಯಿಗಳು ಸಂಭೋಗ ನಡೆಸುವದನ್ನು ನೋಡುವ ಅಭ್ಯಾಸ ಅವನಿಗಾಯಿತು. ಅದನ್ನು ನೋಡುತ್ತ ಅವನಿಗೂ ಉದ್ರೇಕವಾಗಲು ಶುರುವಾಯಿತು. ಕೆಲವು ಸಲ ಉದ್ರೇಕ ತಡೆಯದೇ ಅವನು ಮರುದಿನ ಮುಂಜಾನೆ ತಾವು ಸಾಕಿದ್ದ ಆಕಳಿನಲ್ಲಿಯೇ ದೈಹಿಕ ಸುಖಕಾಣಲು ಯತ್ನಿಸುತ್ತಿದ್ದ. ಇದು ಅವನಲ್ಲಿ ಮಾನಸಿಕ ತುಮುಲಕ್ಕೆ ದಾರಿ ಮಾಡಿಕೊಟ್ಟಿತು.

ಕೆಲವು ದಿನಗಳ ನಂತರ ಅವನಿಗೆ ಉದ್ರೇಕವಾಗುವುದೇ ನಿಂತುಹೋಯಿತು. ಇನ್ನೂ ಇಪ್ಪತ್ತು ದಾಟದ ಅವನು ತನ್ನ ಮದುವೆಯಾದರೆ ಹೆಂಡತಿಯನ್ನು ಸಂಭೋಗಿಸಲು ಸಾಧ್ಯವೆ? ಎಂಬ ಭಯ ಉಂಟಾಗಿ, ಮನೋವೈದ್ಯಕೀಯ ಚಿಕಿತ್ಸೆಪಡೆಯಲು ನನ್ನ ಬಳಿ ಬಂದ. ಆದರೆ ಚಿಕಿತ್ಸೆ ಪೂರ್ಣಗೊಳ್ಳುವ ಮೊದಲೇ ಲೈಂಗಿಕ ವಿಷಯಗಳ ಬಗ್ಗೆ ಜಿಗುಪ್ಸೆ ಹುಟ್ಟಿ ಪಾದ್ರಿಯಾಗಲು ಬೆಳಗಾವಿಯ ಬಿಷಪ್‌ರ ಶಾಲೆ ಸೇರಿದ.

'ಮಹಾದೇವ' ಒಂದು ಸಣ್ಣ ಹಳ್ಳಿಯ ನಿವಾಸಿ. ಅವನಿನ್ನೂ ಹದಿನೈದು ವರ್ಷದವನಾಗಿದ್ದಾಗ ಅವನ ಸಂಬಂಧಿಕಳಾಗಿದ್ದ ಒಬ್ಬ ಪ್ರೌಢ ವಿವಾಹಿತ ಮಹಿಳೆ ಅವನನ್ನು ತನ್ನ ಲೈಂಗಿಕ ಹಸಿವನ್ನು ಪೂರೈಸಿಕೊಳ್ಳಲು ಬಳಸಿಕೊಂಡಳು. ಅನಂತರ ಅವನ ತೊಂದರೆಗಳು ಪ್ರಾರಂಭವಾದವು. ಅವನಿಗೆ ತನ್ನ ಅಕ್ಕ, ತಂಗಿ ಇತ್ಯಾದಿ ಹತ್ತಿರದ ಸಂಬಂಧಿಗಳು ಹತ್ತಿರ ಬಂದಾಗಲೂ ಉದ್ರೇಕವಾಗತೊಡಗಿತು. ಇಂತಹ ಕಾಮೋದ್ರೇಕವನ್ನು ಶಮನಗೊಳಿಸಲು ಅವನು ಹೊರಗಿನ ಅನೇಕ ಹೆಂಗಸರ ಸಹವಾಸಮಾಡಿದ. ಶಿಕ್ಷಣವನ್ನು ಪೂರ್ತಿಗೊಳಿಸದೇ ತಂದೆಯೊಡನೆ ಜಗಳವಾಡಿ ಬೆಂಗಳೂರಿಗೆ ಓಡಿಹೋದ. ಅಲ್ಲಿ ಬೇರೆ ಬೇರೆ ಹೋಟೆಲುಗಳಲ್ಲಿ ಕೆಲಸ ಮಾಡುತ್ತಾ ಇನ್ನೂ ಅನೇಕ ಹೆಂಗಸರ ಸಹವಾಸಮಾಡಿದ. ಇದು ಅವನನ್ನು ಮಾನಸಿಕವಾಗಿ ಗಾಸಿಗೊಳಿಸಿತು. ತನಗೆ ತರಹ ತರಹದ ವ್ಯಾಧಿಗಳು ಅಂಟಿಕೊಂಡಂತೆ ಅವನಿಗನಿಸತೊಡಗಿತು. ಬೆಂಗಳೂರಿನಲ್ಲಿರಲು ಮನಸ್ಸಾಗದೆ ಮತ್ತೆ ಹಳ್ಳಿಗೆ ಮರಳಿದ. ಈ ಹೊತ್ತಿಗೆ ಅವನಿಗೆ ತನಗೆ ಲೈಂಗಿಕ ರೋಗ ತಗಲಿದೆ; ಹೀಗಾಗಿ ತಾನು ಮದುವೆಯಾಗಲು ಅನರ್ಹ ಎಂಬ ಭಾವನೆ ಬರತೊಡಗಿತು. ಅನೇಕ ವೈದ್ಯರು ಹಲವಾರು ರೀತಿಗಳಿಂದ ಪರೀಕ್ಷಿಸಿ ಅವನಲ್ಲಿ ಯಾವ ದೋಷವೂ ಇಲ್ಲವೆಂಬುದನ್ನು ಹೇಳಿದರೂ ಅವನಿಗೆ ನಂಬಿಕೆ ಬರಲಿಲ್ಲ. ಒಂದು ಒಂದೂವರೆ

ವರ್ಷ ಮಾನಸೋಪಚಾರ ಪಡೆದಾಗ ರೋಗದ ಗೀಳು ಕಡಿಮೆಯಾಯಿತು.

'ಸುರೇಶ' ಇಪ್ಪತ್ತೈದು ವರ್ಷ ವಯಸ್ಸಿನ ಯುವಕ. ಹಳ್ಳಿಯ ಮನೆಯಲ್ಲಿ ಚಿಕ್ಕಂದಿನಿಂದ ತನ್ನ ಸೋದರತ್ತೆಯ ಮಗಳೊಂದಿಗೆ ಬೆಳೆದವ. ದೊಡ್ಡವನಾಗಿ ನೌಕರಿಗಾಗಿ ಪಟ್ಟಣ ಸೇರಿದ. ಒಮ್ಮೆ ರಜೆಯಲ್ಲಿ ಹಳ್ಳಿಗೆ ಹೋದಾಗ ಎಂದಿನಂತೆ ಒಂದೇ ಕೋಣೆಯಲ್ಲಿ ಸೋದರತ್ತೆಯ ಮಗಳ ಬಳಿಯೇ ಮಲಗಿಕೊಂಡ. ಅಂದು ಏಕೋ ಅವಳ ಸಾಮೀಪ್ಯದಲ್ಲಿ ಸ್ತಿಮಿತ ಕಳೆದುಕೊಂಡ. ಅವಳೂ ಪ್ರತಿಭಟಿಸಲಿಲ್ಲ. ಈಗಾಗಲೇ ಅವಳ ಮದುವೆ ಗೊತ್ತಾಗಿದ್ದರಿಂದ ಸುರೇಶನನ್ನು ಅಪರಾಧಿ ಭಾವನೆ ಕಾಡತೊಡಗಿತು. ನಿದ್ರೆಗೆಡುವುದು, ಉದ್ವಿಗ್ನತೆ, ತರಹತರಹದ ದೈಹಿಕ ಸಂವೇದನಗಳು, ತಲೆನೋವು, ಅಗ್ನಿಮಾಂದ್ಯ, ಮುಂತಾದ ಲಕ್ಷಣಗಳು ಅವನಲ್ಲಿ ಸ್ಥಿರವಾದವಲ್ಲದೆ ಲಿಂಗೋದ್ರೇಕ ನಿಂತುಹೋಯಿತು. ಆರೆಂಟು ತಿಂಗಳವರೆಗೂ ಕಾಡಿದ ಈ ಸಮಸ್ಯೆ ಮಾನಸಿಕ ಉಪಚಾರದ ನಂತರ ಶಮನವಾಯಿತು.

ಲೈಂಗಿಕ ವಿಕೃತಿಯ ಸಮಸ್ಯೆಗಳು

'ನಿತಿನ್' ಇಪ್ಪತ್ತೈದು ವರ್ಷದ ತರುಣ. ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ತನ್ನ ಲಿಂಗ ಮಲಿನವಾಗಿದೆ; ಅದಕ್ಕೆ ಏನೋ ದೋಷ ಅಂಟಿದೆ ಎಂದು ಅವನಿಗೆ ಯಾವಾಗಲೂ ಅಳುಕು. ಹಲವಾರು ಡಾಕ್ಟರುಗಳನ್ನು ಭೇಟಿಯಾಗಿ ಅಳಲನ್ನು ತೋಡಿಕೊಂಡಿದ್ದ. ಅವರಿಗೆ ಯಾವ ದೋಷವೂ ಕಾಣಿಸಲಿಲ್ಲ. ಅವನು ನನ್ನನ್ನು ಕಂಡಾಗ ನಾನು ಅವನ ಹಿಂದಿನ ಇತಿಹಾಸವನ್ನು ಕೆದಕಿದೆ. ಅವನು ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡಿದ್ದ. ಅವನ ತಂದೆ ಮಧ್ಯಪೂರ್ವದ ದೇಶವೊಂದರಲ್ಲಿ ಕೆಲಸ ಮಾಡುತ್ತಿದ್ದು ಅವನನ್ನು ವಸತಿ ಶಾಲೆಯಲ್ಲಿ ಕಲಿಯಲು ಇಟ್ಟಿದ್ದರು. ಕೆಲವು ಸಲ ಹಿರಿಯ ವರ್ಗಗಳ ಹುಡುಗರು ತಮಗಿಂತಲೂ ಚಿಕ್ಕವರನ್ನು ಕಾಮಕ್ರೀಡೆಗಾಗಿ ಉಪಯೋಗಿಸುವುದುಂಟು. ಇದೇ ತರಹ ನಿತಿನ್‌ನಿಗೂ ಆಗಿತ್ತು. ಆರೇಳು ವರ್ಷದ ನಿತಿನ್‌ನನ್ನು ಹದಿನೈದು-ಹದಿನಾರು ವರ್ಷದ ಹುಡುಗರು ಬಳಸಿಕೊಂಡಿದ್ದರು. ಅಂದಿನಿಂದಲೂ ತನ್ನ ಲಿಂಗವು ಮಲಿನವಾಗಿದೆ ಎಂಬ ಕೊರಗು ಅವನನ್ನು ಕಾಡುತ್ತಲೇ ಇತ್ತು. ಕೊನೆಗೆ ನಾನು ಅವನ ಸಮಾಧಾನಕ್ಕಾಗಿ ಅವನಿಗೆ 'ಸುಂತಿ'ಯ ಆಪರೇಶನ್ ಮಾಡಿಸಿ ದೋಷವೆಲ್ಲ ಸರಿಪಟ್ಟಿದೆಯೆಂದು ಸಮಾಧಾನಪಡಿಸಿ ಕಳಿಸಿದೆ.

'ಜಗದೀಶ' ನಾಲ್ಕನೆಯ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ. ಮೊದಲು ಒಳ್ಳೆಯ ವಿದ್ಯಾರ್ಥಿಯಾಗಿದ್ದವನು ಕೊನೆಯ ವರ್ಷದಲ್ಲಿ ಅನುತ್ತೀರ್ಣನಾಗತೊಡಗಿದ. ಎಂಜಿನಿಯರಿಂಗ್ ಕಾಲೇಜು ಸೇರಿದ ಮೇಲೆ ಅವನು ಹಲವಾರು ವೇಶ್ಯೆಯರ ಸಂಗ ಮಾಡಿದ್ದನಲ್ಲದೆ ತನ್ನ ಕಾಲೇಜಿನ ಹಲವಾರು ಸಹಪಾಠಿಗಳ ಜೊತೆಗೆ ಸಲಿಂಗ ರತಿಕ್ರೀಡೆಯಲ್ಲಿ ಭಾಗಿಯಾಗಿದ್ದ. ಇವೆಲ್ಲ ಕಾರಣಗಳಿಂದ ಹಲವಾರು ಸಲ ಗುಹ್ಯರೋಗಗಳು ಅಂಟಿಕೊಂಡು ಅದಕ್ಕೆ ಉಪಚಾರ ಪಡೆದಿದ್ದ. ತನ್ನ ಮದುವೆಯಾದ ಮೇಲೆ ಹೆಂಡತಿಯೊಡನೆ ಲೈಂಗಿಕ ಕ್ರಿಯೆ ಸರಿಯಾಗಿ ನಡೆಯುವುದೋ ಇಲ್ಲವೋ ಎಂಬ ಚಿಂತೆ ಅವನನ್ನು ಕಾಡತೊಡಗಿತ್ತು. ಈ ಸಂಶಯದಿಂದ ಅವನ ಅಭ್ಯಾಸವೆಲ್ಲ ಹಾಳಾಗಿ, ಪರಿಣಾಮವಾಗಿ ಆತ ಕೊನೆಯ ವರ್ಷದಲ್ಲಿ ಫೇಲಾಗುತ್ತಲೇ ಇದ್ದ. ಅವನಿಗೆ ಯಾವ ದೈಹಿಕ ತೊಂದರೆ

ಇಲ್ಲದಿದ್ದರೂ ತನ್ನ ಹಿಂದಿನ ಲೈಂಗಿಕ ಸಾಹಸಗಳು ಭವಿಷ್ಯಕ್ಕೆಲ್ಲಿ ಮಾರಕವಾಗುವವೋ ಎಂಬ ಹೆದರಿಕೆ ಮುಳುವಾಗಿತ್ತು.

ನಾನು ವ್ಯವಸಾಯದ ನಿಮಿತ್ತ ಪ್ರತಿ ತಿಂಗಳು ಎರಡು ಮೂರು ದಿನ ಪರವೂರುಗಳಿಗೆ ಹೋಗುವುದುಂಟು. ಹೀಗೆಯೇ ಒಂದು ಸಲ ಹೋದಾಗ ಇಬ್ಬರು ಇಪ್ಪತ್ತೈದರ ತರುಣರು ಸಲಹೆಗಾಗಿ ಬಂದರು. ಅವರಲ್ಲಿ ಒಬ್ಬನಿಗೆ ಮದುವೆಯಾಗಿತ್ತು. ಈ ಮದುವೆಯಾದ ಯುವಕ ತನ್ನ ಜೊತೆಗೆ ಬಂದಿದ್ದ ಗೆಳೆಯನ ಸಂಗಡ ಮೊದಲಿನಿಂದಲೂ ಸಲಿಂಗ ಸಂಬಂಧ ಹೊಂದಿದ್ದ. ಮದುವೆಯಾದ ನಂತರವೂ ಆ ಸಂಬಂಧವನ್ನು ಮುಂದುವರಿಸಿದ್ದಷ್ಟೇ ಅಲ್ಲ, ಅವನಿಗೆ ತನ್ನ ಹೆಂಡತಿಗಿಂತ ಗೆಳೆಯನ ಸಾಮೀಪ್ಯದಲ್ಲಿಯೇ ಹೆಚ್ಚು ಕಾಮೋದ್ರೇಕವಾಗುತ್ತಿತ್ತು. ಇದು ಆ ಗೆಳೆಯನ ಚಿಂತೆಗೆ ಕಾರಣವಾಗಿತ್ತು. ಹೇಗಾದರೂ "ಇವನನ್ನು ನನ್ನ ಆಕರ್ಷಣೆಯಿಂದ ಮುಕ್ತಗೊಳಿಸಿ ಆತ ಹೆಂಡತಿಯೊಂದಿಗೆ ಹೆಚ್ಚು ಕಾಲ ಕಳೆಯುವಂತೆ ಮಾಡಿರಿ" ಎಂದು ಅವನು ನನ್ನನ್ನು ವಿನಂತಿಸಿದ.

ಊರಿಂದೂರಿಗೆ ಪ್ರಯಾಣ ಮಾಡುತ್ತ ಬಳೆಗಳನ್ನು ಮಾರುವ ತರುಣ ಬಳೆಗಾರರ ಒಂದು ಗುಂಪು ನನ್ನನ್ನು ಕಾಣಲು ಬಂತು. ಇವರೆಲ್ಲರೂ ಕೂಡಿಯೇ ಪ್ರಯಾಣ ಮಾಡಿ, ಕೆಲಸ ಮುಗಿದ ನಂತರ ರಾತ್ರಿ ಒಂದೇ ಕಡೆಗೆ ತೆಕ್ಕೆಬಿದ್ದು ಮಲಗುವುದು ವಾಡಿಕೆ. ಇವರಲ್ಲಿಯ ಒಬ್ಬ ತರುಣನಿಗೆ ತನ್ನ ಗೆಳೆಯರೊಡನೆ ಮಲಗಿಕೊಂಡಾಗ ಕಾಮೋದ್ರೇಕವಾಗಿ ವೀರ್ಯ ಸ್ಖಲನವಾಗುತ್ತಿತ್ತು. ಅವನಿಗೆ ದಿನಾಲು ತಾನು ಬಳೆ ತೊಡಿಸುವ ಹೆಂಗಸರ ಸಂಪರ್ಕದಲ್ಲಿ ಬಂದಾಗ ಕಾಮೋದ್ರೇಕವಾಗುತ್ತಿರಲಿಲ್ಲ. ಈಗ ಅವನ ಮದುವೆಯ ಪ್ರಸ್ತಾಪ ಬಂದಿದ್ದರಿಂದ ಅವನ ಕುಟುಂಬದವರಿಗೆ ಕಾಳಜಿಯಾಗಿತ್ತು.

ಹಸ್ತಮೈಥುನದ ಚಟವನ್ನು ಅತಿಯಾಗಿ ಬೆಳೆಸಿಕೊಂಡು ನಂತರ ಲೈಂಗಿಕ ಅಶಕ್ತಿಯುಂಟಾದಾಗ ಮಾನಸಿಕ ಕ್ಷೋಭೆಗೆ ತುತ್ತಾಗುವ ತರುಣರ ಸಂಖ್ಯೆ ಲೆಕ್ಕವಿಲ್ಲದಷ್ಟಿದೆ.

ಮಾದಕ ವಸ್ತು ಸೇವನೆಯ ಸಮಸ್ಯೆ

'ಅಪೂರ್ವ್' ಇಪ್ಪತ್ತೆರಡರ ತರುಣ. ದೊಡ್ಡ ಹುದ್ದೆಯಲ್ಲಿರುವ ಅಧಿಕಾರಿಯೊಬ್ಬರ ಮಗ. ತಂದೆಯ ಹನ್ನೆರಡು ಮಕ್ಕಳಲ್ಲಿ ಐದನೆಯವ. ತಂದೆ ಅವನನ್ನು ನಮ್ಮ ರಾಜ್ಯದ ಉತ್ತರದ ತುದಿಯಲ್ಲಿರುವ ನಗರಕ್ಕೆ ಎಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆಂದು ಕಳಿಸಿದರು. ಉತ್ತರ ಭಾರತದಿಂದ ಬಂದ ಕೆಲವು ಶ್ರೀಮಂತ ವಿದ್ಯಾರ್ಥಿಗಳ ಗೆಳೆತನ ಅವನಿಗಾಯಿತು. ಅವರೆಲ್ಲರೂ ಮಾನಸೋತ್ತೇಜಕ ಔಷಧಿಗಳನ್ನು ಸೇವಿಸುವ ಪಾರ್ಟಿಗಳನ್ನು ಮಾಡುತ್ತಿದ್ದರು. ಅಪೂರ್ವ್ ಸಹ ಈ ಪಾರ್ಟಿಗಳನ್ನು ಸೇರುತ್ತ ಕೆಲವು ತಿಂಗಳುಗಳಲ್ಲಿಯೇ ಒಬ್ಬ 'ಡ್ರಗ್ ಅಡಿಕ್ಟ್'ಆಗಿ ಪರಿಣಮಿಸಿದ.

'ಹಾರೂನ್' ಒಬ್ಬ ಫರ್ನಿಚರ್ ತಯಾರಕರ ಮಗ. ಎಸ್ಸೆಸ್ಸೆಲ್ಸಿಯ ನಂತರ ಐ.ಟಿ.ಐ. ಸೇರಿದ ಆತ ತನ್ನ ಗೆಳೆಯರೊಂದಿಗೆ ಸೇರಿ 'ಫೆನ್ಸಿಡಿಲ್'(ಕೋಡಿನ್‌)ಅನ್ನು ಒಳಗೊಂಡ ಕೆಮ್ಮಿನ ಔಷಧ)ಪಾರ್ಟಿಗಳನ್ನು ಮಾಡತೊಡಗಿದ. ಈ ಫೆನ್ಸಿಡಿಲ್‌ನ ಚಟ ಅವನನ್ನು ಯಾವ ಮಟ್ಟಕ್ಕೆ ಒಯ್ಯಿತೆಂದರೆ ಅದನ್ನು ತೆಗೆದುಕೊಳ್ಳದ ದಿನ ಅವನ ಮೈಯಲ್ಲಿ ನಡುಕ ಪ್ರಾರಂಭವಾಗುತ್ತಿತ್ತು. ಕ್ರಮೇಣ ಅವನಿಗೆ ಸಂಶಯ,



ಹೆದರಿಕೆ, ಸಿಟ್ಟು ಮತ್ತು ಶ್ರವಣ ಭ್ರಾಂತಿಗಳು ಆಗತೊಡಗಿದವು. ಮಾನಸಿಕ ಚಿಕಿತ್ಸೆ ಅವಶ್ಯವಾಯಿತು.

ಕೆಲವು ದಿನಗಳ ಹಿಂದೆ ಗೋವೆಯ ತರುಣನೊಬ್ಬ ನನ್ನ ಕಡೆಗೆ ಬಂದು ಅನಸ್ಥೆಟಿಕ್ ಔಷಧಿಯೊಂದರ ಪ್ರಿಸ್ಕ್ರಿಪ್ಷನ್ ಕೊಡುವಂತೆ ಕೇಳಿದ. ತನಗೆ ವಾರಕ್ಕೆ ನಾಲ್ಕೈದು ಸಲ ಅದನ್ನು ತೆಗೆದುಕೊಳ್ಳುವ ಅಭ್ಯಾಸವಾಗಿದ್ದು ಅದನ್ನು ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುವುದರಿಂದ ತ್ವರೆ ಮಾಡುವಂತೆ ಹೇಳಿದ.

ಟಿಡಿಜೆಸಿಕ್ ಎಂಬ ತಮಿಳುನಾಡಿನ ಸರಕಾರದ ಸಂಸ್ಥೆಯಿಂದ ತಯಾರಾದ ಔಷಧಿ ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಉತ್ತೇಜಕ ಔಷಧವಾಗಿ ವ್ಯಾಪಕವಾಗಿ ಬಳಸಲ್ಪಡುತ್ತಿದೆ. ಯುವಕರಲ್ಲದೆ ಮಧ್ಯವಯಸ್ಕರೂ ಈ ಔಷಧಿಯ ದಾಸರಾಗಿರುವುದನ್ನು ನಾನು ಕಂಡಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಮದ್ಯಪಾನದೊಂದಿಗೆ ಗಾಂಜಾ ಸೇದುವುದೂ ಇತ್ತೀಚೆಗೆ ಹೆಚ್ಚಾಗುತ್ತಿದೆ. ಯುವಕರು, ವಿದ್ಯಾರ್ಥಿಗಳು ವಿಶೇಷವಾಗಿ ಈ ಚಟಕ್ಕೆ ಅಂಟಿಕೊಳ್ಳುತ್ತಿದ್ದಾರೆ. ತಂಬಾಕುಮೂಲದ ವಸ್ತುಗಳಿಂದ ಕೂಡಿರುವ ಗುಟಕಾ, ಜರ್ದಾ, ಪಾನ್‌ಮಸಾಲಾ ಮುಂತಾದ ದ್ರವ್ಯಗಳು ಗ್ರಾಮಾಂತರ ಪ್ರದೇಶಗಳಲ್ಲಿಯೂ ಬಹುವ್ಯಾಪಕವಾಗಿ ಸೇವಿಸಲ್ಪಡುತ್ತಿವೆ.

'ಶರದ್'ಸುಮಾರು ಹದಿನಾರು ವರ್ಷಗಳ ಬಾಲಕ. ಬೆಳಗಾವಿಯ ಸಮೀಪದ ಪಟ್ಟಣವೊಂದರಲ್ಲಿ ತನ್ನ ತಂದೆಯೊಡನೆ ಇರುತ್ತಿದ್ದ. ಅವನ ತಾಯಿ ತೀರಿಕೊಂಡಿದ್ದಳು. ಅವನ ಅಣ್ಣಂದಿರು ಕೆಲಸ ಮಾಡುತ್ತ ಬೇರೆ ಬೇರೆ ಊರುಗಳಲ್ಲಿ ಇರುತ್ತಿದ್ದರು. ಈ ಶರದ್ ಕಳೆದ ಎರಡುಮೂರು ವರ್ಷಗಳಿಂದ ಪ್ರತಿ ವರ್ಷ ಆರೇಳು ತಿಂಗಳು ಯಾರಿಗೂ ಕೇಳದೆ ಮನೆಯಿಂದ ಹೊರಬಿದ್ದು, ಮಡಗಾಂವ್, ಹುಬ್ಬಳ್ಳಿ, ಬೆಂಗಳೂರು ಮುಂತಾದ ಊರುಗಳಲ್ಲಿ ಹೋಟೆಲಿನಲ್ಲೋ ಮತ್ತೆಲ್ಲೋ ಕೆಲಸ ಮಾಡಿ ಮನೆಗೆ ಮರಳುತ್ತಿದ್ದ. ಆರ್ಥಿಕವಾಗಿ ಅವನಿಗೆ ಯಾವ ಸಮಸ್ಯೆಯೂ ಇರಲಿಲ್ಲ. ಅಣ್ಣಂದಿರು ಅವನ ಶಿಕ್ಷಣದ ಹೊಣೆಯನ್ನು ಹೊತ್ತುಕೊಳ್ಳಲು

ಸಿದ್ಧರಾಗಿದ್ದರು. ಅವನಿಗೆ ಯಾವ ಚಟಗಳೂ ಇರಲಿಲ್ಲ. ಆದರೆ ಮಧ್ಯವಯಸ್ಸಿನ ತಂದೆ ಅವನನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಇದರಿಂದ ಬೇಜಾರಾಗಿ ಅವನು ತನ್ನ ಓದನ್ನು ಮಧ್ಯದಲ್ಲೇ ನಿಲ್ಲಿಸಿ ಪರ ಊರುಗಳಿಗೆ ಹೋಗಿಬರುತ್ತಿದ್ದ.

'ರವೀನಾ' ಪದವೀಧರೆ. ಇಪ್ಪತ್ತೈದು ವರ್ಷಗಳ ಯುವತಿ. ಗಾರೆಯ ಕೆಲಸ ಮಾಡುತ್ತಿದ್ದ ಅವಳ ತಂದೆ ರವೀನಾಳನ್ನು ಚೆನ್ನಾಗಿ ಓದಿಸಿ ಪದವೀಧರೆಯನ್ನಾಗಿ ಮಾಡಿದ. ಆದರೆ ರವೀನಾಳ ಜಾತಿಯಲ್ಲಿ ಹೆಚ್ಚು ಓದಿದ ಯುವಕರು ಕಡಿಮೆ. ಹೀಗಾಗಿ ಅವಳಿಗೆ ಯೋಗ್ಯ ವರ ಸಿಗುವುದೇ ಕಷ್ಟವಾಯಿತು. ಮೊದಲು ಸ್ವಲ್ಪವೇ ಕುಡಿಯುತ್ತಿದ್ದ ಅವಳ ತಂದೆ ಹೆಚ್ಚು ಹೆಚ್ಚಾಗಿ ಕುಡಿಯತೊಡಗಿದ. ದಿನಾಲು ಕುಡಿದು ಬಂದು ಅವಳ ತಾಯಿಯ ಜೊತೆ ಜಗಳವಾಡತೊಡಗಿದ. ಬೈಗುಳಗಳ ಸುರಿಮಳೆಯೂ ಪ್ರಾರಂಭವಾಯಿತು. ರವೀನಾ ಖಿನ್ನಳಾಗಿ ಹಾಸಿಗೆ ಹಿಡಿದಳು. ಅವಳ ಮಾತು ನಿಂತುಹೋಯಿತು. ಅನ್ನ ನೀರುಗಳನ್ನು ಸ್ವೀಕರಿಸದಾದಳು. ತರತರದ ದೈಹಿಕ ತೊಂದರೆಗಳನ್ನು ಮುಂದುಮಾಡಿದಳು. ಮನೋವೈದ್ಯಕೀಯ ಉಪಚಾರ ಅವಳ ನೆರವಿಗೆ ಬರಬೇಕಾಯಿತು. ಅವಳ ತಂದೆ ಇನ್ನು ಮುಂದೆ ಕುಡಿಯುವುದಿಲ್ಲ ಮತ್ತು ಹೆಂಡತಿಯೊಡನೆ ಜಗಳಕ್ಕಿಳಿಯುವುದಿಲ್ಲ ಎಂದು ವಚನ ಕೊಟ್ಟಾಗ ಅವಳನ್ನು ಉಪಚರಿಸುವುದು ಸುಲಭವಾಯಿತು.

'ಭೋಜನ ನಿರಾಕರಣ'ರೋಗ

೧೪ ರಿಂದ ೧೮ ವರ್ಷ ವಯಸ್ಸಿನ ಹುಡುಗಿಯರಲ್ಲಿ ಕಾಣಸಿಕೊಳ್ಳುವ ಈ ರೋಗದಲ್ಲಿ ಅನ್ನ ನೀರುಗಳ ಸೇವನೆ ಮಿತಗೊಳ್ಳುತ್ತದೆ. ಆದಷ್ಟು ತೆಳ್ಳಗಾಗಲು ಪ್ರಯತ್ನಿಸುತ್ತಾರೆ. ದಿನದಿನವೂ ತೂಕ ಕಡಿಮೆಯಾಗಿದೆಯೋ ಇಲ್ಲವೋ ಎನ್ನುವುದನ್ನು ನೋಡಿಕೊಳ್ಳುತ್ತಾರೆ. ಮೇಲಿಂದಮೇಲೆ ಕನ್ನಡಿಯ ಮುಂದೆ ನಿಂತು ತಮ್ಮ ದೇಹ ತೆಳ್ಳಗಾಗುತ್ತಿದೆಯೋ ಇಲ್ಲವೋ ಎನ್ನುವುದನ್ನು ನೋಡುತ್ತಿರುತ್ತಾರೆ. ಊಟ ಮಾಡಲು ಹೇಳಿದರೆ ಕೋಪಬರುತ್ತದೆ.

ಈ ರೋಗವು ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತಿದ್ದರೂ ಈಚೀಚೆಗೆ ಸೌಂದರ್ಯದ ಬಗೆಗಿನ ಪಾಶ್ಚಾತ್ಯ ಕಲ್ಪನೆಗಳು ಟೆಲಿವಿಜನ್ನಿನ ಮೂಲಕ ಭಾರತೀಯ ತರುಣಿಯರಲ್ಲಿಯೂ ತಳವೂರುತ್ತಿರುವುದರಿಂದ ಈ 'ಆಹಾರ ನಿರಾಕರಣ' ರೋಗ ಭಾರತದ ಹುಡುಗಿಯರಲ್ಲಿಯೂ ಕಂಡುಬರುತ್ತಿದೆ. ಶ್ರೀಮಂತ ವರ್ಗದ ಹುಡುಗಿಯರಷ್ಟೇ ಅಲ್ಲ, ಕೆಳಮಧ್ಯಮ ವರ್ಗದ ಹುಡುಗಿಯರೂ ಇದಕ್ಕೆ ಬಲಿಯಾಗುತ್ತಿದ್ದಾರೆ. ಬದಲಾಗುತ್ತಿರುವ ಸಾಮಾಜಿಕ ನಿಲುವುಗಳ ಜೊತೆಗೆ ಈ ಕುಟುಂಬಗಳ ಆಂತರಿಕ ಶಿಸ್ತು, ಆರೋಗ್ಯ ಮತ್ತು ಸೌಂದರ್ಯಗಳ ಬಗೆಗಿನ ಕಲ್ಪನೆಗಳೂ ಈ ರೋಗದ ಉಗಮಕ್ಕೆ ಕಾರಣವಾಗುತ್ತಿವೆ.

ಯುವಕರ ಸಮಸ್ಯೆಗಳ ಹಿನ್ನೆಲೆ

ಈ ಲೇಖನದಲ್ಲಿ ಪರಿಸರದ ಮತ್ತು ವ್ಯಕ್ತಿಗತವಾದ ಭಾವನಾತ್ಮಕ ಕಾರಣಗಳಿಂದ ಯುವಕರಲ್ಲಿ ಹುಟ್ಟಬಹುದಾದ ಸಮಸ್ಯೆಗಳನ್ನು ಚರ್ಚಿಸಲಾಗಿದೆ. ಲೇಖಕ ತನ್ನ ವೃತ್ತಿ ಜೀವನದಲ್ಲಿ ಉಪಚರಿಸಿದ ಅಸಂಖ್ಯ ರೋಗಿಗಳಲ್ಲಿ ಕೆಲವರನ್ನು ಆಯ್ದುಕೊಂಡು ಕಾಲ್ಪನಿಕ ಹೆಸರುಗಳನ್ನು ಉಪಯೋಗಿಸಿ ಈ ಪ್ರಕರಣಗಳನ್ನು

ಚರ್ಚಿಸಿದ್ದೇನೆ. ಯುವಕರನ್ನೊಳಗೊಂಡು ಎಲ್ಲ ವಯಸ್ಸಿನ ಜನರಲ್ಲಿಯೂ ಕಾಣಿಸಿಗುವ ಖಿನ್ನರೋಗ, ಸ್ಕಿಝೋಫ್ರೇನಿಯಾ ಮುಂತಾದ ಪ್ರಕೃತಿಜನ್ಯ ರೋಗಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿಲ್ಲ.

ಇಲ್ಲಿ ಚರ್ಚಿಸಲಾಗಿರುವ ಪ್ರಕರಣಗಳು ಎಲ್ಲ ಕಡೆಗಳಲ್ಲಿಯೂ ಎಲ್ಲ ಜಾತಿಪಂಗಡಗಳ ಜನರಲ್ಲಿಯೂ ಕಾಣಸಿಗುವಂಥವು. ಅಷ್ಟೇ ಅಲ್ಲ, ಇವುಗಳು ಸಾರ್ವಕಾಲಿಕವಾಗಿಯೂ ಪ್ರಸ್ತುತವಾದವುಗಳು. ಜನ್ಮಾರಂಭದಿಂದಲೇ ಬರುವ ಪ್ರೀತಿ, ಪ್ರೇಮ, ಕಾಮ, ಕೀರ್ತಿ, ಸಂಪತ್ತು ಮುಂತಾದ ಹತ್ತುಹಲವಾರು ಆಸೆ-ಆಕಾಂಕ್ಷೆಗಳು ತಾರುಣ್ಯದ ಘಟ್ಟದಲ್ಲಿ ಬಹಳ ಹೆಚ್ಚಾಗಿ ಕಾಡುತ್ತವೆ. ಇವುಗಳೊಡನೆ ಸೆಣಸಾಡಲು ಬೇಕಾಗುವ ಆಂತರಿಕ ಮನೋಸ್ಥೈರ್ಯ, ಜಾಣತನ, ವಗಸೆ ಮತ್ತು ತಂತ್ರಗಳಲ್ಲಿ ಯಾವ ತರುಣರಿಗೆ ತರಬೇತಿಯಿಲ್ಲವೋ ಅವರು ಇವುಗಳಿಂದ ಬಹಳಷ್ಟು ಬಳಲುತ್ತಾರೆ. ಕೆಲವು ಜನರು ಜೀವನದುದ್ದಕ್ಕೂ ತಾರುಣ್ಯದಲ್ಲಿ ಆದ ಆಘಾತದಿಂದ ಚೇತರಿಸಿಕೊಳ್ಳಲಾರದೆ ನಲುಗಿಹೋಗುತ್ತಾರೆ. ನಿಜವಾಗಿಯೆಂದರೆ ಇವರ ಜೀವನ ಅರಳುವುದೇ ಇಲ್ಲ.

ಮಾನವ ಜೀವನದಲ್ಲಿ ಯೌವನ ಕಾಲವೇ ಅತಿ ಮಹತ್ವದ ಘಟ್ಟ. ಸುಮಾರು ೧೮ ರಿಂದ ೩೦ ವರ್ಷಗಳ ಅವಧಿಯನ್ನು ಯೌವನ ಎಂದು ಕರೆಯಬಹುದು. ಈ ಅವಧಿಯಲ್ಲಿ ಬಾಲಕ ತರುಣನಾಗಿ ಪೂರ್ತಿ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಹೊಂದುತ್ತಾನೆ. ಬಾಲ್ಯಕಾಲದಲ್ಲಿ ಅವನ ತಂದೆ-ತಾಯಿಗಳು, ಕುಟುಂಬದ ಇತರ ಸದಸ್ಯರು ಮತ್ತು ಸಮಾಜದ ಇತರ ಅಂಗಗಳಾದ ಶಾಲೆ ಮುಂತಾದ ಸಮಾಜಿಕ ಸಂಸ್ಥೆಗಳು ನೀಡುವ ತರಬೇತಿಗಳೇ ಮುಂದೆ ಆತ ತನ್ನ ವೈಯಕ್ತಿಕ ಮತ್ತು ಇತರರೊಡನೆ ಬರುವ ಸಂಬಂಧಗಳಿಂದ ಉಂಟಾಗುವ ಸಮಸ್ಯೆಗಳನ್ನು ಹೇಗೆ ನಿಭಾಯಿಸುತ್ತಾನೆ ಎಂಬುದನ್ನು ನಿರ್ಧರಿಸುತ್ತವೆ. ಅವನ ಅನುವಂಶಿಕ ಚೌಕಟ್ಟು ಸಹ ಈ ವಿಷಯದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ದಿನದಿನಕ್ಕೂ ಬದಲಾಗುತ್ತಿರುವ ಇಂದಿನ ಜಗತ್ತಿನಲ್ಲಿ ಬೆಳೆಯುವ ತರುಣನಿಗೆ ತನ್ನ ಜೀವನದ ಗುರಿ, ಪಾಲಿಸಬೇಕಾದ ಮೌಲ್ಯಗಳು, ಬಾಳಬೇಕಾದ ರೀತಿಯ ಬಗ್ಗೆ ತರಹ ತರಹದ ಮಾನಸಿಕ ತುಮುಲ, ಸಂಶಯ ಮತ್ತು ದುಗುಡಗಳು ಹುಟ್ಟುವುದು ಅನಿವಾರ್ಯವಾಗುತ್ತಿದೆ.

ಧರ್ಮ, ಪರಂಪರೆ, ಸ್ಥಾನಿಕ ನಡವಳಿಕೆ ಮತ್ತು ಲೋಕರೂಢಿಗಳು ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಆಗುತ್ತಿರುವ ಬೌದ್ಧಿಕ ಮತ್ತು ಮಾನಸಿಕ ದಾಳಿಗೆ ನಲುಗುತ್ತಿವೆ. ವೈಯಕ್ತಿಕ ಮಟ್ಟದಲ್ಲಿ ಪ್ರತಿಯೊಬ್ಬರಿಗೂ ನಿಜವಾದ ಸುಖ-ಸಂತೋಷ ಯಾವುದರಲ್ಲಿದೆ ಎಂಬುದರ ಬಗ್ಗೆ ಸಾಕಷ್ಟು ಗೊಂದಲವೇಳುತ್ತಿದೆ. ರಾಜಕಾರಣ, ಉದ್ಯೋಗ, ಶಿಕ್ಷಣ ಮುಂತಾದ ಪ್ರಮುಖ ವಿಷಯಗಳಲ್ಲಿ ಹಳೆಯ ಮೌಲ್ಯಗಳು ಕುಸಿದು ಹೊಸದಾರಿಗಳು ಸ್ಪಷ್ಟವಾಗಿ ಕಾಣದೆ ತುಮುಲ ಉಂಟಾಗುತ್ತಿದೆ.

ಒಂದು ಮಾತು ಮಾತ್ರ ನಿಜ. ಮನುಷ್ಯನ ತಿಳಿವಳಿಕೆಯ ಪರಿಧಿ ವಿಸ್ತರಿಸಿದಷ್ಟೂ ಬದಲಾವಣೆಯ ವೇಗ ಹೆಚ್ಚುತ್ತಿದೆ. ಮಾನಸಿಕ ಗೊಂದಲದ ಪ್ರಮಾಣವೂ ಹೆಚ್ಚುತ್ತಿದೆ. ಸ್ತ್ರೀ-ಪುರುಷರ ಸಂಬಂಧ ಮತ್ತು ಲೈಂಗಿಕತೆಯಂತಹ

ವಿಷಯಗಳಲ್ಲಿ ಹೆಚ್ಚಿನ ವಿಪ್ಲವಗಳು ಕಾಣುತ್ತಿವೆ. ಭೌತಿಕ ಸಾಧನ-ಸಂಪತ್ತುಗಳು ಹೆಚ್ಚಿದಷ್ಟೂ ಬಹಳಷ್ಟು ಜನ ಖಿನ್ನರಾಗುತ್ತಿದ್ದಾರೆ, ಅಂತರ್ಮುಖರಾಗುತ್ತಿದ್ದಾರೆ ಮತ್ತು ಏಕಾಂಕಿಯಾಗುತ್ತಿದ್ದಾರೆ.

ಭಾರತದಂತಹ ವಿಕಾಸಶೀಲ ದೇಶಗಳು ತಮ್ಮ ಕೈಲಾದಮಟ್ಟಿಗೆ ಈ ಸಂಪತ್ತಿನ ಶರ್ಯತ್ತಿನಲ್ಲಿ ಹೆಜ್ಜೆಗಳನ್ನಿಟ್ಟರೂ ತಮ್ಮ ಹಳೆಯ ಮಾನಸಿಕ ಮತ್ತು ಬೌದ್ಧಿಕ ಜಡತ್ವವನ್ನು ಮರೆಯಲಾರದಾಗಿವೆ. ಪಾಶ್ಚಾತ್ಯ ದೇಶಗಳಿಗೆ ಬೌದ್ಧಿಕ ಮತ್ತು ಮಾನಸಿಕ ಗುಲಾಮರಾಗಿ ತಮ್ಮ ಅಳಿದುಳಿದ ಸಂಸ್ಕೃತಿ, ಪರಂಪರೆಗಳಿಂದಲೂ ಇಲ್ಲಿನ ಜನ ವಿಮುಖರಾಗುತ್ತಿದ್ದಾರೆ. ಇವೆಲ್ಲದರ ಪರಿಣಾಮವಾಗಿ ಯುವಕ ವರ್ಗದಲ್ಲಿ ಅಶಾಂತಿ, ಗೊಂದಲಗಳು ಹೆಚ್ಚುತ್ತಿವೆ. ಅವರು ಚುಕ್ಕಾಣಿಯಿಲ್ಲದ ಹಡಗಿನಂತಾಗುತ್ತಿದ್ದಾರೆ.

ಯುವಕರ ಸಮಸ್ಯೆಗಳ ಉಪಚಾರ

ಯುವಕರ ಮಾನಸಿಕ ಸಮಸ್ಯೆಗಳನ್ನು ಈ ಕೆಳಗಿನ ವಿಧಾನಗಳಿಂದ ಮನೋವೈದ್ಯರು ಉಪಚರಿಸುತ್ತಾರೆ.

೧. ಮನೋವಿಶ್ಲೇಷಣೆ

೨. ಮನೋವಿರೇಚನೆ.

೩. ಕೌಟುಂಬಿಕ ಉಪಚಾರ

೪. ಮನೋಪಚಾರ

೫. ಔಷಧೋಪಚಾರ

೬. ವಿದ್ಯುತ್ ಕಂಪನ ಚಿಕಿತ್ಸೆ

೭. ನಡಾವಳಿಕೆ ಚಿಕಿತ್ಸೆ.

ಮೇಲೆ ವಿವರಿಸಿದಂತೆ ಯುವಕರ ಮಾನಸಿಕ ಸಮಸ್ಯೆಗಳಿಗೆ ಕಾರಣಗಳು ವಿವಿಧವಾಗಿರುವಂತೆಯೇ ಅವುಗಳ ಪರಿಹಾರೋಪಾಯಗಳೂ ವಿವಿಧ ತರಹದ್ದಾಗಿವೆ. ವಿಳಂಬ ಮಾಡದೆ ಚಿಕಿತ್ಸೆಗೆ ಒಳಪಡಿಸುವುದರಿಂದ ಇವುಗಳಿಂದ ಬಳಲುವ ಬಹುಪಾಲು ರೋಗಿಗಳು ಬೇಗನೆ ಪೂರ್ಣ ಗುಣಮುಖರಾಗುತ್ತಾರೆ.

Printed & Published by S.K. KATOTE on behalf of
Loka Shikshna Trust at Samyukta Karnataka
Press, Koppikar Road, Hubli-580020. (Phone: 364303)
No. 2, Residency Road, Bangalore-560025. (Phone: 2214366)

Managing Editor: K. SHAMARAO
Registered with the Registrar of Newspaper
for India under No. 3633/57



ಪ್ರೀತಿ ವಿಶ್ವಾಸ, ಭಕ್ತಿ ಭಾವನೆ ಮತ್ತು ಅಭ್ಯುದಯದ ಪರಿಮಳ

ಪ್ರೀತಿ ವಿಶ್ವಾಸ, ಭಕ್ತಿ ಭಾವನೆ ಮತ್ತು ಅಭ್ಯುದಯದ ಪರಿಮಳ ನಿಮ್ಮನ್ನು ಆವರಿಸಲಿ.

ನಿಮ್ಮ ಮನೋಭಾವನೆಗಳನ್ನು ಮೃದುವಾಗಿ ಸ್ಪರ್ಶಿಸುವ ಮೂರು ಕೋಮಲ, ಅತ್ಯುತ್ಕೃಷ್ಟ ಸುವಾಸನೆಗಳು.



ಸೈಕಲ್ ಬ್ರಾಂಡ್

ಭಾರತದಲ್ಲಿ ಅತ್ಯಧಿಕ ಮಾರಾಟದ ಅಗರಬತ್ತಿಗಳು

ಗುಣಮಟ್ಟದ ದ್ಯೋತಕ